
ಗೌರಿ

ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಡಿಸೆಂಬರ್ 14, 2011 ಪುಟ 20 ರೂ. 14/-


ಹಂತಕ ಮೋಹನ್, ವಜ್ರದೇಹಿ ಶ್ರೀ ನಡುವೆ ವ್ಯತ್ಯಾಸವೇನು?



ಯಡ್ಡಿಗೆ ಗಂಟಲು ಕ್ಯಾನ್ಸರ್?

ಡಿಕೆಶಿಗೆ ಯಡ್ಡಿ ಪ್ರಸಾದ





ರಾಮುಲು ಸುತ್ತ ತಂತ್ರ ಕುತಂತ್ರ




ಹ್ಯಾಪಿ ಸೂಸೈಡ್ ವಿಚಿತ್ರ ಕತೆ

ಕೀಚಕ ರೌಡಿ ಕೊಕ್ಕುವೇಲು ಖತಮ್

ಗಾಂಧಿ ಬಂಧ: ನಿಂದನೆ ಯಾವುದಯ್ಯಾ

ಕೃಷಿ ಹೂಡಿಕೆದಾರರ ಸಮಾವೇಶ
ಕರ್ನಾಟಕದ ರೈತಾಪಿಗೆ-ಕೃಷಿಗೆ ವಿದೇಶಿ ಮಖಮಲ್ ನೇಣು



ಇದೇ ಡಿಸೆಂಬರ್ 1 ಮತ್ತು 2ರಂದು ಕರ್ನಾಟಕದ ಬಿಜೆಪಿ ಸರ್ಕಾರ "Global Agri business and Food Processing Summit"- "ಜಾಗತಿಕ ಕೃಷಿ ವ್ಯಾಪಾರ ಮತ್ತು ಆಹಾರ ಸಂಸ್ಕರಣಾ ವ್ಯಾಪಾರದ ಸಮಾವೇಶ" ವನ್ನು ಆಯೋಜಿಸಿದೆ. ಈ ಸಮಾವೇಶದ ಹೆಸರಲ್ಲೇ ಅದರ ಉದ್ದೇಶ ಕೃಷಿ ಕ್ಷೇತ್ರದಲ್ಲಿ ವ್ಯಾಪಾರ ಆಸಕ್ತಿ ಹೊಂದಿರುವ ಉದ್ದಿಮೆಗಳ ಸಮಾವೇಶ ಎಂದು ಸ್ಪಷ್ಟವಾಗಿದ್ದರೂ ಬಿಜೆಪಿ ಸರ್ಕಾರ ಇದು ಅತ್ಯಂತ ರೈತ ಸ್ನೇಹಿ ಉದ್ದೇಶವನ್ನು ಹೊಂದಿದೆಯೆಂದೂ, ಈ ಸಮಾವೇಶವನ್ನು ರೈತರಿಗೆ ಉತ್ತಮ ಮಾರುಕಟ್ಟೆ, ಅಧಿಕ ಲಾಭ, ಉತ್ತಮ ಇಳುವರಿ ತಂತ್ರಜ್ಞಾನ ದೊರಕಿಸಲೆಂದೇ ಆಯೋಜಿಸಲಾಗಿದೆಯೆಂದೂ ಕೊಚ್ಚಿಕೊಳ್ಳುತ್ತಿದೆ.

ರೈತ ಸಂಘದವರು ಮತ್ತು ಇತರ ಪ್ರಗತಿಪರ ಸಂಘಟನೆಗಳು ಈ ಸಮಾವೇಶದ ವಿರುದ್ಧ ಹೋರಾಟವನ್ನು ಹಮ್ಮಿಕೊಳ್ಳುತ್ತಿದ್ದಂತೆ ಸರ್ಕಾರ ಪತ್ರಿಕೆಗಳಲ್ಲಿ ಉದ್ದುದ್ದನೇ ಜಾಹೀರಾತುಗಳನ್ನು ಕೊಟ್ಟು ಬಹಿರಂಗವಾಗಿ ಸುಳ್ಳುಗಳನ್ನು ಹೇಳಿ ರೈತರನ್ನು ಯಾಮಾರಿಸಲು ಯತ್ನಿಸುತ್ತಿದೆ.

ಸರ್ಕಾರ ಕೊಟ್ಟಿರುವ ಜಾಹೀರಾತಿನಲ್ಲಿ ಹಸಿಸುಳ್ಳುಗಳು ಮತ್ತು ವೈರುಧ್ಯಗಳು ಹೇರಳವಾಗಿವೆ. ಅವುಗಳನ್ನು ಕೂಲಂಕಷವಾಗಿ ಚರ್ಚೆ ಮಾಡುವ ಮುನ್ನ ಸರ್ಕಾರ ಈ "ಜಾಗತಿಕ ಕೃಷಿ ಹೂಡಿಕೆದಾರರ ಸಮಾವೇಶ"ವನ್ನು ಮಾಡುತ್ತಿರುವ ಹಿಂದಿನ ಉದ್ದೇಶವನ್ನು, ಅದರಿಂದ ಯಾರಿಗೆ ಲಾಭವಾಗುತ್ತದೆಂಬುದನ್ನು, ಅದರಿಂದ ಈ ನಾಡಿನ ಕೃಷಿ ಮತ್ತು ರೈತಾಪಿಯ ಮೇಲೆ ಯಾವ ಪರಿಣಾಮಗಳಾಗುತ್ತವೆಂದು ಪರಿಶೀಲಿಸೋಣ.

ರಾಜ್ಯ ಸರ್ಕಾರ ನಡೆಸುತ್ತಿರುವ ಸಮಾವೇಶ ಮೂಲಭೂತವಾಗಿ ಕೃಷಿ ಕ್ಷೇತ್ರದ ವಿವಿಧ ಉದ್ಯಮಗಳಲ್ಲಿ ತೊಡಗಿರುವ ದೇಶೀ ಮತ್ತು ವಿದೇಶಿ ಉದ್ಯಮಿಗಳ ಸಮಾವೇಶ. ದೇಶೀ ಹಾಗೂ ವಿದೇಶಿ ಮಾರುಕಟ್ಟೆಗಾಗಿ ಕೃಷಿಯಲ್ಲಿ ನೇರ ಉತ್ಪಾದನೆ ಮಾಡುವುದರಿಂದ ಮೊದಲುಗೊಂಡು ಬೀಜೋತ್ಪಾದನೆ, ಸಾವಯವ ಮತ್ತು ರಾಸಾಯನಿಕ ಗೊಬ್ಬರ, ಸುಧಾರಿತ ಕೃಷಿ ತಂತ್ರಜ್ಞಾನ, ಆ ಸಂಬಂಧೀ ಯಂತ್ರ, ತಂತ್ರಗಳ ಮಾರಾಟ, ಇನ್ನಿತ್ಯಾದಿಗಳಲ್ಲಿ ತೊಡಗಿಕೊಂಡಿರುವ ಹಾಗೂ ಇತ್ತೀಚಿನ ದಿನಗಳಲ್ಲಿ ಕೃಷಿಯಲ್ಲಿಯೂ ಸಟ್ಟಾ ಬಜಾರು ಶೇರು ಉದ್ಯಮಗಳಲ್ಲಿ ತೊಡಗಿಕೊಂಡಿರುವ ಉದ್ಯಮಿಗಳ ಸಮಾವೇಶ ಇದಾಗಿದೆ. ಇವುಗಳ ಉದ್ದೇಶ ತಮ್ಮ ಸರಕುಗಳ ಉತ್ಪಾದನೆಗೆ ಮತ್ತು ಮಾರುಕಟ್ಟೆಗೆ ಕರ್ನಾಟಕದಲ್ಲಿ ಎಷ್ಟು ಮಾರುಕಟ್ಟೆ ಇದೆ ಮತ್ತು ಅದನ್ನು ಹೇಗೆ ಪಡೆದುಕೊಳ್ಳಬಹುದು ಎಂಬುದೇ ವಿನಃ ಈ ನಾಡಿನ ರೈತಾಪಿಯ ಕಣ್ಣೀರನ್ನು ಒರೆಸುವುದಲ್ಲ.

ಈ ಕೃಷಿ ಹೂಡಿಕೆದಾರರ ಸಮಾವೇಶದ ನಿಜವಾದ ಉದ್ದೇಶವನ್ನು ಅರ್ಥ ಮಾಡಿಕೊಳ್ಳಬೇಕೆಂದರೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೃಷಿ ಹೂಡಿಕೆ ವಹಿವಾಟನಲ್ಲಿ ಆಗುತ್ತಿರುವ ಬದಲಾವಣೆ, ಕೃಷಿ ಉದ್ಯಮಿಗಳ ಬದಲಾಗುತ್ತಿರುವ ಆಸಕ್ತಿ ಮತ್ತು ಅದಕ್ಕೆ ತಕ್ಕಂತೆ ನಾಡಿನ ಕೃಷಿ ನೀತಿಯನ್ನು ಬದಲಾಯಿಸುತ್ತಿರುವ ಸ್ಥಳೀಯ ರಾಜಕಾರಣಿಗಳ ದಲ್ಲಾಳಿಕೋರತನದ ಇತಿಹಾಸವನ್ನು ಸ್ವಲ್ಪವಾದರೂ ಗಮನಿಸಬೇಕಾಗುತ್ತದೆ. ಆಗ ಸದಾನಂದ ಗೌಡರ ನಗುಮುಖದ ಹಿಂದಿನ ತಣ್ಣನೆ ಕ್ರೌರ್ಯ, ಮನಮೋಹನ್ ಸಿಂಗರ ಮುತ್ಸದ್ದಿ ಮೌನದ ಹಿಂದಿರುವ ದಲ್ಲಾಳಿತನಗಳು ಅರ್ಥವಾಗುತ್ತವೆ.

ಜಗತ್ತಿನ ವಿವಿಧ ಭಾಗಗಳಲ್ಲಿ ವಿವಿಧ ಬಗೆಯ ಹವಾಮಾನ, ಮಣ್ಣು ಮತ್ತು ನೀರಿನ ಲಭ್ಯತೆಗಳು ಇರುವುದರಿಂದ ಜಗತ್ತಿನಲ್ಲಿ ಎಲ್ಲಾ ಕಡೆಗಳಲ್ಲೂ ಎಲ್ಲಾ ಬಗೆಯ ಆಹಾರ ಧಾನ್ಯಗಳನ್ನು ಉತ್ಪಾದನೆ ಮಾಡಲು ಸಾಧ್ಯವಿಲ್ಲ. ಉದಾಹರಣೆಗೆ ಆಹಾರ ಧಾನ್ಯಗಳಲ್ಲಿ ಭತ್ತ ಪ್ರಧಾನವಾಗಿ ಏಷಿಯಾ ದೇಶಗಳಲ್ಲಿ ಕೇಂದ್ರೀಕೃತ ವಾಗಿದ್ದರೆ, ಗೋಧಿಯು ಏಷಿಯಾ, ಉತ್ತರ ಅಮೆರಿಕ, ಯೂರೋಪ್ ದೇಶಗಳಲ್ಲಿ ಹರಡಿ ಕೊಂಡಿದೆ. ಒಟ್ಟಾರೆಯಾಗಿ ಏಷಿಯಾ ದೇಶಗಳು ಜಗತ್ತಿನ ಬಾಳೆಹಣ್ಣು, ಎಣ್ಣೆಕಾಳು, ಗೆಡ್ಡೆ-ಗೆಣಸು ಮತ್ತು ಕಬ್ಬು ಉತ್ಪಾದಿಸುತ್ತಿದ್ದರೆ ಪಶ್ಚಿಮ ಆಫ್ರಿಕಾ ದೇಶಗಳಲ್ಲಿ ಜಗತ್ತಿನ ಶೇ.70ರಷ್ಟು ಕೋಕೋ ಉತ್ಪಾದನೆಯಾಗುತ್ತದೆ. ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಜಗತ್ತಿನ ಅತಿ ಹೆಚ್ಚು ಕಾಫಿ, ಸೋಯಾ ಮತ್ತು ಕಬ್ಬು ಉತ್ಪಾದನೆಯಾಗುತ್ತದೆ. ಇಂದು ಈ ಪರಿಸ್ಥಿತಿ ಮುಂದುವರೆಯುತ್ತಿರುವುದಕ್ಕೆ ಬಹಳಷ್ಟು ಮಟ್ಟಿಗೆ ಹವಾ ಮಾನ, ಇತಿಹಾಸ ಮತ್ತು ಆರ್ಥಿಕ ನೀತಿಗಳು ಕಾರಣವಾಗಿವೆ.

ಆಯಾ ದೇಶಗಳ ಆಹಾರಪದ್ಧತಿಗಳು ಸಹ ಈ ಹವಾಮಾನ ಮತ್ತು ಇತಿಹಾಸಗಳನ್ನು ಆಧರಿಸಿಯೇ ವಿಕಸಿತವಾಗಿದೆ. ಆದರೆ ದೇಶಗಳ ನಡುವೆ ವ್ಯಾಪಾರ-ವಹಿವಾಟು ನಡೆಯುತ್ತಿದ್ದಂತೆ ಒಂದು ದೇಶದ ಆಹಾರ ವಸ್ತುಗಳು ಮತ್ತೊಂದು ದೇಶದ ತಟ್ಟೆಯಲ್ಲೂ ಜಾಗ ಪಡೆಯತೊಡಗಿದವು. ಇಂದು ನಾವು ತಿನ್ನುತ್ತಿರುವ ಮತ್ತು ಕುಡಿಯುತ್ತಿರುವ ಬಹಳಷ್ಟು ವಸ್ತುಗಳು ಮೂಲಭೂತವಾಗಿ ಈ ದೇಶದ್ದಲ್ಲ, ಹಾಗೆಯೇ ಇತರ ದೇಶಗಳಲ್ಲೂ ಸಹ.

ವಸಾಹತು ಕಾಲದಲ್ಲಿ ಭಾರತವನ್ನು ಒಳ ಗೊಂಡಂತೆ ಪ್ರಪಂಚದ ಬಹಳಷ್ಟು ದೇಶಗಳ ಕೃಷಿಯನ್ನು ಬ್ರಿಟನ್, ಫ್ರಾನ್ಸ್, ಅಮೆರಿಕದಂಥ ವಸಾಹತುಶಾಹಿ ದೇಶಗಳು ತಮಗೆ ಬೇಕಾದಂತೆ ಪುನರ್ ರಚಿಸತೊಡಗಿದವು. ಉದಾಹರ ಣೆಗೆ ಬಿಹಾರದ ಚಂಪಾರಣ್ಯದಲ್ಲಿ ಭಾರತೀಯ ರೈತರು ತಮ್ಮ ಹೊಟ್ಟೆಪಾಡಿಗೆ ಆಹಾರ ಧಾನ್ಯಗಳನ್ನು ಉತ್ಪಾದನೆ ಮಾಡುವು ದನ್ನು ಬಿಟ್ಟು ಆಗತಾನೆ ಬ್ರಿಟನ್ನಿನ ಲಂಕಾಶೈರಿನಲ್ಲಿ ಪ್ರಾರಂಭ ವಾಗಿದ್ದ ಬ್ರಿಟನ್ನಿನ ಬಟ್ಟೆ ಉದ್ಯಮಕ್ಕೆ ಬೇಕಾದ ನೀಲಿಯನ್ನು ಅವರು ಹೇಳಿದ ಬೆಲೆಗೆ ಉತ್ಪಾದನೆ ಮಾಡಬೇಕಾಯಿತು. ಭಾರತವನ್ನು ಒಳಗೊಂಡಂತೆ ಪ್ರಪಂಚದ ಹಲವಾರು ಕಡೆ ಆದಿವಾಸಿಗಳು ತಮ್ಮ ವಾಸಸ್ಥಾನವನ್ನು ತೊರೆದು ವಸಾಹತುಶಾಹಿಗಳ ಕಾಫಿ, ರಬ್ಬರ್, ಪ್ಲಾಂಟೇಷನ್ನುಗಳಲ್ಲಿ ಕೆಲಸ ಮಾಡಬೇಕಾಗಿ ಬಂತು. ವಸಾಹತುಶಾಹಿ ವ್ಯವಸ್ಥೆ ಮನುಕುಲದ ಇತಿಹಾಸದಲ್ಲೇ ಪ್ರಥಮ ಬಾರಿಗೆ ಬಡ ದೇಶಗಳ ರೈತಾಪಿಯ ಬದುಕಿನ ಮೇಲೆ ಆಕ್ರಮಣ ಮಾಡಿತು. ಹೀಗಾಗಿಯೇ ಭಾರತವೂ ಒಳಗೊಂಡಂತೆ ಹಲವಾರು ಕಡೆ ವಸಾಹತುಶಾಹಿ ವಿರೋಧಿ ಹೋರಾಟಗಳಲ್ಲಿ ರೈತಾಪಿ ದೊಡ್ಡ ಮಟ್ಟದಲ್ಲಿ ಭಾಗವಹಿಸಿದರು.

ಎರಡನೇ ಮಹಾಯುದ್ಧದ ನಂತರ ಭಾರತವನ್ನು ಒಳಗೊಂಡಂತೆ ಬಹಳಷ್ಟು ಬಡ ದೇಶಗಳು ರಾಜಕೀಯವಾಗಿ ಸ್ವತಂತ್ರಗೊಂಡರೂ ಆರ್ಥಿಕ ದಾಸ್ಯ ಅದೇ ರೀತಿ ಮುಂದುವರೆದಿತ್ತು. ಆದರಲ್ಲೂ ಭಾರತದ ಕೃಷಿ ಕ್ಷೇತ್ರ ವಿದೇಶಿ ಮಧ್ಯಪ್ರವೇಶದಿಂದ ಮುಕ್ತವಾಗಲೇ ಇಲ್ಲ. 1965ರಲ್ಲಿ ಆಹಾರ ಧಾನ್ಯಗಳ ಕೊರತೆಯಿಂದ ಕಂಗಾಲಾಗಿದ್ದ ಭಾರತವನ್ನು ಬೆದರಿಸಿ ಪರಿಚಯಿಸಲಾದ 'ಹಸಿರು ಕ್ರಾಂತಿ' ಕೃಷಿಯು ಇಡೀ ಭಾರತದ ಕೃಷಿಯನ್ನು ಮತ್ತೊಮ್ಮೆ ನವವಸಾಹತುಶಾಹಿಗಳ ದಾಸ್ಯಕ್ಕೆ ಗುರಿಮಾಡಿತು. ಬೀಜ, ಗೊಬ್ಬರ, ಬೆಳೆ ಪದ್ಧತಿ, ಮಾರಾಟ, ಬಳಕೆ ಎಲ್ಲದರಲ್ಲೂ ವಿದೇಶಿ ಬಂಡವಾಳದ ಪ್ರವೇಶಕ್ಕೆ ಮತ್ತು ಅವರ ಲಾಭದ ಉದ್ದೇಶಕ್ಕೆ ತಕ್ಕಂತೆ ಭಾರತ ಕೃಷಿಯನ್ನು ಮಾರ್ಪಾಡು ಮಾಡಿತು. ಇದರ ಪರಿಣಾಮವಾಗಿ ವಿದೇಶಿ ರಸಗೊಬ್ಬರ, ಬೀಜ, ಕ್ರಿಮಿನಾಶಕ ಕಂಪನಿಗಳು ಕೋಟಿಗಟ್ಟಲೆ ಲಾಭ ಮಾಡಿಕೊಂಡರೆ ಭಾರತದ ಲಕ್ಷಾಂತರ ರೈತರು ಆತ್ಮಹತ್ಯೆ ಮಾಡಿಕೊಂಡರು. ಹಸಿರು ಕ್ರಾಂತಿಯಿಂದ ಮೊದಲೆರಡು

ಶಿವಸುಂದರ್

ಚಾರ್ವಾಕ



ದಶಕಗಳಲ್ಲಿ ಉತ್ಪಾದನೆ ಜಾಸ್ತಿ ಆದರೂ ಒಟ್ಟಾರೆ ದೇಶೀ ಕೃಷಿ ವ್ಯವಸ್ಥೆಯೇ ನಾಶವಾಗಿ ಭಾರತದ ಕೃಷಿ ವಿದೇಶಿ ಮಾರುಕಟ್ಟೆಯ ಗುಲಾಮತನಕ್ಕೆ ಸಿಲುಕಿಕೊಂಡುಬಿಟ್ಟಿತು.

ಇಂದು 'ಹಸಿರು ಕ್ರಾಂತಿ'ಯಿಂದ ಕೃಷಿ ಬಿಕ್ಕಟ್ಟು ಯಾವ ಪ್ರಮಾಣವನ್ನು ಮುಟ್ಟಿದೆಯೆಂದರೆ ಸಣ್ಣ ಮತ್ತು ಅತಿಸಣ್ಣ ರೈತರು ಆತ್ಮಹತ್ಯೆಯ ಅಂಚಿನಲ್ಲಿ ಬಾಳುತ್ತಿದ್ದಾರೆ. ಅವರ ತಲಾವಾರು ವೆಚ್ಚ ದಿನಕ್ಕೆ 20 ರೂಗಳಿಗಿಂತ ಕಡಿಮೆ ಎಂದು ಅರ್ಜುನ್ ಗುಪ್ತಾ ಸಮಿತಿಯೇ ವರದಿ ನೀಡಿದೆ. ಶೇ.77ರಷ್ಟು ಗ್ರಾಮೀಣ ಬಡವರ ತಲಾವಾರು ಆಹಾರ ಬಳಕೆ ವರ್ಷಕ್ಕೆ 185 ಕೆಜಿಯಿಂದ 136 ಕೆಜಿಗೆ ಕುಸಿದಿದೆ.

ಒಂದು ಕಡೆ ಬೀಜ, ಗೊಬ್ಬರ, ಕ್ರಿಮಿನಾಶಕಗಳನ್ನು, ಮತ್ತೊಂದು ಕಡೆ ಬೆಳೆಗಳ ಬೆಲೆಯನ್ನು ಜಾಗತಿಕ ಮಟ್ಟದಲ್ಲಿ ನಿಯಂತ್ರಿಸುತ್ತಾ ರೈತಾಪಿಯನ್ನು ಎರಡು ಮೊನೆಯ ಭರ್ಜಿಯಿಂದ ಇರಿಯುತ್ತಿರುವ ಕೃಷಿ ಕ್ಷೇತ್ರದ ಬೃಹತ್ ಉದ್ಯಮ ಸಂಸ್ಥೆಗಳೇ ಇಂದು ಭಾರತದಂಥ ಬಡ ದೇಶಗಳ ರೈತಾಪಿಯ ಪ್ರಧಾನ ಶತೃಗಳು. ಹೀಗಾಗಿ ಭಾರತದ ಹಾಗೂ ಕರ್ನಾಟಕದ ರೈತಾಪಿಗೆ ಕಿಂಚಿತ್ತೂ ಒಳ್ಳೆಯದಾಗ ಬೇಕೆಂದ... ಕೃಷಿ ಕ್ಷೇತ್ರದಲ್ಲಿನ ಬೀಜ, ಗೊಬ್ಬರ, ಕ್ರಿಮಿನಾಶಕ, ಕೃಷಿ ಪದ... ಇತ್ಯಾದಿಗಳ ಮೇಲೆ ವಿದೇಶಿ ಬಹುರಾಷ್ಟ್ರೀಯ ಕಂಪನಿ... ಹಿಡಿತದಿಂದ ಮತ್ತು ವಿಶ್ವ ವಾಣಿಜ್ಯ ಸಂಸ್ಥೆ ಇತ್ಯಾದಿ... ಒಪ್ಪಂದದಿಂದ ನಾಡಿನ ರೈತರನ್ನು ಪಾರು ಮಾಡಬೇಕು.

ಉದಾಹರಣೆಗೆ ಈ ಇಡೀ ಸಮಾವೇಶದ ಪರಿಕ... ಮತ್ತು ಕಾರ್ಯಕ್ರಮ ಯೋಜನೆ ಮಾಡಿರುವುದು Pr... waterhouseCoopers (PWC) ಮತ್ತು ಮಹೀ... ಕನ್ಸಲ್ಟಿಂಗ್ ಇಂಜನಿಯರ್ಸ್ ಸಂಸ್ಥೆಗಳು. ಇದರಲ್ಲಿ ಮಹೀ... ಸಂಸ್ಥೆ ಕಾರ್ಗಿಲ್ ಮತ್ತು ಮಾನ್ಸಾಂಟೋ ಸಂಸ್ಥೆಗಳ ಸ್ಥಳೀ... ಏಜೆಂಟಾಗಿ ಕೆಲಸ ಮಾಡುತ್ತಾ ವಿದರ್ಭವನ್ನು ಒಳಗೊಂಡ... ಹಲವೆಡೆ ಹತ್ತಿ ರೈತರ ಆತ್ಮಹತ್ಯೆಗೆ ಕಾರಣವಾದ ಸಂಸ್ಥೆ. ... Price waterhouseCoopers ಸಂಸ್ಥೆಯಂತೂ ವಿದೆ... ಕಂಪನಿಗಳ ಧಗಾಕೋರತನಕ್ಕೆ ನೇರವಾಗಿ ಅಕೌಂಟಿ... ಸಹಾಯ ಮಾಡು ತ್ತಿರುವ ಕಂಪನಿ. ಇತ್ತೀಚೆಗೆ ಭಾರತದ ಸ... ಕಂಪ್ಯೂಟರ್ ಕಂಪನಿ ಶೇರುದಾರರ ಮತ್ತು ಸರ್ಕಾ... ಸಾವಿರಾರು ಕೋಟಿ ರೂಪಾಯಿ ನುಂಗಿ ನೀರು ಕುಡಿಯ... ಐಡಿಯಾಗಳನ್ನು ಕೊಟ್ಟಿದ್ದು ಇದೇ ಕಂಪನಿ. ಇವೆರ... ಸೇರಿಕೊಂಡು ಈಗ ಕರ್ನಾಟಕದ ಕೃಷಿ ಕ್ಷೇತ್ರವ... ಸುಲಿಯುವುದು ಹೇಗೆ ಎಂದು ವಿದೇಶಿ ಕಂಪನಿಗಳಿ... ಸರ್ಕಾರಕ್ಕೂ ಹೇಳಿಕೊಡುತ್ತಿವೆ.

ಸರ್ಕಾರವೇ ಕೊಟ್ಟ ಜಾಹೀರಾತಿನಂತೆ ಒಟ್ಟಾರೆ ... ಹೂಡಿಕೆ ಸಮಾವೇಶದಿಂದ 50,000 ಕೋಟಿ ರೂಪಾ... ಹೂಡಿಕೆ ಹರಿದುಬರಲಿದೆ. ಅದಕ್ಕಾಗಿ 18,000 ಹೆಕ್ಟೆ... ಭೂಮಿ ಬೇಕಾಗಿದೆ. ಅಂದರೆ 45,000 ಎಕರೆ ಭೂ... ಅದರಲ್ಲಿ 4,800 ಹೆಕ್ಟೇರ್ ಭೂಮಿ ಈಗಾಗಲೇ ಸರ್ಕಾ... ವಶದಲ್ಲಿದೆ. ಇನ್ನುಳಿದದ್ದನ್ನು ಜನರ "ಮನಒಲಿ... ತೆಗೆದುಕೊಳ್ಳಲಾಗುವುದೆಂದು ಈಗಾಗಲೇ ಹಲ್ಲುಕಿರಿಯ... ಸದಾನಂದಗೌಡರು ಗಂಭೀರ ಎಚ್ಚರಿಕೆ ಕೊಟ್ಟದ್ದಾರೆ. ಗದ... ಪೋಸ್ಕೋ ಪ್ರಕರಣದಲ್ಲಿ, ದಾವಣಗೆರೆಯ... ಜಮಖಂಡಿಯಲ್ಲಿ, ಗುಲ್ಬರ್ಗಾದಲ್ಲಿ ಜನರನ್ನು ... ಪೊಲೀಸರು, ಸ್ಥಳೀಯ ಗೂಂಡಾಗಳು, ಅಧಿಕಾರಿಗಳು ... ಬಿಜೆಪಿ ಕಾರ್ಯಕರ್ತರು ದಬ್ಬಾಳಿಕೆಯ ಮೂ... "ಮನಒಲಿಸಲು" ಪ್ರಯತ್ನಿಸಿದರೆಂಬುದನ್ನು ನಾಡಿನ ರೈ... ನೋಡಿದ್ದಾರೆ.

ವಿದೇಶಿ ಕಂಪನಿಗಳು ಕೃಷಿ ಭೂಮಿಯಲ್ಲಿ ನೇರ... ಹೂಡಿಕೆ ಮಾಡಲು ಅವಕಾಶ ಮಾಡಿಕೊಡುವುದಿಲ್ಲವೆ... ಜಾಹೀರಾತಿನಲ್ಲಿ ಹೇಳಲಾಗಿದೆ. ಆದರೆ ಅದೇ ಜಾಹೀ... ನಲ್ಲಿ "ಬೆಳೆ ಸಂರಕ್ಷಣೆ" (Crop Protection), "... ಪೋಷಣೆ" (plant propagation), "ಸಸ್ಯ ಜೀವ... ಶಾಭಿವೃದ್ಧಿ" (plant breeding) ಮತ್ತು "ಸಾವಯವ ... (organic agriculture) ನಲ್ಲಿ ವಿದೇಶಿ ಬಂಡ... ಹೂಡಿಕೆಗೆ ನೇರ ಅವಕಾಶವಿದೆಯೆಂ... ಸ್ಪಷ್ಟಪಡಿಸಲಾಗಿದೆ. ಹೀಗಾಗಿ ಈ ಸಮಾವೇಶ ರೈ... ಜಮೀನನ್ನು ವಶಪಡಿಸಿ ಕೊಳ್ಳುವ ಉದ್ದೇಶ... ಹೊಂದಿದೆ ಎಂಬುದರಲ್ಲಿ ಎರಡು ಮಾತಿಲ್ಲ.

ಆ ಜಾಹೀರಾತು ವಿದೇಶಿ ಕೃಷಿ ಬಂಡ... ಹೂಡಿಕೆಯು "ಪ್ರಧಾನವಾಗಿ ನವೀನ ತಂತ್ರ... ಮಾರುಕಟ್ಟೆ ಜಾಲ, ಕೃಷಿ ಮೂಲಭೂತ ಸೌಕರ್ಯ, ... ಪದಾರ್ಥಗಳ ಮೌಲ್ಯವರ್ಧನೆ" ಕ್ಷೇತ್ರಗಳಲ್ಲಿ ದೊಡ್ಡಮಟ್ಟ... ಬರಲಿದೆ ಎಂದಿದೆ.

ಇದು ಕೃಷಿ ಜಮೀನಿನ ಆಕ್ರಮಣವಲ್ಲ, ಆದರೆ ... ಪದ್ಧತಿ ಮತ್ತು ಸ್ವಾವಲಂಬನೆಯ ಮೇಲಿನ ಹೆಚ್ಚಿದ ಆಕ್ರ... ಅಷ್ಟೆ. ನವೀನ ತಂತ್ರಜ್ಞಾನವೆಂದರೆ ಸಾರಾಂಶ... ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಬೇಕಾದ ಕೃಷಿ ತಂತ್ರ... ಮಾರುಕಟ್ಟೆ ಜಾಲವೆಂದರೆ ವಿದೇಶಿ ಮಾರುಕಟ್ಟೆಗೆ ಅ... ವಾಗಿ ಭಾರತೀಯ ರೈತ ವ್ಯವಹರಿಸಲು ಪಡೆದುಕ... ಬೇಕಾದ ನೈಪುಣ್ಯ ಎಂದರ್ಥ. ಇನ್ನು ಕೃಷಿ ಪದಾರ್ಥ... ಮೌಲ್ಯವರ್ಧನೆ ಎಂದರೆ ಇಂದು ಅಂತಾರಾಷ್ಟ್ರೀ... ಮಾರುಕಟೆಯಲ್ಲಿ ಲಾಭವಿರುವ ಕೃಷಿ ಆಧಾರಿತ ಸರಕ... ಉತ್ಪಾದನೆಗೆ ಬೇಕಾದ ಪೂರಕ ವ್ಯವಸ್ಥೆ ಎಂದರ್ಥ.

ಇದನ್ನು ಇನ್ನಷ್ಟು ಸ್ಪಷ್ಟವಾಗಿ ಅ... ಮಾಡಿಕೊಳ್ಳಬೇಕೆಂದರೆ ಕೃಷಿ ವಲಯದಲ್ಲಿರುವ ವಿ... ಹೂಡಿಕೆ ಸ್ವರೂಪವನ್ನು ಅರ್ಥಮಾಡಿಕೊಳ್ಳಬೆ...

14

ನೋ ಕಾಮೆಂಟ್ಸ್

"ಸಮಾಜದಲ್ಲಿ ಅತಿ ಭ್ರಷ್ಟರಾದವರನ್ನು ಕರೆದು ಸನ್ಮಾನಿಸುವ ಸ್ವಾಮೀಜಿಗಳು ಸಮಾಜಕ್ಕೆ ಒಳಿತೇನನ್ನೂ ಕೊಡುವುದಕ್ಕೆ ಸಾಧ್ಯವಿಲ್ಲ. ಸಮಾಜದ ಉದ್ಧಾರಕ್ಕಾಗಿ ಚಿಂತಿಸಬೇಕಾದ ಸ್ವಾಮೀಜಿಗಳು ಮಠ, ಮಂದಿರ, ಮಸೀದಿ ಗಲಾಟೆಗಳಲ್ಲಿ ಮುಳುಗಿ ಹೋಗಿದ್ದಾರೆ. ಜನಪರವಾಗದ ಇಂಥಾ ಸ್ವಾಮೀಜಿ, ಸನ್ಯಾಸಿಗಳು ಹೇಡಿಗಳು."

- ನಿಡುಮಾಮಿಡಿ ಸ್ವಾಮೀಜಿ

"ಮಹಿಳೆಯರ ಮೇಲೆ ದೌರ್ಜನ್ಯ ನಡೆಸುವಂತಹ ಆರೋಪಿಗಳಿಗೆ ತಡವಾಗಿ ಮರಣದಂಡನೆಯಂತಹ ಶಿಕ್ಷೆ ನೀಡುವ ಬದಲು ತಕ್ಷಣ ಕಠಿಣ ಶಿಕ್ಷೆ ನೀಡುವಂತಹ ವ್ಯವಸ್ಥೆ ಜಾರಿಯಾಗಬೇಕು. ಇದರಿಂದ ಸ್ವಲ್ಪ ಮಟ್ಟಿಗಾದರೂ ದೌರ್ಜನ್ಯ ತಡೆಯಲು ಸಾಧ್ಯವಾಗಬಹುದು."

- ನ್ಯಾ. ಬಿ.ಎನ್. ಕೃಷ್ಣ

ನಂಬಿದ್ರೆನಂಬಿ ಬಿಟ್ರೆಬಿಡಿ

"ಹಣದುಬ್ಬರ ಇಳಿಯುವವರೆಗೆ ಅಡುಗೆ ಅನಿಲ, ಸೀಮೆ ಎಣ್ಣೆ ಮತ್ತು ಡೀಸೆಲ್ ದರಗಳನ್ನು ಏರಿಕೆ ಮಾಡದಿರಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಆದರೆ ಡಾಲರ್ ಎದುರು ರೂಪಾಯಿ ಸತತ ಕುಸಿಯುತ್ತಿರುವುದರಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಹೆಚ್ಚಳವಾದರೆ ಇಲ್ಲಿಯೂ ದರ ಹೆಚ್ಚಿಸಲು ಪೆಟ್ರೋಲಿಯಂ ಕಂಪನಿಗಳಿಂದ ಒತ್ತಡ ಬರಬಹುದು"

- ಜೈಪಾಲ್ ರೆಡ್ಡಿ

ಕೊಲೆಗಾರ್ತಿಯ ಸಬೂಬು

"ನಕ್ಸಲ್ ಮುಖಂಡ ಕಿಷನ್‌ಜಿ ಅವರನ್ನು ಭದ್ರತಾ ಪಡೆಗಳು ಕೊಂದುಹಾಕುವ ಮೊದಲು ಅವರಿಗೆ ಶರಣಾಗಲು ಅವಕಾಶ ನೀಡಲಾಗಿತ್ತು, ಅವರು ಮೆಟ್ರೋ ಮುಂತಾದ ಕಡೆ ದಾಳಿಗಳನ್ನು ನಡೆಸಿ ನನ್ನ ಸರ್ಕಾರವನ್ನು ಅಸ್ಥಿರಗೊಳಿಸಲು ಯೋಜಿಸಿದ್ದರು. ಸುತ್ತಮುತ್ತಲೂ ನೆಲೆಸಿರುವ ಸಾವಿರಾರು ಮುಗ್ಧ ಹಳ್ಳಿಗರನ್ನು ರಕ್ಷಿಸುವ ಸಲುವಾಗಿ ಪ್ರತಿಧಾಳಿ ನಡೆಸಬೇಕಾಯಿತು......"

-ಮಮತಾ ಬ್ಯಾನರ್ಜಿ



ಈಶ್ವರಪ್ಪ ಎಂಬ ಎಲುಬಿಲ್ಲದ ನಾಲಿಗೆ


"ಗಣಿ ಸಂಪತ್ತು ಲೂಟಿ, ಹಫ್ತಾ ವಸೂಲಿ, ಗೂಂಡಾಗಿರಿ ಇನ್ನಿತರ ಗಂಭೀ... ಸ್ವರೂಪದ ಆರೋಪ ಇರುವ ರೆಡ್ಡಿ ಬ್ರದರ್ಸ್ ಬಳಗ ಪಕ್ಷದಿಂದ ದೂರ ಸರಿದಿ... ಬಳ್ಳಾರಿ ಜಿಲ್ಲೆಗೆ ಮಾತ್ರವಲ್ಲ ಪಕ್ಷಕ್ಕೂ ಸ್ವಾತಂತ್ರ್ಯ ಸಿಕ್ಕಷ್ಟು ಖುಷಿಯಾಗಿದೆ."

- ಈಶ್ವರ...

ಇದು ಪರಮಾರ್ಥವಲ್ಲ...ನೀಚ ಐಹಿಕ!

"ಮತಾಂತರ ನಡೆಯುತ್ತಿದ್ದಾಗ ವಾದಿರಾಜರು ಅದಕ್ಕೆ ತಡೆಯೊಡ್ಡಿದರು. ಇದರಿಂದ ಸಮಾಜದಲ್ಲಿ ದೊಡ್ಡ ಕ್ರಾಂತಿಯಾಯಿತು. ಕರಾವಳಿ ಭಾಗದಲ್ಲಿ ದ್ವೈತ-ಅದ್ವೈತರಲ್ಲಿ ತಾತ್ವಿಕ ಭಿನ್ನಾಭಿಪ್ರಾಯವಿದೆ. ಆದರೆ ಭೌತಿಕ ಮತ್ತು ನಾಸ್ತಿಕವಾದವನ್ನು ಖಂಡಿಸುವಾಗ ನಾವೆಲ್ಲಾ ಒಂದಾಗುತ್ತೇವೆ."

- ಪೇಜಾವರ ಸ್ವಾಮಿ



ಮೌಢ್ಯ ಸ್ನಾನ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಕರ್ನಾಟಕ ರಾಜ್ಯ ಈಗ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಅಧಃಪತನ ತಲುಪಿರುವುದಕ್ಕೆ ಈ ವಾರ ನಡೆದಿರುವ ಮೂರು ವಿವಿಧ ಪ್ರಕರಣಗಳೇ ಸಾಕ್ಷಿಯಾಗಿವೆ.

ನಿನ್ನೆ ಬಳ್ಳಾರಿಯಲ್ಲಿನ ಉಪಚುನಾವಣೆಗೆ ಮತದಾನ ನಡೆಯಿತು. ಆ ಚುನಾವಣೆಯಲ್ಲಿ ಯಾರು ಗೆಲ್ಲುತ್ತಾರೆ ಎಂಬುದಕ್ಕಿಂತ ಈ ಚುನಾವಣೆಗೆ ಕಾರಣವೇನು ಎಂದು ನೋಡಿದರೆ ನಮ್ಮ ರಾಜ್ಯದ ರಾಜಕೀಯ ಎಷ್ಟು ಕೆಟ್ಟಿದೆ ಎಂದು ಅರ್ಥವಾಗುತ್ತದೆ.

ಎಲ್ಲರಿಗೂ ಗೊತ್ತಿರುವಂತೆ ಶ್ರೀರಾಮುಲು ರಾಜಕೀಯಕ್ಕೆ ಬರುವ ಮುನ್ನ ರೌಡಿ ಆಗಿದ್ದವನು. ಗೂಂಡಾಗಿರಿ ಮಾಡುತ್ತಾ ತನ್ನ ಹೊಟ್ಟೆಗೆ ಹಿಟ್ಟು ಗಳಿಸುತ್ತಿದ್ದವನು. ಆನಂತರ ಈತ ರೆಡ್ಡಿಗಳ ಪಾಳೆಯವನ್ನು ಸೇರಿ ಗಣಿ ಲೂಟಿಯಲ್ಲಿ ತೊಡಗಿದ್ದವನು. ಹಾಗೆ ಲೂಟಿ ಮಾಡಿದ ಹಣದಲ್ಲೇ ಶಾಸಕಗಿರಿಯನ್ನೂ, ಮಂತ್ರಿ ಸ್ಥಾನವನ್ನೂ ಪಡೆದವನು. ಕೊನೆಗೆ ಲೋಕಾಯುಕ್ತ ಸಂತೋಷ್ ಹೆಗ್ಡೆ ತಂಡಕ್ಕೆ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದವನು.

ಇಂತಹ ವ್ಯಕ್ತಿ ತನ್ನ ಹೆಸರು ಲೋಕಾಯುಕ್ತರ ವರದಿಯಲ್ಲಿ ಕಾಣಿಸಿಕೊಂಡಿದ್ದರಿಂದ, ಆ ಕಾರಣಕ್ಕೇ ಮಂತ್ರಿಸ್ಥಾನ ಕೈತಪ್ಪಿದ್ದರಿಂದ ತನ್ನ 'ಸ್ವಾಭಿಮಾನಕ್ಕೆ' ಘಾಸಿ ಆಗಿದೆ ಎಂದು ಬಿಜೆಪಿಗೆ ರಾಜೀನಾಮೆ ಕೊಟ್ಟು ಬಳ್ಳಾರಿಯಲ್ಲಿ ಉಪಚುನಾವಣೆಗೆ ಕಾರಣನಾದ. ಈತ ಗಣಿಗಳಿಂದ ಅದಿರು ಕದಿಯುತ್ತಿದ್ದಾಗ, ಅದರಿಂದ ಗಳಿಸಿದ ಅಕ್ರಮ ಹಣದಿಂದ ಹೆಲಿಕಾಪ್ಟರ್, ಐಷಾರಾಮಿ ಕಾರ್, ಯೋಗ್ಯತೆಗಿಂತ ಹೆಚ್ಚಿನ ಸ್ಥಾನಮಾನಗಳನ್ನು ಅನುಭವಿಸುತ್ತಿದ್ದಾಗ ಈತನ ಈ 'ಸ್ವಾಭಿಮಾನ' ಸಂಪತ್ತಿನ ಸುಖದಲ್ಲಿ ನಿದ್ರಿಸುತ್ತಿತ್ತು!

ಈ ಶ್ರೀರಾಮುಲುಗೆ ಯಾವ ತತ್ವ ಸಿದ್ಧಾಂತವೂ ಗೊತ್ತಿಲ್ಲ, ಕಾನೂನುಗಳೂ ಬೇಕಿಲ್ಲ, ಇನ್ನು ಜನಪರ, ಪ್ರಗತಿಪರ, ಜಾತ್ಯತೀತತೆ ಎಂಬುದೆಲ್ಲ ಅರ್ಥವೂ ಆಗುವುದಿಲ್ಲ. ಈತ ಶಾಸಕನಾಗಿದ್ದಾಗ ಬಳ್ಳಾರಿಯನ್ನು ಅಭಿವೃದ್ಧಿ ಮಾಡಿದ್ದರ ಬಗ್ಗೆಯಾಗಲಿ, ಮಂತ್ರಿ ಆಗಿದ್ದಾಗ ರಾಜ್ಯಕ್ಕೆ ಕಡಿದು ಕಟ್ಟೆ ಹಾಕಿದ್ದರ ಬಗ್ಗೆಯಾಗಲಿ ಒಂದೇ ಒಂದು ಸುಳಿವೂ ಸಿಗುವುದಿಲ್ಲ. ಬದಲಾಗಿ ಜನಾರ್ದನ ರೆಡ್ಡಿ ಜೊತೆಗೂಡಿ ಈತ ಪ್ರಜಾಪ್ರಭುತ್ವ ವ್ಯವಸ್ಥೆಗೇ ಕೊಡಲಿ ಏಟು ಕೊಟ್ಟವನು. ಇಂತಹ ವ್ಯಕ್ತಿಯಿಂದಾಗಿ ರಾಜ್ಯದ ನೈಸರ್ಗಿಕ ಸಂಪತ್ತು ಲೂಟಿಯಾಗಿದೆಯಲ್ಲದೆ, ಇವನ ಟೊಳ್ಳು 'ಸ್ವಾಭಿಮಾನ'ಕ್ಕೆ ಚುನಾವಣೆ ನಡೆದು ಅದಕ್ಕೆ ಸಾರ್ವಜನಿಕರ ಹಣ ಪೋಲಾಗಿದೆ. ಇದು ರಾಜ್ಯದ ದುರಂತವಲ್ಲದೆ ಮತ್ತೇನು?

ಇನ್ನು ಸಾಮಾಜಿಕ ವಿಷಯಕ್ಕೆ ಬಂದರೆ 'ಮಡೆ ಸ್ನಾನ' ಎಂಬ ಅನಾಗರಿಕ ಆಚರಣೆ ಮತ್ತೆ ನಡೆದಿದೆಯಲ್ಲದೆ ಅದಕ್ಕೆ ಅಧಿಕಾರದಲ್ಲಿರುವ ಬಿಜೆಪಿ ನಾಯಕರು ತಮ್ಮ ಸಮ್ಮತಿಯನ್ನು ಸೂಚಿಸಿದ್ದಾರೆ. ಅದರಲ್ಲೇನು ಅಚ್ಚರಿ ಇಲ್ಲ, ಯಾಕೆಂದರೆ ಹೇಳಿಕೇಳಿ ಬಿಜೆಪಿಯ ತತ್ವ ಚಿಂತನೆಯೇ ಹಿಂದುಳಿದ ಜಾತಿ ಮತ್ತು ವರ್ಗದವರನ್ನು ಇಂತಹ ಮೌಢ್ಯದಲ್ಲಿ ಇರಿಸುವುದೇ ಆಗಿದೆ.

ವಾರದ ಆರಂಭದಲ್ಲಿ ಕುಕ್ಕೆಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮತ್ತು ಮೊನ್ನೆ ಉಡುಪಿಯ ಕೃಷ್ಣದೇವಸ್ಥಾನದಲ್ಲಿ 'ಹರಕೆ'ಯ ನೆಪದಲ್ಲಿ ಬ್ರಾಹ್ಮಣರು ಉಂಡ ಎಂಜಲೆಲೆಯ ಮೇಲೆ ನೂರಾರು ಜನರು ಹೊರಳಾಡುವ ಮೂಲಕ ಈ ಮಡೆ ಸ್ನಾನ ನಡೆದಿದೆ. ಪತ್ರಿಕಾ ವರದಿಗಳ ಪ್ರಕಾರ ಟೆಕ್ಕಿಗಳಂತಹ ಸುಶಿಕ್ಷಿತರೂ ಈ ಮೌಢ್ಯಾಚರಣೆಯಲ್ಲಿ ಭಾಗವಹಿಸಿದ್ದಾರೆ. ಅಷ್ಟೇ ಅಲ್ಲ, ಆ ಎಂಜಲೆಲೆಯ ಮೇಲೆ ಹೊರಳಾಡುವುದು ಒಂದು ಪಾರಂಪರಿಕ ಪದ್ಧತಿ ಎಂದೂ, ಹಾಗೆ ಮಾಡುವುದು ತಮ್ಮ ಹಕ್ಕು ಎಂದೂ, ಇದರಿಂದಾಗಿ ತಮ್ಮ ಚರ್ಮ ರೋಗಗಳು ನಿವಾರಣೆ ಆಗುತ್ತವೆ ಎಂದೂ ಈ 'ವಿದ್ಯಾವಂತರು' ಒತ್ತಾಯ ಮಾಡಿದ್ದಾರೆ.



ಇವರೆಲ್ಲರ ಈ ಮೌಢ್ಯಕ್ಕೆ ತಕ್ಕಂತೆ ಆ ಎರಡೂ ದೇವಸ್ಥಾನಗಳ ಮೇಲ್ವಿಚಾರಕರು, ಮುಜರಾಯಿ ಮಂತ್ರಿ ವಿ.ಎಸ್. ಆಚಾರ್ಯ ಮತ್ತು ಪೇಜಾವರ ಶ್ರೀಗಳು "ಇದು ಜನರ ನಂಬಿಕೆಯಾದ್ದರಿಂದ ಇದನ್ನು ತಡೆಯಕೂಡದು" ಎನ್ನುತ್ತಾ ಮನುಷ್ಯರ ಘನತೆಯನ್ನು ತಗ್ಗಿಸುವ, ಸ್ವಾಭಿಮಾನವನ್ನು ಕುಗ್ಗಿಸುವ, ಅಸಮಾನತೆಯನ್ನು ಹೆಚ್ಚಿಸುವ, ಮೌಢ್ಯವನ್ನು ವೈಭವೀಕರಿಸುವ ಈ ಆಚರಣೆಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಮುಖ್ಯಮಂತ್ರಿ ಸದಾನಂದ ಗೌಡ ಕೂಡ "ಮಡೆ ಸ್ನಾನ ಪದ್ಧತಿ ಸ್ಥಗಿತಗೊಳಿಸಬೇಕೋ ಬೇಡವೋ ಎಂಬ ಬಗ್ಗೆ ಚರ್ಚಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು. ಈ ಸಂಪ್ರದಾಯ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಹೀಗಾಗಿ ಸಾಧಕ-ಬಾಧಕದ ಬಗ್ಗೆ ಪರಿಶೀಲಿಸಬೇಕಿದೆ" ಎಂದಿದ್ದಾರೆ.

ವಾಸ್ತವವಾಗಿ 'ಹಿಂದಿನಿಂದಲೂ ನಡೆದುಕೊಂಡು ಬಂದಿದೆ' ಎಂಬುದು ಇಂತಹ ಮೌಢ್ಯದ ಮುಂದುವರಿಕೆಗೆ ಮುಖ್ಯ ಕಾರಣವಾಗಕೂಡದು. ಹಾಗೊಮ್ಮೆ ಅದೇ ಮುಖ್ಯವಾದರೆ ಇದರಂತೆ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಅಸ್ಪೃಶ್ಯತೆಯನ್ನು, ದೇವದಾಸಿ ಪದ್ಧತಿಯನ್ನು, ಮಲ ಹೊರುವ ವ್ಯವಸ್ಥೆಯನ್ನೂ ಮುಂದುವರೆಸಬೇಕಾಗುತ್ತದೆ. ವಾಸ್ತವವಾಗಿ ಅವೆಲ್ಲ ಚೆಡ್ಡಿಗಳಿಗೆ ಬೇಕು. ಆದರೆ ಚೆಡ್ಡಿಗಳಲ್ಲದ ನಾಗರಿಕರಿಗೆ ಅವೆಲ್ಲ ಬೇಕಿಲ್ಲ, ಅದೇ ಈ ಎರಡು ಗುಂಪುಗಳ ನಡುವೆ ಇರುವ ವ್ಯತ್ಯಾಸ.

ಮಡೆ ಸ್ನಾನ ನಡೆದದ್ದು, ಅದಕ್ಕೆ ಸರ್ಕಾರಿ ಯಂತ್ರ ಮತ್ತು ದೇವಸ್ಥಾನಗಳ ಕುತಂತ್ರ ನೆರವು ನೀಡಿದ್ದು ಅಪಾಯಕಾರಿ ಬೆಳವಣಿಗೆಗಳು. ಅದಕ್ಕಿಂತ ಅನಾಹುತಕಾರಿಯಾದದ್ದು ಈ ಪದ್ಧತಿಯನ್ನು ವಿರೋಧಿಸಿದ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಮ್ ಅವರ ಮೇಲೆ ಗುಂಪೊಂದು ದೈಹಿಕ ದಾಳಿ ಮಾಡಿರುವುದು. ಇದು ಏನನ್ನು ಸೂಚಿಸುತ್ತದೆ? ಮೇಲುವರ್ಗ ಮತ್ತು ಜಾತಿಗಳು ಇಂತಹ ಅವಮಾನವೀಯ ಮೌಢ್ಯಗಳಲ್ಲಿ ಕೆಳವರ್ಗ ಮತ್ತು ಜಾತಿಯವರನ್ನು ಬಂಧಿಸಲು ಇಚ್ಛಿಸುತ್ತದೆ ಮತ್ತು ಅದನ್ನು ವಿರೋಧಿಸಿದರೆ ಗೂಸಾ ಬೀಳುತ್ತದೆ ಎಂಬುದನ್ನಲ್ಲವೇ.

ಹಿಂದೆಲ್ಲ ಪ್ರಜ್ಞಾವಂತರಿರುವ, ಪ್ರಗತಿಪರ ಚಿಂತಕರಿರುವ ರಾಜ್ಯ ಎನಿಸಿಕೊಂಡಿದ್ದ ಕರ್ನಾಟಕದಲ್ಲಿ ಇವತ್ತು ಇಂತಹ ಸಾಂಸ್ಕೃತಿಕ ಗುಲಾಮಗಿರಿಯ ಪದ್ಧತಿಗಳು ಮುಂದುವರೆಯುತ್ತಿರುವುದು ಇಡೀ ರಾಜ್ಯಕ್ಕೇ ಅವಮಾನವಲ್ಲವೇ?

ಇನ್ನು ಸಾಹಿತ್ಯಕ-ಸಾಂಸ್ಕೃತಿಕ ಜಗತ್ತಿನಲ್ಲೂ ಎಚ್. ನಾಗವೇಣಿ ಅವರು ಬರೆದಿರುವ 'ಗಾಂಧಿ ಬಂದ' ಕಾದಂಬರಿಯ ಸುತ್ತ ಹಲವರು ರಾದ್ಧಾಂತವನ್ನು ಪ್ರಾರಂಭಿಸಿದ್ದಾರೆ. ವಿಶ್ವಕರ್ಮ ಸಮುದಾಯದ ಕೆಲವರು ಈ ಕಾದಂಬರಿಯಲ್ಲಿ ತಮ್ಮ 'ಉತ್ಕೃಷ್ಟ' ಜಾತಿಯನ್ನು ಕೀಳಾಗಿ ಕಾಣಲಾಗಿದೆ ಎಂದು ಆರೋಪಿಸಿ ಅದನ್ನು ಕೂಡಲೇ ಮಂಗಳೂರು ವಿಶ್ವವಿದ್ಯಾಲಯ ತನ್ನ ಪಠ್ಯ ಪುಸ್ತಕಗಳ ಪಟ್ಟಿಯಿಂದ ಕೈಬಿಡಬೇಕೆಂದು ಆಗ್ರಹಿಸಿದ್ದಾರೆ. ಈ ವಿಶ್ವಕರ್ಮರ ಗುಂಪಿನ ಜೊತೆ ಕೈಜೋಡಿಸಿರುವ ಬ್ರಾಹ್ಮಣ ಪರಿಷತ್ತು ಕೂಡ ಇದೇ ಕಾದಂಬರಿಯಲ್ಲಿ ತಮ್ಮ ಜಾತಿಗೂ ಅವಮಾನ ಮಾಡಲಾಗಿದೆ ಎಂದು ಆರೋಪಿಸಿ ಪುಸ್ತಕವನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದೆ.

ಆದರೆ ಈ ಪ್ರತಿಗಾಮಿ ಗುಂಪುಗಳ ಕುತಂತ್ರದ ವಿರುದ್ಧ ರಾಜ್ಯದ ಹಲವಾರು ಪ್ರಗತಿಪರರು ದನಿ ಎತ್ತಿದ್ದಾರಲ್ಲದೆ ಮಂಗಳೂರು ವಿವಿಯ ಕುಲಪತಿಗೆ ಪತ್ರ ಬರೆದು 'ಗಾಂಧಿ ಬಂದ' ಕೃತಿಗೆ ಸಂಬಂಧಿಸಿದಂತೆ ಯಾವುದೇ ಅಸಾಂಸ್ಕೃತಿಕ ಒತ್ತಡಕ್ಕೆ ಮಣಿಯಬಾರದೆಂದು ಮನವಿ ಮಾಡಿಕೊಂಡಿದ್ದಾರೆ.

ಜಿ.ಎಸ್.ಶಿವರುದ್ರಪ್ಪ, ಯು.ಆರ್.ಅನಂತಮೂರ್ತಿ, ಗಿರೀಶ್ ಕಾರ್ನಾಡ್, ಚಂದ್ರಶೇಖರ ಕಂಬಾರ, ಬರಗೂರು ರಾಮಚಂದ್ರಪ್ಪ, ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ಜಿ.ಕೆ.ಗೋವಿಂದ ರಾವ್, ಆರ್. ಪೂರ್ಣಿಮಾ, ಎನ್. ಗಾಯತ್ರಿ ಮತ್ತು ವಸುಂಧರಾ ಭೂಪತಿ ಅವರು ಸಹಿ ಮಾಡಿರುವ ಈ ಪತ್ರ ಹೀಗಿದೆ:

"ಸುಮಾರು ಹನ್ನೆರಡು ವರ್ಷಗಳ ಹಿಂದೆ ಪ್ರಕಟಗೊಂಡ ಶ್ರೀಮತಿ ಎಚ್. ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿ ಕನ್ನಡಿಗರಿಗೆ ತಲುಪಿದೆ ಎನ್ನುವುದಕ್ಕೆ ಅದು ನಾಲ್ಕು ಮುದ್ರಣಗಳನ್ನು ಕಂಡದ್ದೇ ಸಾಕ್ಷಿ. ಕರಾವಳಿ ಭಾಗದ ಸಂಸ್ಕೃತಿಯನ್ನು ತುಂಬ ಸೂಕ್ಷ್ಮವಾಗಿ ಅವಲೋಕಿಸಿರುವ ಒಂದು ಶ್ರೇಷ್ಠ ಕಾದಂಬರಿಯದು. ಗಾಂಧಿ ಮತ್ತು ಸ್ವಾತಂತ್ರ್ಯ ಹೋರಾಟದಂತಹ ರಾಷ್ಟ್ರೀಯ ವಸ್ತುವೊಂದನ್ನು ಪ್ರಾದೇಶಿಕ ಚೌಕಟ್ಟಿನಲ್ಲಿರಿಸಿ ಕೋಮು ಜ್ವಾಲೆಯಿಂದ ತಲ್ಲಣಿಸಿರುವ ದಕ್ಷಿಣ ಕನ್ನಡದ ಮಣ್ಣಿಗೆ ವೈಚಾರಿಕ ತಂಪನ್ನೆರೆದ ಈ ಕೃತಿ ಪ್ರತಿಷ್ಠಿತ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಚದುರಂಗ ಪ್ರಶಸ್ತಿ, ಎಸ್.ಎಸ್. ಭೂಸನೂರಮಠ ಪ್ರಶಸ್ತಿ ಹಾಗೂ ಕರ್ನಾಟಕ ಲೇಖಕಿಯರ ಸಂಘದ ಪ್ರಶಸ್ತಿಯನ್ನು ಪಡೆದಿದ್ದು, ನಾಟಕ ರೂಪದಲ್ಲೂ ಇದು ಕನ್ನಡಿಗರ ಮನಗೆದ್ದಿದೆ.

ಇಂತಹ ಶ್ರೇಷ್ಠ ಕೃತಿಯನ್ನು ಮಂಗಳೂರು ವಿಶ್ವವಿದ್ಯಾಲಯವು ತನ್ನ ವ್ಯಾಪ್ತಿಯಡಿ ಬರುವ ಎಲ್ಲಾ ಕಾಲೇಜುಗಳಲ್ಲಿ ಪ್ರಥಮ ಬಿ.ಎ. ಪದವಿ ಕನ್ನಡ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕವನ್ನಾಗಿ ತನ್ನ ಕನ್ನಡ ಅಧ್ಯಯನ ಮಂಡಳಿಯ ಶಿಫಾರಸ್ಸಿನ ಮೇಲೆ ಆಯ್ಕೆ ಮಾಡಿತ್ತು. ಅಂತೆಯೇ ಈಗ ಇದರ ಒಂದು ಸೆಮಿಸ್ಟರ್ ಓದುವಿಕೆಯೂ ಮುಗಿದಿದೆ. ಆದರೆ ಕಳೆದ ಹನ್ನೆರಡು ವರ್ಷಗಳಲ್ಲಿ ಕನ್ನಡದ ಓದುಗರಿಗೆ ಕಂಡುಬಾರದ ಲೋಪಗಳು ಈ ಕರಾವಳಿಯ ಕೆಲವು ಸಮುದಾಯಗಳಿಗೆ ಈಗ ತಟ್ಟನೆ ಕಾಣಿಸಿದ್ದು, ಆ 'ಶಕ್ತಿ'ಗಳೆಲ್ಲ ಈಗ ಒಟ್ಟಾಗಿ ಈ ಪುಸ್ತಕವನ್ನು ತಕ್ಷಣವೇ ರದ್ದು ಮಾಡುವಂತೆ ವಿಶ್ವವಿದ್ಯಾಲಯಕ್ಕೆ ಒತ್ತಡವನ್ನು ಹೇರುತ್ತಿವೆ.

ವಿಶ್ವಕರ್ಮ ಜನಾಂಗದವರನ್ನು ಅವಮಾನಿಸುವ ಮಾತುಗಳು ಈ ಕೃತಿಯಲ್ಲಿ ಇವೆಯೆಂಬ ಆರೋಪವಿದ್ದು, ವಾಸ್ತವದಲ್ಲಿ ಅದು ಸತ್ಯವಲ್ಲ. ಈ ಕಾದಂಬರಿಯಲ್ಲಿ ಬರುವ ಅಂತರ್‌ಧರ್ಮೀಯ ವಿವಾಹದಿಂದ ಬಹುಶಃ ರೊಚ್ಚಿಗೆದ್ದಿರಬಹುದಾದ ಮತಾಂಧಶಕ್ತಿಗಳು ವಿಶ್ವಕರ್ಮ ಜನಾಂಗದವರನ್ನು ಇಲ್ಲಿ ಎತ್ತಿ ಕಟ್ಟಿರುವ ಸಾಧ್ಯತೆಯಿದೆ. ಸುಮಾರು ಒಂದು ಶತಮಾನದ ಹಿಂದೆ ನಡೆದಿರಬಹುದಾದ ಕಲ್ಪಿತ ಘಟನೆಗಳನ್ನಾಧರಿಸಿ ರಚಿಸಿರುವ ಈ ಕೃತಿಯಲ್ಲಿ ಪ್ರಯೋಗಿಸಿರಬಹುದಾದ ಕೆಲವು ಶಬ್ದಗಳ ಪ್ರಸ್ತುತತೆಯನ್ನು 'ಇಂದು' ಉದ್ದೇಶಪೂರ್ವಕವಾಗಿ ಅಪಾರ್ಥಮಾಡಿಕೊಂಡು ಇಲ್ಲಿ ವಿವಾದವನ್ನು ಸೃಷ್ಟಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾಲಯವು ಯಾವುದೇ ಅಸಾಂಸ್ಕೃತಿಕ ಒತ್ತಡಕ್ಕೆ ಮಣಿಯಬಾರದೆಂದು ನಾವೆಲ್ಲ ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತೇವೆ. ಪಠ್ಯಪುಸ್ತಕ ಮಂಡಳಿಯಲ್ಲಿರುವ ವಿದ್ವಾಂಸರು ಆಯ್ಕೆ ಮಾಡಿರುವ ಈ ಕೃತಿಯನ್ನು ರಾಜಕೀಯ ಕಾರಣಕ್ಕೆ ಹಿಂತೆಗೆದುಕೊಳ್ಳುವುದು ಕೆಟ್ಟ ಸಂಪ್ರದಾಯಕ್ಕೆ ಕಾರಣವಾಗಬಹುದಾದ್ದರಿಂದ ಈ ಬಗ್ಗೆ ಬಹು ಎಚ್ಚರಿಕೆಯಿಂದ ತೀರ್ಮಾನ ತೆಗೆದುಕೊಳ್ಳಲು ವಿಶ್ವವಿದ್ಯಾಲಯದ ಕುಲಪತಿಗಳನ್ನು ನಾವು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇವೆ."

ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಕರ್ನಾಟಕ ಪಾತಾಳವನ್ನು ಮುಟ್ಟುತ್ತಿರುವ ಇಂತಹ ಸಮಯದಲ್ಲಿ ಸದ್ಯ ಈ ಪತ್ರವನ್ನು ಬರೆದಿರುವ ಪ್ರಜ್ಞಾವಂತರು ಇನ್ನೂ ನಮ್ಮ ನಡುವೆ ಇದ್ದಾರೆ ಎಂಬುದೇ ನೆಮ್ಮದಿ ತರುವ ವಿಷಯವಾಗಿದೆ....

ಕುಚೋದ್ಯದ ಪರಿಯ ನೋಡಾ

• ಡಾ. ಎಂ.ಎಸ್. ಆಶಾದೇವಿ


'ಗಾಂಧಿ ಬಂದ' ಕಾದಂಬರಿಯಾಧರಿತ ನಾಟಕದ ಒಂದು ದೃಶ್ಯ

"ಇಷ್ಟಕ್ಕೂ ಲೇಖಕರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರಶ್ನಿಸುವ ಪ್ರಸಂಗಗಳಿಗೆ ಬರವೇನೂ ಇಲ್ಲ. ಆದರೆ ಪ್ರತಿಬಾರಿಯೂ ಅದು ಹಿಂದಿನ ಪ್ರಸಂಗಗಳಿಗಿಂತ ವಿಕಾರ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ ಎನ್ನುವುದು ದುರಂತ ವ್ಯಂಗ್ಯ. ಕುವೆಂಪು ಅವರ 'ಶೂದ್ರ ತಪಸ್ವಿ' ನಾಟಕ ಕುರಿತಂತೆ ಮಾಸ್ತಿಯವರು ಎತ್ತಿದ ಪ್ರಶ್ನೆಗಳು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕುರಿತಂತೆ ಎಲ್ಲ ಕಾಲಕ್ಕೂ ಬಾಳುವ, ಬಾಳಬಹುದಾದ ಪ್ರಶ್ನೆಗಳ ಮೂಲಚೌಕಟ್ಟನ್ನು ಪ್ರತಿನಿಧಿಸುವಂತಿದೆ. ಅದಕ್ಕೆ ಕುವೆಂಪು ಕೊಟ್ಟ ಉತ್ತರ ಮಾತ್ರ ಕಾವ್ಯದಷ್ಟೇ ನಿತ್ಯನೂತನವಾಗಿದೆ. ಕವಿಯೂ ಸೇರಿದಂತೆ ಕಲೆಯ ನಿರಂಕುಶಮತಿಯ ಹಕ್ಕನ್ನು ಕುವೆಂಪು ಆಜನ್ಮಸಿದ್ಧ ಹಕ್ಕು ಎಂದು ಪ್ರತಿಪಾದಿಸುತ್ತಾರೆ. ಇತಿಹಾಸದ ಪುನರ್ ವಿಮರ್ಶೆಯ ಮತ್ತು ಮರುನಿರೂಪಣೆಯನ್ನು ಕಲೆಗಿರುವ ಸವಲತ್ತು, ಹಕ್ಕು ಎಂದು ಹೇಳುತ್ತಲೇ ಕುವೆಂಪು ಸಾಂಸ್ಕೃತಿಕ ರಚನೆಗಳ ಪಲ್ಲಟಗಳ ಹಿನ್ನೆಲೆಯಲ್ಲಿ ಅನಿವಾರ್ಯವೂ ಹೌದು ಎನ್ನುವುದನ್ನು ಒತ್ತಿ ಹೇಳುತ್ತಾರೆ. ಕುವೆಂಪು ಅವರ ಪ್ರತಿಕ್ರಿಯೆಗೆ ಐತಿಹಾಸಿಕ ಮಹತ್ವ ಇರುವುದು ಈ ಕಾರಣಕ್ಕಾಗಿ.

ಈ ಪ್ರಸಂಗವನ್ನು ಮತ್ತೆ ನೆನಪಿಸಿಕೊಳ್ಳಬೇಕಾದ ಸನ್ನಿವೇಶ ಕನ್ನಡದಲ್ಲಿ ಮತ್ತೆ ಎದುರಾಗಿದೆ. ಎಚ್. ನಾಗವೇಣಿಯವರ 'ಗಾಂಧಿ ಬಂದ' ಕನ್ನಡದ ಮಹತ್ವದ ಕಾದಂಬರಿಗಳಲ್ಲೊಂದು. ಗಾಂಧಿಯನ್ನು 'ಪ್ರಜ್ಞಾಪ್ರವಾಹ'ವಾಗಿ ಹಿಡಿಯಲು ಯತ್ನಿಸಿ ಯಶಸ್ವಿಯಾದ ಕಾದಂಬರಿ ಇದು. ಗಾಂಧಿಯನ್ನು ಹೊರಗಿನ 'ಆವಿಷ್ಕಾರ'ವಾಗಿ ಕಾಣದೆ ಒಳಗಿನ 'ಸಾಕ್ಷಾತ್ಕಾರ'ವಾಗಿ ಈ ಕೃತಿ ನೋಡುತ್ತದೆ. ಗಾಂಧಿಯನ್ನು ಕುರಿತಂತೆ ಕನ್ನಡದಲ್ಲಿ ಈ ತನಕ ಬಂದ ಕೃತಿಗಳಲ್ಲೆಲ್ಲ ಇದು ಭಿನ್ನವಾಗುವುದು ಈ ಕಾರಣಕ್ಕೆ. ಕುಗ್ರಾಮಗಳಲ್ಲಿಯೂ ಗಾಂಧಿಯ ಪ್ರಜ್ಞಾಪ್ರವಾಹ ಹಬ್ಬಿ ಹರಡಿದ ಪವಾಡ ಸದೃಶ ವಾಸ್ತವವನ್ನು ಈ ಕಾದಂಬರಿ ಬೆರಗಿನಿಂದೆಂಬಂತೆ ಹಿಡಿಯುತ್ತಿರುವಾಗಲೂ ಅದನ್ನು ಮೆಟ್ಟಿನಿಲ್ಲುವ ಸ್ಥಾಪಿತ ವ್ಯವಸ್ಥೆಯ ಅದಮ್ಯ ಶಕ್ತಿಯ ಹಿಡಿತವನ್ನು ಅಷ್ಟೇ ಸಂಯಮದಿಂದ ಗಮನಿಸುತ್ತಾ ಹೋಗುತ್ತದೆ.


ಎಚ್. ನಾಗವೇಣಿ

ಈಗ ಈ ಕಾದಂಬರಿಯನ್ನು ಕುರಿತಂತೆ ವಿವಾದವೊಂದನ್ನು ಸೃಷ್ಟಿಸಲಾಗಿದೆ. ವಿಶ್ವಕರ್ಮರನ್ನು ಈ ಕಾದಂಬರಿ ಅವಮಾನಿಸುತ್ತದೆ ಎನ್ನುವುದನ್ನು ಕಾರಣವಾಗಿ ನೀಡಲಾಗುತ್ತಿದೆ. ಪ್ರಸ್ತುತ 'ಗಾಂಧಿ ಬಂದ' ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪಠ್ಯವಾಗಿದ್ದು, ಜಾತಿನಿಂದನೆಯ ಕಾರಣಕ್ಕಾಗಿ ಪಠ್ಯವನ್ನು ಹಿಂತೆಗೆದುಕೊಳ್ಳಬೇಕೆನ್ನುವ ಮನವಿಯನ್ನು ಉಪಕುಲಪತಿಗಳಿಗೆ ನೀಡಲಾಗಿದೆ. ವಕೀಲರೊಬ್ಬರು ನಾಗವೇಣಿಯವರಿಗೆ ನೋಟಿಸ್‌ಅನ್ನು ಕಳುಹಿಸಿದ್ದಾರೆ.

ಆಕ್ಷೇಪಾರ್ಹ ಎಂದು ಹೇಳಲಾಗುತ್ತಿರುವ ಸನ್ನಿವೇಶ ಮತ್ತು ಮಾತುಗಳು ಹೀಗಿವೆ:

ಗಾಂಧಿ ಮಂಗಳೂರಿಗೆ ಬಂದು ಹೋದಮೇಲೆ, ಕಾರ್ನಾಡು ಸದಾಶಿವರಾಯರ ಸಲಹೆಯ ಮೇರೆಗೆ ಪಣಂಬೂರು ಜಾತ್ರೆಯಲ್ಲಿ ಊಟದ ಪಂಕ್ತಿ ಭೇದವನ್ನು ಪ್ರತಿಭಟಿಸಲೆಂದು ಎಲ್ಲ ಜಾತಿಯವರಿಗೂ ಒಟ್ಟಿಗೆ ಊಟಕ್ಕೆ ಬಡಿಸುವ ಯೋಜನೆ ಮಾಡಲಾಗಿರುತ್ತದೆ. ಇದರ ಸುಳಿವು ತಿಳಿದ ಬ್ರಾಹ್ಮಣರು ದೇವಸ್ಥಾನದಲ್ಲಿ ಊಟವನ್ನೇ ಮಾಡದೆ, ಇನ್ನೊಬ್ಬ ಬ್ರಾಹ್ಮಣರ ಮನೆಯಲ್ಲೇ ತಮ್ಮ ಊಟಕ್ಕೆ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಇತರೆಲ್ಲ ಜಾತಿಗಳವರಿಗೂ ಒಂದೇ ಪಂಕ್ತಿಯಲ್ಲಿ ದೇವಸ್ಥಾನದ ಹೊರಗೆ ಊಟ ಹಾಕಲಾಗುತ್ತದೆ. ಊಟವಾದ ನಂತರ ಶೂದ್ರರಲ್ಲೇ ತಗಾದೆ ಆರಂಭವಾಗುತ್ತದೆ. ತಮಗಿಂತ ಕೆಳಜಾತಿಯವರಾದ ಕೊರಗರ ಜೊತೆ ಊಟ ಹಾಕಿದ್ದಕ್ಕೆ ಮುಂಡಾಲರು, ಮುಂಡಾಲರಂತಹ ಕೆಳಸ್ತರದವರೊಂದಿಗೆ ಊಟ ಮಾಡಿದ್ದು ಅವಮಾನವೆಂದು ಮುಗೇರರು, ಕೊರಗರು, ಮುಂಡಾಲ, ಮುಗೇರರನ್ನು ಯಾಕೆ ನಮ್ಮೊಂದಿಗೆ ಕೂರಿಸಬೇಕೆಂದು ಮೊಲಿ, ಮೂಲ್ಯ, ಪೂಜಾರಿ, ಬೆಸ್ತರು, ಶೆಟ್ರು, ಆಚಾರರೆಲ್ಲ ಗಲಭೆ ಎಬ್ಬಿಸುತ್ತಾರೆ.

ಇಷ್ಟರ ನಡುವೆ "ಮರಕೆತ್ತುವ, ಚಿನ್ನ-ಕಬ್ಬಿಣ ಗುದ್ದುವ" ಆಚಾರರದ್ದು ಮತ್ತೊಂದು ಕಿರಿಕಿರಿ ಆರಂಭವಾಗಿತ್ತು.


"ನಾವು ನೂಲು ಹಾಕಿದವರು-ವಿಶ್ವಕರ್ಮ ಬ್ರಾಂಮಣರು; ನಮ್ಮನ್ಯಾಕೆ ಈ ನೂಲು ಇಲ್ಲದವರ ಜೊತೆ ಕೂರಿಸಿ ಕೆಡಿಸಿದಿರಿ" ಎಂಬ ಬಿರುಸಿನ ಮಾತು ಬೀಸಿ ಬಂದರೆ, ತಟ್ಟನೆ ನೂಲಿಲ್ಲದ ಶೂದ್ರರೆಲ್ಲ ಇರುವೆಗಳಂತೆ ಒಂದಾಗಿ, ಅರೇ! "ನೀವೆಂತಾ ನೂಲು ಬ್ರಾಂಮಣರು ಮಾರಾಯ.....? ನೀವು ನಮ್ಮಂತೇ ಮೀನು-ಮಾಂಸ ತಿನ್ನುವವರು. ನಮಗಿಂತಲೂ ಯಾವುದರಲ್ಲಿ ನೀವು ಹೆಚ್ಚಿನವರು. ಕೊಳಕಲ್ಲೆ? ಆಸ್ತಿಯಲ್ಲೆ? ಸಂಸ್ಕಾರದಲ್ಲೆ?" ಎಂದು ಕೊಂಕು ಮಾತಿನಿಂದ

(ಗಾಂಧಿ ಬಂದ -2000-188-189)

ಈ ಇಡೀ ಪ್ರಸಂಗದ ದುರಂತವನ್ನೂ, ಪರಮ ವಾಸ್ತವವನ್ನೂ ಕುರಿತ 'ಆತ್ಮಜ್ಞಾನ'ರಂತಹ ಮಾತುಗಳು ಇದರ ಮುಂದಿನ ಪ್ಯಾರದಲ್ಲೇ ಬರುತ್ತವೆ.

'ಒಟ್ಟಾರೆ ಈ ಅಬ್ರಾಹ್ಮಣ ಶೂದ್ರ ಜಗತ್ತಿನೊಳಗೇ ಜಾತಿ-ಭೇದಗಳ ವಿಷ ಬ್ರಾಹ್ಮಣರಿಗಿಂತ ಸ್ವಲ್ಪ ವಿಷಮವೇ ಇದೆಯೆಂದು ಮಾರಪ್ಪ-ತಿಂಗಳಾಯರಿಗೆ ತಿಳಿದೊಡನೆ ಅಂದೇ ಅವರಿಬ್ಬರೂ ಈ ವಿಚಾರದಲ್ಲಿ ಮೌನವಾಗಿ ಬಿಟ್ಟರು ಇದು ತಮ್ಮಿಂದ ತೊಳೆಯಲಾರದ ಸಾಮಾಜಿಕ ಕೊಳೆ ಆದರೂ ಜನಜಾಗೃತಿ ಎಂದು ಮಾಡಿ ಅದಕ್ಕಾಗಿ ಪ್ರಯತ್ನಿಸುವುದು ನಮ್ಮ ಕರ್ತವ್ಯವೆಂದು, ಗಾಂಧಿಯವರು ಅಂದು ಹೇಳಿದ ಮಾತು ಮಾರಪ್ಪನ ನೆನಪಿನಾಳದಿಂದ ದಿಗ್ಗನೆ ತೆಗೆದು ಮೇಲೆದ್ದು ಬಂದಿತ್ತು' (ಪುಟ. 189)

ಈಗ ವಿಶ್ವಕರ್ಮರು ತಕರಾರು ಎತ್ತಿದ್ದಾರೆ. ಲೇಖಕಿ ಎಚ್. ನಾಗವೇಣಿಯವರಿಗೆ ಕಳುಹಿಸಲಾದ ನೋಟಿಸ್ ಮತ್ತು ಉಪಕುಲಪತಿಗಳಿಗೆ ನೀಡಲಾದ ಮನವಿ ಪತ್ರದ ಸಾರಾಂಶವೆಂದರೆ, ಋಗ್ವೇದದಲ್ಲಿಯೂ, ನ್ಯಾಯಾಲಯದ ತೀರ್ಮಾನಗಳಲ್ಲಿಯೂ



ವಿಶ್ವಕರ್ಮರ ಶ್ರೇಷ್ಠತೆಯ ಜಟಾಪಟಿ

ಆಯ್ದ ತುಣುಕುಗಳು

'ಗಾಂಧಿ ಬಂದ' ಕೃತಿಯಿಂದ ಉದ್ಭವಿಸಿರುವ ವಿಶ್ವಕರ್ಮ ಸಮುದಾಯದವರು ಬ್ರಾಹಣರಿಗಿಂತ ಮೇಲೋ? ಕೀಳೋ? ಎಂಬ ಜಟಾಪಟಿಗೆ ಸಂಬಂಧಿಸಿದಂತೆ ಕೆಲವರ ಪಿ.ಎಚ್‌ಡಿ ಪ್ರಬಂಧಗಳ ತುಣುಕುಗಳನ್ನು ಆಯ್ದು ನೀಡಲಾಗಿದೆ. ಅಚ್ಚರಿಯೆಂದರೆ ಇವತ್ತು ವಿಶ್ವಕರ್ಮರು ತಾಳಿರುವ ನಿಲುವಿಗೆ ವ್ಯತಿರಿಕ್ತವಾಗುವ ಇಂತಹ ಥೀಸೀಸ್ ಬರೆದವರು ಖುದ್ದು ವಿಶ್ವಕರ್ಮ ಸಮುದಾಯದವರೆ.



1) ಪ್ರಬಂಧ ಮಂಡನೆ: ಶುಭಕರಾಚಾರ್ಯ, ಗೈಡ್: ಡಾ.ದೈವಜ್ಞ, ಪ್ರಬಂಧ: ಕಮ್ಮಾರರ ಬದುಕಿನ ಸ್ಥಿತ್ಯಂತರಗಳು

ಪುಟ-4: 'ಒಂದು ಕಾಲಕ್ಕೆ ಕಮ್ಮಾರಿಕೆ ವೃತ್ತಿ ಕೈಗೊಂಡವರನ್ನು ವಿಶ್ವಕರ್ಮದ ಇತರೆ ಗುಂಪಿನವರು ಕೀಳಾಗಿ ಕಾಣುತ್ತಿದ್ದ ಘಟನೆಗಳನ್ನು ಮಾಹಿತಿದಾರರು ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದರು. ಮಂಗಳೂರು ಮತ್ತು ಉಡುಪಿ ಜಿಲ್ಲೆಯಲ್ಲಿ (ದ.ಕನ್ನಡ ಜಿಲ್ಲೆ) ವಾಸಿಸುತ್ತಿದ್ದ ವಿಶ್ವಕರ್ಮರು ಸಾಮಾನ್ಯವಾಗಿ ವೈದಿಕ ಧರ್ಮದ ಜೊತೆಗೆ ಗುರುತಿಸಿಕೊಳ್ಳುತ್ತಿರುವುದು ಕಂಡು ಬರುತ್ತಿದೆ. ಕಮ್ಮಾರರು ವಿಶ್ವಕರ್ಮರೇ ಆಗಿರುವುದರಿಂದ ಅವರನ್ನು ವೈದಿಕ ಧರ್ಮದತ್ತ ಇತರ ಒಳಪಂಗಡದವರು ಸೆಳೆಯುತ್ತಿದ್ದಾರೆ. ಇದರಿಂದ ಕಮ್ಮಾರರು ಸರ್ಕಾರ ಪರಿಶಿಷ್ಟ ಪಂಗಡಕ್ಕೆ ನೀಡುತ್ತಿರುವ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿಲ್ಲ. ನಾವು ಈ ಸೌಲಭ್ಯ ಪಡೆದುಕೊಂಡರೆ ವಿಶ್ವಕರ್ಮ ಸಮುದಾಯದಿಂದ ದೂರ ಉಳಿಯಬೇಕಾಗುತ್ತದೆ. ನಮ್ಮ ಸಾಮಾಜಿಕ ಸ್ಥಾನಮಾನಗಳಿಗೆ ಧಕ್ಕೆ ಉಂಟಾಗುತ್ತದೆ ಎಂಬ ಭಯ, ಆತಂಕ ಇಲ್ಲಿಯ ಕಮ್ಮಾರರಲ್ಲಿದೆ'.

ಪುಟ-53: 'ಉಡುಪಿ ಮತ್ತು ಮಂಗಳೂರು ಜಿಲ್ಲೆಯಲ್ಲಿರುವ ಕಮ್ಮಾರ ಸಮುದಾಯ ಜನಗಣತಿ. ಸಂದರ್ಭದಲ್ಲಿ ಕಮ್ಮಾರ ಎಂದು ನಮೂದಿಸದೆ ವಿಶ್ವಕರ್ಮ, ಪಾಂಚಾಳ, ವಿಶ್ವಬ್ರಾಹ್ಮಣ ಮುಂತಾದ ಹೆಸರುಗಳಿಂದ ದಾಖಲಿಸುತ್ತಿದ್ದಾರೆ. ಈ ಪ್ರದೇಶದಲ್ಲಿಯ ಕಮ್ಮಾರ ಸಮುದಾಯವನ್ನು ಸರ್ಕಾರ ಪರಿಶಿಷ್ಟ ಪಂಗಡದಲ್ಲಿ ಗುರುತಿಸಿರುವುದು ಅನೇಕರಿಗೆ ತಿಳಿದಿಲ್ಲ, ತಿಳಿದವರೂ ಕಮ್ಮಾರ ಎಂದು ದಾಖಲಿಸುತ್ತಿಲ್ಲ, ಚಿನ್ನ ಬೆಳ್ಳಿ ಮೂರ್ತಿ ಕೆತ್ತನೆ ಮಾಡುತ್ತಿರುವವರು ಕಮ್ಮಾರಿಕೆ ವೃತ್ತಿ ಮಾಡುತ್ತಿರುವವರನ್ನು ತಮ್ಮಿಂದ ದೂರ ಇರಿಸಿದ್ದಾರೆ. ಕಮ್ಮಾರಿಕೆ ವೃತ್ತಿ ಮಾಡುವವರು ಕೃಷಿಕರಿಗೆ ಅಗತ್ಯ ಸಲಕರಣೆಗಳನ್ನು ಸಿದ್ಧ ಪಡಿಸಿಕೊಡುವುದರ ಮೂಲಕ ಸ್ನಾನ, ಜಪ, ತಪಗಳಂತಹ ವೈದಿಕ ಧರ್ಮಾಚರಣೆಗಳನ್ನು ಬಿಟ್ಟು ಕುಲುಮೆ ವಿಧಿ, ಅಡಿಗಲ್ಲಿನ ಪೂಜೆ ನಡೆಸಿ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ. ಕಠಿಣ ಮತ್ತು ಶ್ರಮದ ಕೆಲಸಗಳಿಂದ ಕಮ್ಮಾರರ ಮಾತುಕತೆ, ಸ್ವಭಾವ ಲಕ್ಷಣಗಳು ಒರಟಾಗಿರುತ್ತಿದ್ದವು, ಶಾರೀರದಲ್ಲಿ ಕಪ್ಪಾಗಿ ಕಾಣಿಸುತ್ತಿದ್ದರಿಂದ ಅವರನ್ನು ನಾವು ಬೇರೆ ಇಟ್ಟದ್ದೇವೆ ಎಂದು ಮಾಹಿತಿದಾರರು ತಿಳಿಸಿದ್ದಾರೆ.'

ಪುಟ-14: "ಅನಂತಕೃಷ್ಣ ಅಯ್ಯರ್‌ರವರ 'The Mysore Tribe And Caste-Volume-4' ನಲ್ಲಿ 'ಈಗ ವಿಶ್ವಕರ್ಮರು ನಾವು ಬ್ರಾಹ್ಮಣರಿಗಿಂತ ಹೆಚ್ಚು ಶ್ರೇಷ್ಠರು ಎಂದು ಪ್ರತಿಪಾದಿಸುತ್ತಾರೆ. ನಾವು ಸಾವಿರದ ಬ್ರಹ್ಮನಿಂದ ನೇರವಾಗಿ ಸೃಷ್ಟಿಯಾದವರು, ಬ್ರಾಹ್ಮಣರು ಸಾವಿರುವ ಋಷಿಗಳ ವಂಶದಿಂದ ಬಂದವರು ಆದ್ದರಿಂದ ನಾವು ಸಾವಿಲ್ಲದ ಬ್ರಹ್ಮನಿಂದ ಹುಟ್ಟಿದ ಕಾರಣಕ್ಕೆ ಶ್ರೇಷ್ಠರು ಎಂದು ಹೇಳಿಕೊಳ್ಳುತ್ತಾರೆ' (ನಾಲ್ಕನೇ ಸಂಪುಟದ 435ನೇ ಪುಟ) ಎಂದು ಹೇಳಿದ್ದಾರೆ"

ಪುಟ-15: "ದುಬೆ (Dubois) ರವರು 'Hindu Manners, Customs And Ceremonies' ಕೃತಿಯಲ್ಲಿ 'ವಿಶ್ವಕರ್ಮರನ್ನು ಬ್ರಾಹ್ಮಣರು ಶೂದ್ರರಲ್ಲಿಯೇ ಕೆಳವರ್ಗದವರೆಂದು ಪರಿಗಣಿಸಿ ಅವರನ್ನು ತಿರಸ್ಕರಿಸಿದ್ದರೂ ಕೆಲವು ಜಿಲ್ಲೆಗಳಲ್ಲಿ ಪಾಂಚಾಳರು ಬ್ರಾಹ್ಮಣರ ಪ್ರಾತಿನಿಧ್ಯತೆಯನ್ನು ಒಪ್ಪಿಕೊಳ್ಳದೇ ತಿರಸ್ಕರಿಸಿದ್ದನ್ನು ಈ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ"

ಪುಟ-16: "ಬುಕನೆನ್ ಎಫ್.ಎ ರವರು 'A Journey From Madras Through The Countries Of Mysore' ಎಂಬ ಕೃತಿಯಲ್ಲಿ ಪಾಂಚಾಳರು ಶೂದ್ರರಲ್ಲಿಯೇ ಕೆಳವರ್ಗದವರೆಂದು ಬ್ರಾಹ್ಮಣರಿಂದ ಪರಿಗಣಿಸಲ್ಪಟ್ಟಿದ್ದರು. ಪಾಂಚಾಳರು ನಾವು ವಿಶ್ವಕರ್ಮ ಕಮಾಚಮ್ಮ, ತಾಳಿಮಾರರ ಮೂಲದವರೆಂದು ಕರೆದುಕೊಳ್ಳುತ್ತಾರೆ. ಅವರು ಅರಣ್ಯದಲ್ಲಿ ವಾಸಿಸುತ್ತಿದ್ದ ಕಾರಣ ಅವರಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವಾಗ ತುಂಬ ಕಷ್ಟ ಪಡಬೇಕಾಯಿತೆಂದು ಬುಕನೆನ್ ಉಲ್ಲೇಖಿಸಿದ್ದಾನೆ."

ಪುಟ 16-17: "ರಫೆಲ್ ಮತ್ತು ಹೀರಲಾಲ್ ಅವರ 'Tribes And Castes Of Central Provinces Of India' ಎಂಬ ಸಂಪುಟದಲ್ಲಿ ಪಾಂಚಾಳರ ಬಗ್ಗೆ ಈ ಮಾಹಿತಿ ದೊರೆಯುತ್ತದೆ. ಪಾಂಚಾಳರು ನಾವು ಬ್ರಾಹ್ಮಣರಿಗೆ ಸಮಾನರೆಂದು ಹೇಳುತ್ತಿರುವುದನ್ನು ಮತ್ತು ತಮ್ಮನ್ನು ವಿಶ್ವ ಬ್ರಾಹ್ಮಣರೆಂದು ಕರೆದುಕೊಂಡದ್ದನ್ನು ಗಮನಿಸಿ ಸುಮಾರು 1033ರ ಶಾಸನವೊಂದನ್ನು ಆಧರಿಸಿ ಪಾಂಚಾಳರು ಅತೀ ಕೆಳವರ್ಗದವರಾಗಿದ್ದರು ಹಾಗೂ ಕೇವಲ ಹಳ್ಳಿಗಳಲ್ಲಿ ವಾಸಿಸುತ್ತಿದ್ದರೆಂದು ಅಭಿಪ್ರಾಯ ಪಟ್ಟಿದ್ದರು. ಇವರು ಮೇಲ್ವರ್ಗದವರಿಂದ ನಿರಂತರವಾಗಿ ಶೋಷಣೆಗೆ ಒಳಗಾದ ಪರಿಣಾಮವಾಗಿಯೋ ಏನೋ ತಮ್ಮನ್ನು ತಾವೇ ಅತಿರೇಕವಾಗಿ ವರ್ಣಿಸಿಕೊಳ್ಳಲು ಬ್ರಾಹ್ಮಣಿಕೆಗೆ ಏರಿಸಿಕೊಳ್ಳಲು ಪ್ರಯತ್ನಿಸಿದ್ದರು. ಈ ಕಾರಣಕ್ಕಾಗಿಯೇ ಮೇಲ್ವರ್ಗ ಹಾಗೂ ಕೆಳವರ್ಗಗಳೆರಡರಿಂದಲೂ ಕುಹಕಕ್ಕೆ ಒಳಗಾಗುವಂತಾಯಿತೆಂದು ರಫೆಲ್ ತಿಳಿಸುತ್ತಾರೆ."

ಪುಟ 16-17: "ಎಂಥೋವನ್ ಆರ್.ಇ ಅವರ 'Tribes Castes Of Bombay' ಗ್ರಂಥದಲ್ಲಿ ಪಾಂಚಾಳರು ಲೋಹಗಳ ಕೆಲಸಗಾರಿಕೆಯಿಂದ ಸಾಮಾನ್ಯವಾಗಿ ಉತ್ತಮ ಸ್ಥಿತಿವಂತರಾಗಿದ್ದ ಕಾರಣ ತಮ್ಮನ್ನು ಸಹಜವಾಗಿಯೇ ಬ್ರಾಹ್ಮಣರಿಗೆ ಸಮಾನರೆಂದು ಕರೆದುಕೊಳ್ಳಲು ಪ್ರಯತ್ನಿಸಿರಬೇಕು. ಆದ್ದರಿಂದ ಆ ಕಾಲಕ್ಕೆ ಬ್ರಾಹ್ಮಣರ ಸಾಂಕೇತಿಕ ಉಡುಪುಗಳನ್ನು ಇವರು ಧರಿಸುವುದನ್ನು ಪುರೋಹಿತಶಾಹಿ ವರ್ಗ ವಿರೋಧಿಸಿತ್ತು, ಆದರೆ ಆರ್ಥಿಕ ಸಬಲತೆಯ ಕಾರಣದಿಂದಾಗಿ ಪುರೋಹಿತಶಾಹಿ ವಿರೋಧವನ್ನು ಪಾಂಚಾಳರು ನಿರ್ಲಕ್ಷಿಸಿದ್ದರು ಎಂದು ತಿಳಿಸುತ್ತಾರೆ. 1909ರಲ್ಲಿ ಧಾರವಾಡದಲ್ಲಿ ಪಾಂಚಾಳನೊಬ್ಬ ಬ್ರಾಹ್ಮಣರಂತಹ ಉಡುಪನ್ನು ಧರಿಸಿದ್ದರ ಕಾರಣ ನರಗುಂದದ ಪ್ರಮುಖನೊಬ್ಬ ಆ ವ್ಯಕ್ತಿಯ ವೃಷಣದ ಮೇಲೆ ಸಲಾಕೆಯಿಂದ ಬರೆ ಹಾಕಿದ್ದನ್ನು ನಾನು ಕಣ್ಣಾರೆ ನೋಡಿದ್ದಾಗಿ ಆ ಪ್ರಾಂತ್ಯದ ವೃದ್ಧನೊಬ್ಬ ತನ್ನ ಎದುರಿಗೆ ನಡೆದ ಘಟನೆಯನ್ನು ಹೇಳಿದ ಎಂದು ಎಂಥೋವನ್ ಈ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ."

2) ಪ್ರಬಂಧ ಮಂಡನೆ: ಶೇಖರಾಚಾರಿ, ಗೈಡ್ ಡಾ.ಪಾಂಡುರಂಗ ಬಾಬು, ಪ್ರಬಂಧ: ಪಾಂಚಾಳರ ಭಾ... ಮತ್ತು ಸಂಸ್ಕೃತಿ.

ಪುಟ-1 : "ಎಂ.ಎನ್. ಶ್ರೀನಿವಾಸರು ಪಾಂಚಾ... ಸಮುದಾಯಕ್ಕೆ ಸಂಬಂಧಿಸಿದಂತೆ ಇವರ ಮಾಂಸಾಹಾರಿಗಳು, ಶುದ್ಧತೆ ಇಲ್ಲದವರು ಎಂಬುದನ ಸಮಾಜಶಾಸ್ತ್ರದ ಹಿನ್ನಲೆಯಲ್ಲಿ ತಪ್ಪು ಮಾಹಿತಿಯನ ದ್ವಿತೀಯ ಪಿಯುಸಿ ಸಮಾಜಶಾಸ್ತ್ರ ಪಠ್ಯದಲ್ಲಿ ಕೊಟ್ಟಿದ್ದಾರೆ. (ತಪ್ಪು ಮಾಹಿತಿ ಕೊಟ್ಟಿದ್ದಾರೆ ಎಂದು ಸಂಶೋಧಕರ ನೀಡಿದ್ದಕ್ಕೆ ಯಾವುದೇ ಆಧಾರವನ್ನು ಒದಗಿಸಿಲ್ಲ)

ಪುಟ-39: "ಪ್ರಸ್ತುತ ಸಂದರ್ಭದಲ್ಲಿ ಕಮ್ಮಾರ, ಬಡಿಗ... ಅಕ್ಕಸಾಲಿಗ, ಶಿಲ್ಪಿ ಹಾಗೂ ಕಂಚುಗಾರರನ್ನು ಒಟ್ಟಿಗೇ ಸೇರಿ... ವಿಶ್ವ ಕರ್ಮ ಅಥವಾ ಪಾಂಚಾಳ ಎಂದು ಕರೆಯಲಾಗುತ್ತದೆ.

ಪುಟ-9: " ಡಾ. ಸಯ್ಯದ್ ಜಮೀರುಲ್ಲಾ ಷರೀಫ್ ರವ... 'ಉತ್ತರ ಕನ್ನಡ ಜಿಲ್ಲೆಯ ಕಮ್ಮಾರಿಕೆ' ಲೇಖನದಲ್ಲಿ ಪಾಂಚಾಳ... ಹಬ್ಬಗಳ ವಿವರಣೆಯ ಸಂದರ್ಭದಲ್ಲಿ ಇವರು ಬೇ... ಸಮುದಾಯದವರ ಜೊತೆಗೂಡಿ ಆಚರಿಸುವ ಹಬ್ಬಗ... ಮಾಹಿತಿಯನ್ನು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಕು... ದೇವತೆಗಳಿಗೆ ಬಲಿ ಕೊಡುವ ಸಂಪ್ರದಾಯವನ್ನು ಇಟ್ಟು... ಕೊಂಡಿದ್ದರು. ಮಾಂಸಾಹಾರಿಗಳಾದ ಇವರು ಸೋಮವಾ... ಶನಿವಾರ ಮತ್ತು ಸಂಕಷ್ಟಿ ಚೌತಿ ದಿನಗಳಲ್ಲಿ ಪೂರ್ಣ ಸಸ್ಯಾಹಾ... ಗಳಾಗಿ ಉಳಿದ ದಿನಗಳಲ್ಲಿ ಮಾಂಸಾಹಾರಿಗಳಾಗಿರುತ್ತಿದ್ದ... ಎಂದು ತಿಳಿಸಿದ್ದಾರೆ."

ಬ್ರಾಹ್ಮಣರಿಗಿಂತ ಶ್ರೇಷ್ಠ ಎಂದು ಪರಿಗಣಿಸಲಾದ ತಮ್ಮನ್ನು ಕೆಳಜಾತಿಯವರೆಂದು ಈ ಕಾದಂಬರಿಯಲ್ಲಿ ಬಿಂಬಿಸಲಾಗಿದೆ. ಜಾತ್ಯತೀತ ರಾಷ್ಟ್ರವಾದ ಭಾರತದಲ್ಲಿ, ಜಾತಿನಿಂದನೆಯ ಮಾತುಗಳಿರುವ ಕೃತಿಯೊಂದು ಪಠ್ಯವಾಗುವುದು ಸರಿಯಲ್ಲ. ವಿಶ್ವಕರ್ಮ ವಿದ್ಯಾರ್ಥಿಗಳಿಗಂತೂ ಇದರಿಂದ ಅಪಾರ ಮಾನಸಿಕ ವ್ಯಥೆ ಉಂಟಾಗುತ್ತದೆ. ಕಾದಂಬರಿಯಲ್ಲಿ ವಿಶ್ವಕರ್ಮ ಜಾತಿಯನ್ನು ಕುರಿತಂತೆ ಬಳಸಲಾಗಿರುವ ಮಾತುಗಳು ತೀರಾ ಕೆಳಮಟ್ಟದವಾಗಿದ್ದು, ಅವು ಲೇಖಕಿಯ ಕೆಳಮಟ್ಟವನ್ನು ಸೂಚಿಸುವಂತಿವೆ. ಬ್ರಾಹ್ಮಣರನ್ನು 'ವಿಪ್ರೋತ್ತಮರು' ಎಂದು ಗೌರವಿಸುವ ಈ ಕೃತಿಯಲ್ಲಿ ವಿಶ್ವಕರ್ಮರನ್ನು ಮಾತ್ರ ಮೀನು-ಮಾಂಸ ತಿನ್ನುವವರು ಎಂದು ಹೀಗಳೆಯಲಾಗಿದೆ....

ಹೀಗೆ ಇದು ಮುಂದುವರಿಯುತ್ತ ಸಾಹಿತ್ಯ ಪಠ್ಯವೊಂದು ಬಳಸುವ ಪರಿಭಾಷೆಯನ್ನು ಅರ್ಥ ಮಾಡಿಕೊಳ್ಳುವುದರಲ್ಲಿಯೇ ಇವರಿಗೆ ಎದುರಾಗುವ ತೊಡಕಿಗೆ 'ವಿಪ್ರೋತ್ತಮರು' ಎನ್ನುವ ಮಾತಿನ ಹಿಂದಿನ ವ್ಯಂಗ್ಯ, ಗೇಲಿ ಅರ್ಥವಾಗದಿರುವುದೇ ಸೂಚಿಸುತ್ತದೆ.

ಶಿವಳ್ಳಿ ಬ್ರಾಹ್ಮಣರ ಪರಿಷತ್ತು-ಕಾರ್ಕಳದವರು ನಾಗವೇಣಿಯವರಿಗೆ ಬರೆದಿರುವ ಪತ್ರವಂತೂ ಇನ್ನು ಕುತೂಹಲಕರವಾಗಿದೆ. ಬ್ರಾಹ್ಮಣ ಮತ್ತು ಮುಸ್ಲಿಂ ಸಮುದಾಯಗಳ ಗಂಡು-ಹೆಣ್ಣಿನ ನಡುವಿನ ಪ್ರೇಮ ಪ್ರಕರಣವನ್ನು ಚಿತ್ರಿಸಿರುವುದು ತೀರಾ ಅಕ್ಷೇಪಾರ್ಹ ಎಂದು ಹೇಳುತ್ತಾ ಬಹುತೇಕ ಕನ್ನಡ ಅಧ್ಯಾಪಕರು ಬ್ರಾಹ್ಮಣರೇ ಆಗಿರುವುದರಿಂದ, ಇದನ್ನು ಪಾಠ ಮಾಡುವುದು ಹೇಗೆ ಸಾಧ್ಯ ಎಂದು ಉದ್ಗಾರ ಎಳೆಯುತ್ತದೆ. ಬ್ರಾಹ್ಮಣರು ಮುನಿದರೆ ಆಗಬಹುದಾದ ಅನಾಹುತಗಳ ಬಗೆಗೂ ಈ ಪತ್ರ ಎಚ್ಚರಿಕೆ ನೀಡುತ್ತದೆ.

12 ನೆಯ ಶತಮಾನದಿಂದಲೂ ಜಾತಿಯನ್ನು ಮೀರಲು ಏನೆಲ್ಲಾ ಪ್ರಯತ್ನಗಳನ್ನು ನಡೆಸಿ, ಅದರ ರಕ್ತ ಬೀಜಾಸುರ ಶಕ್ತಿಯ ಎದುರಿಗೆ ಕಂಗಾಲಾಗುತ್ತಲೇ ಹೋಗುತ್ತಿರುವ ಭಾರತೀಯ ಸಮುದಾಯಕ್ಕೆ ಇಂಥ ಪ್ರಸಂಗಗಳು ಜಾತ್ಯತೀತತೆಯನ್ನು ಕುರಿತ ತಮ್ಮ ನಂಬಿಕೆ ಮತ್ತು ಬದ್ಧತೆಗಳನ್ನು ಮತ್ತೊಮ್ಮೆ ಖಚಿತಪಡಿಸಿಕೊಳ್ಳಲು ನೆರವಾಗಬೇಕು. ಕೆಳಜಾತಿಯ ವೈದ್ಯರೊಬ್ಬರನ್ನು ಮದುವೆಯಾಗಿರುವ ನಾಗವೇಣಿಯವರ ವಿರುದ್ಧ ನಡೆಯುವ ಇಂಥ ಹುನ್ನಾರಗಳು ನಿಜಕ್ಕೂ ಕುಚೋದ್ಯದಂತೆ ಕಾಣಿಸುತ್ತವೆ.

ಪುಟ-9: "ನರಸಿಂಹೇಗೌಡ ನಾರಣಾಪುರ ಅವರ 'ಚನಿವಾರಿಕೆ ದಕ್ಷಿಣ ಕರ್ನಾಟಕ' ಲೇಖನದಲ್ಲಿ ಚಿಕ್ಕಮನೆ ಆಚಾರರು, ದೊಡ್ಡಮನೆ ಆಚಾರರು, ಕುಲಾಚಾರರು, ಮತಾಚಾರರು, ಲಿಂಗಾಚಾರರು ಎಂಬ ಜಾತಿಗಳು ಕಂಡುಬರುತ್ತವೆ. ಇದರಲ್ಲಿ ಚಿಕ್ಕಮನೆ ಆಚಾರರು ಮಾಂಸ ತಿನ್ನುವುದಿಲ್ಲ ಆದರೆ ದೊಡ್ಡಮನೆ ಆಚಾರರು, ಕುಲಾಚಾರರು, ಮತಾಚಾರರು ಮಾಂಸವನ್ನು ತಿನ್ನುತ್ತಾರೆ ಎಂದು ತಿಳಿಸಿದ್ದಾರೆ."

3) ಪ್ರಬಂಧ ಮಂಡನೆ: ಆರ್.ಬಿ. ಕುಮಾರ್, ಗೈಡ್: ಮಂಜುನಾಥ ಬೇವಿನಕಟ್ಟಿ, ಪ್ರಬಂಧ: ಕರ್ನಾಟಕದ ಮುದ್ದೆ ಕಂಬಾರರು

ಪುಟ-1: "ಭಾರತದ ಬಹುಪಾಲು ಬುಡಕಟ್ಟುಗಳು ಆಧುನಿಕ ಜಗತ್ತಿನಲ್ಲಿ ಸಂಸ್ಕೃತೀಕರಣಗೊಳ್ಳುತ್ತಾ ತನ್ನ ಮೂಲ ಬುಡಕಟ್ಟು ಸಂಸ್ಕೃತಿಯಿಂದ ದೂರವಾದಂತೆ ಕರ್ನಾಟಕದ ಪಾಂಚಾಳರು ತಮ್ಮ ಮೂಲ ಬುಡಕಟ್ಟು ಸಂಸ್ಕೃತಿಯಿಂದ ದೂರ ಉಳಿದಿದ್ದಾರೆ. ಆದರೆ ಇನ್ನು ತೀರಾ ಕೆಳಸ್ತರದಲ್ಲಿರುವ ಮುದ್ದೆ ಕಂಬಾರರ ಚಿಕ್ಕ ಸಮುದಾಯವೊಂದು ಇನ್ನೂ ಸಹ ತಮ್ಮ ಮೂಲ ಸಂಸ್ಕೃತಿಯ ಎಳೆಗಳನ್ನು ತನ್ನ ಒಡಲಲ್ಲಿ ಅಡಗಿಸಿಕೊಂಡಿದೆ."

ಪುಟ-20-21: "ತಿಮ್ಮೇಗೌಡರು ತಮ್ಮ ಕೃತಿಯಲ್ಲಿ 'ಮೈಸೂರಿನ ಹರಿಜನ ಜಾತಿಗಳು ಕಮ್ಮಾರರಿಂದ ಬೇಯಿಸಿದ ಆಹಾರ, ನೀರನ್ನು ಕುಡಿಯುವುದಿಲ್ಲ ಎಂದು ಶ್ರೀನಿವಾಸ ಎಂ.ಎನ್ ತಿಳಿಸಿರುವುದನ್ನು ಉಲ್ಲೇಖಿಸಿದ್ದಾರೆ'. 1950ರ ವರೆಗೂ ಈ ಜಾತಿಯವರಿಗೆ ಹಳ್ಳಿಗಳಲ್ಲಿ ಶುಭಸಮಾರಂಭಗಳಲ್ಲಿ ಓಲಗ ಊದಿಸಲು, ಮದುವೆ ಮಾಡಲು ರೈತ ಜಾತಿಗಳು ಅವಕಾಶ ಕೊಡದ ಉದಾಹರಣೆಗಳು ಕಾಣಸಿಗುತ್ತವೆ ಎಂದು ತಿಮ್ಮೇಗೌಡರು ತಿಳಿಸಿದ್ದಾರೆ."

ಪುಟ-21: "ತಾವು ವಿಶ್ವಕರ್ಮರೆಂದು ಕರೆದುಕೊಳ್ಳುವ ಇವರು ಜಾತಿ ವ್ಯವಸ್ಥೆಯ ಶ್ರೇಣೀಕರಣದಲ್ಲಿ ತಮ್ಮನ್ನು ಎಷ್ಟೇ ಮೇಲುಸ್ತರಕ್ಕೆ ಏರಿಸಲು ಪ್ರಯತ್ನ ಮಾಡಿದ್ದರೂ ಸಾಮಾಜಿಕ ವ್ಯವಸ್ಥೆಯಲ್ಲಿ ಇವರ ಸ್ಥಾನ ಪೂರ್ವದಲ್ಲಿದ್ದಂತೆ ಯಥಾಸ್ಥಿತಿಯಲ್ಲಿರುವುದನ್ನು ಕಾಣಬಹುದು. ಒಟ್ಟಿನಲ್ಲಿ ಈ ಐದು ಒಳ ಸಮುದಾಯಗಳು ತಮ್ಮನ್ನು ಜಾತಿ ವ್ಯವಸ್ಥೆಯಲ್ಲಿ ಎಲ್ಲಿ ಪ್ರತಿಷ್ಠಾಪಿಸಿಕೊಳ್ಳಬೇಕೆಂಬ ಗೊಂದಲದಲ್ಲಿಯೇ ತೊಳಲಾಡುತ್ತಿರುವಂತೆ ಕಂಡುಬರುತ್ತದೆ. ಪಾಂಚಾಳರಲ್ಲಿಯೇ ತಾವುಗಳು ಸೇರುತ್ತೇವೆಂದು ಮುದ್ದೆ ಕಂಬಾರರು, ಬಯಲುಗಮ್ಮಾರರು, ಬಯಲು ಅಕ್ಕಸಾಲಿಗರು ಹೇಳುವವರಾದರೂ ವಿಶ್ವಕರ್ಮ ಸಮುದಾಯಕ್ಕೆ ಇವರು ಯಾವುದೇ ಸಂಬಂಧವಿಲ್ಲ ಎಂಬ ಧ್ವನಿ ಸಂಸ್ಕೃತೀಕರಣಗೊಂಡ ಪಾಂಚಾಳ ಸಮುದಾಯಗಳ ಮೂಲಕ ಬರುವುದನ್ನು ಕಾಣಬಹುದಾಗಿದೆ."

ಸಂಗ್ರಹ: ಗಿರೀಶ್ ತಾಳಿಕಟ್ಟೆ


'ನಿಂದನೆ' ಯಾವುದಯ್ಯಾ

ಗಿರೀಶ್ ಕಾರ್ನಾಡ್



ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಈ ವಿವಾದವನ್ನು ಹುಟ್ಟು ಹಾಕಿರುವವರಿಗೆ ಬುದ್ಧಿ ಮತ್ತು ನಿಯತ್ತು ಎರಡೂ ಇಲ್ಲ. ಅವರ ಆರೋಪಗಳು, ಹೇಳಿಕೆಗಳು ಅದನ್ನು ಸಾಬೀತು ಪಡಿಸುತ್ತಿವೆ. ಕಾದಂಬರಿಗಾರ್ತಿಯ ವೈಯಕ್ತಿಕ ಬದುಕಿಗೂ ಕಾದಂಬರಿಗೂ ಸಂಬಂಧ ಕಲ್ಪಿಸಿರುವುದನ್ನು ಯಾವತ್ತಿಗೂ ಒಪ್ಪಿಕೊಳ್ಳಲಿಕ್ಕಾಗುವುದಿಲ್ಲ. ಇದು ಸಾಹಿತ್ಯದ ಸ್ವಾಯತ್ತೆಗೆ ಕಡಿವಾಣ ಹಾಕುವಂತಹ ಕ್ರಮ.

ಕೆ.ಮರುಳಸಿದ್ದಪ್ಪ



ಅದು ಒಳ್ಳೆಯ ಕಾದಂಬರಿ, ಅದಕ್ಕೆ ಸಾಕಷ್ಟು ಪ್ರಶಸ್ತಿಗಳು ಬಂದಿವೆ ಎಂಬ ವಿಚಾರಗಳನ್ನು ಬಿಟ್ಟು ನೋಡಿದರೂ ಅದು ಒಂದು ವಿ.ವಿ.ಯ ಪಠ್ಯಕ್ರಮ ಆಗಿರುವಂತದ್ದು. ತಜ್ಞರ ಸಮಿತಿ ಪಠ್ಯ ಹೇಗಿರಬೇಕು ಅಂತ ನಿರ್ಧರಿಸಿ ಆರಿಸಿದ ವಿಷಯವನ್ನು ಅಕೆಡೆಮಿಕ್ ಕೌನ್ಸಿಲ್ ಅನುಮೋದಿಸಿದ ನಂತರವಷ್ಟೆ ಅದನ್ನು ಪಠ್ಯವನ್ನಾಗಿ ಮಾಡಲಾಗುತ್ತೆ. ಹಾಗಿರುವಾಗ ಅಷ್ಟೂ ತಜ್ಞರ ಅಭಿಪ್ರಾಯಕ್ಕೆ ಬೆಲೆ ಇಲ್ಲವಾ?

ಒಂದು ಕಾದಂಬರಿಯನ್ನು ಬರೆಯುವಾಗ ಆಡುಭಾಷೆಯನ್ನು ಬಳಸೋದು ತುಂಬಾನೇ ಸಾಮಾನ್ಯ. ಇದು ಎಲ್ಲಾ ಸಾಹಿತಿಗಳ ಕಾದಂಬರಿಗಳಲ್ಲೂ ಸ್ಪಷ್ಟವಾಗಿ ಕಾಣಿಸಿಗುತ್ತದೆ. ಅದರಂತೇನೆ 'ಆಚಾರಿ' ಅನ್ನೋ ಪದ ಬಳಸಿರುವುದರಲ್ಲಿ ಯಾವ ತಪ್ಪು ಕಾಣುವುದಿಲ್ಲ. ಇಲ್ಲಿ ವಿಶ್ವಕರ್ಮರು ವಿವಾದ ಹುಟ್ಟು ಹಾಕಿದ್ದಾರೆ ಅಂತ ನಂಬಿಸುವ ಪ್ರಯತ್ನ ನಡೆದಿದೆ ಅಷ್ಟೇ. ಹಾಗೆ ನೋಡಲು ಹೋದರೆ ವಿಶ್ವಕರ್ಮರಿಗಿಂತ ಹೆಚ್ಚಾಗಿ ಕಾದಂಬರಿ ಆಘಾತ ನೀಡಿರುವುದು ಬ್ರಾಹ್ಮಣರಿಗೆ. ಕಾದಂಬರಿಯ ಒಂದು ಭಾಗದಲ್ಲಿ ಬಾಲ ಬ್ರಾಹ್ಮಣ ವಿಧವೆಯೊಬ್ಬಳು, ಮುಸ್ಲಿಂ ಹುಡುಗನನ್ನು ಪ್ರೇಮಿಸಿ ಮದುವೆ ಆಗುವ, ಆ ಪ್ರೇಮಿಗಳನ್ನು ಬ್ರಾಹ್ಮಣ ಸಮಾಜ ಬಹಿಷ್ಕರಿಸುವ ಪ್ರಸಂಗ ಬರುತ್ತದೆ. ಇದೇ ಅವರನ್ನ ಕೆರಳಿಸಿರೋದು. ಅದನ್ನು ವಿಶ್ವಕರ್ಮರ ಮೂಲಕ ವಿವಾದದ ನೆಪದಲ್ಲಿ ಪಠ್ಯದಿಂದ ಹಿಂಪಡೆಯಲು ಒತ್ತಾಯಿಸಿದ್ದಾರೆ.

ಈ ತರದ ಪಠ್ಯ ಯುವ ಜನತೆಗೆ ಲಭಿಸಿದರೆ ತಮ್ಮ ಬಗ್ಗೆ ಎಲ್ಲಿ ತಿರಸ್ಕಾರ ಮೂಡಿಬಿಡುತ್ತೋ ಎಂಬ ಆತಂಕದಿಂದ ಸಂಘ ಪರಿವಾರದವರು ಇಷ್ಟೆಲ್ಲಾ ನಡೆಸಿದ್ದಾರೆ ಎನ್ನುವುದು ನನ್ನ ಅಭಿಪ್ರಾಯ.

ಇದು ವಿವಿಯ ಸ್ವಾಯತ್ತೆಯ ಗಂಭೀರ ಪ್ರಶ್ನೆಯೂ ಹೌದು. ಇವರ ಒತ್ತಡಕ್ಕೆ ಮಣಿದು ಪಠ್ಯವನ್ನು ಹಿಂಪಡೆದಿದ್ದಾದರೆ ವಿಶ್ವವಿದ್ಯಾಲಯದ ಶೈಕ್ಷಣಿಕ ಸ್ವಾತಂತ್ರ್ಯಕ್ಕೆ ನೇರವಾಗಿ ಅಡ್ಡಿಯಾದಂತಾಗುತ್ತದೆ. ವಿವಿಯ ತೇಜೋವಧೆ ಮಾಡಿದಂತಾಗುತ್ತದೆ. ಆ ಪ್ರಯತ್ನ ನಿಜಕ್ಕೂ ಅಸಾಂಸ್ಕೃತಿಕ ನಡೆಯಾಗಬಹುದಾಗಿದ್ದು ಪ್ರತಿಯೊಬ್ಬರೂ ಇದನ್ನು ವಿರೋಧಿಸಲೇ ಬೇಕು.

ಇಂಧೂದರ ಹೊನ್ನಾಪುರ



ಇದೊಂದು ಅನಗತ್ಯವಾಗಿ ಹುಟ್ಟು ಹಾಕಿರುವ ವಿವಾದ. ಇದರಿಂದ ವಿಶ್ವಕರ್ಮರು ತುಂಬಾ ಕೀಳರಿಮೆ, ಅವಮಾನ ಅನುಭವಿಸುತ್ತಿದ್ದಾರೆ ಅನ್ನೋದಂತು ಸ್ಪಷ್ಟವಾಗುತ್ತದೆ. ಇವರು ತಮ್ಮನ್ನು ತಾವು ಬ್ರಾಹ್ಮಣರು ಅಂತ ಕರೆದುಕೊಳ್ಳಲು ಯಾಕೆ ಒದ್ದಾಡುತ್ತಾ ಇದಾರೆ ಅನ್ನೋದೇ ಅರ್ಥ ಆಗಲ್ಲ. ಬ್ರಾಹ್ಮಣತ್ವವನ್ನು ಅಷ್ಟು ಉನ್ನತವಾಗಿ ಕಾಣುತ್ತಿದ್ದರೆ ಇವರೆಲ್ಲ ಇನ್ನೂ ಶಿಲಾಯುಗದಲ್ಲಿದ್ದಾರೆಂದು ಹೇಳಬೇಕು.

'ಗಾಂಧಿ ಬಂದ' ಜನ ಮೆಚ್ಚುಗೆ ಗಳಿಸಿದ ಒಂದು ಸುಂದರ ಕಲಾಕೃತಿ. ಅದರಲ್ಲೂ ಕೊಂಕು ಹುಡುಕಲು ನಿಜಕ್ಕೂ ಜಾತಿ ಪೀಡಿತ ಮನಸ್ಸುಗಳಿಗೆ ಮಾತ್ರ ಸಾಧ್ಯ. 'ಆಚಾರಿ' ಎಂಬ ಪದವನ್ನು ದೊಡ್ಡದು ಮಾಡುವ, ಜಾತಿ ನಿಂದನೆಯಾಗುವ ಯಾವ ಅಂಶವೂ ಅಲ್ಲಿಲ್ಲ. ಈ ಮೊದಲೇ ಒಂದೆರಡು ಬಾರಿ ಆ ಕಾದಂಬರಿಯನ್ನು ನಾನು ಓದಿದ್ದೆ. ಈ ವಿವಾದ ಹುಟ್ಟಿಕೊಂಡ ಮೇಲೆ ನಿರ್ದಿಷ್ಟವಾಗಿ ಅದನ್ನೇ ಕೇಂದ್ರೀಕರಿಸಿಕೊಂಡು ಓದಿದರೂ ಅಂತಹ ಪ್ರಮಾದ ಕಾಣಲಿಲ್ಲ. ಆಚಾರಿ ಎನ್ನುವುದು ಸಾಮಾನ್ಯ ಆಡುಭಾಷೆ. ಇವತ್ತಿಗೂ ಆ ಸಮುದಾಯದವರ ಹೆಸರಿನ ಹಿಂದೆ ಆಚಾರಿ ಅಂತಲೇ ಸೇರಿಸಿಕೊಂಡಿರುತ್ತಾರೇ ಹೊರತು ವಿಶ್ವಕರ್ಮ ಅಂತ ಯಾರೂ ಹೆಸರಿಟ್ಟುಕೊಳ್ಳುವುದಿಲ್ಲ. ಅಷ್ಟೇ ಸಾಮಾನ್ಯವಾಗಿ ಈ ಪದ ಕಾದಂಬರಿಯಲ್ಲಿ ಬಳಕೆಯಾಗಿದೆ. ಅದರಲ್ಲಿ ನಿಂದನೆಯ ಉದ್ದೇಶ ಕಿಂಚಿತ್ತೂ ಕಾಣಿಸುವುದಿಲ್ಲ.

ಇನ್ನು ಈ ವಿವಾದಕ್ಕೆ ಸಂಪೂರ್ಣ ವಿಶ್ವಕರ್ಮ ಜನಾಂಗದ ಬೆಂಬಲವಿದೆ ಅಂತ ನನಗನಿಸುತ್ತಿಲ್ಲ. ಯಾಕೆಂದರೆ ಅವರಲ್ಲೂ ಪ್ರಜ್ಞಾವಂತ ಬುದ್ಧಿಜೀವಿಗಳಿದ್ದಾರೆ. ಅವರಿಗೆ ಈ ವಿವಾದ ತಪ್ಪು ಅಂತ ಖಂಡಿತ ಅನಿಸಿರುತ್ತದೆ. ಮೊದಲು ಅವರು ಇದನ್ನು ವಿರೋಧಿಸಬೇಕು. ಎರಡನೆಯದಾಗಿ ವಿವಿ ಆಡಳಿತ ಯಾವ ಕಾರಣಕ್ಕೂ ಈ ಪಠ್ಯವನ್ನು ಹಿಂಪಡೆಯಬಾರದು. ಈ ತರಹದ ತಪ್ಪುಗಳನ್ನು ಹುಡುಕುವುದೇ ಆದರೆ ಒಂದಿಲ್ಲೊಂದು ರೀತಿಯಲ್ಲಿ ಶೂದ್ರರನ್ನು ಅವಮಾನಿಸುತ್ತಲೇ ಬಂದಿರುವ ಹಲವಾರು ಧರ್ಮ ಗ್ರಂಥಗಳನ್ನು ಬಹಿಷ್ಕರಿಸಬೇಕಾಗುವ ಸಂದರ್ಭ ಎದುರಾಗುತ್ತದೆ.

ವೈದೇಹಿ




ಬರಹಗಾರರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವ ಪ್ರಯತ್ನವಾಗಿದೆ ಈ ಆರೋಪ. ಹೀಗೆಲ್ಲ ಅದನ್ನು ಬರೆಯಬಾರದು, ಇದನ್ನು ಬರೆಯಬಾರದು ಎಂಬ ಚೌಕಟ್ಟು ಹಾಕುತ್ತಾ ಹೋದರೆ ಕಾದಂಬರಿಗಳಾಗಲಿ, ಬರಹಗಳಾಗಲಿ ಅಸ್ಥಿ ಪಂಜರಗಳಾಗುತ್ತವೆಯೇ ಹೊರತು ಅವುಗಳಲ್ಲಿ ಜೀವಂತಿಕೆ ಕಾಣಬರುವುದಿಲ್ಲ. ಸತ್ಯವನ್ನು ಹೇಳಲು ಬಿಡಬೇಕು. ಆ ಸತ್ಯದ ಜೊತೆಗೆ ನಮ್ಮ ತಾತ್ವಿಕ ಸಂಘರ್ಷಗಳಿರಬೇಕು. ಬದಲಾಗಿ ಈ ರೀತಿ ಬರವಣಿಗೆಯ ಸ್ವಾತಂತ್ರ್ಯವನ್ನೇ ನಿಯಂತ್ರಿಸುವುದು ಸೂಕ್ತ ಎನ್ನಿಸುವುದಿಲ್ಲ.

ಪದಗಳನ್ನು ನಿಂದನೆ ಆರೋಪದಲ್ಲಿ ನೋಡುವುದಕ್ಕೂ ಮುಂಚಿತವಾಗಿ ಅವುಗಳ ಬಳಕೆಯ ಹಿಂದಿನ ಉದ್ದೇಶವನ್ನು ಗಮನಿಸಬೇಕಾಗುತ್ತದೆ. ಇಲ್ಲಿ ಜಾತಿಯ ಹೆಸರನ್ನು ಪಾತ್ರಗಳ ಸಂಭಾಷಣೆಯಾಗಿ ಮಾತ್ರ ಬಳಸಲಾಗಿದೆ, ಇಲ್ಲಿ ನಿಂದನೆಯ ಉದ್ದೇಶ ಇಲ್ಲವೇ ಇಲ್ಲ. ಅದಂತೂ ಸ್ಪಷ್ಟ. ಒಂದು ಕಾಲಘಟ್ಟದ ಕತೆಯನ್ನು ಹೇಳುವಾಗ ಅದೇ ಘಟ್ಟದ ಮಾತುಕತೆಯನ್ನು ಬಳಸುವುದು ಕಾದಂಬರಿಯ ಮೂಲ ಗುಣ. ಹೀಗಿರುವಾಗ ಅದು ನಿಂದನೆ ಎನ್ನುವ ವಿವಾದ ಹಬ್ಬಿಸುವುದು ಸಮಂಜಸವಾಗಲಿಕ್ಕಿಲ್ಲ. ಇನ್ನು ಆ ಸಮುದಾಯದವರು ತಮ್ಮ ಆರೋಪದಲ್ಲಿ ನಾಗವೇಣಿಯವರ ವೈಯಕ್ತಿಕ ಬದುಕನ್ನೇ ನಿಂದಿಸುವ ಪ್ರಯತ್ನ ಮಾಡಿದ್ದಾರೆ. ವಿಶ್ವಕರ್ಮರು ಈಗೇನು ತಪ್ಪಾಗಿದೆ ಎಂದು ಹೇಳುತ್ತಿದ್ದಾರಲ್ಲ ಅದಕ್ಕಿಂತ ದೊಡ್ಡ ತಪ್ಪು ಈ ವ್ಯಕ್ತಿಗತ ನಿಂದನೆ. ಯಾಕೆಂದರೆ ಅದು ಕಾದಂಬರಿಯ ಪಾತ್ರ ಸಂಭಾಷಣೆ, ಆದರೆ ಇದು ವ್ಯಕ್ತಿಯ ನೈಜ ನಿಂದನೆ. ಒಟ್ಟಿನಲ್ಲಿ ಈ ವಿವಾದ ಅನಗತ್ಯ ಮತ್ತು ಯಾವ ಮೌಲ್ಯದಿಂದಲೂ ಕೂಡಿಲ್ಲ.



ಜಿ.ರಾಜಶೇಖರ



ನಾಗವೇಣಿಯವರ 'ಗಾಂಧಿ ಬಂದ' ಕಾದಂಬರಿಯು ಸ್ವಾತಂತ್ರ್ಯ ಚಳುವಳಿ ಮತ್ತು ಗಾಂಧಿವಾದವನ್ನು ಕೇಂದ್ರೀಕರಿಸಿಕೊಂಡು ಬಂದಂತಹ ಕೆಲವೇ ಕೆಲವು ಕೃತಿಗಳಲ್ಲಿ ಮಹತ್ವವಾದದ್ದು. ಗಾಂಧಿಯವರ ಕ್ರಾಂತಿಗೆ ಕರಾವಳಿ ಸಿಕ್ಕಿಕೊಂಡು ಅದರ, ಪ್ರತಿರೋಧ, ಔಚಿತ್ಯಗಳನ್ನು ಈ ಕಾದಂಬರಿ ಅನಾವರಣಗೊಳಿಸಿದೆ. ಗಾಂಧೀವಾದದ ಎಷ್ಟೋ ಸತ್ಯಗಳನ್ನು ನಾಗವೇಣಿಯವರ ಕಾದಂಬರಿ ತೆರೆದಿಟ್ಟಿದೆ.

ಇನ್ನು ವಿಶ್ವಕರ್ಮರ ವಿವಾದದ ದೃಷ್ಟಿಯಿಂದ ನೋಡಿದರೆ ನಿಂದನೆಯ ಆರೋಪ ಇದೇ ಮೊದಲೇನಲ್ಲ. ಕಾರಂತರು ಬದುಕಿದ್ದಾಗ ಅವರ ಯಾವುದೋ ಕೃತಿಯಲ್ಲಿ ಆಚಾರಿ ಪದ ಬಳಕೆಯ ಕುರಿತಾಗಿ ಅವರ ಮನೆಯ ಮುಂದೆ ಕೆಲವರು ಧರಣಿ ನಡೆಸಿ ವಾಚಾಮಗೋಚರವಾಗಿ ನಿಂಧಿಸಿದ್ದರು. ಈಗಲೂ ಸಹಾ ಹಳ್ಳಿಕಡೆಗಳಲ್ಲಿ ಆಚಾರಿ ಎಂಬುದು ಸರ್ವೇ ಸಾಮಾನ್ಯ ಪದ ಬಳಕೆಯಾಗುತ್ತಿದೆ. ಅದನ್ನು ವಿವಾದವಾಗಿ ಸುವ ಅವಶ್ಯಕತೆಯೇ ಇರಲಿಲ್ಲ. ಹಾಗೆ ಮಾಡಲು ಹೋದರೆ ಕನ್ನಡದ ಎಲ್ಲಾ ಕಾದಂಬರಿಕಾರರ ಮೇಲೂ ಆರೋಪ ಹೊರಿಸಬೇಕಾಗುತ್ತದೆ.

ಮಂಗಳೂರು ವಿವಿ ಯಾವುದೇ ಕಾರಣಕ್ಕೂ ಇಂತಹ ಆರೋಪಗಳನ್ನು ಪುರಸ್ಕರಿಸಬಾರದು. ಆದರೆ ಆ ವಿವಿಯ ಹಿನ್ನೆಲೆ ನೋಡಿದರೆ ಇಂತಹ ಗುಂಪು ಬೇಡಿಕೆಗೆ ಅದು ಮನ್ನಣೆ ನೀಡುವ ಸಂಭವ ಹೆಚ್ಚಿದೆ. ಹಿಂದೆಯೂ 'ಸಂಸ್ಕಾರ' ಕಾದಂಬರಿಯು ಪಠ್ಯವಾಗಿದ್ದಾಗ ಕೆಲ ಸಂಘಟನೆಗಳು ಗಲಾಟೆ ಮಾಡಿದ್ದವು ಎಂಬ ಕಾರಣಕ್ಕೆ ವಿದ್ಯುಕ್ತವಾಗಿ ಪಠ್ಯದಿಂದ ಹಿಂಪಡೆದಿತ್ತು. ವಿ.ವಿ ಈಗಲೂ ಅದನ್ನು ಪುನರಾವರ್ತಿಸಲು ಹೋದರೆ ಅಪಾಯಕಾರಿ ಪರಿಣಾಮಗಳು ಎದುರಾಗಬಹುದು. ಇದು ಹೀಗೆ ಮುಂದುವರೆದರೆ ವಿ.ವಿ.ಗೆ ನನ್ನ ಸಲಹೆ ಏನೆಂದರೆ ಅವರು ತಮ್ಮ ಕನ್ನಡ ಪಠ್ಯಗಳಲ್ಲಿ ಎಲ್ಲ ವಿಷಯಗಳನ್ನು ತೆಗೆದು ಹಾಕಿ ಕೇವಲ ಕನ್ನಡ ಅಕ್ಷರ ಮಾಲೆಯನ್ನು ಮಾತ್ರ ಖಾಯಂ ಮಾಡಿಕೊಳ್ಳಲಿ. ಅದಕ್ಕೆ ಯಾವ ಗುಂಪುಗಳ ವಿರೋಧವೂ ಬರುವುದಿಲ್ಲ.

ಈ ವಿವಾದವನ್ನು ಎಲ್ಲರೂ ಸರ್ವ ಸಮ್ಮತದಿಂದ ಖಂಡಿಸಬೇಕು. ನಮ್ಮಲ್ಲಿ ಇಂತಹ ವಿಷಯಗಳಲ್ಲಿ ಮೌನ ಹೆಚ್ಚು. ನಾಗವೇಣಿಯವರ ವಿಚಾರದಲ್ಲಿ ಆ ಮೌನವನ್ನು ಮುರಿದು ಪ್ರತಿಭಟಿಸಬೇಕಾಗಿದೆ.

ನಾಗವೇಣಿ

ಅನಗತ್ಯವಾಗಿ ನನ್ನನ್ನು ಸಾಮಾಜಿಕ ಕಟಕಟೆಯಲ್ಲಿ ನಿಲ್ಲಿಸಿರುವುದು ಹಾಗೂ ನನ್ನ ವೈಯಕ್ತಿಕ ಬದುಕಿನ ಬಗ್ಗೆ ತುಚ್ಛವಾಗಿ ಮಾತನಾಡಿರುವುದು ನನಗೆ ತುಂಬಾ ಬೇಸರ ಉಂಟುಮಾಡಿದೆ. ನನಗೆ ಸಾಂಸ್ಕೃತಿಕವಾಗಿ ತುಂಬಾ ಬೆಂಬಲ ವ್ಯಕ್ತವಾಗಿದೆ. ಗಿರೀಶ್ ಕಾರ್ನಾಡ್, ಕಂಬಾರರು ಮುಂತಾದವರೆಲ್ಲ ನನ್ನ ಹಾಗೂ ನನ್ನ ಕೃತಿಯ ಬಗ್ಗೆ ಮಂಗಳೂರು ಕುಲಪತಿಗಳಿಗೆ ಪತ್ರ ಬರೆದು ನೈತಿಕ ಬೆಂಬಲ ನೀಡಿದ್ದಾರೆ. ಆದರೆ ಈ ವಿವಾದದಿಂದ ನನ್ನ ವೈಯಕ್ತಿಕ ಹಾಗೂ ಕೌಟುಂಬಿಕ ನೆಮ್ಮದಿಯೂ ಹಾಳಾಗಿರುವುದೇ ನನಗೆ ಸಮಸ್ಯೆಯಾಗಿದೆ. ಇದನ್ನು ಈ ಜನ ಅರ್ಥ ಮಾಡಿಕೊಳ್ಳುತ್ತಿಲ್ಲ.




ನಾನು ಸಹ ಕುವೆಂಪು, ಮಾಸ್ತಿ, ತೇಜಸ್ವಿ, ಹೀಗೆ ಹಲವಾರು ಹಿರಿಯ ಸಾಹಿತಿಗಳ ಸಾಹಿತ್ಯಗಳನ್ನು ಓದುತ್ತಲೇ ಬೆಳೆದವಳು. ಈಗಲೂ ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ಅವರನ್ನೆಲ್ಲ ಸಾಮಾಜಿಕ ಕಟಕಟೆಗೆ ತರಬೇಕೆಂಬ ಕೀಳು ಉದ್ದೇಶ ಖಂಡಿತ ನನಗಿಲ್ಲ. ಆದರೆ ಕಾವ್ಯ, ಕಾದಂಬರಿಗಳ ಸೌಂದರ್ಯತೆಯ ವಿವರಣೆಗಾಗಿ ಈ ವಿಷಯ ಹೇಳುತ್ತಿದ್ದೇನೆ. ನನ್ನ ಮೇಲಿನ ಆರೋಪವನ್ನು ಪರಿಗಣಿಸುವುದಾದರೆ ನಮ್ಮ ಎಲ್ಲಾ ಸಾಹಿತಿಗಳನ್ನು ಇದೇ ರೀತಿ ದೂರಬೇಕಾಗುತ್ತದೆ. ಯಾಕೆಂದರೆ ಎಲ್ಲರ ಕಾದಂಬರಿಯಲ್ಲೂ ಇಂತಹ ಸಾಕಷ್ಟು ಆಡು ಭಾಷೆಯ ಪದಗಳನ್ನು ಸಹಜವಾಗಿಯೇ ಬಳಸಿರುವುದು ತಿಳಿಯದ ವಿಷಯವಲ್ಲ. ಉದಾಹರಣೆಗೆ ತೇಜಸ್ವಿಯವರ 'ಕಿರಗೂರಿನ ಗಯ್ಯಾಳಿಗಳು' ಕಥೆಯಲ್ಲಿ ಹೆಣ್ಣುಮಕ್ಕಳನ್ನು ಅವರದೇ ಹಳ್ಳಿಗಾಡಿನ ಬೈಗುಳಗಳ ಭಾಷೆಯಲ್ಲಿ ಚಿತ್ರಿಸಲಾಗಿದೆ. ಈಗ ಸೃಷ್ಟಿಯಾಗಿರುವ ವಿವಾದವನ್ನು ನೋಡಿದರೆ ಹೇಗಾದ ನಾವೂ ಹೆಣ್ಣನ್ನು ಅವಹೇಳನಕಾರಿಯಾಗಿ ಚಿತ್ರಿಸಲಾಗಿದೆ ಎಂದು ವಿವಾದ ಹುಟ್ಟು ಹಾಕಬಹುದು. ಆದರೆ ಒಂದು ಕೃತಿಯ ಚೆಂದ ಇರುವುದೇ ಅದರ ಆಡು ಭಾಷೆಯ ಪ್ರಸ್ತುತ ಪಡಿಸುವಿಕೆಯಲ್ಲಿ. ಕಂಡ ಚಿತ್ರಣವನ್ನು ಹಾಗೆಯೇ ಮೂಡಿಸಿದಾಗಲೇ ಅದಕ್ಕೆ ಜೀವಂತಿಕೆ ಬರುವುದು. ತೇಜಸ್ವಿಯವರಿಗೆ ಆ ಅಭಿವ್ಯಕ್ತಿ ಸ್ವಾತಂತ್ರ್ಯ ಲಭಿಸಿದ್ದಕ್ಕೇ ಅಂತಹ ಉತ್ತಮ ಕೃತಿ ನಮ್ಮ ಸಾಹಿತ್ಯಕ್ಕೆ ಲಭಿಸಿದ್ದು. ಕುವೆಂಪುರವರ 'ಕಾನೂರು ಹೆಗ್ಗಡತಿ' ಇರಬಹುದು, ಅನಂತಮೂರ್ತಿಯವರ 'ಸಂಸ್ಕಾರ' ಇರಬಹುದು ಇವೆಲ್ಲ ಅಂತಹ ನೈಜ ಚಿತ್ರಣಗಳಿಂದಲೇ ಇಷ್ಟವಾದಂತಹ ಕೃತಿಗಳು. ಅವರು ಮಾಡಿದ ಪ್ರಯತ್ನವನ್ನೇ ನಾನು ಮಾಡಲು ಹೋದೆ ಅಷ್ಟೆ. ಆದರೆ ಅವರಿಗೆಲ್ಲ ಇಲ್ಲದ ಶಿಕ್ಷೆ ನನಗೆ ಮಾತ್ರ ಏಕೆ?

ನಾನು ಆಚಾರಿ ಅಮ್ಮನ ಹಾಲನ್ನು ಕುಡಿಯುತ್ತಲೇ ಬ್ರಾಹ್ಮಣರ ನಡುವೆಯೇ ಬೆಳೆದವಳು. ಆಗಿನ ಅನುಭವಗಳನ್ನು ಅಂದಿನ ಕಾಲ ಘಟ್ಟದಂತೆಯೇ ಕಾದಂಬರಿಯನ್ನಾಗಿಸಿದ್ದೇನೆ. ಸಾಹಿತಿಗಳು ತಮ್ಮ ಅನುಭವದಲ್ಲಿರುವುದನ್ನು ಬರೆಯಬಹುದೇ ವಿನಃ ಶೂನ್ಯದಿಂದ ಏನನ್ನೂ ಸೃಷ್ಟಿಸಲಾಗುವುದಿಲ್ಲ. ನಮ್ಮ ಕಾಲಕ್ಕೆ 'ಆಚಾರಿ' ಎಂಬ ಪದ ಬಳಕೆಯೇ ಸರ್ವೇ ಸಾಮಾನ್ಯವಾಗಿತ್ತು. ಖುದ್ದು ನನಗೇ ದೊಡ್ಡವಳಾದ ನಂತರವಷ್ಟೆ 'ವಿಶ್ವಕರ್ಮ' ಎಂಬ ಪದ ಪರಿಚಯವಾದದ್ದು. ಅದನ್ನು 'ಆಚಾರಿ' ಸಮುದಾಯದವರನ್ನು ಸೂಚಿಸಲು ಬಳಸುತ್ತಾರೆಂಬ ಅರಿವಾದದ್ದು. ಇಂತಹ ವಸ್ತುಸ್ಥಿತಿಯನ್ನು ಅರ್ಥಮಾಡಿಕೊಳ್ಳದೇ ನನ್ನ ಕೃತಿಯ ಬಗ್ಗೆ ಅನಗತ್ಯವಾಗಿ ವಿವಾದವನ್ನು ಸೃಷ್ಟಿಸಲಾಗಿದೆ. ವಿಶ್ವಕರ್ಮರ ಜಾತಿ ಶ್ರೇಷ್ಠತೆಯ ಬಗ್ಗೆ ನನಗೆ ಯಾವ ತಕರಾರು ಇಲ್ಲ. ಬ್ರಾಹ್ಮಣರಿಗಿಂತ ಅವರು ತುಂಬಾ ಮೇಲೆ ಹೋಗಲಿ ನನಗೆ ಸಂತೋಷ. ಆದರೆ ನಾನು ಆ ಕಾಲ ಘಟ್ಟದ ಚಿತ್ರಣವನ್ನಷ್ಟೇ ಕಟ್ಟಿಕೊಟ್ಟಿದ್ದೇನೆ. ನನಗೆ ಯಾವತ್ತಿಗೂ ಯಾವ ಸಮುದಾಯದವರ ಮೇಲೂ ಬೇಸರವಿಲ್ಲ. ಬ್ರಾಹ್ಮಣರ ಮೇಲೂ ನನಗೆ ಕೋಪವಿಲ್ಲ. ಆದರೆ ಬ್ರಾಹ್ಮಣ್ಯತ್ವದಲ್ಲಿರುವ ಕೆಲ ಅಮಾನವೀಯ ನಡವಳಿಕೆಗಳ ಬಗ್ಗೆ ಅಸಹನೆಯಿದೆ. ಅದೂ ತಾರ್ಕಿಕ ಅಸಹನೆ. ಅದನ್ನು ವಿವಾದ ಸೃಷ್ಟಿಸಿರುವವರು ಅರ್ಥ ಮಾಡಿಕೊಂಡರೆ ಸಾಕು.

ಉತ್ತರ ಕನ್ನಡದ ವಿದ್ಯಾಮಾತೆಯ ವಿದಾಯ

ಸಮಾಜಮುಖಿ ಗಟ್ಟಿಗಿತ್ತಿ-ಪ್ರೇಮಾತಾಯಿ ಪಿಕಳೆ


ಪ್ರೇಮಾತಾಯಿ ಪಿಕಳೆ

ಅಂಕೋಲಾ ಎಂಬ ದೊಡ್ಡ ಕುಗ್ರಾಮದಂಥ ತಾಲ್ಲೂಕನ್ನು 'ಶಿಕ್ಷಣ ಕಾಶಿ' ಮಾಡಿದ್ದ ಧೀಮಂತ ಮಹಿಳೆ ಪ್ರೇಮಾತಾಯಿ ಪಿಕಳೆ ಮೊನ್ನೆ ನವೆಂಬರ್ 26 ರಂದು ಇಹ ಲೋಕದಿಂದ ಇದ್ದಕ್ಕಿದ್ದಂತೆಯೇ ಎದ್ದು ಹೊರಟುಹೋದರು! ಬರೋಬ್ಬರಿ 86 ವರ್ಷಗಳಷ್ಟು ತುಂಬು ಜೀವನ ನಡೆಸಿದ ಈ ಮಹಾಮಾತೆ ಕ್ಷಣ-ಕ್ಷಣವೂ ಸಮಾಜದ ಶೋಷಿತರ-ದಲಿತರ-ಬಡವರ-ನೊಂದವರ ಸಾಮಾಜಿಕ-ಶೈಕ್ಷಣಿಕ ಮತ್ತು ಆರೋಗ್ಯದ ಏಳ್ಗೆಗೆ ತನ್ನನ್ನು ಅರ್ಪಣಾ ಭಾವದಿಂದ ಅರ್ಪಿಸಿಕೊಂಡು ದಣಿವರಿಯದೇ ದುಡಿದು ಮನುಕುಲದ ಚರಿತ್ರೆಯಲ್ಲಿ ಶಾಶ್ವತವಾಗಿ ದಾಖಲಾಗಿದ್ದಾರೆ!!

ಉತ್ತರ ಕನ್ನಡ ಜಿಲ್ಲೆ ಅಥವಾ ಅಂಕೋಲಾ ತಾಲ್ಲೂಕಲ್ಲಷ್ಟೇ ಅಲ್ಲ, ಇಡೀ ಕರ್ನಾಟಕದ ವಿದ್ಯಾ ಕ್ಷೇತ್ರದಲ್ಲೇ 'ಪ್ರೇಮಾ ತಾಯಿ' ಎಂದೇ ಪ್ರಸಿದ್ಧರಾಗಿದ್ದರು ಪ್ರೇಮಾ ಪಿಕಳೆ. ಈ 'ಶಿಕ್ಷಣ ಸನ್ಯಾಸಿನಿ' ಪುರುಷ ಪ್ರಧಾನ ವ್ಯವಸ್ಥೆಯ ಸವಾಲುಗಳನ್ನು ಹೆಜ್ಜೆ-ಹೆಜ್ಜೆಗೂ ಜಯಿಸಿ ಮಹಿಳಾ ಲೋಕದಲ್ಲಿ ಭರವಸೆಯ ಬೆಳ್ಳಿ ಚುಕ್ಕೆಯಾಗಿ ಬೆಳಗಿದ್ದರು. ಹೆಣ್ಣುಗೊಡ್ಡು ಸಂಪ್ರದಾಯಕ್ಕೆ ಶರಣಾಗಿ ನಾಲ್ಕು ಗೋಡೆಯ ನಡುವೆ ಬಂಧಿಯಾಗಿರಬೇಕಾದ ಪ್ರಾಣಿಯಲ್ಲ; ಆಕೆಗೂ ಸ್ವತಂತ್ರ ವ್ಯಕ್ತಿತ್ವವಿದೆ; ಗಂಡಸನ್ನು ಮೀರಿ ನಿಂತು ಸಮಾಜಕ್ಕೆ ಒಳಿತು ಮಾಡುವ ತಾಕತ್ತಿದೆ; ಆಕೆಯನ್ನು ಕಟ್ಟಿಹಾಕದೆ ಮುಕ್ತವಾಗಿ ಬಿಟ್ಟರೆ ತನ್ನ ಪರಿಸರದ ಪ್ರಗತಿಯ ನಕ್ಷೆಯನ್ನೇ ಬದಲಿಸುವ ಪವಾಡ ಮಾಡಿ ತೋರಿಸಬಲ್ಲಳು ಎಂಬುದು ಪ್ರೇಮಾತಾಯಿಯ ನೀತಿ-ನಿಲುವಾಗಿತ್ತು. ಇದೇ ಕೆಚ್ಚು-ಧ್ಯೇಯೋದ್ದೇಶದಿಂದ ಆಕೆ ಬಾಳಿ ಬದುಕಿದ್ದರು. ಹಲವು ಶಿಕ್ಷಣ-ಆರೋಗ್ಯ-ಸಾಮಾಜಿಕ ಸಂಸ್ಥೆ ಸ್ಥಾಪಿಸಿ ಸಮಾಜದ ಶಕ್ತಿಯಾಗಿದ್ದರು.

ಪ್ರೇಮಾ ಪಿಕಳೆ (ಕಸಬೇಕರ್) 'ಸಾಹಸಗಾಥೆ' ಶುರುವಾಗುವುದೇ ಬಾಲ್ಯದಿಂದ. ಪ್ರೇಮಾರ ಬಾಲ್ಯ ಮತ್ತು ವಿದ್ಯಾರ್ಥಿ ಜೀವನ ಆಕೆಯೇ ಹೇಳುತ್ತಿದ್ದಂತೆ "ಅಡ್ವೆಂಚರಸ್ ಅಂಡ್ ಇಂಟರೆಸ್ಟಿಂಗ್" ಆಗಿತ್ತು. ಅಂದಿನ ಕಾಲದಲ್ಲೇ ಆಕೆ ಅಂಕೋಲೆಯ ಸಂಪ್ರದಾಯಸ್ಥರ ಪೇಟೆಯಲ್ಲಿ ಸೈಕಲ್ ಹೊಡೆದು 'ಆಶ್ಚರ್ಯಾಘಾತ' ಮೂಡಿಸಿದ್ದರು. ಆಗವರಿಗೆ ವಾಮನ ಎಂಬಾತ ಚುಡಾಯಿಸಿ ಕಾಡಿಸುತ್ತಿದ್ದ. ಒಮ್ಮೆ ಈ ಪೋಲಿ, ಪ್ರೇಮಾರ ಸೈಕಲ್ ಟೈರ್ ಗಾಳಿಯನ್ನೇ ತೆಗೆದು ಸತಾಯಿಸಿದ್ದ. ಇದರಿಂದ ಪ್ರೇಮಾ ಧೃತಿಗೆಡಲಿಲ್ಲ. ಬದಲಿಗೆ ಉಪಾಯವಾಗಿ ಆತನನ್ನು ಮನೆಗೆ ಕರೆಸಿಕೊಂಡು ಮಾತಾಡಿಸುತ್ತಾ ಕೋಣೆಯಲ್ಲಿ ಕೂಡಿಹಾಕಿ ಗೂಸಾ ಕೊಟ್ಟು ಕಳಿಸಿದ್ದರು. ಆ ಕಾಲದಲ್ಲಿದು ಅಂಕೋಲಾ-ಕಾರವಾರದಲ್ಲಿ 'ಹಾಟ್ ನ್ಯೂಸ್' ಆಗಿತ್ತು!

ಇಂಥ 'ಪುಂಡಾಟ'ದ ಜೊತೆಗೆ ಪ್ರೇಮಾ ಕಲಿಕೆಯಲ್ಲೂ ಮುಂದಿದ್ದರು. ಎಂ.ಎ., ಎ.ಇಡಿ ಮಾಡಿ ಮುಗಿಸಿದ್ದರು. ತಂದೆ ವಾಸುದೇವರಾವ್ ಕಸಬೇಕರ್ ಆಕೆ ಸಣ್ಣವಳಿರುವಾಗಲೇ ಗೋಕರ್ಣ ಸಮುದ್ರದಲ್ಲಿ ಈಜಾಡುವಾಗ ಆಕಸ್ಮಿಕವಾಗಿ ನಿಧನರಾಗಿದ್ದರು. ಆಗಾಕೆಯ ದೊಡ್ಡ ಕುಟುಂಬ ಸಂಕಷ್ಟಕ್ಕೀಡಾಗಿತ್ತು. ಕಷ್ಟಕೋಟಲೆಯ ಮಧ್ಯೆಯೂ ಡಬ್ಬಲ್ ಡಿಗ್ರಿ ಮಾಡಿಕೊಂಡಿದ್ದ ಪ್ರೇಮಾಗೆ ಮುಂಬೈನ ಸರ್ಕಾರಿ ಕಾಲೇಜೊಂದರಲ್ಲಿ ಪ್ರತಿಷ್ಠಿತ ಪ್ರಿನ್ಸಿಪಾಲಿಕೆಯೂ ಸಿಕ್ಕಿತ್ತು. ಆಕೆ ಲೌಕಿಕ ಸುಖಕ್ಕೆ ಹಾತೊರೆದಿದ್ದರೆ ಅಲ್ಲೇ ಸುಖಕರ ಸಂಸಾರ ನಡೆಸಬಹುದಿತ್ತು. ಆದರಾಕೆಗದು ಇಷ್ಟವಿರಲಿಲ್ಲ. ಜನ್ಮ ನೀಡಿದ ಜಿಲ್ಲೆಯ ಋಣ ತೀರಿಸುವ-ಸಮಾಜ ಸೇವೆ ಮಾಡುವ ಹಂಬಲ ಆಕೆಯದಾಗಿತ್ತು.

ಆ ಹೊತ್ತಿಗಾಗಲೇ ಉತ್ತರ ಕನ್ನಡದಲ್ಲಿ ದಿನಕರ ದೇಸಾಯಿ, ಶೇಷಗಿರಿ ಪಿಕಳೆ ಮತ್ತು ದಯಾನಂದ ನಾಡಕರ್ಣಿ ಎಂಬ ಸಮಾಜವಾದಿ ತ್ರಿಮೂರ್ತಿಗಳು ಬಡವರ ಶೈಕ್ಷಣಿಕ ಏಳ್ಗೆಗಾಗಿ 'ಕೆನರಾ ವೆಲ್‌ಫೇರ್ ಟ್ರಸ್ಟ್' ಆರಂಭಿಸಿದ್ದರು. ಈ ಕರ್ಮಯೋಗಿಗಳು ದಾಂಡೇಲಿಯಲ್ಲಿ ಕಟ್ಟಿದ್ದ ಜನತಾ ವಿದ್ಯಾಲಯ ಎಂಬ ಹೈಸ್ಕೂಲ್‌ನಲ್ಲಿ ಪ್ರೇಮಾ ಮುಖ್ಯಾಧ್ಯಾಪಕಿಯಾಗಿ ಸೇರಿಕೊಂಡರು. ಪ್ರೇಮಾರ ಪರಿಶ್ರಮದಿಂದ ಆ ಶಾಲೆ ಇಡೀ ಜಿಲ್ಲೆಯಲ್ಲೇ ನಂಬರ್ ಒನ್ ಆಗಿತ್ತು. ಕೆನರಾ ವೆಲ್‌ಫೇರ್ ಟ್ರಸ್ಟ್ (ಕೆವೆಟ್ರ) ಬಡಶೈತ ಮತ್ತು ಕಾರ್ಮಿಕರ ಮಕ್ಕಳಿಗಾಗಿ ದಾಂಡೇಲಿ ಎಂಬ ಕಗ್ಗಾಡಲ್ಲಿ ವಿದ್ಯಾರ್ಥಿನಿಲಯ ಆರಂಭಿಸಿದಾಗ ಅದರ ಮೇಲುಸ್ತುವಾರಿ ಪ್ರೇಮಾ ವಹಿಸಿಕೊಂಡಿದ್ದರು. ಪ್ರೇಮಾರ ಮಾತೃಹೃದಯ ಕಕ್ಕುಲಾತಿ ಮತ್ತು ಶಿಸ್ತುಬದ್ಧ ಜೀವ ಶಿಕ್ಷಣ ಪಡೆದ ಆ ವಿದ್ಯಾರ್ಥಿ ನಿಲಯದ ಅನೇಕ ಮಕ್ಕಳು ಉನ್ನತ ಸ್ಥಾನಕ್ಕೇರಿದ್ದರು.

ಆನಂತರ ಪ್ರೇಮಾರ ಲವ್ ಮ್ಯಾರೇಜ್ ಶೇಷಗಿರಿ ಪಿಕಳೆ ಜೊತೆ ನಡೆಯಿತು. ಅದೊಂದು ವಿಶಿಷ್ಟ-ಕ್ರಾಂತಿಕಾರಿ ಮದುವೆ. ಈ ಶೇಷಗಿರಿ ಯಾನೆ ಗಿರಿ ಪಿಕಳೆ ಮತ್ತ್ಯಾರೂ ಅಲ್ಲ; ಕೆವೆಟ್ರನ ಸ್ಥಾಪಕ ಸದಸ್ಯರಲ್ಲೊಬ್ಬರು. ಕಡುನಿಷ್ಠೂರವಾದಿಯೂ ಪರಿಪೂರ್ಣ ಪ್ರಾಮಾಣಿಕರೂ ಆಗಿದ್ದ ಗಿರಿ ಪಿಕಳೆ-ಪ್ರೇಮಾ ಕಸಬೇಕರ್ 'ಪಾಣಿಗ್ರಹಣ' ಕೆವೆಟ್ರನ ಪೀಪಲ್ಸ್ ಮಲ್ಟಿಪರ್ಪಸ್ ಹೈಸ್ಕೂಲಿನ ಶಾಲಾ ವನದಲ್ಲಿ ನಡೆದಿತ್ತು. ಈ ಸಮಾರಂಭದಲ್ಲಿ ಉಪಸ್ಥಿತರಿದ್ದವರು ಬೆವರಿನ ವರ್ಗದ ರೈತ-ಕಾರ್ಮಿಕರು, ಜಿಲ್ಲೆಯ ಹಿರಿಯ ಸಮಾಜವಾದಿಗಳು ಮತ್ತು ಬುದ್ಧಿಜೀವಿಗಳಷ್ಟೇ. ವಧು-ವರರು ಹಾರ ಬದಲಾಯಿಸಿದ್ದು ಬಿಟ್ಟರೆ ಬೇರೇನೂ ಇರಲಿಲ್ಲ; ಮಂತ್ರ-ಘೋಷದ ಸೋಂಕಿರಲಿಲ್ಲ. ರೈತ ಪರ ಹೋರಾಟದಿಂದ ಭೂಮಾಲೀಕರನ್ನು ಎದುರು ಹಾಕಿಕೊಂಡಿದ ಪಿಕಳೆ-ದೇಸಾಯಿ-ನಾಡಕರ್ಣಿಗಳ ಟೀಮಿನ ಈ ಸರಳ ಮದುವೆ ಅಂದು ಉಳ್ಳವರ ದಿಕ್ಕೆಡಿಸಿಬಿಟ್ಟಿತ್ತು!!

ಅದಾಗಲೇ ಕೆವೆಟ್ರನ ಹಿರಿಯಣ್ಣನಂತಿದ್ದ ದಿನಕರ ದೇಸಾಯಿ ಮತ್ತು ವ್ಯಕ್ತಿ ಪೂಜೆಯ ವಿರೋಧಿ ಗಿರಿ ಪಿಕಳೆ ನಡುವೆ ಸಣ್ಣಗೆ ಸೈದ್ಧಾಂತಿಕ ಸಂಘರ್ಷ ಶುರುವಾಗಿತ್ತು. ಜಿಲ್ಲೆಯಾದ್ಯಂತ ಟ್ರಸ್ಟ್ ವತಿಯಿಂದ ಆರಂಭವಾಗಿದ್ದ ಶೈಕ್ಷಣಿಕ ಸಂಸ್ಥೆಗಳಿಗೆ ದೇಸಾಯಿ ತಮ್ಮ ಪೂರ್ವಾಶ್ರಮದ ಕರ್ಮಕ್ಷೇತ್ರ ಮುಂಬೈನ ಉದ್ಯಮಪತಿ, ಕಂಪನಿಗಳಿಂದ ದೇಣಿಗೆ ತರುತ್ತಿದ್ದರು. ಹೀಗೆ ಶೋಷಕ ಬಂಡವಾಳಶಾಹಿಗಳಿಂದ ವಂತಿಗೆ ತರುವುದು ಆ ವೇಳೆಗೆ ಮಾರ್ಕ್ಸ್‌ವಾದಿಯಾಗಿ ಬದಲಾಗಿದ್ದ ಗಿರಿ ಪಿಕಳೆಗೆ ಹಿಡಿಸಲಿಲ್ಲ. ಚುನಾವಣಾ ರಾಜಕೀಯವೂ ದೇಸಾಯಿ-ಪಿಕಳೆ ನಡುವಿನ ತಾತ್ವಿಕ ಅಂತರ ಇನ್ನಷ್ಟು ದೊಡ್ಡದಾಗಿಸಿತ್ತು.

ಹಲವು ಜನಪರ ಚಳವಳಿ, ಶೈಕ್ಷಣಿಕ-ಸಾಮಾಜಿಕ ಸಂಸ್ಥೆ ಕಟ್ಟುವಿಕೆ ಮತ್ತು ಎರಡ್ಮೂರು ಇಲೆಕ್ಷನ್‌ನಲ್ಲಿ ಹೆಗಲಿಗೆ ಹೆಗಲು ಕೊಟ್ಟು ದುಡಿದಿದ್ದ ದೇಸಾಯಿ-ಪಿಕಳೆ ನಡುವಿನ ಭಿನ್ನಮತ ದಿನಗಳೆದಂತೆ ಹೆಚ್ಚಾಗುತ್ತಾ ಹೋಯ್ತು. ಇಬ್ಬರೂ ಹಠವಾದಿಗಳು; ತಂತಮ್ಮ ತತ್ವ-ಸಿದ್ಧಾಂತದಿಂದ ಹಿಂದೆ ಸರಿಯಲು ಸಮಾಜವಾದಿ ದೇಸಾಯಿ ಮತ್ತು ಮಾರ್ಕ್ಸ್‌ವಾದಿ ಪಿಕಳೆ ಸಿದ್ಧರಾಗಲಿಲ್ಲ. 'ಮೂರ್ತಿ ಭಂಜಕ' ಸಾಹಿತಿ ಗೌರೀಶ್ ಕಾಯ್ಕಿಣಿ, ದಾಮೋದರ ಚಿತ್ತಾಲರಂಥವರು ಮಾಡಿಸಿದ್ದ 'ರಾಜಿ' ಹೆಚ್ಚು ಸಮಯ ತಾಳಲಿಲ್ಲ. ಈ ಜನಪರ ದಿಗ್ಗಜರ


ಶಾಲಾಮಕ್ಕಳೊಂದಿಗೆ ಪ್ರೇಮಾತಾಯಿ ಪಿಕಳೆ

'ಈಗೋ' ಎಲ್ಲಿಗೆ ಹೋಯ್ತೆಂದರೆ, ದೇಸಾಯಿ ಟ್ರಸ್ಟ್‌ನಿಂದ ಪಿಕಳೆಯನ್ನು ಉಚ್ಚಾಟಿಸಿಯೇ ಬಿಟ್ಟರು.

ಈ 'ಜಗಳ' ತಾರಕಕ್ಕೆ ಏರಿದಾಗಲೇ ಪ್ರೇಮಾ ತಾಯಿಗೆ ಗರ್ಭಪಾತವೂ ಆಗಿತ್ತು. ಇದನ್ನು ಲೆಕ್ಕಿಸದೇ ದೇಸಾಯಿ ಆಕೆಯನ್ನು ದಾಂಡೇಲಿಯಿಂದ ಕಡವಾಡ ಜನತಾ ವಿದ್ಯಾಲಯಕ್ಕೆ ವರ್ಗಾಯಿಸಿದರು. ಇದರಿಂದ ಸಿಟ್ಟಿಗೆದ್ದ ಸ್ವಾಭಿಮಾನಿ ಪ್ರೇಮಾ ವರ್ಗಾವಣೆ ಪ್ರತಿಭಟಿಸಿ ಟ್ರಸ್ಟ್ ನೌಕರಿಗೆ ರಾಜೀನಾಮೆ ಬೀಸಾಕಿ ಗಂಡನೊಂದಿಗೆ ಹೊರಬಿದ್ದರು. ಗರ್ಭಪಾತ ಮತ್ತು ಗಂಡನಿಗಾದ ಅವಮಾನದ ಸಂದಿಗ್ಧ ಸಮಯದಲ್ಲಿ ಪ್ರೇಮಾ ಹತಾಶರಾಗಲಿಲ್ಲ; ಕೈಚೆಲ್ಲಿ ಕೂರಲಿಲ್ಲ. ಧೈರ್ಯ-ಕೃತೃತ್ವ ಶಕ್ತಿಗೆ ಹೆಸರಾಗಿದ್ದ ಪ್ರೇಮಾ ತನ್ನ ಸಹೋದರ ನಂದ ಕಸಬೇಕರ್, ಸಹೋದರಿ ಡಾ. ಕಮಲಾ ಮೆಟಗುಡ್ ಮತ್ತು ಅಂದು ಅಂಕೋಲಾ-ಕಾರವಾರದ ಶಾಸಕರಾಗಿದ್ದ ಸಮಾಜವಾದಿ ಚಳವಳಿಕಾರ ಬಿ.ಪಿ. ಕದಂ ಸಹಕಾರದಿಂದ 'ನೂತನ ಶಿಕ್ಷಣ ಸಭಾ ಟ್ರಸ್ಟ್' ಸ್ಥಾಪಿಸಿದರು. ಸತಿ ಪ್ರೇಮಾ-ಪತಿ ಗಿರಿ ಒಂದಾಗಿ ಮಾಡಿದ ಶಿಕ್ಷಣ ಪ್ರಸಾರದ ಸಂಕಲ್ಪದ ಫಲಶೃತಿ ಇದಾಗಿತ್ತು.

ಪಿಕಳೆ-ದೇಸಾಯಿ ತತ್ವ-ಸಿದ್ಧಾಂತದ ಲೆಕ್ಕಾಚಾರಕ್ಕೆ ಇಳಿದಿದ್ದರೇ ಹೊರತು ವೈಯಕ್ತಿಕ ದ್ವೇಷಾಸೂಯೆಗೆ ಅಲ್ಲಿ ಆಸ್ಪದ ಇರಲಿಲ್ಲ! ಹಾಗಾಗಿ ಕೆವೆಟ್ರನ ಶಾಲೆಗಳಿಗೆ ತೊಂದರೆ ಆಗದಂತೆ ಪಿಕಳೆ-ಪ್ರೇಮಾ ಎಚ್ಚರಿಕೆಯ ಹೆಜ್ಜೆಗಳನ್ನಿಡತೊಡಗಿದ್ದರು. ಪ್ರೇಮಾ ತನ್ನ ತಂದೆ ವಾಸುದೇವ ಕಸಬೇಕರ್ ಹೆಸರಲ್ಲೊಂದು ಹೆಣ್ಣುಮಕ್ಕಳ ಪ್ರೌಢಶಾಲೆ ಅಂಕೋಲೆಯಲ್ಲಿ ತೆರೆಯಲು ನಿರ್ಧರಿಸಿದರು. ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದ ಪ್ರೇಮಾ ಗಂಡನ ಇಷ್ಟ-ಕಷ್ಟಗಳೆರಡನ್ನೂ ಸಮಾನವಾಗಿ ಹಂಚಿಕೊಂಡೇ ಶಿಕ್ಷಣ ಪ್ರಸಾರ-ಸಮಾಜ ಸೇವೆಯಲ್ಲಿ ಮುನ್ನುಗ್ಗಿದರು. ಆಕೆ ಕೆವೆಟ್ರನಿಂದ ಹೊರಬೀಳುತ್ತಲೇ ಎದುರಾದ ಸಂಕಷ್ಟಗಳನ್ನೆಲ್ಲ ಪಂಥಾಹ್ವಾನದಂತೆ ಸ್ವೀಕರಿಸಿ ಹೋರಾಡಿ ಜಯಿಸಿದರು!!

ಒಂದೆಡೆ ದೇಸಾಯಿ-ನಾಡಕರ್ಣಿ ಜೋಡಿ ಕೆವೆಟ್ರನ ಶಿಕ್ಷಣ ಪ್ರಸಾರ ಕೈಂಕರ್ಯವನ್ನು ಇಮ್ಮಡಿ ಹುರುಪು-ತುರುಸಿನಿಂದ ಜಿಲ್ಲೆಯ ಮೂಲೆ-ಮೂಲೆಯಲ್ಲಿ ಮಾಡತೊಡಗಿದರು. ಇನ್ನೊಂದೆಡೆ ಪಿಕಳೆ ದಂಪತಿ ತಮ್ಮ ನೂತನ ಶಿಕ್ಷಣ ಸಭಾ ಟ್ರಸ್ಟ್‌ನ ಶಿಕ್ಷಣ ಸಂಸ್ಥೆಗಳಲ್ಲಿ ವೃತ್ತಿಪರ ಶಿಕ್ಷಣಕ್ಕೆ ಹೆಚ್ಚೆಚ್ಚು ಆದ್ಯತೆ-ಅವಕಾಶ ಕೊಟ್ಟರು. ಇದರಿಂದಾಗಿ ಅಂಕೋಲೆ ಎಂಬ ಹಳ್ಳಿಗಾಡಿನ ಹಿಂದುಳಿದವರ, ನಿರುದ್ಯೋಗಿಗಳ ಏರಿಯಾದಲ್ಲಿ ಜೀವನಕ್ಕೆ ಆಧಾರವಾಗುವಂಥ ಪ್ರಾಥಮಿಕ ಶಿಕ್ಷಕರ ತರಬೇತಿ (ಟಿಸಿಎಚ್) ಸಂಸ್ಥೆಯೊಂದು ತಲೆ ಎತ್ತಿತು. ಕ್ರಮೇಣ ಅಂಗನವಾಡಿ, ಕಾರ್ಯಕರ್ತೆಯರ ತರಬೇತಿ ಕೇಂದ್ರ, ವಿದ್ಯಾರ್ಥಿನಿಯರ ಹಾಸ್ಟೆಲ್, ಪ್ರೈಮರಿ ಶಾಲೆ, ಡಾ. ಕಮಲಾ ಮೆಡಿಕಲ್ ಸೆಂಟರ್ ಎಂಬ ಆಸ್ಪತ್ರೆ-ಹೀಗೆ ಬಹುಪಯೋಗಿ ಸಂಸ್ಥೆಗಳನ್ನು ಕಟ್ಟುತ್ತಾ ಹೋದರು. ಅಂಕೋಲೆಯ ನಿರ್ಜೀವ ಕಲ್ಲುಗುಡ್ಡವಾಗಿದ್ದ ಸರ್ಪಮಲ್ಲಿಕನ ಕೋಟೆ ಪ್ರದೇಶ ಇವತ್ತು ಬಹುಬಗೆಯ ಶಿಕ್ಷಣ ಕೇಂದ್ರವಾಗಿ, ಒಂದು ಹೈಟೆಕ್ ಆಸ್ಪತ್ರೆ ತಾಣವಾಗಿ ನಳನಳಿಸುತ್ತ ಸಮಾಜಮುಖಿ ಆಗಿರುವುದು ಉತ್ತರ ಕನ್ನಡದ ಮಹಾಭಾಗ್ಯವೇ ಸರಿ!!

ಕೆವೆಟ್ರನ ದೇಸಾಯಿಗೆ ಶಿಕ್ಷಣ ಸಂಸ್ಥೆಗಳನ್ನು ಕಟ್ಟುವಾಗ ಜನರು ಹೇಗೆ ಸಹಾಯ-ಸಹಕಾರ ನೀಡುತ್ತಿದ್ದರೋ ಹಾಗೇ ಪಿಕಳೆ ದಂಪತಿಗಳಿಗೂ ಶೋಷಿತ ವರ್ಗ-ಬೆವರಿನ ವರ್ಗ ಬೆಂಗಾವಲಾಗಿ ನಿಂತಿತ್ತು. ಪಿಕಳೆ ದಂಪತಿಗಳ ನಿಸ್ವಾರ್ಥ ಸಮಾಜ ಸೇವೆ ಕಂಡು ಅರಸ-ಕಂಠಕ-ನಾಡಕರ್ಣಿ ಮನೆತನದವರು ತಮ್ಮ ಆಸ್ತಿಯನ್ನು ನೂತನ ಶಿಕ್ಷಣ ಸಭಾ ಟ್ರಸ್ಟ್ (ನೂಶಿಸಟ್ರ)ಗೆ ದಾನವಾಗಿ ನೀಡಿದರು. ಪಿಕಳೆಗಳ ಹೆಚ್ಚಿನ ಶಿಕ್ಷಣ ಸಂಸ್ಥೆಗಳು ಅನುದಾನಿತ. ಹೀಗಾಗಿ ಆಳುವವರು, ಅವರ ಸಲಹೆಗಾರ ಅಧಿಕಾರಶಾಹಿ ಜೊತೆ ವ್ಯವಹಾರ ಅನಿವಾರ್ಯವಾಗಿತ್ತು. ಹಲವು ಸಲ ಸರ್ಕಾರಿ ಪ್ರಭೃತಿಗಳು ಪಿಕಳೆ ದಂಪತಿಗಳನ್ನು ಸತಾಯಿಸುತ್ತಿದ್ದರು. ಒಂದೆಡೆ ಅಧಿಕಾರಿಗಳ ಕಿರುಕುಳವಾದರೆ, ಮತ್ತೊಂದೆಡೆ ಹಣಬಲ-ತೋಳ್ಬಲದ ಮಂದಿ ತಮ್ಮ ಅನರ್ಹ ಮಕ್ಕಳಿಗೆ ಟಿಸಿಎಚ್ ಮತ್ತಿತರ ಕೋರ್ಸ್ ಸೀಟಿಗಾಗಿ ಅಧಿಕಾರಿಗಳ ಛೂ ಬಿಡುವುದು, ಧಮಕಿ ಹಾಕುವುದು ಇತ್ತು. ಇದಕ್ಕೆಲ್ಲ ಹೆದರಿ ಸೊಪ್ಪು ಹಾಕುವ ಪೈಕಿ ಪಿಕಳೆ ಬಾಯಿ ಆಗಿರಲಿಲ್ಲ. ಆಕೆ ಕಾನೂನು-ನೀತಿ-ಬಡವರ ಪರ-ಪ್ರತಿಭಾವಂತರ ಪರ ನೀತಿ ಎಂದೂ ಬಿಟ್ಟು ವ್ಯವಹರಿಸಿದವರೇ ಅಲ್ಲ. ಎಂಥ ಕಷ್ಟ-ನಷ್ಟ ಎದುರಾದರೂ ಅಧಿಕಾರಶಾಹಿ-ಜಾತಿ ಲಾಬಿಗೆ-ಗೂಂಡಾಗಿರಿಗೆ ಮಣಿದವರಲ್ಲ!

ಕೊನೆವರೆಗೂ ಪಿಕಳೆ ಬಾಯಿ ಡೊನೇಷನ್-ಕ್ಯಾಪಿಟೇಶನ್‌ಗೆ ಕೈಯೊಡ್ಡಲೇ ಇಲ್ಲ. 1985 ರಲ್ಲಿ ಶಿಕ್ಷಣ ಇಲಾಖೆಯಲ್ಲಿ ಕಾನೂನು ಪರಿವರ್ತನೆಯಾಗಿ ಟಿಸಿಎಚ್ (ಡಿ.ಇಡಿ) ಕೋರ್ಸಿಗೆ ದೇಣಿಗೆ ಸೀಟು ಕೊಡುವ ಅವಕಾಶ ಸಿಕ್ಕರೂ ಆಕೆ ಶಿಕ್ಷಣ ಮಾರಾಟದ ಪಾಪಕೃತ್ಯ ಮಾಡಲಿಲ್ಲ. ಯಾವಾಗ ಪಿಕಳೆ ದಂಪತಿಗಳು ತಮ್ಮ ಶಿಕ್ಷಣ ಟ್ರಸ್ಟ್ ಅನ್ನು ಬೆಳಗಾವಿಯ ಕ್ಯಾಪಿಟೇಷನ್ ಖಳ ಪ್ರಭಾಕರ ಕೋರೆಯ ಪಾರುಪತ್ಯದ ಕೆಎಲ್‌ಇ ಸಂಸ್ಥೆಗೆ ವಹಿಸಿಕೊಟ್ಟರೋ ಆಗಲ್ಲಿ ಶುರುವಾಯ್ತು ಡೊನೇಷನ್ ಹಾವಳಿ-ಶಿಕ್ಷಣ ಬಿಕರಿ ದೋನಂಬರ್ ದಂಧೆ!!

ಪಿಕಳೆ ಬಾಯಿ ಅಕಾಡೆಮಿಕ್ ಶಿಸ್ತಿಗೆ ಅದೆಷ್ಟು ಪ್ರಾಮುಖ್ಯತೆ ಕೊಡುತ್ತಿದ್ದರೋ ಅಷ್ಟೇ ಕಾಳಜಿ-ಬದ್ಧತೆಯಿಂದ ನೈತಿಕ ಮೌಲ್ಯವನ್ನು ವಿದ್ಯಾರ್ಥಿಗಳಿಗೆ ಕಲಿಸುತ್ತಿದ್ದರು. ದಿನವೂ ಸಂಸ್ಥೆಯ ಶಾಲೆ-ಕಾಲೇಜು-ಆಸ್ಪತ್ರೆಗೆ ಹೋಗಿಬರುತ್ತಿದ್ದರು. ಸ್ವಂತ ಸಂತಾನವಿಲ್ಲದ ಪಿಕಳೆ ದಂಪತಿಗಳು ಅದಕ್ಕಾಗಿ ಎಂದೂ ಕೊರಗಲಿಲ್ಲ. ತಮ್ಮ ಸಂಸ್ಥೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರೇ ಅವರಿಗೆ ಹಡೆದ ಮಕ್ಕಳಾಗಿದ್ದರು. ಶಾಲಾ ಆವರಣದಲ್ಲಿ ಕೈತೋಟ-ಹೂದೋಟ ಮಾಡಿದ್ದ ಪಿಕಳೆ ದಂಪತಿಗಳು ಮಕ್ಕಳಂತೆ ಗಿಡಗಳನ್ನು ಪ್ರೀತಿಸುತ್ತಿದ್ದರು.

ಪ್ರೇಮಾ ಪಿಕಳೆ ಗಟ್ಟಿಗಿತ್ತಿ, ಆಕೆಯಲ್ಲಿ ನಿಸ್ವಾರ್ಥ-ನಿರಪೇಕ್ಷೆ-ಸೂಕ್ಷ್ಮತೆ- ದೂರದೃಷ್ಟಿಯಿತ್ತು. ಬಾಲವಾಡಿಯಿಂದ ಹಿಡಿದು ಡಿಗ್ರಿ ಡಿಪ್ಲೋಮಾವರೆಗಿನ ಮಕ್ಕಳ ಮನಸ್ಥಿತಿಗೆ ತಕ್ಕಂತೆ ವ್ಯವಹರಿಸುತ್ತಿದ್ದರು. ಸರ್ಕಾರದ ಭ್ರಷ್ಟ-ದರ್ಪದ ಅಧಿಕಾರಿಗಳಿಂದ ಚಾಣಾಕ್ಷತೆಯಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದರು. ತನ್ನ ಪ್ರತಿ ಸಂಸ್ಥೆಯ ಆಗು-ಹೋಗುಗಳನ್ನು ತುಂಬಾ ದಕ್ಷತೆ-ಆಸಕ್ತಿಯಿಂದ ನಿಭಾಯಿಸುತ್ತಿದ್ದರು.

ತನ್ನ ಸಂಸ್ಥೆಯಲ್ಲಿ ಪ್ರತಿ ವಿದ್ಯಾರ್ಥಿನಿಯ ಹೆಸರೆತ್ತಿ ಕರೆಯುವಂಥ ಜ್ಞಾಪಕಶಕ್ತಿ ಆಕೆಯದಾಗಿತ್ತು. ಆಡಳಿತದಲ್ಲಿ


ಪಿಕಳೆ ದಂಪತಿಗಳ ಸರಳ ವಿವಾಹ...

ಆಕೆ ಎಡವಿದ್ದೇ ಇಲ್ಲ. ಪ್ರೇಮಾತಾಯಿಯ ಸಂಸ್ಥೆಗಳಲ್ಲಿ ಅಸಹಾಯಕ-ಬಡ ಹುಡುಗಿಯರೇ ಹೆಚ್ಚಿರುತ್ತಿದ್ದರು. ಹೀಗಾಗಿ ಪೋಲಿ ಪಟಾಲಂಗಳು ಸಂಸ್ಥೆಗಳ ಸುತ್ತ ಗಿರಕಿ ಹೊಡೆಯುವುದು ಮಾಮೂಲಾಗಿತ್ತು. ಪ್ರೇಮಾಬಾಯಿ ಇಂಥವರ ಮೇಲೊಂದು ಕಣ್ಣಿಟ್ಟಿರುತ್ತಿದ್ದರು. ಶಾಲೆಗೆ ಹೋಗಿ ಬರುವಾಗ ಇಂಥ ಪುಂಡರ ಕಂಡರೆ ತಕ್ಷಣ ತನ್ನ ಸೈಕಲ್-ಕಾರು ನಿಲ್ಲಿಸಿ ಕಪಾಳಮೋಕ್ಷ ಮಾಡದೇ ಬಿಡುತ್ತಿರಲಿಲ್ಲ!

ಅಸಹಾಯಕ-ಅಸಹಾಯಕ ಹೆಣ್ಣುಮಕ್ಕಳಿಗೆ, ವಿಧವೆಯರಿಗೆ ಪ್ರೇಮಾ ಪಿಕಳೆ ಸಂಸ್ಥೆಗಳು ಆಶ್ರಯತಾಣಗಳಾಗಿದ್ದವು. ಇಂಥ ಅಬಲೆಯರಿಗೆ ಆಕೆ ಉದ್ಯೋಗಕೊಟ್ಟು ಕಾಪಾಡುತ್ತಿದ್ದರು. ತನ್ನ ಸಾವಿನ ಕೊನೆಯವರೆಗೂ ಈ ಮಹಾಚೇತನ ಸಮಾಜ ಸೇವೆಯಲ್ಲಿ ತೊಡಗಿತ್ತು. ನಾಲ್ಕು ವರ್ಷದ ಹಿಂದಷ್ಟೇ ನಾಸ್ತಿಕ ಕಾಮ್ರೇಡ್-ಗಿರಿ ಪಿಕಳೆಯನ್ನು ಕಳೆದುಕೊಂಡಿದ್ದ ಈ ಆಸ್ತಿಕ ಹೆಂಗಸು ಕೆಲವು ವರ್ಷದಿಂದ ತಮ್ಮ ಸೇವಾ ಸ್ಥಳಗಳಿಗೆ ವೀಲ್‌ಚೇರ್‌ನಲ್ಲಿ ಬಂದು ಸೇವಾ ಮಗ್ನರಾಗಿರುತ್ತಿದ್ದರು. ಮೊನ್ನೆ ಪ್ರಾಣಬಿಡುವ ಹೊತ್ತಲ್ಲೂ ಆಕೆ ತನ್ನ ಶಿಕ್ಷಣ ಸಂಸ್ಥೆಗೆ ಹೋಗಲು ರೆಡಿಯಾಗಿದ್ದರು.

ಮೇಲ್ವರ್ಗದ ಗೌಡ ಸಾರಸ್ವತ ಬ್ರಾಹ್ಮಣ(ಕೊಂಕಣಿ) ಕುಲದಲ್ಲಿ ಹುಟ್ಟಿದ ಪ್ರೇಮಾತಾಯಿಗೆ ಜಾತಿ-ಧರ್ಮ ಗೊಡವೆಯೇ ಇರಲಿಲ್ಲ. ಗಂಡ ಗಿರಿ ಪಿಕಳೆಯಂತೆ ಹೆಂಡತಿ ಪ್ರೇಮಾಗೂ ದಲಿತರು-ಬಡವರು ಎಂದರೆ ಪ್ರೀತಿ-ಕಾಳಜಿಯಿತ್ತು. ಆಕೆ ದಲಿತರಿಗೆ-ಹಿಂದುಳಿದವರಿಗೆ-ಅಸಹಾಯಕರಿಗೆ ಕೊಟ್ಟ ಶಿಕ್ಷಣ-ಸಂಸ್ಕಾರ ಮರೆಯಲಾರದಂಥದ್ದು. ಆಸ್ತಿಕ-ನಾಸ್ತಿಕ ದಂಪತಿಗಳಲ್ಲಿದ್ದ ಸಮಾನ ಗುಣಧರ್ಮವೆಂದರೆ ಶಿಕ್ಷಣ ಪ್ರಸಾರ ಮತ್ತು ನೊಂದವರಿಗೆ ನೆರವಾಗುವುದಾಗಿತ್ತು. ಶಿಕ್ಷಣ ತಜ್ಞರು, ಸಮರ್ಥ ಶಿಕ್ಷಕರೂ-ಜನಪರ ಹೋರಾಟಗಾರರೂ ಆಗಿದ್ದ ಗಿರಿ ಪಿಕಳೆ ಮತ್ತವರ ಮಡದಿ ಪ್ರೇಮಾರ ಸಮಾನ ಶಿಕ್ಷಣ ಕಾಳಜಿ ಕಗ್ಗಾಡು ಅಂಕೋಲೆಯಲ್ಲಿ ಶಿಕ್ಷಣ ಕ್ರಾಂತಿಯನ್ನೇ ಮಾಡಿತ್ತು!!

ನೇರ ನಡೆ-ನುಡಿ, ಅಹಂಕಾರ-ಆಡಂಬರ ರಹಿತ ಜೀವನ, ಅಸಂಗ್ರಹ-ಅರಿಗ್ರಹ (ಗಾಂಧೀಜಿಯ ಅಗತ್ಯಕ್ಕಿಂತ ಹೆಚ್ಚು ಸಂಪತ್ತು ಶೇಖರಣೆ ಪಾಪದಾಯಕ ಎಂಬ ತತ್ವ) ನೀತಿ, ಪರಿಶುದ್ಧ ಪ್ರಾಮಾಣಿಕತೆ ಇದೆಲ್ಲಕ್ಕಿಂತ ಮುಖ್ಯವಾದ ಮಹಾಮಾನವತಾವಾದದ ಪಿಕಳೆ ದಂಪತಿ ತಮ್ಮ ಕೊನೆಗಾಲದಲ್ಲಿ ಒಂದೇ ಒಂದು 'ವಿಚಿತ್ರ ವರ್ತನೆ' ತೋರಿಸಿದ್ದು ಮಾತ್ರ ಬಿಡಿಸಲಾಗದ ಒಗಟಾಗಿಯೇ ಉಳಿದುಹೋಗಿದೆ! ಅದೇನೆಂದರೆ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರವನ್ನು ಬಂಡವಾಳ ಮಾಡಿಕೊಂಡು 'ದಂಧೆ' ನಡೆಸುತ್ತಿರುವ ಬೆಳಗಾವಿಯ ಕೆಎಲ್‌ಇ ಎಂಬ ಲಿಂಗಾಯತ ಜಾತಿವಾದಿಗಳ ಸಂಸ್ಥೆಗೆ ತಮ್ಮ ಜಾತಿ-ಧರ್ಮದ ಮಾಲಿನ್ಯವಿಲ್ಲದ ತಮ್ಮ ಪವಿತ್ರ ಶಿಕ್ಷಣ-ಆರೋಗ್ಯ ಸಂಸ್ಥೆಗಳನ್ನು ದಾನ ಮಾಡಿದ್ದು!! ಸ್ಥಳೀಯವಾಗಿ ಟ್ರಸ್ಟ್ ನಡೆಸುವ ಸಮರ್ಥರ- ಪ್ರಾಮಾಣಿಕರ ತಂಡವೊಂದನ್ನು ಯಾಕೆ ಪಿಕಳೆ ದಂಪತಿಗಳಿಂದ ತಯಾರು ಮಾಡಲಾಗಲಿಲ್ಲ ಎಂಬುದೇ ಯಕ್ಷ ಪ್ರಶ್ನೆ!

ಹಾಗೆ ನೋಡಿದರೆ ದೇಸಾಯಿ-ನಾಡಕರ್ಣಿ ಮತ್ತು ಪಿಕಳೆ ದಂಪತಿ-ಎರಡೂ ಬಣದವರು ತಮ್ಮ ಜನಪರ ಟ್ರಸ್ಟ್‌ಗಳನ್ನು ಉಳಿಸಿಕೊಳ್ಳಲು ವಾರಸುದಾರ ಪಡೆ ಕಟ್ಟುವ ಯೋಚನೆ ಮಾಡಲೇ ಇಲ್ಲ. ಇವರು ಪ್ರಾಮಾಣಿಕರಾಗಿದ್ದರೂ ಇಂಡಿವಿಜಲಿಸ್ಟ್‌ಗಳಾ? ಇವರಲ್ಲಿ ಸಂಘಟನಾ ಚಾತುರ್ಯ ಇರಲಿಲ್ಲವಾ? ಅಪಾರ ಶ್ರಮವಹಿಸಿ ಕಟ್ಟಿದ ಟ್ರಸ್ಟ್ ಅನ್ನು ತಮ್ಮ ತರುವಾಯ ಮುನ್ನಡೆಸಿಕೊಂಡು ಹೋಗಲು ತಮ್ಮದೇ ವಿಚಾರಧಾರೆಯ ಸ್ಥಳೀಯ ಕಾರ್ಯಕರ್ತರಿಗೆ ತರಬೇತಿ ನೀಡಲು ಪಿಕಳೆ ದಂಪತಿಗಳಿಗೇಕೆ ಸಾಧ್ಯವಾಗಲಿಲ್ಲ? ಏಕೆ ಟ್ರಸ್ಟ್ ಉಳಿಸಿಕೊಳ್ಳಲಾಗಲಿಲ್ಲ? ದೂರದ ಕೆಎಲ್‌ಇ ಎಂಬ ಜಾತಿವಾದಿ-ಬಂಡವಾಳಶಾಹಿ-ಶೋಷಕ ಕಂಪನಿಗೇಕೆ ಧಾರೆ ಎರೆದರು? ಇಂಥದೊಂದು ಜಿಜ್ಞಾಸೆ ಜಿಲ್ಲೆಯಲ್ಲಿ ಇವತ್ತಿಗೂ ನಡೆದಿದೆ.

ಪಿಕಳೆ ದಂಪತಿಗಳ ಜತೆಗೆ ಅವರ ಟ್ರಸ್ಟ್ ಕೂಡ ಕಣ್ಮರೆಯಾಗಿದ್ದು ದುರಂತ! ಹಾಗೆಯೇ ದಿನಕರ ದೇಸಾಯಿಗೂ ತಮ್ಮದೇ ಗರಡಿಯಲ್ಲಿ ಪಳಗಿದ ಸೇವಾಭಾವದವರನ್ನು ಟ್ರಸ್ಟಿಗಳಾಗಿ ಮಾಡಲು ಸಾಧ್ಯವಾಗಲಿಲ್ಲ. ಕೆನರಾ ವೆಲ್‌ಫೇರ್ ಟ್ರಸ್ಟ್ ಅನ್ನು ಚಿಡ್ಡಿ ಬುದ್ಧಿಯ ವಕೀಲನೊಬ್ಬನ ಕೈಗೆ ಕೊಡಬೇಕಾಗಿ ಬಂದಿದ್ದು ಈ ಸಮಾಜವಾದಿ ನೆಲದ ದೌರ್ಭಾಗ್ಯವೇ ಸರಿ!

ಇದೆಲ್ಲ ಏನೇ ಇರಲಿ; ಗಿರಿ ಪಿಕಳೆ ಕೆವೆಟ್ರನಲ್ಲಿದ್ದಾಗ ಪೀಪಲ್ಸ್ ಮಲ್ಟಿಪರ್ಪಸ್ ಹೈಸ್ಕೂಲ್ ಕಟ್ಟಿ ಅದರ ಆವರಣದಲ್ಲಿ ಸುಂದರ ಹೂದೋಟ ನಿರ್ಮಿಸಿದ್ದರು. ಅದು ಮುಸ್ಲಿಮರ ಹಳೆಯ ಸ್ಮಶಾನ ಭೂಮಿಯಾಗಿತ್ತು. ಅಲ್ಲಾತ ಹೊಸ ಸೃಷ್ಟಿಯನ್ನೇ ನಿರ್ಮಾಣ ಮಾಡಿದ್ದರು!! ಆತನ ಮಡದಿ ಪ್ರೇಮಾತಾಯಿ ನೂಶಿಸಟ್ರಾನ ಹಲವು ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಕಟ್ಟಿ ನಿಲ್ಲಿಸಿದ್ದು ಗತಕಾಲದ ಚರಿತ್ರೆಯಾಗಿ ಪಾಳು ಬಿದ್ದಿದ್ದ ಕೊಂಪೆಯ ಕಲ್ಲುಬಂಡೆಗಳ ಗುಡ್ಡದಲ್ಲಿ! ಈ ನಿರ್ಜೀವ ಭೂಪ್ರದೇಶಕ್ಕೆ ಜೀವ ತುಂಬುವ ಸಾಹಸ ಮಾಡಿ ಗೆದ್ದಿದ್ದರು ಪ್ರೇಮಾತಾಯಿ! ದಂಪತಿಗಳು ಜೀವನ ಸಾರ್ಥಕ ಪಡೆದರು.

ಇಂದು ಇಂಥ ಧಾರ್ಮಿಕ-ಐತಿಹಾಸಿಕ ಸ್ಥಳಗಳ ಮೇಲಿನ ಹಕ್ಕು-ಒತ್ತುವರಿಗಾಗಿ ನಡೆಯುತ್ತಿರುವ ಕೋಮು ಕ್ರಿಯೆ ಕೋಲಾಹಲ ನೋಡಿದರೆ ಪಿಕಳೆ ದಂಪತಿಗಳು ಸಾಧಿಸಿದ ಕೋಮು ಸೌಹಾರ್ದ ಒಂದು ಅದ್ಭುತ ಪವಾಡದಂತೆ ಕಾಣಿಸುತ್ತದೆ ಅಲ್ಲವೇ?

• ವಿವೇಕಾನಂದ ತಾಂಡೇಲ

ಅಡ್ನಾಡಿ ಜ್ಯೋತಿಷಿ ಆನಂದ ಬನಶಂಕರಿ ದೇವಾಲಯಕ್ಕೆ ಕಂಟಕ!



ಬನಶಂಕರಿ ದೇವಸ್ಥಾನ

ಈತನನ್ನು ಯಾರಾದರೂ ಕತ್ತಲಲ್ಲಿ ನೋಡಿದರೆ ಕರಡಿ ಎಂದು ಹೆದರಿ ಓಡುವ ಸಾಧ್ಯತೆಯಿದೆ. ಎಳೇ ಮಕ್ಕಳೆದುರಿಗೆ ಇವನ ಆಕೃತಿ ಪ್ರತ್ಯಕ್ಷವಾದರಂತೂ ಗೊಗ್ಗಯ್ಯ ಎಂದು ಭಯ ಬಿದ್ದು ಉಚ್ಚೆ ಮಾಡಿಕೊಳ್ಳುವುದು ಗ್ಯಾರೆಂಟಿ!

ಹೆಂಗಸರಂತೆ ಉದ್ದ ಬಿಟ್ಟಿರುವ ಕೂದಲು, ಕೆನ್ನೆತುಂಬ ಜೇನು ಗೂಡಿನಂತಿರುವ ಗಡ್ಡ, ಹಣೆಗೆ ಢಾಳವಾಗಿ ಮೆತ್ತಿಕೊಂಡಿರುವ ವಿಭೂತಿ, ದೇಹದ ಸುತ್ತ ಬಿಳಿ ಬಟ್ಟೆ... ಶೂಟಿಂಗ್‌ಗಾಗಿ ಆಗಷ್ಟೇ ಮೇಕಪ್ಪು ಮಾಡಿ ತಂದು ನಿಲ್ಲಿಸಿರುವ ಆರ್ಟಿಸ್ಟ್ ಥರಾ ಕಾಣಿಸುವ ಈತನ ಹೆಸರು ಆನಂದ ಅಲಿಯಾಸ್ ಶ್ರೀ ಶ್ರೀ ಆನಂದ ಗುರೂಜಿ.

ಸದ್ಯ ಟಿವಿ ಚಾನೆಲ್ ಒಂದರಲ್ಲಿ ಕೂತು ಜ್ಯೋತಿಷ್ಯ ಹೇಳುತ್ತಿರುವ ಈ ಆನಂದ ಅಲಿಯಾಸ್ ಆನಂದ ಗುರೂಜಿ ಯಾರು? ಈತ ಅದೆಲ್ಲಿಂದ ಪ್ರತ್ಯಕ್ಷನಾಗಿದ್ದಾನೆ, ಏನು ಇವನ ಪೂರ್ವಾಪರ ಎಂದು ಕೆದಕುತ್ತಾ ಹೋದರೆ ಹೊರಬೀಳುತ್ತೆ ನೋಡಿ ಇವನ ನವರಂಗೀ ಆಟಗಳ ವಿವರ...

ಈ ಹಿಂದೆ ಸುವರ್ಣ ಟಿವಿಯಲ್ಲಿ ಪ್ರಸಾರಗೊಂಡ 'ಸ್ವಯಂವರ' ಎಂಬ ಬಂಡಲ್ ಶೋ ನಲ್ಲಿ ವಧೂ-ವರರ ಜಾತಕದ ಡಿಟೇಲುಗಳನ್ನು ಹೇಳುವ ಮೂಲಕ ಕಿರುತೆರೆಗೆ ಎಂಟ್ರಿ ಕೊಟ್ಟ ಈ ಆನಂದ ಸದ್ಯ ಝೀ ಟಿವಿಯಲ್ಲಿ ಪ್ರತಿನಿತ್ಯ 'ಧರ್ಮ ದರ್ಪಣ' ಎಂಬ ಜ್ಯೋತಿಷ್ಯ ಕಾರ್ಯಕ್ರಮವನ್ನು ನಡೆಸುತ್ತಿದ್ದಾನೆ. ಬಾಯಿಗೆ ಬಂದದ್ದನ್ನು ಚೋಡ್ ಬಿಡುವ ಈತ ಅದೇ ಛಾನೆಲ್‌ನಲ್ಲಿ ಭಾನುವಾರ ಮತ್ತು ಸೋಮವಾರ ಪ್ರಸಾರವಾಗುವ 'ಪುಣ್ಯಕ್ಷೇತ್ರ' ಎಂಬ ಮತ್ತೊಂದು ಕಾರ್ಯಕ್ರಮವನ್ನೂ ನಿರೂಪಿಸುತ್ತಿದ್ದಾನೆ.

ಗೇಟ್ ಕೀಪರ್ ಕೆಲಸದಿಂದ ಗೇಟ್ ಪಾಸ್

ಚಿಕ್ಕಬಳ್ಳಾಪುರದ ಎಂ.ಕೆ. ಹನುಮಂತರಾವ್ ಮತ್ತು ಸರೋಜಮ್ಮನ ಮಗನಾದ ಎಂ.ಎಚ್. ಆನಂದ್‌ಕುಮಾರ್ ತೀರಾ ಚಿಕ್ಕವಯಸ್ಸಿಗೇ ಊರು ಬಿಟ್ಟು ಬೆಂಗಳೂರಿಗೆ ಓಡಿ ಬಂದಿದ್ದ. ಹಾಗೆ ಬಂದಮೇಲೆ ಈತ ಹಾಕಿದ ಗೆಟಪ್ಪುಗಳು ಒಂದೆರಡಲ್ಲ. ಮೊದಲಿಗೆ ಹೋಂ ಗಾರ್ಡ್ಸ್ ಅನ್ನೋ ಕೆಲಸಕ್ಕೆ ಸೇರಿದ ಈತ ಆನಂತರ ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್‌ನಲ್ಲಿ ಗೇಟ್‌ಕೀಪರ್ ಆಗಿ, ವೈರ್‌ಲೆಸ್ ಆಪರೇಟರ್ ಆಗಿ ಕೆಲಸ ಮಾಡಿಕೊಂಡಿದ್ದ. ಬನ್ನೇರುಘಟ್ಟದ ಗೇಟಿನ ಎದುರು ಗಣೇಶ ಗುಡಿಯೊಂದಿದೆ. ಗೇಟ್ ಕೀಪರ್ ಕೆಲಸದೊಂದಿಗೆ ಅಲ್ಲಿದ್ದ ಗಣೇಶ ವಿಗ್ರಹಕ್ಕೂ ಈತ ಪೂಜೆ ಮಾಡಲು ಶುರು ಹಚ್ಚಿಕೊಂಡ. ಅದಕ್ಕೆ ಪ್ರತ್ಯೇಕ ಸಂಬಳವಿಲ್ಲದಿದ್ದರೂ ಭಕ್ತರು ನೀಡುತ್ತಿದ್ದ ತಟ್ಟೆ ಕಾಸು ಈತನ ಎಕ್ಸ್‌ಟ್ರಾ ಇನ್‌ಕಂ ಆಗಿತ್ತು. ಗುಡಿಯಲ್ಲಿ ಎರಡು ಹೊತ್ತು ಮಂಗಳಾರತಿ ಮಾಡಿ ಅದರಿಂದ ಬಂದ ಪುಡಿಗಾಸಿನಲ್ಲಿ ವನ್ಯಧಾಮದ ಎದುರು ಇರುವ ಡಾಬಾಕ್ಕೆ ಹೋಗಿ ಚಿಕನ್ ಕಬಾಬು, ಮಟನ್ ಫ್ರೈ ತಿಂದು ತೇಗುತ್ತಿದ್ದ.

"ಆನೆ, ಸಿಂಹ, ಹುಲಿಯಂಥ ವನ್ಯ ಮೃಗಗಳನ್ನು ಪಳಗಿಸುವ ವಿಶೇಷ ವಿದ್ಯೆ ನನಗೆ ಗೊತ್ತು, ನಾನು ಆ ಪ್ರಾಣಿಗಳನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ಸಾಕು ಅವು ನಾನು ಹೇಳಿದಂತೆ ಕೇಳಲು ಶುರು ಮಾಡುತ್ತವೆ. ಒಮ್ಮೆ ಏಟು ಬಿದ್ದ ಸಿಂಹವೊಂದು ವನ್ಯಧಾಮಕ್ಕೆ ಬಂದಿತ್ತು. ಘಾಸಿಗೊಂಡಿದ್ದ ಆ ಸಿಂಹದ ಮೇಲೆ ನನ್ನ ಮಾಂತ್ರಿಕ ವಿದ್ಯೆಯನ್ನು ಬಳಸಿ, ಸಿಂಹದ ಮನವೊಲಿಸಿ ಅದರ ಶುಶ್ರೂಷೆ ಮಾಡಿದ್ದೆ. ಈ ವಿಚಾರ 2001ರಲ್ಲಿ ಟೈಮ್ಸ್ ಆಫ್ ಇಂಡಿಯಾ ಪೇಪರಲ್ಲಿ ವರದಿಯಾಗಿತ್ತು..." ಎಂದೆಲ್ಲಾ ಬಂಡಲ್ ಬಿಡುವ ಆನಂದ ಪಳಗಿಸಿದ ಆನೆಯೊಂದಿಗೆ ತಾನು ನಿಂತಿರುವ ಫೋಟೋವನ್ನು ಜನರಿಗೆಲ್ಲಾ ತೋರಿಸಲು ಶುರುಮಾಡುತ್ತಾನೆ.

ನೋಡಲು ಈತನೇ ಒಂದು ವಿಚಿತ್ರ ಪ್ರಾಣಿಯಂತೆ ಇರುವಾಗ ಈತ ಅದ್ಯಾವ ಪ್ರಾಣಿಯನ್ನು ಪಳಗಿಸಿದ್ದನೋ ಯಾರಿಗೂ ಗೊತ್ತಿಲ್ಲ.

ಆನಂದನ ಕಪಟತನ ಗೊತ್ತಾದ ಮೇಲೆ ಬನ್ನೇರುಘಟ್ಟ ಫಾರೆಸ್ಟ್ ಆಫೀಸರುಗಳು ಈತನನ್ನು ಅಲ್ಲಿಂದ ಉಗಿದಟ್ಟಿದ್ದರು.




ರಕ್ಷಿತಾರೊಂದಿಗೆ...

ಅಲ್ಲಿಂದ ಕಾಲುಕಿತ್ತ ಆನಂದ ನಂತರ ಬೀಡುಬಿಟ್ಟಿದ್ದು ಬನಶಂಕರಿ ದೇವಸ್ಥಾನದಲ್ಲಿ. "ಬನಶಂಕರಿ ದೇವಸ್ಥಾನಕ್ಕೆ ನಾನೇ ಪ್ರಧಾನ ಅರ್ಚಕ, ಪೀಠಾಧಿಪತಿ" ಎಂದೆಲ್ಲಾ ಹೇಳಿಕೊಳ್ಳುತ್ತಾನೆ. ಆದರೆ ವಾಸ್ತವವಾಗಿ ಈ ದೇವಸ್ಥಾನದ ಪ್ರಧಾನ ಅರ್ಚಕ ಸತ್ಯನಾರಾಯಣ ಶಾಸ್ತ್ರಿ ಎಂಬಾತ. ಮುಜರಾಯಿ ಇಲಾಖೆಯಿಂದ ಒಂಬತ್ತು ವರ್ಷಗಳ ಹಿಂದೆ ನೇಮಕಗೊಂಡಿರುವ ಸಹಾಯಕ ಅರ್ಚಕನಷ್ಟೇ ಈ ಆನಂದ.

ಸರ್ಕಾರದ ಸೇವೆಯಲ್ಲಿರುವವರು ಇತರೆ ಮೂಲಗಳಿಂದ ಹಣ ಸಂಪಾದಿಸುವಂತಿಲ್ಲ ಎಂದು ಸರ್ಕಾರದ ನೀತಿ, ನಿಯಮಗಳು ಸ್ಪಷ್ಟಪಡಿಸುತ್ತವೆ. ಧಾರ್ಮಿಕ ದತ್ತಿ ಇಲಾಖೆಯ ಅಡಿಯಲ್ಲಿ ಬರುವ ರಾಜ್ಯದ ಸಾವಿರಾರು ದೇವಾಲಯಗಳಲ್ಲಿ ಕೆಲಸ ಮಾಡುವ ಅರ್ಚಕರು ರಾಜ್ಯ ಸರ್ಕಾರದಿಂದ ವೇತನ ಹಾಗೂ ಇತರ ಸೌಕರ್ಯಗಳನ್ನು ಪಡೆಯುತ್ತಾರೆ. ಹೀಗಾಗಿ ಇವರು ಸರ್ಕಾರದ ನೀತಿ, ನಿಯಮಗಳ ಅಡಿಯಲ್ಲಿ ಅರ್ಚಕ ವೃತ್ತಿ ನಿರ್ವಹಿಸಬೇಕು. ಆದರೆ ಎಲ್ಲಾ ನೀತಿ ನಿಯಮಗಳನ್ನು ಪಕ್ಕಕ್ಕೆಸೆದಿರುವ ಆನಂದ ತಿಂಗಳಿಗೆ ಹತ್ತು ದಿನ ಕೂಡಾ ನೆಟ್ಟಗೆ ಬನಶಂಕರಿ ದೇವಸ್ಥಾನದಲ್ಲಿ ಕೆಲಸಕ್ಕೆ ಹಾಜರಾಗುವುದಿಲ್ಲ.

ಬನಶಂಕರಿ ದೇವಸ್ಥಾನದ ಆವರಣಕ್ಕೆ ಹೋಗಿ ಇವನ ಹೆಸರೆತ್ತಿದರೆ ಸಾಕು ಅಲ್ಲಿ ಎಂಜಲು ತಿನ್ನಲು ನಿಂತಿರುವ ನಾಯಿಗಳೂ ಮುಖ ಕಿವುಚುತ್ತವೆ. ಬನಶಂಕರಿ ದೇವಸ್ಥಾನದ ಕಾಂಪೌಂಡಿನಲ್ಲಿರುವ ಶಾಕಾಂಬರಿ ದೇವಸ್ಥಾನದಲ್ಲಿ ಮಂಗಳಾರತಿ ಎತ್ತಿ ಕಾಸೆಣಿಸುತ್ತಿರುವ ಆನಂದನಿಗೆ ಮಂತ್ರಕ್ಕಿಂತ ಹೆಚ್ಚಾಗಿ ಗೊತ್ತಿರುವುದು ಕಾಸು ಮಾಡುವ ತಂತ್ರ.

ಕಾಸು ಕೊಟ್ಟು ಆಗಮ ಪರೀಕ್ಷೆ ಪಾಸು ಮಾಡಿರುವ ಆನಂದನಿಗೆ ಧಾರ್ಮಿಕ ದತ್ತಿ ಇಲಾಖೆಯ ಅರ್ಚಕನೊಬ್ಬನಿಗೆ ಗೊತ್ತಿರಬೇಕಾದ ಮಂತ್ರದ ಭಾಗ ಬರುವುದೇ ಇಲ್ಲವಂತೆ. ಮೊದಲಿನಿಂದಲೂ ಬನಶಂಕರಿ ದೇವಸ್ಥಾನದ ಸಹಾಯಕ ಅರ್ಚಕನ ಕೆಲಸಕ್ಕಿಂಥ ಬೇರೆ ರೀತಿಯ ಸೈಡ್ ಬಿಜಿನೆಸ್‌ಗಳಲ್ಲೇ ಎತ್ತುವಳಿ ಮಾಡುತ್ತಾ ಬಂದಿರುವ ಆನಂದ ಇತ್ತೀಚೆಗೆ ಟಿವಿಯಲ್ಲಿ ಕಾಣಿಸಿ ಕೊಂಡ ನಂತರ ಅರ್ಚಕನ ಕೆಲಸಕ್ಕೆ ಹಾಜರಾಗುತ್ತಿರುವುದೇ ಕಡಿಮೆ ಯಾಗಿಬಿಟ್ಟಿದೆ.



ಆನಂದ

ಟಿ.ವಿ. ಪರದೆಯ ಮೇಲೆ ಕಾಣಿಸಿಕೊಂಡ ನಂತರ ತನ್ನ ಹೆಸರಿನೊಂದಿಗೆ 'ಗುರೂಜಿ' ಎಂದು ಸೇರಿಸಿಕೊಂಡಿರುವ ಈತ, ಈಗ ಪಾದಪೂಜೆ ಮಾಡಿಸಿಕೊಳ್ಳುವ ಲೆವೆಲ್‌ಗೆ ಬಂದಿದ್ದಾನೆ. ಇವನ ಕೊಳಕು ಪಾದಕ್ಕೆ ನೀರು ಹೊಯ್ದು ಪಾವನವಾಗಲು 10ರಿಂದ 25 ಸಾವಿರ ರೂಪಾಯಿಗಳ ತನಕ ಚಾರ್ಜು ಮಾಡುತ್ತಾನೆ.

ಢೋಂಗಿ ಗುರು

ಯಾವ ಪೀಠಾರೋಹಣವೂ, ದೀಕ್ಷಾ ಕಾರ್ಯಕ್ರಮಗಳೂ ನಡೆಯದೆ ತನಗೆ ತಾನೇ ಶ್ರೀ ಶ್ರೀ ಆನಂದ ಗುರೂಜಿ ಎಂದು ನಾಮಕರಣ ಮಾಡಿಕೊಂಡಿರುವ ಆನಂದನ ಢೋಂಗಿ ಪುರಾಣಗಳೇನು ಕಡಿಮೆಯಿಲ್ಲ.



ಧರಂಸಿಂಗ್

ಕೇರಳದ ಕೊಟ್ಟಾಯಂ ಬಳಿಯ ಮೋಚಿ ಕುಲದ ಶ್ರೀ ನಾರಾಯಣ ಗುರುಗಳ ಬಳಿ ಮೂರು ವರ್ಷಗಳ ಕಾಲ ಅಥರ್ವಣ, ತಂತ್ರಸಾರ, ಯೋಗ ಹಾಗೂ ಸಿದ್ಧಿಕಲ್ಪ ವಿದ್ಯೆಗಳನ್ನು ಕಲಿತಿದ್ದೇನೆ ಎಂದೆಲ್ಲಾ ಪುಂಗಿ ಊದುವ ಆನಂದ, ಜ್ಯೋತಿಷ್ಯ ಶಾಸ್ತ್ರದಲ್ಲಿ ಇದುವರೆಗೂ ಇಲ್ಲದಿದ್ದ ದರ್ಪಣಾಂಜನ, ಚಕ್ಷುರ್ಮತಿ, ಸ್ವರ ಜ್ಯೋತಿಷ್ಯಗಳೆಂಬ ಹೊಸ ಪ್ರಾಕಾರಗಳನ್ನೆಲ್ಲಾ ಹುಟ್ಟುಹಾಕಿದ್ದಾನೆ.

ಅಮಾವಾಸ್ಯೆ, ಹುಣ್ಣಿಮೆ, ಸಂಕ್ರಾಂತಿ, ಗ್ರಹಣಗಳಂತ ಕಾಲದಲ್ಲಿ ಜಪ ಹೋಮಗಳ ಮೂಲಕ ಅಂಜನ, ಪಾದರಸಗಳನ್ನು ಸಿದ್ಧಿಸಿಕೊಂಡು ಜನರ ಸಮಸ್ಯೆಗಳನ್ನು ಕನ್ನಡಿಯಲ್ಲಿ ನೋಡಿ ಹೇಳುತ್ತೇನೆ, ಈ ಕಲೆಯನ್ನು ದರ್ಪಣಾಂಜನ ಎಂದು ಕರೆಯುತ್ತಾರೆ ಎನ್ನುತ್ತಾನೆ. ಅಷ್ಟೇ ಅಲ್ಲದೆ, ಜಾತಕ, ಕವಡೆ ಮುಂತಾದ ಸಾಧನಗಳಿಲ್ಲದೆ ಒಬ್ಬ ವ್ಯಕ್ತಿಯ ಕಣ್ಣಿನ ರೇಖೆಯನ್ನು ನೋಡಿ ಹಿಂದೆ ಅವರು ಎದುರಿಸಿರುವ ಮತ್ತು ಮುಂದೆ ಅವರು ಎದುರಿಸಲಿರುವ ಸಮಸ್ಯೆಗಳನ್ನು ಕಂಡುಹಿಡಿಯುತ್ತೇನೆ, ಈ ಕಲೆಯನ್ನು ಚಕ್ಷುರ್ಮತಿ ವಿದ್ಯೆ ಎನ್ನುತ್ತಾರೆ ಎಂದು ಬೂಸಿ ಬಿಡುತ್ತಾನೆ.



ಕಟ್ಟಾ ಜಗ್ಗ

ಅದೂ ಸಾಲದೆಂಬಂತೆ ಆನಂದನ ಬಳಿ ಜ್ಯೋತಿಷ್ಯ ಹೇಳುವ ಮತ್ತೊಂದು ಪ್ರಾಕಾರವೂ ಇದೆ. ಅದು ಸ್ವರ ಜ್ಯೋತಿಷ್ಯವಂತೆ! ಜಾತಕ, ಪ್ರಶ್ನೆ, ಕವಡೆ, ಅಂಜನ ಯಾವುದೂ ಇಲ್ಲದೆ ಒಬ್ಬ ವ್ಯಕ್ತಿ ಮಾತಾಡುವಾಗ ಆತನ ಸ್ವರದಲ್ಲಿರುವ ಏರಿಳಿತದ ಮೂಲಕ, ಫೋನ್ ಸಂಭಾಷಣೆಯಲ್ಲೇ ಗುರೂಜಿಗಳು ನಿಖರವಾದ ಭವಿಷ್ಯವನ್ನು ಸೂಚಿಸುತ್ತಾರಂತೆ. ಅದಕ್ಕಿಂತಲೂ ಇನ್ನೊಂದು ಅದ್ಭುತ ಕಲೆಯೂ ಅವರಿಗೆ ಗೊತ್ತಿದೆ. ಅದೇನೆಂದರೆ ಯಾರದೇ ಫೋಟೋ ನೋಡಿದರೂ ಸಾಕು, ಆ ಫೋಟೋದಲ್ಲಿರುವ ವ್ಯಕ್ತಿಯ ಸಂಪೂರ್ಣ ಜಾತಕವನ್ನು ನೀಡಿಬಿಡುತ್ತಾರಂತೆ. ಅಬ್ಬಬ್ಬಾ... ಎಂಥಾ ಮೇಧಾವಿ ಈ ಶ್ರೀ ಶ್ರೀ ಆನಂದ ಗುರೂಜಿಗಳು...

ಇಷ್ಟೆಲ್ಲಾ ಬ್ರಹ್ಮವಿದ್ಯೆಗಳನ್ನು ಕಲಿತಿರುವ ಆನಂದ ಗುರೂಜಿಯ ಬಯೋಡೇಟಾವೇ ನೆಟ್ಟಗಿಲ್ಲ. ಹತ್ತನೇ ಕ್ಲಾಸ್ ಫೇಲ್ ಕ್ಯಾಡಿಂಡೇಟ್ ಆಗಿರುವ ಆನಂದ ಮೈಸೂರಿನ 'ಕರ್ನಾಟಕ ರಾಜ್ಯ ಆಗಮ ಶಿಕ್ಷಣ ಸಮಿತಿ' ಮತ್ತು ಬೆಂಗಳೂರಿನ 'ಆಗಮತ್ರಯ ಮಹಾಮಂಡಲ' ಎಂಬ ಸಂಸ್ಥೆಗಳಿಂದ ತಾನೋರ್ವ ಜ್ಯೋತಿಷಿ ಎಂಬ ಸರ್ಟಿಫಿಕೇಟುಗಳನ್ನು ಪಡೆದಿದ್ದಾನೆ. ಬನಶಂಕರಿ ದೇವಸ್ಥಾನಕ್ಕೆ ಬರುವ ಶ್ರೀಮಂತ ಭಕ್ತರನ್ನು ತನ್ನ ಖೆಡ್ಡಾಕ್ಕೆ ಬೀಳಿಸಿಕೊಳ್ಳುವ ಈ ವಂಚಕ ಜ್ಯೋತಿಷಿ ಅವರಿಗೆ ಇಲ್ಲಸಲ್ಲದ ಭಯ ಹುಟ್ಟಿಸಿ "ನಿಮ್ಮ ಸಮಸ್ಯೆಗಳ ಪರಿಹಾರಕ್ಕೆ ಹೋಮ, ಯಾಗಗಳನ್ನು ಮಾಡುತ್ತೇನೆ" ಎಂದು ಸುಳ್ಳು ಹೇಳಿ ಅವರಿಂದ ಲಕ್ಷಾಂತರ ರೂಪಾಯಿಗಳನ್ನು ಪೀಕುತ್ತಾನೆ.

ಧರ್ಮ ಸಿಂಗ್‌ಗೇ ದೋಖಾ!

ಮಾಜಿ ಮುಖ್ಯಮಂತ್ರಿ ಧರ್ಮ ಸಿಂಗ್ ಅವರ ಬೀಗತಿ ಆಶಾ ಗುಣಶೇಖರ್ ಎಂಬಾಕೆ ಬನಶಂಕರಿ ದೇವಸ್ಥಾನದ ಪರ್ಮನೆಂಟ್ ಭಕ್ತೆ, ಆಕೆಯ ಮೂಲಕ ಧರ್ಮಸಿಂಗ್ ಫ್ಯಾಮಿಲಿಯ ಎಲ್ಲಾ ಸದಸ್ಯರೂ ಈ ದೇವಸ್ಥಾನದ ಡಿವೋಟಿಗಳಾಗಿದ್ದಾರೆ. ಕಳೆದ ಬಾರಿ ಧರ್ಮ ಸಿಂಗ್ ಎಲೆಕ್ಷನ್‌ಗೆ ನಿಂತಾಗ ಅವರ ಗೆಲುವಿಗೆ ಮಂಡಲ ಪೂಜೆ, ಅಶ್ವಮೇಧ ಹೋಮ ಮಾಡಿಕೊಡುತ್ತೇನೆ ಎಂದು ಐದು ಲಕ್ಷ ರೂಪಾಯಿಗಳನ್ನು ಪೀಕಿದ್ದ ಆನಂದ. ಆದರೆ ಹಣ ಪಡೆದ ನಂತರ ಯಾವ ಪೂಜೆಯನ್ನೂ ಮಾಡದೆ ಕೈ ಎತ್ತಿದ್ದ. ಧರ್ಮ ಸಿಂಗ್ ಮನೆಯವರು ದೇವಸ್ಥಾನದ ಆಡಳಿತ ಮಂಡಳಿಗೆ ಈ ಬಗ್ಗೆ ದೂರು ನೀಡಿದ್ದರು. ಆಗಲೇ ಈತ ದೇವಸ್ಥಾನದಿಂದ ಎತ್ತಂಗಡಿಯಾಗಬೇಕಿತ್ತು, ಆದರೆ ಕಡೆಗೆ ಈತ ತನ್ನ ಮೂವರು ಮಕ್ಕಳು, ಹೆಂಡತಿ ಸಮೇತ ಧರ್ಮ ಸಿಂಗ್ ಬಳಿ ಹೋಗಿ ಅವರ ಕೈಕಾಲು ಹಿಡಿದು ಕ್ಷಮೆ ಕೇಳಿ ಬಚಾವಾಗಿದ್ದ.

ಆನಂದನನ್ನು ನಂಬಿ ಕಟ್ಟಾ ಮಗ ಕೆಟ್ಟ!

ಮಹಾನ್ ವಂಚಕ ಕಟ್ಟಾ ಸುಬ್ರಹ್ಮಣ್ಯ ಮತ್ತಾತನ ಮಗ ಜಗ್ಗ ಇಬ್ಬರೂ ಆನಂದ ಗುರೂಜಿಯ ಪರಮ ಭಕ್ತರು. ಭೂ ಹಗರಣದಲ್ಲಿ ಸಿಲುಕಿಕೊಂಡಿರುವ ಕಟ್ಟಾ ಜಗದೀಶ ಜೈಲಿಗೆ ಹೋಗುವ ಹಿಂದಿನ ದಿನ ಇದೇ ಆನಂದನ ಬಳಿ ಬಂದು ಈತನ ಆಶೀರ್ವಾದ ಪಡೆದಿದ್ದ; ಅವತ್ತು ಜಗ್ಗನ ಕೈಗೆ ಕಪ್ಪಗಿನ ಮಸಿ ಕೊಟ್ಟ ಆನಂದ 'ಕೋರ್ಟ್‌ಗೆ ಹಾಜರಾಗುವ ಮುನ್ನ ಈ ಅಂಜನವನ್ನು ನಿಮ್ಮ ಹಣೆಯ ಹುಬ್ಬುಗಳಿಗೆ ಹಚ್ಚಿಕೊಳ್ಳಿ, ಇದರಿಂದಾಗಿ ನ್ಯಾಯಾಧೀಶರು ತಮ್ಮ ಜಡ್ಜ್‌ಮೆಂಟನ್ನೇ ಉಲ್ಟಾ ಮಾಡುತ್ತಾರೆ" ಎಂದು ಹೇಳಿದ್ದ. ಅಂಜನವನ್ನು ತನ್ನ ಹುಬ್ಬಿಗೆ ತೀಡಿಕೊಂಡು ಕೋರ್ಟಿಗೆ ಹೋದ ಜಗ್ಗನಿಗೆ ಅಲ್ಲಿ ದೊಡ್ಡ ಅನಾಹುತವೇ ಕಾದಿತ್ತು. ಅವತ್ತು ಅರೆಸ್ಟಾಗಿ ಜೈಲುಪಾಲಾದವನು ಇವತ್ತಿಗೂ ಜಾಮೀನು ಸಿಗದೆ ಪರಪ್ಪನ ಅಗ್ರಹಾರದಲ್ಲಿ ಕೊಳೆಯುವಂತಾಗಿದೆ... ಈ ಗುರೂಜಿಯ ದರ್ಪಣಾಂಜನ ಎಷ್ಟು ಪವರ್‌ಫುಲ್ ಅಲ್ವೇ?!

ಕಳೆದ ಮೂವತ್ತು ವರ್ಷಗಳಿಂದ ಬನಶಂಕರಿ ದೇವಸ್ಥಾನದ ಹಿಂಭಾಗದಲ್ಲಿ ಕಸ, ಮುಸುರೆ ಬಳಿಯುತ್ತಾ ದುಡಿಯುತ್ತಿರುವ ಏಳೆಂಟು ಜನ ಹೆಂಗಸರಿಗಾಗಿ ದೇವಸ್ಥಾನದ ಆಡಳಿತ ಮಂಡಳಿಯು ಕ್ವಾಟ್ರಸ್ ನಿರ್ಮಿಸಿತ್ತು. ಈ ಆನಂದ ಅದೇನು ಗೋಲ್ಮಾಲ್ ಮಾಡಿದನೋ ಗೊತ್ತಿಲ್ಲ. ಬಡ ಕೆಲಸದಾಳುಗಳಿಗೆಂದು ನಿರ್ಮಿಸಿದ್ದ ಮನೆಗಳಲ್ಲಿ ಆನಂದ ಮತ್ತು ಆತನ ಭಾವಮೈದುನ ಸತೀಶ ಬಂದು ಸೇರಿಕೊಂಡು ಅಲ್ಲಿದ್ದ ನಿರ್ಗತಿಕ ಮಹಿಳೆಯರನ್ನು ಓಡಿಸಿದ್ದಾರೆ. "ನಮ್ಮ ಸೂರನ್ನು ಕಿತ್ತುಕೊಂಡ ಆತನಿಗೆ ಬರಬಾರದು ಬಂದು ಹೊತ್ಕೊಂಡು ಹೋಗ" ಎಂದು ಅಲ್ಲಿನ ವೃದ್ಧ ಹೆಂಗಸರು ಕಣ್ಣೀರಿಟ್ಟು ಈ ಗಡ್ಡದ ಪೂಜಾರಿಗೆ ಹಿಡಿ ಶಾಪ ಹಾಕುತ್ತಿದ್ದಾರೆ.

ಸದ್ಯ ಈ ಆನಂದ ಗೊಟ್ಟಿಗೆರೆಯಲ್ಲಿ ಮೂರಂತಸ್ತಿನ ಕಟ್ಟಡದಲ್ಲಿನ ಏಳು ಮನೆಗಳನ್ನು, ಸಿಂಧೂರ ಕಲ್ಯಾಣ ಮಂಟಪದ ಎದುರಿಗೊಂದು ಫ್ಲಾಟನ್ನು ಹೊಂದಿದ್ದರೂ ಈತ ದೇವಸ್ಥಾನದ ಕ್ವಾಟ್ರಸ್ ಅನ್ನು ತೆರವು ಮಾಡುತ್ತಿಲ್ಲ. ಅಷ್ಟೇ ಅಲ್ಲದೆ, 2007 ಮಾಡೆಲ್‌ನ ಇನೋವಾ ಕಾರು, ಹಳೆಯ ಫೋರ್ಡ್ ಐಕಾನ್ ಮತ್ತು ಹೊಚ್ಚ ಹೊಸ ನ್ಯಾನೋ ಕಾರು ಸೇರಿದಂತೆ ಮೂರ್ನಾಲ್ಕು ಕಾರುಗಳ ಒಡೆಯನಾಗಿದ್ದಾನೆ ಆನಂದ.

ಇಷ್ಟೆಲ್ಲಾ ವಂಚನೆಗಳ ಸರದಾರನಾಗಿರುವ ಆನಂದ ಮತ್ತೊಬ್ಬ ವಂಚಕನಾದ ಶ್ರೀ ಶ್ರೀ ಶ್ರೀ ರವಿಶಂಕರ್ ಗುರೂಜಿಯನ್ನೇ ಅನುಕರಿಸುತ್ತಾ ಬಂದಿದ್ದಾನೆ. ಈಗ ಜಿಗಣಿ ಬಳಿ 'ಶಾಂತಿ ಸಾಯಿಕುಟೀರ' ಎಂಬ ವೃದ್ಧಾಶ್ರಮವನ್ನು ಕಟ್ಟುತ್ತಿದ್ದೇನೆಂದು ಹೇಳಿಕೊಂಡು ಆನಂದ ಆ ಹೆಸರಿನಲ್ಲಿ ಡೊನೇಷನ್ ಎತ್ತಲು ಸಜ್ಜಾಗಿದ್ದಾನೆ.

ಹಿಂದೂ ಧಾರ್ಮಿಕ ದತ್ತಿ ಕಾಯ್ದೆ 17 (4) 1997ರ ಅಧಿನಿಯಮದ ಪ್ರಕಾರ ಆನಂದನ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಬನಶಂಕರಿ ದೇವಸ್ಥಾನದ ಆಡಳಿತ ಮಂಡಳಿ ಮುಜರಾಯಿ ಇಲಾಖೆಯ ಡಿಸಿ ಮತ್ತು ಕಮಿಷನರ್‌ಗೆ ಪತ್ರ ಬರೆದಿದೆ. ಹೀಗಾಗಿ ಇಷ್ಟರಲ್ಲೇ ಬನಶಂಕರಿ ಬಾಗಿಲಿನಿಂದ ಈತನನ್ನು ಹೊರದಬ್ಬುವುದೇನೋ ಗ್ಯಾರೆಂಟಿ. ಆದರೆ ಹೊರಗೆ ವ್ಯಾಪಿಸಿರುವ ಈತನ ಹಾವಳಿಗೆ ಬ್ರೇಕು ಹಾಕುವವರು ಯಾರು?

• ಅರುಣ್ ಕುಮಾರ್.ಜಿ

ಅಡ್ಡಕಸುಬಿ ಆನಂದನಿಗೆ ಡಾಕ್ಟರೇಟ್ ಬೇಕಂತೆ!

"ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುವ ನಾನು ಈವರೆಗೂ ದೀನ ದಲಿತರಿಗೆ, ಸಮಾಜದ ಎಲ್ಲಾ ವರ್ಗದ ನಾಗರಿಕರಿಗೆ ಸೇವೆ ಸಲ್ಲಿಸಿದ್ದೇನೆ. ನನ್ನ ಬಗೆಗಿನ ಎಲ್ಲ ಅಂಶಗಳನ್ನು ಪರಿಶೀಲಿಸಿ ತಮ್ಮ ವಿಶ್ವವಿದ್ಯಾಲಯದ ಪ್ರತಿಷ್ಠಿತ 'ಗೌರವ ಡಾಕ್ಟರೇಟ್' ಪದವಿಯನ್ನು ದಯಪಾಲಿಸಬೇಕಾಗಿ ವಿನಂತಿ"- ಎನ್ನುವ ಕವರಿಂಗ್ ಲೆಟರ್ ಬರೆದು ಗಲ್ಲಿ ಗಣೇಶೋತ್ಸವಗಳಲ್ಲಿ ತಾನು ಪಡೆದ ಹಾರ, ಶೀಲ್ಡುಗಳ ವಿವರಗಳನ್ನೂ, ತನ್ನ ಬಯೋಡೇಟಾವನ್ನೂ ಲಗತ್ತಿಸಿ ಕರ್ನಾಟಕದ ಎಲ್ಲಾ ಯೂನಿವರ್ಸಿಟಿಗಳಿಗೆ ಆನಂದಕುಮಾರ ಅರ್ಜಿ ಗುಜರಾಯಿಸಿದ್ದಾನೆ.



ಕಳೆದ ಮೂರ್ನಾಲ್ಕು ವರ್ಷಗಳಿಂದ ರಾಜ್ಯೋತ್ಸವ ಪ್ರಶಸ್ತಿಗಾಗಿ ಒಂದೇ ಸಮನೇ ಅರ್ಜಿ ವಗಾಯಿಸುತ್ತಲೇ ಇದ್ದಾನೆ. "ನಾಲ್ಕನೇ ಕ್ಲಾಸು ಓದಿದ್ದ ರಾಜ್‌ಕುಮಾರ್‌ಗೇ ಡಾಕ್ಟರೇಟ್ ಸಿಕ್ಕಿದೆ. ನಾನು ಎಸ್ಸೆಲ್ಸಿ ಓದಿದವನು ಇಷ್ಟೊಂದು ಸಾಧನೆ ಮಾಡಿದೀನಿ. ನಂಗ್ಯಾಕೆ ಡಾಕ್ಟರೇಟ್ ಸಿಗಬಾರದು?" ಎಂದು ಆನಂದ ಕಚ್ಚೆ ಪಕ್ಕ ಸರಿಸಿ ತೊಡೆ ತಟ್ಟುತ್ತಿದ್ದಾನೆ.

ಇವನಿಗೆ ಡಾಕ್ಟರೇಟು ನೀಡಬೇಕೋ? ತಲೆ ಸರಿಮಾಡುವ ಡಾಕ್ಟರರ ಬಳಿ ಈತನನ್ನು ಕಳಿಸಬೇಕೋ? ಯೂನಿವರ್ಸಿಟಿಗಳೇ ತೀರ್ಮಾನಿಸಬೇಕು!

...ಜೀವನ ಅಣ್ಣನನ್ನು ಇವನು ಕೊಂದ. ಇವನ ಅಣ್ಣನನ್ನು ಅವನು ಕೊಂದ. ಅವರ ಚಿಕ್ಕಿಗೆ ಈಗ ಇವನನ್ನೇ ಅವನು ಕೊಂದ. ನಾಳೆ ಅವನಿಗೂ ಅದೇ ಗತಿ ಎಂಬುದನ್ನು ಮಾತ್ರ ಅರಿಯದೇ ಹೋದ....

ಇದು ರಾಮಣ್ಣಗಾರ್ಡನ್ನಿನ ಸರಣಿ ಹತ್ಯೆಯ ಒಂದು ಎಳೆಯಷ್ಟೆ. ಇದೇ ನವೆಂಬರ್ 29ರ ಮಂಗಳವಾರದ ನಡುಹಗಲು ಬರುವವರೆಗೆ ಕಿಲಾಡಿ ಕೊಲೆಗಡುಕ ವೇಲು ಮುಗಿದು ಹೋಗಿದ್ದ. ಅಯ್ಯಪ್ಪ ಸ್ವಾಮಿಯ ಮಾಲೆಹಾಕಿ ತನಗೆ ತಾನೇ ಸ್ವಾಮಿ ಎಂದು ಕರೆಸಿಕೊಂಡ ಮಾತ್ರಕ್ಕೆ ಪಾಪ ಕಳೆದು ಹೋಗುತ್ತದೆಯೆಂದೂ, ದೇವರ ಮುಂದೆ ದುಷ್ಟನ ಕರಗಿ ನೀರಾಗುತ್ತದೆಯೆಂದೂ, ತನ್ನ ಪ್ರಾಣಕ್ಕೆ ಸ್ವಾಮಿಯಪ್ಪನೇ ಶ್ರೀರಕ್ಷೆಯೆಂದೂ ಆತ ಹಾಕಿದ ಲೆಕ್ಕಾಚಾರವೇ ಉಲ್ಟಾ ಹೊಡೆದಿತ್ತು. ಕೊಂದ ಪಾಪದ ಮುಂದೆ ಧರ್ಮದೇವರು ಎಲ್ಲಿ ಸುಳಿಯಲು ಸಾಧ್ಯ?

ಆ ಮಂಗಳವಾರದ ಕೊರೆಯುವ ಚಳಿಯಲ್ಲಿ ನಡುಹಗಲಲ್ಲೇ ವೇಲುಗೆ ಮುಹೂರ್ತ ನಿಕ್ಕಿಯಾಗಿತ್ತು. ಪಕ್ಕದ ಅಯ್ಯಪ್ಪ ಸ್ವಾಮಿಯ ಪೆಂಡಾಲಿನಿಂದ ಪೂಜೆ ಮುಗಿಸಿ ಇನ್ನೇನು ಪೂರ್ಣಿಮಾ ಟಾಕೀಸ್ ಹಿಂಭಾಗದ ತನ್ನ ಮನೆಯತ್ತ ಹೆಜ್ಜೆಯಿಡಬೇಕೆನ್ನುವಷ್ಟರಲ್ಲೇ ಕತ್ತಲಲ್ಲಿ ಏನೋ ಚಲಿಸಿದಂತಾಯ್ತು. ಅದು ಒಂದಲ್ಲ ಎರಡಲ್ಲ ಐದು ಮಂದಿಯಿದ್ದ ಕಿರಾತಕ ತಂಡ. ಎಲ್ಲರ ಕೈಯಲ್ಲೂ ಉದ್ದುದ್ದ ಲಾಂಗ್‌ಗಳು. ಬಹುಶಃ ಗುರುತು ಸಿಗದಿರಲಿ ಎಂದೇ ಮಂಕಿಕ್ಯಾಪ್ ಧರಿಸಿದ್ದರೇನೋ? ಏನಾಗುತ್ತದೆ ಎಂದು ಗೊತ್ತಾಗುವ ಮೊದಲೇ ಸಾವಿನ ಧೂತರಂತೆ ಅವರು ವೇಲುವನ್ನು ಸುತ್ತುವರೆದಾಗಿತ್ತು. ತಲೆಗೊಂದು ಲಾಂಗ್ ಬೀಸುವ ಹೊತ್ತಿಗಾಗಲೇ ವೇಲು ರಕ್ತದ ಕಾರಂಜಿಯಂತೆ ನೆಲಕ್ಕೊರಗಿದ್ದ. ತಲೆ ಸೀಳಿಹೋಗಿತ್ತು. ಮುಖ ಬಗೆದ ಹಲಸಿನ ತೊಳೆಯಂತೆ ಮುದ್ದೆಗೊಂಡಿತ್ತು. ಮತ್ತೊಂದು ಲಾಂಗ್ ಏಟಿಗೆ ಹೊಟ್ಟೆಯ ಕರುಳೇ ಹೊರಬಂದಿತ್ತು.

ಎತ್ತಿಂದೆತ್ತ ನೋಡಿದರೂ ವೇಲು ಬದುಕುವುದು ಸಾಧ್ಯವೇ ಇರಲಿಲ್ಲ. ಬಂದ ಆರೆ ಕ್ಷಣದಲ್ಲೇ ಕೊಚ್ಚಿಹಾಕಿದ ರಕ್ತಪಿಪಾಸು ಪಡೆ ಅರೆ ಕ್ಷಣದಲ್ಲೇ ಮಾಯವಾಗಿ ಹೋಗಿತ್ತು. ಇದೇ ರಾಮಣ್ಣಗಾರ್ಡನ್ನಿನ ಕ್ರುದ್ಧ ಯುವಕ ರುದ್ರನ ಸುದೀರ್ಘ ಶಿಕಾರಿಯೊಂದು ಅವತ್ತು ಫಲಿಸಿತ್ತು. ಪೂರ್ಣಿಮಾ ಟಾಕೀಸ್ ಹತ್ತಾ ಸರಣಿಯಲ್ಲಿ ಬಹುಶಃ ಬದ್ಧ ಹಣಗಳ ಪೈಕಿ ಇದು ನಾಲ್ಕನೆಯದಿರಬೇಕು.

ಹತ ವೇಲುವಿಗಿನ್ನೂ 30ರ ಹರೆಯ. ಆತ ಇಬ್ಬರು ಮಕ್ಕಳ ತಂದೆ. ಮದುವೆಯಾಗಿನ್ನು ಐದು ವರ್ಷ ಕಳೆದಿಲ್ಲ. ರವೀಂದ್ರ ಕಲಾಕ್ಷೇತ್ರದ ಮತ್ತೊಂದು ಪಾರ್ಶ್ವದಲ್ಲಿರುವ ಪೂರ್ಣಿಮಾ ಟಾಕೀಸ್ ಹಿಂಭಾಗದಲ್ಲಿರುವ ರಾಮಣ್ಣಗಾರ್ಡನ್ ಎಂಬ ಸ್ಲಮ್ಮಿಗೆ ಸೈಲೆಂಟ್ ಸುನೀಲನನ್ನು ಮೊದಲು ಕರೆತಂದವನೇ ಈ ವೇಲು. ಉದ್ದಕ್ಕೆ ಕೊಕ್ಕು ಮೂಗಿನವನಾಗಿದ್ದರಿಂದ ಜನ ಈತನನ್ನು ಕೊಕ್ಕುವೇಲು ಎಂದೇ ಕರೆಯುತ್ತಿದ್ದರು. ಮೇಲ್ನೋಟಕ್ಕಿದು ಯಃಕಶ್ಚಿತ್ ಗ್ಯಾಂಗ್‌ವಾರ್‌ನಂತೆ ಕಂಡರೂ ಇದರ ಆಳದಲ್ಲಿರುವುದು ಕಲಾಸಿಪಾಳ್ಯದ ಕೂಲಿ ಮಾಫಿಯಾ!

ಸದ್ಯ ಕಲಾಸಿಪಾಳ್ಯದ ತರಕಾರಿ ಮಾರ್ಕೆಟ್ ಅನ್ನು ಆಳುತ್ತಿರುವವನು ಸೈಲೆಂಟ್ ಸುನೀಲನ ಬಲಗೈ ಬಂಟ ಮಾರ್ಕೆಟ್ ವೇದಿ. ಇಲ್ಲಿಗೆ ಮೂರು ವರ್ಷದ ಹಿಂದೆ ಮಾರ್ಕೆಟ್ ಕೂಲಿಗಳ ದೊರೆಯಂತಿದ್ದ ಗೇಟ್ ಗಣೇಶನನ್ನು ವ್ಯವಸ್ಥಿತವಾಗಿ ಮುಗಿಸಿದವನು ವೇದಿ. ಪ್ರತಿನಿತ್ಯ ಎಲ್ಲಿಂದಲೋ ತರಕಾರಿಯ ಮೂಟೆಗಳನ್ನು ಹೊತ್ತು ತರುವ ನೂರಾರು ಲಾರಿಗಳಿಂದ ಕೆಳಗಿಳಿಯಬ್ಬು ಮೂಟೆಯೊಂದನ್ನು ಇಳಿಸಿ ಮಂಡಿಗೆ ಹಾಕಿದನೆಂದರೆ ಆತ ಮಾಲೀಕನಿಂದ ಸಿಗುವ ಕೂಲಿ ಹತ್ತು ರೂಪಾಯಿ. ಇದರಲ್ಲಿ ಐದು ರೂಪಾಯಿ ಮಾತ್ರ ಕೂಲಿ ತಾನಿಟ್ಟುಕೊಂಡು ಉಳಿದೈದು ರೂಪಾಯಿಯನ್ನು ಕೂಲಿಗಳನ್ನಾಳುವ ಹಂತಕ ರೌಡಿಗೆ ಎತ್ತಿಡಬೇಕು. ಇದು ಕಲಾಸಿಪಾಳ್ಯದಲ್ಲಿನ ಅನಧಿಕೃತ ಅಧಿನಿಯಮ.

ಹೀಗೆ ಕೂಲಿಗಳ ಬೆವರನ್ನು ಸುರುವಿನಲ್ಲಿ ದೋಚುತ್ತಿದ್ದ ರಾಮಣ್ಣನನ್ನು ಅಯ್ಯೂಬ್ ಕೊಂದುಹಾಕಿದ. ಏಕೆಂದರೆ ಆ ಕಾಲಕ್ಕೆ ಇದು ದಿನವೊಂದಕ್ಕಿದು 20 ಸಾವಿರ ರೂಪಾಯಿಗಳ ಖದಾಯಿಯಾಗಿತ್ತು. ಮುಂದೆ ಅಯ್ಯೂಬ್ ಕೂಲಿ ದೊರೆಯಾದ ಮೇಲೆ ಅಯ್ಯಾಬಾಬು ಎಂಬ ಮತ್ತೊಬ್ಬ ಹಂತಕ ತಲೆ ಎತ್ತಿದ್ದ. ತನ್ನ ಶಿಷ್ಯ ಕೋಳಿ ಜುಟ್ಟುವನ್ನು ಬಿಟ್ಟು ಅಯ್ಯೂಬ್‌ನನ್ನು ಮುಗಿಸಿದ. ಆ ಜಾಗಕ್ಕೆ ಬಂದ



ಕೋಳಿಜುಟ್ಟುವನ್ನು ತನ್ನ ಮತ್ತೊಬ್ಬ ಶಿಷ್ಯ ಬೇಬಿಕೃಷ್ಣನನ್ನು ಛೂಬಿಟ್ಟು ಕೊಲ್ಲಿಸಿದ. ಈ ಬಾರಿ ತರಕಾರಿ ಮಾರ್ಕೆಟ್ಟಿಗೆ ಬೇಬಿಕೃಷ್ಣನನ್ನೂ ಪಕ್ಕದ ಮಂಡಿಗೆ ಗೇಟ್‌ಮೂರ್ತಿಯನ್ನೂ ಪ್ರತ್ಯೇಕವಾಗಿ ಅಧಿಪತಿಗಳನ್ನಾಗಿಸಿದ ಡಾನ್ ಅಯ್ಯಾಬಾಬು ಮೂರನೇ ಹತ್ಯೆಯೊಂದಕ್ಕೆ ರೆಡಿ ಮಾಡಿದ್ದು ಗೇಟ್ ಗಣೇಶ ಎಂಬ ಮರಿ ಪಾತಕಿಯನ್ನು.

ಏಕೆಂದರೆ ಅಯ್ಯಾಬಾಬು ವಿರುದ್ಧ ಬೇಬಿಕೃಷ್ಣನೇ ತಿರುಗಿಬಿದ್ದಿದ್ದ. ಈ ಬೇಬಿಕೃಷ್ಣನನ್ನು ಮಾರುಕಟ್ಟೆಯ ಹೆಬ್ಬಾಗಿಲಲ್ಲೇ ಕೊಚ್ಚಿಹಾಕಿದ ಗೇಟ್‌ಗಣೇಶ ಕಲಾಸಿಪಾಳ್ಯದ ಮಾರುಕಟ್ಟೆಯ

ಕಲಾಸಿಪಾಳ್ಯದ ಕೂಲಿ ಮಾಫಿಯಾ

ಕೀಚಕ ರೌಡಿ ಕೊಕ್ಕುವೇಲು ಖತಮ್



ಕೂಲಿಗಳಿಗೆ ಹೊಸ ದೊರೆಯಾಗಿದ್ದ. ಆಗ ಚಾಮರಾಜಪೇಟೆಗೆ ಶಾಸಕನಾಗಿದ್ದವ್ನು ಮಾರ್ಕೆಟ್ ದೇವಿ. ಕೂಲಿದೊರೆ ಗೇಟ್‌ಗಣೇಶನೇ ಆರ್.ವಿ.ದೇವರಾಜ್ ಅಭಿಮಾನಿಗಳ ಸಂಘದ ಅಧ್ಯಕ್ಷನಾದ. ದೇವರಾಜ್ ಸೋತು ಜಮೀರ್ ಶಾಸಕನಾಗುವ ಹೊತ್ತಿಗೆ ಗಾಡ್‌ಫಾದರ್ ಅಯ್ಯಾಬಾಬುವೇ ಖಾಯಿಲೆಗೆ ಬಿದ್ದು ಸತ್ತು ಹೋಗಿದ್ದ. ಸಮಸ್ತ ಮಾರ್ಕೆಟ್‌ನ ಏಕಾಧಿಪತಿಯಂತೆ ಮೆರೆಯುತ್ತಿದ್ದ ಗೇಟ್‌ಗಣೇಶನೂ ಹೆಚ್ಚುಕಾಲ ಬದುಕಲಿಲ್ಲ. ಏಕೆಂದರೆ ಆ ಹೊತ್ತಿಗಾಗಲೇ ಸೈಲೆಂಟ್ ಸುನೀಲನ ಬಂಟ ವೇದಿ ತಲೆಯೆತ್ತಿದ್ದ. ಉಪಾಯವಾಗಿ ಹುಡುಗರನ್ನು ಬಿಟ್ಟು ಇದೇ ಕಲಾಸಿಪಾಳ್ಯದ ಮಾರ್ಕೆಟ್ ಸಂದಿಯಲ್ಲೇ ಗೇಟ್‌ಗಣೇಶನನ್ನು ವೇದಿ ಖತಂಗೊಳಿಸಿಬಿಟ್ಟ.


ಬೆಂಗಳೂರಿನ ಜನ ಪ್ರತಿನಿತ್ಯ ತಿನ್ನುವ ಕಾಯಿಪಲ್ಯೆಯ ಸುತ್ತ ಎಂಥ ಭಯಾನಕ ರಕ್ತ ಚರಿತ್ರೆಯಿದೆಯೋ ಅಷ್ಟೇ ಅಸಹ್ಯದ ಆಮದನಿಯೊಂದು ಸದ್ದಿಲ್ಲದೇ ರೂಪುಗೊಂಡಿದೆ. ಇಂಥದ್ದೊಂದು ಮಾಫಿಯಾದ ಹಾಲಿ ದೊರೆ ಮಾರ್ಕೆಟ್‌ವೇದಿಯ ಇಬ್ಬರು ನಂಬಿಕಸ್ಥ ಬಂಟರ ಪೈಕಿ ತರಕಾರಿ ಮಾರ್ಕೆಟ್ಟಿನ ಒಂದು ಗೇಟನ್ನು ನಿಯಂತ್ರಿಸುವ ಜೈಪಾಲ್ ಓರ್ವನಾದರೆ ಇನ್ನೊಂದು ಗೇಟಿಗೆ ಪಾರುಪತ್ತೇದಾರನಂತಿದ್ದವನು ಇದೇ ಕೊಕ್ಕುವೇಲು.

ಈತನ ತಂದೆ ಕೀರೆ ಉರ್ಫ್ ಮುನಿವೇಲು ಎಂಬಾತನೂ ಇದೇ ಮಾರ್ಕೆಟ್‌ನ ಹಳೇ ರೌಡಿ. ಇಲ್ಲಿಗೆ ಹತ್ತು ವರ್ಷದ ಹಿಂದೆ ವಿಕ್ಟರ್ ಬದ್ರಿ ಜಿದ್ದಾಜಿದ್ದಿಯಲ್ಲಿ ತನ್ನ ದುಷ್ಮನ್‌ಗಳ ಕೈಯಲ್ಲಿ ಕೀರೆ ಭೀಕರವಾಗಿ ಕೊಲೆಯಾದ. ಆತನಿಗೆ ಇಬ್ಬರು ಹೆಂಡಿರು. ಈ ಪೈಕಿ ಮೊದಲ ಪತ್ನಿಗೆ ಸುಬ್ರಮಣಿ ಉರ್ಫ್ ಸುಬ್ರ ಮತ್ತು ವೇಲು ಅಲಿಯಾಸ್ ಕೊಕ್ಕುವೇಲು ಎಂಬ ಧೂರ್ತಪುತ್ರರಾದರೆ ಇನ್ನೊಬ್ಬ ಪತ್ನಿಯ ಮಗನೇ ಸೀನು. ವರ್ಷದ ಹಿಂದಷ್ಟೇ ಸೀನು ಮತ್ತು ವೇಲು ಸೇರಿಕೊಂಡು ಮಾರ್ಕೆಟ್ ಶೇಖರನನ್ನು ಕೊಂದರು. ಇದಕ್ಕೂ ಮುನ್ನ ವೇಲು ಕೈಯಲ್ಲಿ ವಿನಾಕಾರಣ ಹತನಾದವನು ಅಶ್ವತ್ಥ ನಾರಾಯಣ ಅಲಿಯಾಸ್ ಸೇಹು. ಈತನೇ ರುದ್ರನ ಅಣ್ಣ!

ಈ ರುದ್ರನದು ದುರಂತಕತೆ. ಇದೇ ರಾಮಣ್ಣಗಾರ್ಡನ್ನಿನ ಬಿಲ್ಡಿಂಗ್ ಕಂಟ್ರಾಕ್ಟರ್ ಓರ್ವನ ಮಗ ರುದ್ರ. ತನ್ನ ಅಕ್ಕತಂಗಿಯರ ಮಾನಕಾಪಾಡಲೆಂದೇ ರೌಡಿ ಎನ್ನಿಸಿಕೊಂಡವನು. ಅದು 1999ರ ಕಾಲ. ಆಗಿನ್ನೂ ರುದ್ರ ಕಾಲೇಜು ವಿದ್ಯಾರ್ಥಿ. ಅದೇ ಹೊತ್ತಿಗೆ ರಾಮಣ್ಣಗಾರ್ಡನ್ನಿನಲ್ಲಿ ವೇಲು ಮತ್ತಾತನ ಅಣ್ಣ ಸುಬ್ರನ ಹಾವಳಿ ಶುರುವಾಗಿತ್ತು. ಆಗಿನ್ನೂ ಸೈಲೆಂಟ್ ಸುನೀಲ ಈ ಮಟ್ಟಕ್ಕೆ ಬೆಳೆದಿರಲಿಲ್ಲ. ಗೆದ್ದನ ತಮ್ಮ ಕಟ್ಟಿಯ ಜೊತೆ ಬಿದ್ದು ರಾಜಾಜಿನಗರದ ಪೊಲೀಸ್ ಪೇದೆ ಶಿಟ್ಟಾಳನನ್ನು ಕೊಂದು ತಲೆಮರೆಸಿಕೊಂಡಿದ್ದ ಸುನೀಲ ಆ ಹೊತ್ತಿಗೆ ಅಡ್ಡೆ ಹಾಕುತ್ತಿದ್ದದ್ದು ಇದೇ ರಾಮಣ್ಣಗಾರ್ಡನ್ನಿನಲ್ಲಿ. ಅದಕ್ಕೆ ಕಾರಣನಾದವನು ಮಾರ್ಕೆಟ್‌ವೇದಿ. ಮಾರ್ಕೆಟ್‌ವೇದಿಗೆ ಆಗ ಶಿಷ್ಯನಾಗಿದ್ದ ವೇಲು ವೇದಿಗೆ ಗುರುವಾಗಿದ್ದ ಸುನೀಲನನ್ನು ಕರೆತಂದು ತನ್ನ ಮನೆ ಪಕ್ಕ ಅಡ್ಡೆ ಹಾಕುತ್ತಿದ್ದನು. ತಾನು ಇದೇ ರಾಮಣ್ಣ

ಗಾರ್ಡನ್ನಿಗೆ ರೌಡಿ ಎನ್ನಿಸಿಕೊಳ್ಳಲು ಹಾವಳಿ ಶುರುವಿಟ್ಟಿದ್ದು ಅಂತಿಮವಾಗಿ ರುದ್ರನ ದುರಂತಕ್ಕೆ ಕಾರಣವಾಯಿತು.

ಅದೊಂದು ದಿನ ರುದ್ರನ ತಂಗಿ ಅಂಗಡಿಗೆಂದು ಬರುವಾಗ ಸೊಕ್ಕಿಗೆ ಬಿದ್ದ ವೇಲು ತನ್ನ ಎರಡು ನಾಯಿಗಳನ್ನು ಚೈನು ಸಮೇತ ಎಳೆತಂದಿದ್ದೇ ಆಕೆಯ ಮೇಲೆ ಛೂಬಿಟ್ಟ. ನಾಯಿ ಆಕೆಯ ಮೇಲೆ ಎರಗಿದಾಕ್ಷಣ ಆಕೆಯ ರವಿಕೆಯೇ ಹರಿದುಹೋಗಿತ್ತು. ಕಣ್ಣೀರಿಡುತ್ತಲೇ ಆಕೆ ಇದನ್ನು ಅಣ್ಣ ರುದ್ರನ ಬಳಿ ಹೇಳಿಕೊಂಡಳು. ವಿಧಿಯಿಲ್ಲದೆ ರುದ್ರ ಇದನ್ನು ವೇಲು ಅಣ್ಣ ಸುಬ್ರನಿಗೆ ಹೇಳಿಕೊಂಡು ನ್ಯಾಯ ಕೊಡುವಂತೆ ಬೇಡಿಕೊಂಡ. ಆದರೆ ಸುಬ್ರ ಇನ್ನೂ ಕೀಚಕ. ತಂಗಿಯ ಮೇಲಾದ ದೌರ್ಜನ್ಯವನ್ನು ಹೇಳಿಕೊಂಡ ತಪ್ಪಿಗೆ ರುದ್ರನ ಕಪಾಳಕ್ಕೇ ನಾಲ್ಕುಬಾರಿಸಿಬಿಟ್ಟ.



ಅಲ್ಲಿಗೆ ರುದ್ರನ ಆಕ್ರೋಶ ಸ್ಫೋಟಗೊಂಡಿತ್ತು. ಅದೊಂದು ದಿನ ತನ್ನ ಐದಾರು ಮಂದಿ ಸ್ನೇಹಿತರನ್ನು ಜೊತೆ ಹಾಕಿಕೊಂಡಿದ್ದೇ ಪೂರ್ಣಿಮಾ ಟಾಕೀಸ್ ಸಂದಿಯಲ್ಲಿ ನಿಂತು ಹಾವಳಿಯಿಡುತ್ತಿದ್ದ ಸುಬ್ರನನ್ನೇ ಕೊಚ್ಚಿಹಾಕಿದ. ಜೈಲಿಗೂ ಹೋದ. ಇತ್ತಾಗಿದ್ದೇ ತಡ ತಮ್ಮ ವೇಲು ರುದ್ರನ ಮನೆ ಮೇಲೆ ದಾಳಿಯಿಟ್ಟ. ಹೆದರಿದ ರುದ್ರನ ಅಕ್ಕತಂಗಿಯರು ಮನೆಯನ್ನೇ ತೊರೆದು ವಲಸೆಹೋದರು. ಆಗ ರುದ್ರನ ಕೈಹಿಡಿದವನು ಭಕ್ತಿ ಗಾರ್ಡನ್ನಿನ ಹಳೇ ರೌಡಿ ಚಾಮರಾಜು. ಅಣ್ಣ ಸುಬ್ರನ ಕೊಲೆಗೆ ತಮ್ಮ ವೇಲು ಪ್ರತೀಕಾರ ಕೈಗೊಳ್ಳಬೇಕಿದ್ದದ್ದು ರುದ್ರನ ಮೇಲೆ ತಾನೇ?

ಆದರೆ ವೇಲು ತನ್ನ ವಿವೇಚನೆಯನ್ನೇ ಕಳೆದುಕೊಂಡಿದ್ದ. ಜಿದ್ದಾಜಿದ್ದಿಗೂ ಅಣ್ಣನ ಹತ್ಯೆಗೂ ಏನೇನೂ ಸಂಬಂಧವಿಲ್ಲದ ರುದ್ರನ ಅಣ್ಣ ಅಶ್ವತ್ಥನಾರಾಯಣ ಅಲಿಯಾಸ್ ಸೇಹುವನ್ನು 2005ರ ಜುಲೈನಲ್ಲಿ ಹಿಂಬಾಲಿಸಿದ್ದೇ ಬಸವನಗುಡಿ ಪೋಸ್ಟ್ ಆಫೀಸ್ ಬಳಿ ನಡುರಸ್ತೆಯಲ್ಲೇ ಕೊಂದುಬಿಟ್ಟ. ರುದ್ರನ ಮೇಲಿನ ಜಿದ್ದಿಗೆ ವೇಲು ಆತನ ಅಣ್ಣನನ್ನು ಮುಗಿಸಿದ್ದು ಆತನ ವಿಕೃತಿ ಮತ್ತು ಪೈಶಾಚಿಕ ಮನಸ್ಥಿತಿಯ ಧ್ಯೋತಕವಾಗಿತ್ತು. ಜೈಲಲ್ಲಿದ್ದ ರುದ್ರ ಶವಸಂಸ್ಕಾರಕ್ಕೆ ಬಂದವನು ಎದೆಬಡಿದು ಕೊಂಡು ಕಣ್ಣೀರಿಟ್ಟ. ಅಣ್ಣನ ಪತ್ನಿ ಮತ್ತು ನಾಲ್ವರು ಮಕ್ಕಳು ಬೀದಿಪಾಲಾದರು. ತಂಗಿಯರ ಮಾನ ಕಾಪಾಡಲು ನಿಂತು ಆತನ ಬದುಕೇ ನರಕವಾಗಿತ್ತು. ಅತ್ತ ಜೈಲಲ್ಲಿ ಸುನೀಲನ ಗ್ಯಾಂಗ್ ರುದ್ರನ ಮೇಲೆ ಹಲ್ಲೆಗೆ ಯತ್ನಿಸಿತ್ತು.



ಸೇಹು ಹತ್ಯೆಯಲ್ಲಿ ಜೈಲುಪಾಲಾದ ವೇಲು ಆರೇ ತಿಂಗಳಿಗೆ ಜಾಮೀನಿನ ಮೇಲೆ ಹೊರಬಿದ್ದ. ಮಾರ್ಕೆಟ್ ವೇದಿಯ ಅಧಿಪತ್ಯದ ಕೂಲಿ ಮಾಫಿಯಾದಲ್ಲಿ ತನ್ನದೇ ಸಾಮ್ರಾಜ್ಯವೊಂದನ್ನು ಕಟ್ಟಿಕೊಂಡ. ತರಕಾರಿ ಮಾರ್ಕೆಟ್‌ನ ಒಂದು ಗೇಟನ್ನು ಆತನಿಗೆ ವೇದಿ ಬಿಟ್ಟುಕೊಟ್ಟಿದ್ದ. ಅದು ಕಮ್ಮಿಯೆಂದರೂ ದಿನಕ್ಕೆ ಐದು ಸಾವಿರ ರೂಪಾಯಿಯ ಆಮದನಿ. ಮಾರ್ಕೆಟ್ ವೇದಿಯ ನೇತೃತ್ವದ ಇಡೀ ಕಲಾಸಿಪಾಳ್ಯದ ಕೂಲಿ ಮಾಫಿಯಾ ಸೈಲೆಂಟ್ ಸುನೀಲನ ಕೈವಶವಾಯಿತು. ಹಣ್ಣಿನ ಮಂಡಿ ಪೂರ್ತಿ ಗೇಟ್‌ಮೂರ್ತಿಯ ಅಧೀನಕ್ಕೊಳಪಟ್ಟರೆ, ಆತನ

ಬಲಗೈಬಂಟ ಮಾಮಂಡಿ ಇಡೀ ಸಪೋಟಾ ವಿಭಾಗವನ್ನು ನಿಯಂತ್ರಿಸತೊಡಗಿದ. ಸುನೀಲನ ಬಂಟರಾದ ಒಂಟೆ, ಬಲರಾಮ ಇಡೀ ಮಾರ್ಕೆಟ್ ವಿಂಟರ ಬದ್ದಿಯನ್ನು ನಿಭಾಯಿಸಲು ಸುಬ್ರಮಣಿ, ಪುಡಿ ರೌಡಿಗಳಾದ ದೇವಾ, ಆದಿಮೂಲ, ಮಾರ್ಕೆಟ್‌ಶೇಖರನ ಹಂತಕರಾದ ಕಾಟನ್‌ಪೇಟೆಯ ದೀಪು ಮತ್ತು ಬಾಬು ಕೊತ್ತಂಬರಿ ಸೊಪ್ಪು ಮಂಡಿಯ ಡಾನ್ ಸೀನ, ಕೋಡುಬಳೆ ಸೀನ, ಮರ್ಡರ್‌ಗಣೇಶ್ ಹೀಗೆ ಹಿಂಡುಗಟ್ಟಲೇ ರೌಡಿಗಳೆಲ್ಲ ಕಲಾಸಿಪಾಳ್ಯದ ವೇದಿಯ ಅಧಿಪತ್ಯದಲ್ಲಿ ಹಾವಳಿಯಿಡಲಾರಂಭಿಸಿದ್ದರು.

ಮಾರ್ಕೆಟ್ ಕೂಲಿ ಮಾಫಿಯಾದ ಉತ್ತರಾರ್ಧದಲ್ಲಿ ಪಾಲು ಕೇಳಿದನೆಂದು ದೊಡ್ಡ ಗೆದ್ದ ವೇಲು, ಕಾಟನ್‌ಪೇಟೆಯ ದೀಪು ಮತ್ತು ಬಾಬು ಸೇರಿಕೊಂಡಿದ್ದೇ ಮಾರ್ಕೆಟ್ ಶೇಖರ್‌ನೆಂಬ ಮತ್ತೊಬ್ಬ ರೌಡಿಯನು ಅಟ್ಟಾಡಿಸಿ ಕೊಂದರು. ಹಾಗೇ ಎರಡನೇ ಕೊಲೆ ಮಾಡಿ ಜೈಲು ಸೇರಿದ್ದ ವೇಲು ಮೂರೇ ತಿಂಗಳಿಗೆ ಹೊರಬಿದ್ದ. ಕೂಲಿ ಮಾಫಿಯಾದ ಆದಾಯವಿತ್ತಲ್ಲ, ಆದರ ಜೊತೆ ಅಧಿಕಾರವೂ ಸಿಕ್ಕಬೇಕ್ಕರೆ ತನ್ನನ್ನು ಹಿಡಿಯುವವರೇ ಇಲ್ಲ ಎಂದು ಭಾವಿಸಿದ ವೇದಿ ಕಳೆದ ಪಾಲಿಕೆ ಚುನಾವಣೆಯಲ್ಲಿ ಪಕ್ಷೇತರನಾಗಿ ಕಣಕ್ಕಿಳಿದರೆ ಆತನ ವಿರುದ್ಧ ಅಖಾಡಕ್ಕಿಳಿದವನು ಮತ್ತೊಬ್ಬ ಪಾತಕಿ ಮಲೆಯಾಳಿ ಪ್ರವೀಣ.

ಹಾಗಂತ ವೇದಿ ವಿರುದ್ಧ ಪ್ರವೀಣ ತಾನೇ ನೇರವಾಗಿ ಸ್ಪರ್ಧಿಸಲಿಲ್ಲ. ತನ್ನ ಛೇಲಾ ಪುಗಲ್ ಎಂಬ ಹುಡುಗನನ್ನು ನಿಲ್ಲಿಸಿದ್ದ. ಆದರೆ ಗೆದ್ದದ್ದು ಕಾಂಗ್ರೆಸ್ ಅಭ್ಯರ್ಥಿ ಅಪ್ಪಯ್ಯ ಎಂಬ ತಮಿಳು ಹೆಂಗಸು. ಮಲೆಯಾಳಿ ಪ್ರವೀಣನ ಶಿಷ್ಯ ಎರಡನೇ ಸ್ಥಾನಕ್ಕೆ ಬಂದರೆ ವೇದಿ ಮೂರನೇ ಸ್ಥಾನಕ್ಕಿಳಿದಿದ್ದ. ಪ್ರವೀಣನ ಪಡೆಗೂ ವೇದಿ ಗ್ಯಾಂಗಿಗೂ ಎಲೆಕ್ಷನ್ನಿನಲ್ಲಿ ಹೊಡೆದಾಟ ನಡೆಯಿತು. ವೇದಿ ಗಿಟ್ಟಿಸಿದ ಒಟ್ಟು ಮೂರು ಸಾವಿರ ಮತಗಳ ಪೈಕಿ ವೇಲು ಒಬ್ಬನೇ ರಾಮಣ್ಣ ಗಾರ್ಡನ್ನಿನಿಂದ ಬರೋಬ್ಬರಿ ಸಾವಿರ ಓಟುಗಳನ್ನು ಹಾಕಿಸಿದ್ದ. ಎಲೆಕ್ಷನ್ ಮುಗಿದ ಆರೇ ತಿಂಗಳಿಗೆ ರುದ್ರ ಜೈಲಿನಿಂದ ಹೊರಬಿದ್ದ. ಒಂದೆಡೆ ರಾಮಣ್ಣ ಗಾರ್ಡನ್ನಿಗೆ ಮತ್ತೆ ಕಾಲಿಡಲಾಗದ ಸಿಟ್ಟು, ಮತ್ತೆ ತನ್ನ ಅಣ್ಣನನ್ನು ಅನ್ಯಾಯವಾಗಿ ಕೊಂದ ಆಕ್ರೋಶ, ಮ... ದೊಂದೆಡೆ ಅಂತರಪಿಶಾಚಿಗಳಂತಾದ ತನ್ನ ಅಕ್ಕತಂಗಿಯರ ದುರ್ಗತಿ, ಇನ್ನೊಂದೆಡೆ ತನ್ನ ಬದುಕೇ ಮೂರಾಬಟ್ಟೆಯಾದ ಅಸಹಾಯಕತೆ; ಎಲ್ಲವನ್ನೂ ಸಹಿಸಿಕೊಂಡೇ ಕುಳಿತಿದ್ದ ರುದ್ರ ಇಷ್ಟೆಲ್ಲಕ್ಕೂ ಮೂಲ ಕಾರಣನಾದ ವೇಲುವನ್ನು ಹೇಗೆ ತಾನೇ ಮರೆಯಲು ಸಾಧ್ಯ?


ಅದೆಷ್ಟು ರಾತ್ರಿ ನಿದ್ದೆಗೆಟ್ಟು ಸೇಡು ಕಾತರಿಸುತ್ತಿದ್ದನೋ? ಅದೆಂಥ ಆಕ್ರೋಶ ಕುದಿಯುತ್ತಿತ್ತೋ? ಅದಕ್ಕೊಂದು ಗಳಿಗೆ ಕೂಡಿಬಂದಿದ್ದು! ನವೆಂಬರ್ 29ರ ಮಂಗಳವಾರ ಬೆಳಗಿನ ಜಾವಕ್ಕೆ ವೇಲು ಪ್ರತಿವರ್ಷದಂತೆ ಈ ವರ್ಷವೂ ಅಯ್ಯಪ್ಪ ಮಾಲೆ ಹಾಕುತ್ತಾನೆಂಬ ಮಾಹಿತಿ ಮೊದಲೇ ಆತನಿಗಿತ್ತು. ಆದರೆ ಯಾಮಾರಿದ್ದು ವೇಲು. ಅದೆಂಥ ಜಿದ್ದಿದ್ದರೂ ಅಯ್ಯಪ್ಪ ಮಾಲೆ ಹಾಕಿದ ಕಾರಣಕ್ಕೆ ಯಾರೂ ತನ್ನನ್ನು ಮುಟ್ಟಲಾರರು ಎಂದೇ ಭಾವಿಸಿದ್ದ. ಆತ ಕೊಲ್ಲಲೆಂದೇ ನಿರ್ಧರಿಸಿದ ರುದ್ರನಿಗೆ ದೈವ-ಧರ್ಮ ಯಾವ ಲೆಕ್ಕ?

• ರಾ. ಸೋಮನಾಥ್

ಮಲೆಯಾಳಿ ಪ್ರವೀಣನ ಮರ್ಮ


ವೇಲು ಹತ್ಯೆಗೂ ಇದ್ದಕ್ಕಿದ್ದಂತೆ ಆತನ ಎದುರಾಳಿ ಗುಂಪಿನ ಮಲೆಯಾಳಿ ಪ್ರವೀಣನ ಬಂಧನಕ್ಕೂ ಏನೋ ಬಾದರಾಯಣ ಸಂಬಂಧವಿರುವಂತಿದೆ. ವೇಲು ಹತ್ಯೆಗೂ ಎರಡು ದಿನಗಳ ಮೊದಲೇ ಸಿಸಿಬಿ ಪೊಲೀಸರು ಪ್ರವೀಣನನ್ನು ಹಿಡಿದು ತಂದಿದ್ದರು. ಕೇರಳದ ಯಾವುದೋ ಅಡಗುತಾಣದಲ್ಲಿ ಸಿಕ್ಕಿಬಿದ್ದ ಮಲೆಯಾಳಿ ಪ್ರವೀಣ ಏಕಾಏಕಿ ಭೂಗತನಾದನೆಂದರೆ ಅದರಲ್ಲಿ ಮತ್ತೇನೋ ಮರ್ಮವಿದೆಯೆಂದೇ ಅರ್ಥ.

ಸದ್ಯ ಬೆಂಗಳೂರು ಅಂಡರ್‌ವರ್ಲ್ಡ್ ಮಟ್ಟಿಗೆ ಭೀಕರ ಜಿದ್ದಾಜಿದ್ದಿ ಆಂತಿದ್ದರೆ ಅದು ಕವಳ ಮತ್ತು ಕುಟ್ಟಿರಾಜರ ನಡುವೆ. ನಿನ್ನೆ ಮೊನ್ನೆಯಷ್ಟೇ ಅವಳಿ ಜವಳಿಗಳಂತಿದ್ದ ಕುಟ್ಟಿರಾಜ ಮತ್ತು ಕವಳ ಈಗ ಒಬ್ಬರನ್ನೊಬ್ಬರು ಮುಗಿಸಲು ಪರಸ್ಪರ ಕತ್ತಿಮಸೆಯುತ್ತಿದ್ದಾರೆ. ಕವಳನ ಬೆನ್ನಿಗೆ ಇಡೀ ಸೈಲೆಂಟ್ ಸುನೀಲನ ಪಡೆಯಿದ್ದರೆ ಕುಟ್ಟಿ-ರಾಜರ ಜೊತೆ ಮಲೆಯಾಳಿ ಪ್ರವೀಣ ಮತ್ತು ಹಳೇ ಪಾತಕಿ ಚಾಮರಾಜು ಕೈಜೋಡಿಸಿದ್ದಾರೆ. ಎರಡೂ ಸಮಬಲವಿರುವ ಸಿಂಡಿಕೇಟುಗಳೇ. ಪ್ರವೀಣ ಖತರ್‌ನಾಕ್ ಸುನೀಲ ಮತ್ತು ಕವಳ ಸದ್ಯ ಪರಪ್ಪನ ಅಗ್ರಹಾರ ಜೈಲಲ್ಲಿದ್ದಾರಾದ್ದರಿಂದ ಕುಟ್ಟಿ-ರಾಜ ಸಮಯ ಕಾಯುತ್ತಿದ್ದಾರೆ. ಈ ಮಧ್ಯೆಯೇ ರುದ್ರನ ಗ್ಯಾಂಗ್ ವೇದಿಯ ಬಂಟ ವೇಲುವನ್ನು ಮುಗಿಸಿದೆ.



ಮೇಲ್ನೋಟಕ್ಕಿದು ತನ್ನ ಅಣ್ಣನ ಹತ್ಯೆಗೆ ರುದ್ರ ಕೈಗೊಂಡ ಸೇಡಿನಂತೆ ಕಂಡರೂ ಆಳದಲ್ಲಿ ಎರಡು ರಕ್ತಸಿಕ್ತ ಕೂಟಗಳ ನಡುವಿನ ರಕ್ತಪಾತ ಮುಂದುವರಿಕೆಯೆ. ಏಕೆಂದರೆ ರುದ್ರನ ಬೆನ್ನಿಗಿರುವುದು ಹಳೇಪಾತಕಿ ಚಾಮರಾಜುವೇ ಎಂದು ವೇಲುವಿನ ಬಂಟರು ನಂಬಿದ್ದಾರೆ. ಚಾಮರಾಜು ಸದ್ಯ ಕವಳನಿಗೆ ಸ್ಕೆಚ್ ಹಾಕಿದ ಆರೋಪ ಹೊತ್ತು ಜೈಲುಪಾಲಾಗಿದ್ದಾನೆ. ಪ್ರವೀಣ ನಿಜಕ್ಕೂ ಕುಟ್ಟಿ-ರಾಜರ ಜೊತೆಗಿದ್ದಾನಾ? ಅಥವಾ ಕವಳನ ಜೊತೆಗಿದ್ದ ಕುಟ್ಟಿ-ರಾಜರ ಹತ್ಯೆಗೆ ಸ್ಕೆಚ್ ಹಾಕುತ್ತಿದ್ದಾನಾ? ಬಹುಶಃ ಕವಳನ ಗುರು ದೀದಿರವಿಯ ಸ್ನೇಹಿ ಬಿದ್ದು ಪ್ರವೀಣ ಕವಳನ ಜೊತೆ ಮತ್ತೆ ಕೈಜೋಡಿಸಿದ್ದಾನಾ?

ಮಲೆಯಾಳಿ ಪ್ರವೀಣ ಈಗ ಪರಪ್ಪನ ಅಗ್ರಹಾರ ಜೈಲುವಾಸಿ. ಜೊತೆಗೆ ಚಾಮರಾಜುವೂ ಇದ್ದಾನೆ. ಅದೇ ಜೈಲಲ್ಲಿ ಸುನೀಲ, ಕವಳ, ದೀದಿರವಿ ಕೂಡ ಗಾಯ ನೆಕ್ಕುತ್ತಿದ್ದಾರೆ. ಜೈಲಲ್ಲೇ ಬಡಿದಾಡುತ್ತಾರಾ? ಅಥವಾ ಅಲ್ಲಿ ಸ್ಕೆಚ್ ಹಾಕಿ ಹೊರಗೆ ಹೆಣ ಬೀಳಿಸುತ್ತಾರಾ? ಬಲ್ಲವರಾರು?


ರಾಜ ಕುಟ್ಟಿ ರುದ್ರ

ಬಿಬಿಎಂಪಿಯಲ್ಲಿ ಬಿಜೆಪಿ ಕಳ್ಳರು ಇಟ್ಟ ಬೆಂಕಿಗೆ ಸುಟ್ಟಿದ್ದು ಆ 153 ಫೈಲುಗಳು ಮಾತ್ರ?



ಬೆಂಕಿಬಿದ್ದ ಪಾಲಿಕೆ ಕಚೇರಿ

ಪಾಲಿಕೆ ಕಾಮಗಾರಿಗಳ ಹೆಸರಲ್ಲಿ ಬೋಗಸ್ ಬಿಲ್ ಸೃಷ್ಟಿಸಿ ದೋಚಿದ ಬಹುತೇಕ ಎಮ್ಮೆಲ್ಲೆಗಳೆಲ್ಲ ಯಾವ ಪಾರ್ಟಿಯವರು?

ಈಗ ಪಾಲಿಕೆ ಕಚೇರಿಗೆ ಬೆಂಕಿಯಿಟ್ಟು ಸಂಬಂಧ ಪಟ್ಟ ಫೈಲುಗಳೇ ಸುಟ್ಟುಹೋಗಿವೆ ಎಂದರೆ ಲಾಭ ವಾಗುವುದು ಯಾರಿಗೆ?


ಇದೇ ನವೆಂಬರ್ 19ರ ಸಂಜೆ ಬಿಬಿಎಂಪಿಯ ಲೆಕ್ಕ ಪರಿಶೋಧನಾ ಘಟಕದಲ್ಲಿ ಕಾಣಿಸಿಕೊಂಡ ಬೆಂಕಿ ಮತ್ತು ಸುಟ್ಟು ಬೂದಿಯಾದ ಆ 153 ಫೈಲುಗಳ ನಿಗೂಢ ವನ್ನು ಕೆದಕಿದರೆ ಯಾವ ಪೊಲೀಸ್ ಅಧಿಕಾರಿಗಾದರೂ ಕ್ಷಚಿತ್ತಾಗಿ ಹೊಳೆಯುವುದು ಈ ಎರಡು ಪ್ರಶ್ನೆಗಳೆ.

ಸಧ್ಯ ಇಡೀ ಬಿಬಿಎಂಪಿಯನ್ನು ಕಪಿಮುಷ್ಠಿಯಲ್ಲಿ ಇಟ್ಟುಕೊಂಡಿರುವವರ ಪೈಕಿ ಮೊದಲನೆಯವರೆಂದರೆ ಗೃಹ ಮಂತ್ರಿ ಆರ್.ಅಶೋಕ್, ಎರಡನೆಯವರು ನಗರ ಬಿಜೆಪಿ ಅಧ್ಯಕ್ಷ ಮತ್ತು ಅನಂತಕುಮಾರ್ ಅವರ ಬೇನಾಮಿ ಸುಬ್ಬಣ್ಣ ಮೂರನೆಯವನು ಉಪ ಮೇಯರ್ ಹರೀಶ್ ಮತ್ತು ನಾಲ್ಕನೆಯವನು ದಾಸರಹಳ್ಳಿ ಶಾಸಕ ಮುನಿರಾಜು. ಎತ್ತಿಂದೆತ್ತ ನೋಡಿದರೂ ಎಮ್ಮೆಲ್ಲೆ ಮುನಿರಾಜು ಮೇಯರ್ ಶಾರದಮ್ಮನಿಗೆ ಗಾಡ್ ಫಾದರ್ ಮತ್ತು ಮಂತ್ರಿ ಅಶೋಕ್ ಬಲಗೈಬಂಟ. ಗೆದ್ದ ಕೌನ್ಸಿಲರ್‌ಗಳ ಪೈಕಿ ಐವತ್ತಕ್ಕೂ ಅಧಿಕರು ಮಂತ್ರಿ ಅಶೋಕ್‌ನ ಛೇಲಾಗಳೇ. ಸಾಲದಕ್ಕೆ ಬೆಂಗಳೂರಿನ ಬಹುತೇಕ ಬಿಜೆಪಿ ಶಾಸಕರಿಗೆಲ್ಲ ಗುರು ಸ್ವರೂಪಿಯೇ ಆರ್.ಅಶೋಕ್. ಈಗ ಇದೇ ಅಶೋಕ್ ಸಾಹೇಬರ ಅಜ್ಞಾಪಾಲಕ ಪೊಲೀಸರು ಪಾಲಿಕೆಗೆ ಬೆಂಕಿ ಹಚ್ಚಿ ಫೈಲುಗಳನ್ನು ಸುಟ್ಟ ಕ್ರಿಮಿನಲ್‌ಗಳ ಬೇಟೆಗೆ ನಿಂತಿದ್ದಾರೆ.


ಆರ್. ಅಶೋಕ್

ಸುಟ್ಟು ಬೂದಿಯಾದ 153 ಫೈಲುಗಳೂ ಬೋಗಸ್ ಕಾಮಗಾರಿಯಲ್ಲಿ ಪಾಲಿಕೆಯನ್ನು ದೋಚಿದ ಪ್ರಕರಣದ್ದೇ ಫೈಲುಗಳು. ಈ ರೀತಿ ಬೋಗಸ್ ಬಿಲ್ ಸೃಷ್ಟಿಸಿ 20 ಸಾವಿರ ಕೋಟಿಗೂ ಅಧಿಕ ಮೊತ್ತದ ಪಾಲಿಕೆ ಹಣವನ್ನು ಕೊಳ್ಳೆ ಹೊಡೆದವರ ಪೈಕಿ ಮಲ್ಲೇಶ್ವರದ ಶಾಸಕ ಅಶ್ವತ್ಥನಾರಾಯಣ, ದಾಸರಹಳ್ಳಿ ಶಾಸಕ ಮುನಿರಾಜು, ಬೊಮ್ಮನಹಳ್ಳಿಯ ಶಾಸಕ ಸತೀಶ್ ರೆಡ್ಡಿ, ಬೆಂಗಳೂರು ದಕ್ಷಿಣದ ಕೃಷ್ಣಪ್ಪ ಇತ್ಯಾದಿಗಳೆಲ್ಲ ಅಶೋಕ್ ಅನುಯಾಯಿಗಳೆ. ಯಲಹಂಕದ ವಿಶ್ವನಾಥ್, ಕೆ.ಆರ್.ಪುರದ ನಂದೀಶ್ ರೆಡ್ಡಿ, ರಾಜರಾಜೇಶ್ವರಿಯ ಶ್ರೀನಿವಾಸ್ ಮತ್ತು ಯಶವಂತಪುರದ ಶೋಭಾ ಕರಂದ್ಲಾಜೆ ಬಣದಲ್ಲಿ ಯಡ್ಡಿಯ ಪಡೆಯಾದರೂ ಬಿಜೆಪಿಯೇ.

ಈಗ ಬಿಬಿಎಂಪಿಯ ಪಶ್ಚಿಮ ವಲಯದ ಗಾಂಧಿನಗರ, ಮಲ್ಲೇಶ್ವರ ಮತ್ತು ರಾಜರಾಜೇಶ್ವರಿನಗರ ವಲಯಗಳ ವ್ಯಾಪ್ತಿಯಲ್ಲಿ ನಡೆದ 1,539 ಕೋಟಿ ರೂಪಾಯಿಗಳ ಕಾಮಗಾರಿ ಕರ್ಮಕಾಂಡಗಳನ್ನು ಕಮೀಷನರ್ ಸಿದ್ದಯ್ಯ ಪತ್ತೆ ಹಚ್ಚಿ ತನಿಖೆಗೆ ಆದೇಶಿಸಿರುವಾಗಲೇ ಪಾಲಿಕೆಗೆ ಬೆಂಕಿ ಬಿದ್ದಿದೆಯೆಂದಾದರೆ ಇನ್ನು ಉಳಿಕೆ 25 ಕ್ಷೇತ್ರಗಳಲ್ಲಿ ಎಷ್ಟು ಲೂಟಿಯಾಗಿರಬೇಡ? ಪ್ರಕರಣದ ತನಿಖೆ ನಡೆಸುತ್ತಿರುವ ಬಿಎಂಟಿಎಫ್‌ನ ಕಚೇರಿಗೇ ಬೆಂಕಿ ಬೀಳುತ್ತದೆ ಮತ್ತು ಅಕ್ರಮ ಕಾಮಗಾರಿಗಳಿಗೆ ಸಂಬಂಧಪಟ್ಟ ಫೈಲುಗಳೇ ಸುಟ್ಟು ಬೂದಿಯಾಗುತ್ತವೆ ಎಂದರೆ ಇದಕ್ಕೆ ಯಾರು ಕಾರಣರಾಗಿರಲು ಸಾಧ್ಯ?


ಅಶ್ವತ್ಥ ನಾರಾಯಣ

ಎತ್ತಿಂದೆತ್ತ ನೋಡಿದರೂ 1,539 ಕೋಟಿಯ ಕರ್ಮಕಾಂಡ ಮತ್ತು ಸಂಬಂಧಪಟ್ಟ ಫೈಲುಗಳನ್ನೇ ಸುಟ್ಟ ಬೆಂಕಿಯ ತನಿಖೆ ಬಂದು ನಿಲ್ಲುವುದು ಗೃಹ ಮಂತ್ರಿ ಅಶೋಕ್ ಕಾಲ ಬುಡಕ್ಕೆ. ಇದೇ ಅಶೋಕ್‌ರ ಅಜ್ಞಾನುವರ್ತಿ ಪೊಲೀಸರು ಬೆಂಕಿಯಿಟ್ಟ ಅಸಲೀ ಪಾತಕಿಗಳನ್ನು ಹೇಗೆ ತಾನೇ ಹಿಡಿಯಲು ಸಾಧ್ಯ?

ಫೈಲುಗಳನ್ನುಸುಟ್ಟ ಬೆಂಕಿಗೂ ಪಾಲಿಕೆಯ ಪಶ್ಚಿಮ ವಲಯದ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಕಳಪೆ ಕಾಮಗಾರಿಗೂ ಸಂಬಂಧವಿದೆ. ಅದು 1539, 62,70,884 ಕೋಟಿ ರೂಪಾಯಿಗಳ ಕಾಮಗಾರಿ ಕರ್ಮಕಾಂಡ. ಕಳೆದ ಎರಡು ವರ್ಷಗಳಿಂದ ಈ ಬಗ್ಗೆ ಪತ್ರಿಕೆ ಪದೇ ಪದೇ ವರದಿ ಮಾಡಿಕೊಂಡೇ ಬಂದಿದೆ. ಈಗ ಬಯಲಿಗೆ ಬಂದಿರುವುದು ಕೇವಲ ಮೂರು ಎಮ್ಮೆಲ್ಲೆಗಳ ಹಗರಣವಾದರೂ ಅಸಲಿಗೆ ಬಿಜೆಪಿ ಅಧಿಕಾರಕ್ಕೆ ಬಂದು ಯಡ್ಡಿ ಮುಖ್ಯಮಂತ್ರಿಯಾದ ಮೇಲೆ ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆಂದು ಬಿಡುಗಡೆಯಾದ ಒಟ್ಟೂ ಮೊತ್ತ 20 ಸಾವಿರ ಕೋಟಿಗೂ ಅಧಿಕ.


ಈ ಪೈಕಿ ದಾಸರಹಳ್ಳಿಗೆ 750 ಕೋಟಿ, ಯಲಹಂಕಕ್ಕೆ 700 ಕೋಟಿ, ಕೃಷ್ಣರಾಜಪುರಕ್ಕೆ, 450 ಕೋಟಿ, ಬೊಮ್ಮನಹಳ್ಳಿಗೆ 600 ಕೋಟಿ, ಮಲ್ಲೇಶ್ವರಕ್ಕೆ 500 ಕೋಟಿ, ರಾಜರಾಜೇಶ್ವರಿನಗರಕ್ಕೆ 650 ಕೋಟಿ, ಗಾಂಧಿನಗರಕ್ಕೆ 780 ಕೋಟಿ, ಗೃಹಮಂತ್ರಿ ಅಶೋಕ್ ಪ್ರತಿನಿಧಿಸುವ ಪದ್ಮನಾಭನಗರಕ್ಕೆ, 680 ಕೋಟಿ, ಜಯನಗರಕ್ಕೆ, 430 ಕೋಟಿ, ಬ್ಯಾಟರಾಯನಪುರಕ್ಕೆ 700ಕೋಟಿ, ಯಶವಂತಪುರಕ್ಕೆ 640 ಕೋಟಿ, ರಾಜಾಜಿನಗರಕ್ಕೆ, 350 ಕೋಟಿ, ಚಿಕ್ಕಪೇಟೆಗೆ 400ಕೋಟಿ, ಬೆಂಗಳೂರು ದಕ್ಷಿಣಕ್ಕೆ 680 ಕೋಟಿ, ಇತ್ಯಾದಿಯಾಗಿ ನೂರಾರು ಕೋಟಿಗಳ ಲೆಕ್ಕದಲ್ಲಿ ಯಡ್ಡಿಯೇ ನಿಂತು ಅನುದಾನ ಕೊಟ್ಟಿದ್ದರು.

ಆಗಿನ್ನೂ ಪಾಲಿಕೆ ಚುನಾವಣೆಯಾಗಿರಲಿಲ್ಲ, ಬಿಬಿಎಂಪಿ ವ್ಯಾಪ್ತಿ ಸಂಬಂಧಪಟ್ಟ ವಾರ್ಡುಗಳಿಗೆ ಕೌನ್ಸಿಲರ್‌ಗಳೇ ಇಲ್ಲದ ಸ್ಥಿತಿಯಲ್ಲಿ ಬಿಡುಗಡೆಯಾದ ಅಷ್ಟೂ ಅಭಿವೃದ್ಧಿ ನಿಧಿಗೆ ಸಂಬಂಧಪಟ್ಟ ಶಾಸಕರೇ ಒಡೆಯರಂತಾಗಿದ್ದರು. ಈ ಕಾರಣಕ್ಕೆಂದೇ ಪದೇಪದೇ ಪಾಲಿಕೆ ಚುನಾವಣೆಗಳನ್ನು ಮುಂದೂಡಲಾಗಿತ್ತು. ಆಗ ಪಾಲಿಕೆ ಕಮೀಷನರ್ ಆಗಿದ್ದ ಐಪಿಎಸ್ ಖದೀಮ ಸುಬ್ರಹ್ಮಣ್ಯಂ ಒಂದೇ ಏಟಿಗೆ ಎರಡು ಸಾವಿರ ಕೋಟಿಯ ಕಮಿಷನ್ ಹೊಡೆದ ಆರೋಪದಿಂದ ಶುರುವಾದ ಕಾಮಗಾರಿ ಕರ್ಮಕಾಂಡ ದಿನೇ ದಿನೇ ಅಸಹ್ಯದ ವಾಸನೆ ಬೀರಲಾರಂಭಿಸಿತು.

ಬೆಂಗಳೂರಿನ ಎಲ್ಲಾ ಶಾಸಕರೂ ಪಕ್ಷ ಬೇಧ ಮರೆತು ಬಿಬಿಎಂಪಿಗೆ ಕನ್ನ ಇಟ್ಟಿದ್ದರು. ಹೀಗೆ ಬಿಡುಗಡೆಗೊಂಡ ನಿಧಿಯಲ್ಲಿ ದೊಡ್ಡ ದೊಡ್ಡ ಕಾಮಗಾರಿಗಳಾಗಲಿ, ಶಾಶ್ವತ ಪರಿಹಾರ ಕಲ್ಪಿಸುವ ಹೊಸ ಯೋಜನೆಗಳಾಗಲಿ ಏನೊಂದೂ ಬರಲಿಲ್ಲ, ಎಲ್ಲವೂ ಹಳೇ ಕಲ್ಲು ಹೊಸ ಬಿಲ್ಲು ಟೈಪಿನ ಮೋರಿಯ ಹೂಳೆತ್ತುವುದು, ಡಾಂಬರ್ ಹಾಕುವುದು, ಫುಟ್ ಪಾತ್ ರಿಪೇರಿಯಂತ ಮೋಸದ ಕಾಮಗಾರಿಗಳಿಗೆ ಪೇಪರ್ ಮೇಲೆ ವೆಚ್ಚವಾದವು. ಇನ್ನೊಂದರ್ಥದಲ್ಲಿ ಬೋಗಸ್ ಬಿಲ್ ಸೃಷ್ಟಿಸಲು ಏನೇನು ಬೇಕೋ ಅದಕ್ಕೆ ಪೂರಕವಾದ ಕಾಮಗಾರಿಗಳನ್ನು ಸೃಷ್ಟಿಸಿ ದುಡ್ಡು ಹೊಡೆದರು.

2008-09, 2009-10 ಮತ್ತು 2010-11ನೇ ಸಾಲುಗಳ ಪೈಕಿ ಸುಬ್ರಹ್ಮಣ್ಯಂ ಪಾಲಿಕೆ ಕಮೀಷನರ್ ಆಗಿದ್ದಾಗಿನ 2008 ಮತ್ತು 2009ನೇ ಸಾಲಿನಲ್ಲಿ ಅತೀ ಹೆಚ್ಚು ಅಕ್ರಮಗಳಾಗಿದ್ದವು. 2010ರಲ್ಲಿ ಪಾಲಿಕೆ ಚುನಾವಣೆ ನಡೆದು ಪ್ರತಿ ವಾರ್ಡಿಗೂ ಹೊಸ ಕೌನ್ಸಿಲರ್‌ಗಳು ಆಯ್ಕೆಯಾಗಿದ್ದೇ ತಡ ಒಂದೊಂದೇ ಹುಳುಕು ಬಯಲಾಗತೊಡಗಿತ್ತು, ಇದು ಯಾವ ಮಟ್ಟಿಗೆಂದರೆ ಇನ್ನೆಲ್ಲಿ ತಾನು ಜೈಲು ಪಾಲಾಗುತ್ತೇನೋ ಎಂದು ಹೆದರಿದ ಐಎಎಸ್ ಸುಬ್ರಹ್ಮಣ್ಯಂ ಏಕಾಏಕಿ ಕೆಲಸಕ್ಕೇ ಗುಡ್ ಬೈ ಹೇಳಿ ಸ್ವಯಂ ನಿವೃತ್ತಿ ಪಡೆದು ಜೆಡಿಎಸ್ ಸೇರಿಕೊಂಡರು.


ಆಯಾ ಕ್ಷೇತ್ರದ ಶಾಸಕರುಗಳೆಲ್ಲ ಸರಿಸುಮಾರು 20 ಸಾವಿರ ಕೋಟಿಯಷ್ಟು ಪಾಲಿಕೆ ನಿಧಿಯನ್ನು ಕಳ್ಳ ಬಿಲ್ಲು ಸೃಷ್ಟಿಸಿ ನುಂಗಿ ಹಾಕಿದ್ದರು. ಕೆಲವಡೆ ಶಾಸಕರೇ ತಮ್ಮ ರಕ್ತ ಸಂಬಂಧಿಗಳನ್ನು ಮುಂದೆ ಬಿಟ್ಟು ನಕಲಿ ಕಾಮಗಾರಿ ನಡೆಸಿ ದೋಚಿದ್ದರು. ಇನ್ನೂ ಕೆಲವೆಡೆ ಖದೀಮ ಕಂಟ್ರಾಕ್ಟರುಗಳು ಕೈಚಳಕ ತೋರಿದ್ದರು. ಅದೇನಾಯಿತೋ ಗೊತ್ತಿಲ್ಲ - ಉಳಿಕೆ 25 ಎಮ್ಮೆಲ್ಲೇ ಕ್ಷೇತ್ರಗಳನ್ನು ಹೊರತು ಪಡಿಸಿ ಬಿಬಿಎಂಪಿಯ ಪಶ್ಚಿಮ ವಲಯದ ಗಾಂಧಿನಗರ, ಮಲ್ಲೇಶ್ವರ ಮತ್ತು ರಾಜರಾಜೇಶ್ವತಿ ನಗರ ಕ್ಷೇತ್ರಗಳ 1539 ಕೋಟಿ ರೂಪಯಿಗಳ ಕಾಮಗಾರಿ ಕರ್ಮಕಾಂಡವೊಂದನ್ನು ಇತ್ತೀಚೆಗೆ ಬಯಲಿಗೆಳೆದದ್ದು ಹಿರಿಯ ಕಾಂಗ್ರೆಸ್ ನಾಯಕ ಬಿ.ಕೆ.ಹರಿಪ್ರಸಾದ್!


ಮಾಜಿ ಮತ್ತು ಹಾಲಿ ಕಮೀಷನರ್ ಸಿದ್ಧಯ್ಯ ಶಂ.ಲಿಂ. ಗೌಡ

ಎಲ್ಲಾ ಸಾಕ್ಷ್ಯಾಧಾರಗಳ ಸಮೇತ ಈ ಮೂರು ಕ್ಷೇತ್ರಗಳ ಕಾಮಗಾರಿ ಹಗರಣಗಳನ್ನು ಕೆದಕಿದ ಹರಿಪ್ರಸಾದ್ ನೇರವಾಗಿ ಕಮೀಷನರ್ ಸಿದ್ಧಯ್ಯನವರಿಗೇ ದೂರಿತ್ತಿದ್ದಾರೆ. ಇಲ್ಲಿನ ವೈಶಿಷ್ಟ್ಯವೆಂದರೆ ಯಾವೊಬ್ಬ ಕೌನ್ಸಿಲರ್ ಕೂಡ ಈ ಹಗರಣದಲ್ಲಿ ಪಾಲುದಾರನಾಗಿಲ್ಲದ ಕಾರಣ ಬಹುತೇಕ ಕೌನ್ಸಿಲರ್‌ಗಳೆಲ್ಲ ಪಕ್ಷ ಬೇಧ ಮರೆತು ತನಿಖೆಗೆ ಒತ್ತಾಯಿಸಿದ್ದಾರೆ. ಅದರಲ್ಲೂ ಪಾಲಿಕೆ ಬಿಜೆಪಿ ನಾಯಕ ಬಿ.ಆರ್. ನಂಜುಂಡಪ್ಪ ದೊಡ್ಡ ದನಿಯಲ್ಲಿ ಹಗರಣದ ತನಿಖೆಗೆ ಆಗ್ರಹಿಸಿದ್ದಾರೆ. ಕಮೀಷನರ್ ಸಿದ್ದಯ್ಯಗೂ ಇಷ್ಟೇ ಸಾಕಿತ್ತು.

ಒಂದು ಹಿಂಡು ಪಾಲಿಕೆ ಅಧಿಕಾರಿಗಳ ತಂಡ ರಚಿಸಿದ್ದೇ ತಡ ಸಿದ್ಧಯ್ಯ 2011 ರ ಅಕ್ಟೋಬರ್ 12 ರಂದು ಏಕಾಏಕಿ ಪಶ್ಚಿಮ ವಲಯದ ಚೀಫ್ ಇಂಜಿನಿಯರ್ ಕಚೇರಿ ಮೇಲೆ ದಾಳಿಯಿಟ್ಟಿದ್ದಾರೆ. ಸಿಕ್ಕಿದ್ದು ಬರೋಬ್ಬರಿ 153 ಫೈಲುಗಳು. ಈ ಪೈಕಿ ಮಲ್ಲೇಶ್ವರದ್ದು 33 ಫೈಲುಗಳಾದರೆ ಗಾಂಧಿನಗರದ್ದು 65. ರಾಜರಾಜೇಶ್ವರಿನಗರದ 55 ಕಡತಗಳನ್ನೂ ಬಿಡದೇ ವಶಪಡಿಸಿಕೊಂಡ ಕಮೀಷನರ್ ಸಿದ್ಧಯ್ಯ ಅವೆಲ್ಲವುಗಳನ್ನು ಕೆದಕಿದರೆ ಅದು ರೂ. 1539, 62,70 ಮೊತ್ತದ ಬ್ರಹ್ಮಾಂಡ ಕರ್ಮಕಾಂಡವಾಗಿತ್ತು.

2008-09 ರಲ್ಲಿ ಈ ಮೂರು ಕ್ಷೇತ್ರಗಳ ವ್ಯಾಪ್ತಿಯಲ್ಲಿ ಒಟ್ಟು 1981 ಕಾಮಗಾರಿಗಳ ಹೆಸರಲ್ಲಿ 1902,82,687.70 ಲಕ್ಷ ರೂ. ಹಗರಣವಾದರೆ 2009-10 ರಲ್ಲಿ ಒಟ್ಟು 3094 ಕಾಮಗಾರಿಗಳ ನೆಪದಲ್ಲಿ 5738431447 ಲಕ್ಷ ರೂಪಾಯಿಗಳನ್ನು ದೋಚಿದ್ದರು. 2010-11 ರ ಸಾಲಿನಲ್ಲಿ 2818 ಕಾಮಗಾರಿಗಳ ಹೆಸರಲ್ಲಿ 4869470-725 ಲಕ್ಷಗಳು, 2011-12 ರಲ್ಲಿ 2216 ಕಾಮಗಾರಿಗಳ ಸೋಗಿನಲ್ಲಿ 2885541842 ಲಕ್ಷ ರೂಪಾಯಿಗಳ ಲೆಕ್ಕ ತೋರಿಸಲಾಗಿತ್ತು, ಈ ಮೂರು ಕ್ಷೇತ್ರಗಳಲ್ಲಿ 2008 ರಿಂದ ಈತನಕ ಒಟ್ಟೂ 10109 ಕಾಮಗಾರಿಗಳ ಲೆಕ್ಕದಲ್ಲಿ ವ್ಯಯಿಸಿದ ಒಟ್ಟೂ ಮೊತ್ತ 1539,68,70,884 ಕೋಟಿ ರೂಪಾಯಿಗಳಾಗಿತ್ತು.


ಎಂ. ಶ್ರೀನಿವಾಸ್



ಇದಾದ ವಾರಕ್ಕೆ, ಸಂಬಂಧಪಟ್ಟ ಎಲ್ಲಾ ಬಿಬಿಎಂಪಿ ಪದಾಧಿಕಾರಿಗಳ ವಿಶೇಷ ಸಭೆ ಕರೆದ ಸಿದ್ಧಯ್ಯ ಇಡೀ ಹಗರಣದ ತನಿಖೆಗೆಂದು ಟಿವಿಸಿಸಿಯ ಚೀಫ್ ಇಂಜಿನಿಯರ್ ಮಾಲತಿ ಮತ್ತು ಪಾಲಿಕೆ ಮುಖ್ಯ ಲೆಕ್ಕ ಪರಿಶೋಧಕಿ ಯಮುನರನ್ನು ನೇಮಿಸಿದ್ದಾರೆ. ಅವರ ನೆರವಿಗೆಂದು ಬಿಬಿಎಂಪಿಯ ಹಿರಿಯ ಅಧಿಕಾರಿ ಕೆ.ಆರ್. ರಂಗಸ್ವಾಮಿಯವರ ಜೊತೆಗೆ ಇನ್ನೂ ಒಂದು ಡಜನ್ ಸಿಬ್ಬಂದಿಯನ್ನೂ ಕೊಟ್ಟಿದ್ದಾರೆ. ಇದೆಲ್ಲವನ್ನೂ ಕೂಲಂಕಷವಾಗಿ ತನಿಖೆ ನಡೆಸಿದ ಈ ತಂಡ 2011 ರ ಅಕ್ಟೋಬರ್ 21 ರಂದು ಪಾಲಿಕೆಯ ವಿಶೇಷ ಆಯುಕ್ತ (ಯೋಜನೆ) ರಿಗೆ ನೀಡಿದ ವರದಿಯಲ್ಲಿ ಇಡೀ ಹಗರಣವನ್ನು ಸವಿಸ್ತಾರವಾಗಿ ಬಯಲಿಗೆಳೆಯಲಾಗಿತ್ತು.

ಯಾವುದೇ ಅಂದಾಜು ಪಟ್ಟಿ ತಯಾರಿಸದೆ, ನಕ್ಷೆ, ಸ್ಥಳ ವಿವರಣೆ, ಅಳತೆಗಳ ಹಂಗಿಲ್ಲದೆ, ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ, ಪತ್ರಿಕೆಗಳಲ್ಲಿ ಜಾಹಿರಾತನ್ನೂ ನೀಡದೆ, ತಮಗೆ ಬೇಕಾದ ಒಬ್ಬನೋ ಮತ್ತೊಬ್ಬನೋ ಕಂಟ್ರಾಕ್ಟರ್ ಮಾತ್ರವೇ ಟೆಂಡರ್ ಸಲ್ಲಿಸಿದಂತೆ ಮಾಡಿ, ಈ ಕಂಟ್ರಾಕ್ಟರುಗಳ ಅರ್ಹತೆಯನ್ನೂ ದಾಖಲಿಸದೆ, ಒಂದಕ್ಕೆರಡು ಪಟ್ಟು ಟೆಂಡರ್ ಮೌಲ್ಯ ನಮೂದಿಸಿ, ಕಳ್ಳ ಬಿಲ್ಲುಗಳನ್ನು ಸೃಷ್ಟಿಸಿ, ಹುಂಡಿ ಮೂಲಕ ಬಿಲ್ ಪಾವತಿಸಿದಂತೆ ದಾಖಲೆ ಸೃಷ್ಟಿಸಿ, ದೋಚಿರುವುದನ್ನು ಪಾಲಿಕೆಯ ತನಿಖಾಧಿಕಾರಿಗಳೇ ಸ್ಪಷ್ಟವಾಗಿ ಪತ್ತೆಹಚ್ಚಿದ್ದರು.

ಕಾಮಗಾರಿಗಳ ಗುಣಮಟ್ಟವನ್ನು ಕೂಡ ಪರೀಕ್ಷಿಸದೇ ಬಿಲ್ ಪಾವತಿಸಲಾಗಿತ್ತು, ಸಂಬಂಧಪಟ್ಟ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳು, ಲೆಕ್ಕ ಅಧೀಕ್ಷಕರು ಮತ್ತು ಎಫ್‌ಬಿಎಎಸ್ ಸಿಬ್ಬಂದಿಗಳನ್ನು ಮುಂದಿಟ್ಟುಕೊಂಡೇ ಈಪಾಟಿ ನಿಧಿಯನ್ನು ಲಪಟಾಯಿಸಲಾಗಿತ್ತು ಇಂಥದೊಂದು ವರದಿ ಬಂದಿದ್ದೇ ತಡ ಪಾಲಿಕೆ ಕಮೀಷನರ್ ಸಿದ್ಧಯ್ಯ ನಿರ್ದಾಕ್ಷಿಣ್ಯ ಕ್ರಮಕ್ಕೆ ಕೈಯಿಟ್ಟರು. ಪಾಲಿಕೆಯ ಅಪರ ಆಯುಕ್ತರ ಮೂಲಕ ಬಿಎಂಟಿಎಫ್ ಅಂದರೆ ಬೃಹತ್ ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆಯ ಐಜಿಪಿ ಆರ್.ಪಿ. ಶರ್ಮರಿಗೆ ದೂರಿತ್ತಿದ್ದಾರೆ. ಈ ದೂರಿನ ಪ್ರಕಾರವೇ ಬಿಎಂಟಿಎಫ್ ಮುಖ್ಯಸ್ಥ ಆರ್.ಪಿ. ಶರ್ಮ ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳನ್ನು ಮತ್ತು ಇದಕ್ಕೆ ಸೂತ್ರಧಾರರಾದ ಮೂವರು ಶಾಸಕರನ್ನು ಬಂಧಿಸಬೇಕು.

ಆದರೆ ನಡೆದದ್ದೇ ಬೇರೆ. ಪಾಲಿಕೆ ಆಯುಕ್ತರ ಕಚೇರಿಯಿಂದ ಬಿಎಂಟಿಎಫ್‌ಗೆ ದೂರು ಬಂದಿದ್ದು 2011 ರ ನವೆಂಬರ್ 3 ನೇ ತಾರೀಖಿಗಾದರೆ ಇದಾಗಿ 15 ನೇ ದಿನಕ್ಕೇ ಬಿಎಂಟಿಎಫ್‌ನ ಲೆಕ್ಕಾಧಿಕಾರಿಯ ಕೋಣೆಗೆ ಬೆಂಕಿ ಬಿದ್ದಿತ್ತು, ಬಿಎಂಟಿಎಫ್ ಮುಖ್ಯಸ್ಥ ಆರ್.ಪಿ. ಶರ್ಮ ದಿನಕ್ಕೊಂದು ತಿಪ್ಪೆ ಸಾರಿಸುತ್ತಿದ್ದಾರೆ. ಎಷ್ಟೆಂದರೂ ಆತ ಮಂತ್ರಿ ಅಶೋಕ್ ಅಧೀನದ ಪೊಲೀಸ್ ಇಲಾಖೆಯ ನಿಯತ್ತಿನ ಖಾಕಿ ತಾನೆ?

ಬಿದ್ದ ಬೆಂಕಿಯ ತನಿಖೆ ಕೈಗೆತ್ತಿಕೊಂಡ ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಸ್ಪಷ್ಟಪಡಿಸಿದ ಅತೀ ಮುಖ್ಯ ಅಂಶವೆಂದರೆ ಇದು ಶಾರ್ಟ್ ಸರ್ಕ್ಯೂಟನಿಂದಾಗಿದ್ದಲ್ಲ, ಅದರರ್ಥ ಯಾರೋ ಉದ್ದೇಶಪೂರ್ವಕವಾಗಿ ಬೆಂಕಿಯಿಟ್ಟದ್ದಾರೆ. ಜೊತೆಗಿದ್ದ 10 ಸಾವಿರ ಕಡತಗಳ ಪೈಕಿ ಹಗರಣಕ್ಕೆ ಸಂಬಂಧಪಟ್ಟ 153 ಫೈಲುಗಳಷ್ಟೇ ಹೇಗೆ ಬೆಂಕಿಗಾಹುತಿಯಾಗಲು ಸಾಧ್ಯ? ಯಾರು ಬೆಂಕಿಯಿಟ್ಟದ್ದಾರೆಂದು, ಏಕೆ ಬೆಂಕಿಯಿಟ್ಟಿರಬಹುದೆಂದು ಹತ್ತನೇ ಕ್ಲಾಸಿನ ಬಾಲಕನೂ ಹೇಳಬಹುದಾದರೆ ಏಕದು ಬಿಎಂಟಿಎಫ್ ಮುಖ್ಯಸ್ಥ ಆರ್.ಪಿ. ಶರ್ಮರಿಗೆ ಗೊತ್ತಾಗುತ್ತಿಲ್ಲ?

ತಮ್ಮ ವಶದಲ್ಲಿದ್ದ ಫೈಲುಗಳನ್ನೇ ಕಾಪಾಡ ಲಾಗದ, ಕಾಪಾಡಲು ಆಸಕ್ತಿಯಿಲ್ಲದ, ಉದ್ದೇಶಪೂರ್ವಕವಾಗಿ ಬೆಂಕಿಯ ನೆಪ ವೊಡ್ಡುವ, ಪೊಲೀಸ್ ಇಲಾಖೆಯ ನಿಷ್ಠರಾದ, ತನ್ಮೂಲಕ ತನ್ನ ಬಾಸ್ ಅಶೋಕ್‌ರ ಹಂಗಿಗೆ ಬಿದ್ದ ಪೊಲೀಸರು ಏನಂಥ ತನಿಖೆ ಮಾಡಿಯಾರು, ಯಾರನ್ನು ತಾನೇ ಬಂಧಿಸಿಯಾರು?


ಸರ್ಕಾರಿ ದರೋಡೆಯೊಂದರ ತನಿಖೆಗೆ ಸರ್ಕಾರವೇ ನಿಂತರೆ ಇದಕ್ಕಿಂತ ಇನ್ನೇನು ಸಾಧ್ಯ? ಕೇವಲ 3 ಕ್ಷೇತ್ರಗಳದ್ದೇ 1539 ಕೋಟಿಯ ಹಗರಣವಾದರೆ ಇನ್ನು ಬೆಂಗಳೂರಿನ 25 ಕ್ಷೇತ್ರಗಳ ಲೂಟಿ ಇನ್ನೆಷ್ಟಾಗಬೇಡ? ಸಿಬಿಐ ತನಿಖೆಯೊಂದೇ ನ್ಯಾಯ ಕಲ್ಪಿಸಬಹುದೇನೊ. ಮೂರೂ ಪಕ್ಷಗಳು ಪಾಲುದಾರರೆಂದ ಮೇಲೆ ಸಿಬಿಐ ತನಿಖೆಗೆ ಒತ್ತಾಯಿಸುವವರ್‍ಯಾರು?

ಗಣಿ ಲೂಟಿಯನ್ನು ಬಿಟ್ಟರೆ ಇದೇ ಎರಡನೇ ಧೈತ್ಯ ಕರ್ಮಕಾಂಡ. ಬೆಂಗಳೂರಿನ ಪ್ರಜ್ಞಾವಂತರಾದರೂ ಬೀದಿಗಿಳಿಯಬಾರದೆ?

• ರಾ. ಸೋಮನಾಥ್

ಸಿದ್ಧಯ್ಯ ಎತ್ತಂಗಡಿಯ ಮರ್ಮವೇನು?


ಕಮಿಷನರ್ ಸಿದ್ಧಯ್ಯ ಎತ್ತಂಗಡಿ ವಿರುದ್ಧ ವ್ಯಾಪಕ ಪ್ರತಿಭಟನೆಗಳಾಗಿವೆ ನಿಜ. ಹೊಸ ಆಯುಕ್ತ ಶಂಕರಲಿಂಗೇಗೌಡರೂ ಅಷ್ಟೇ ನಿಷ್ಠುರಿ ಕೂಡ. ಆದರೆ ಸಿದ್ಧಯ್ಯ ಕಾಡಿಬೇಡಿ ಮಾಡಿಸಿಕೊಂಡ ವರ್ಗಾವಣೆ ಇದು ಎಂಬುದೂ ಅಷ್ಟೇ ಸತ್ಯ. ಏಕೆಂದರೆ ತಾನು ಎಂಥಾ ಶರಪಂಜರಕ್ಕೆ ಸಿಕ್ಕಿ ಬಿದ್ದಿದ್ದೇನೆಂಬುದು ಸಿದ್ಧಯ್ಯರಿಗೆ ಯಾವತ್ತಿಗೋ ಮನದಟ್ಟಾಗಿತ್ತು.


ದೊರೆಸ್ವಾಮಿ

ಈಗ ಬೆಳಕಿಗೆ ಬಂದಿದ್ದು ಕೇವಲ ಮೂರು ಕ್ಷೇತ್ರಗಳ ಕರ್ಮಕಾಂಡವಾದರೂ ಉಳಿಕೆ 25 ಕ್ಷೇತ್ರಗಳಲ್ಲೂ ಇದೇ ರೀತಿಯಲ್ಲಿ ಕೊಳ್ಳೆ ಹೊಡೆದಿದ್ದಾರೆಂಬುದು ಸಿದ್ಧಯ್ಯಗೆ ಚೆನ್ನಾಗಿ ಗೊತ್ತಿತ್ತು, ಹಗರಣದ ವಿರುದ್ಧ ಎತ್ತಿಂದೆತ್ತ ಕೈಯಿಟ್ಟರೂ ಒಂದು ತುದಿಯಲ್ಲಿ ಗೃಹಮಂತ್ರಿ ಅಶೋಕ್ ಮತ್ತೊಂದು ಕೊನೆಯಲ್ಲಿ ಘಟಾನುಘಟಿ ಬಿಜೆಪಿ ಶಾಸಕರ ಬುಡಕ್ಕೇ ಬರುತ್ತಿತ್ತು. ಇದನ್ನು ತಿಳಿದೂ ಕೆದಕುವುದು ಎಂದರೆ ಬಿಜೆಪಿ ಸರ್ಕಾರವನ್ನೇ ಮೇಲೆಳೆದುಕೊಂಡಂತೆ. ಅಂಥಾ ರಿಸ್ಕು ತನಗೇಕೆ? ಅಷ್ಟಕ್ಕೂ ಕಾಂಗ್ರೆಸ್, ಜೆಡಿಎಸ್‌ಗಳಾದರೂ ತನ್ನ ಬೆನ್ನಿಗೆ ನಿಲ್ಲುತ್ತವೆ ಎನ್ನಲು ಏನು ಗ್ಯಾರಂಟಿ? ಎಲ್ಲಾ ಪಕ್ಷಗಳೂ ಹಗರಣದ ಸಮಪಾಲುದಾರರೆ. ಹೀಗಿರುವಾಗ ತನ್ನನ್ನು ಪತ್ರಿಕೆಗಳ ಹೊರತಾಗಿ ಯಾರೂ ಬೆಂಬಲಿಸಲಾರರು ಎಂದೇ ಲೆಕ್ಕ ಹಾಕಿದ್ದಾರೆ ಸಿದ್ಧಯ್ಯ. ಪಾಲಿಕೆಯೆಂಬುದೇ ಭ್ರಷ್ಟರ ಕೊಚ್ಚೆಯಾಗಿರುವಾಗ ಅದರಲ್ಲಿ ತಾನು ಬಿದ್ದು ಒದ್ದಾಡುವುದರಲ್ಲಿ ಅರ್ಥವಿಲ್ಲ ಎಂದೇ ಸಿದ್ಧಯ್ಯ ಜಾಗ ಖಾಲಿ ಮಾಡಿದ್ದಾರೆ. ಹೊಸ ಆಯುಕ್ತ ಶಂಕರಲಿಂಗೇಗೌಡ ಸಿದ್ಧಯ್ಯರಿಗಿಂತಲೂ ಮೆದು. ಸರ್ಕಾರವೇ ಹಗರಣದ ರೂವಾರಿಯಾಗಿರುವಾಗ ಶಂ.ಲಿಂ.ಗೌಡ ಏನಂಥ ಸರ್ಜರಿ ಮಾಡಲು ಸಾಧ್ಯ? ಸಿಬಿಐ ತನಿಖೆಯಾಗುವಂತೆ ಬೆಂಗಳೂರಿನ ಪ್ರಜ್ಞಾವಂತರೆಲ್ಲ ಬೀದಿಗಿಳಿಯಬೇಕಷ್ಟೇ. ಹಿರಿಯ ಸ್ವಾತಂತ್ರ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಇಂಥದೊಂದು ದುರಾಚಾರದ ವಿರುದ್ಧ ಬೀದಿಗಿಳಿದಿರುವುದೇ ಸಧ್ಯದ ಆಶಾಕಿರಣ. ಜನಪರ ಸಂಘಟನೆಗಳೆನ್ನೂ ಏಕೆ ಬೀದಿಗಿಳಿದಿಲ್ಲ....?

ಡಿಕೇಶಿಗೆ ಡಿನೋಟಿಫಿಕೇಶನ್ ಪ್ರಸಾದ

ಡಿಕೇಶಿಯ ವಿರೋಧಿಗಳು ಹೇಳುವಂತೆ ಯಡ್ಡಿ ಮನೆಗೆ ಫೈಲು ಹಿಡಿದುಕೊಂಡು ರಾತ್ರಿ ಹೊತ್ತಿನಲ್ಲಿ ಹೋದರೋ ಹಗಲು ಹೊತ್ತಿನಲ್ಲೇ ಹೋದರೋ ದೇವರೇ ಬಲ್ಲ. ಆದರೆ ಮಾಡಿದ್ದಂತೂ ಕಾಳ ರಾತ್ರಿಯ ಕಳ್ಳ ವ್ಯವಹಾರ. ಡಿಕೇಶಿ ಜಮೀನನ್ನು ಯಡ್ಡಿ ಅಕ್ರಮವಾಗಿ ಡಿನೋಟಿಫೈ ಮಾಡಿ ಮುಗಿಸಿದ್ದರು. ಯಡ್ಡಿ ಮತ್ತು ಶೆಟ್ಟಿಗಳು ಜೈಲು ಸೇರಲು ಪ್ರಮುಖ ಕಾರಣವಾದದ್ದು ಇಂಥದ್ದೇ ರಾಚೇನಹಳ್ಳಿ ಭೂಮಿಯ ಡಿನೋಟಿಫಿಕೇಷನ್ ಹಗರಣ. ಈ ಕೇಸು ಕೂಡ ಲೋಕಾಯುಕ್ತ ಕೋರ್ಟು ಮುಂದೆ ಬರಲಿ. ಸೂಕ್ತ ತನಿಖೆ ನಡೆದು ಕಾನೂನನ್ನೇ ಕಾಲ ಕಸವಾಗಿಸಿಕೊಂಡು ಲೂಟಿ ಹೊಡೆಯುತ್ತಿರುವವರಿಗೆ ಸೂಕ್ತ ಶಿಕ್ಷೆಯಾಗಲಿ...



• ಜಂಗಮ

ಡಿಕೇಶಿ ಬಹಳ ವೀರಾವೇಶದ ರಾಜಕಾರಣಿ. ಆತ ಎದ್ದು ನಿಂತು ಸದನದಲ್ಲಿ ಮಾತನಾಡಲು ಪ್ರಾರಂಭಿಸಿದರೆ ವೀಕ್ಷಕರಿಗೆ ಅದು ಜಗಳವೆಂದೇ ಭಾಸವಾಗುತ್ತದೆ. ಅವರ ಮಾತಿನ ಶೈಲಿ, ಒರಟು ಧ್ವನಿ, ಅವರ ಬಾಡಿ ಲಾಂಗ್ವೇಜಿನಲ್ಲಿ ಅಂಥ ಛಾತಿ ಇದೆ.

ಆದರೆ ಕಳೆದ ಕೆಲ ವರ್ಷಗಳಿಂದೀಚೆಗೆ ಈ ವೀರನ ಪೋಸು ಸದನದ ಒಳಗಡೆಯಾಗಲಿ ಹೊರಗಡೆಯಾಗಲಿ ಎಲ್ಲಿಯೂ ಅಷ್ಟಾಗಿ ಕಂಡುಬರುತ್ತಿಲ್ಲ. ಬ್ರಹ್ಮಾಂಡ ಭ್ರಷ್ಟಾಚಾರಿ ಚೆಡ್ಡಿ ಬಿಜೆಪಿ ಸರ್ಕಾರದ ಅವ್ಯವಹಾರಗಳ ವಿರುದ್ಧ ಊರಿಗೆ ಊರೇ ಎದ್ದು ಕುಣಿಯುತ್ತಿದೆ. ಹೀಗಿರುವಾಗ ವೀರಾವೇಶದ ಡಿಕೆಶಿ ಯಾವ ಭಾವಾವೇಶವೂ ಇಲ್ಲದೆ ಸಮಾಧಾನಚಿತ್ತರಾಗಿದ್ದಾರೆ. ಅದೂ ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್‌ನ ಪ್ರಥಮ ದರ್ಜೆಯ ನಾಯಕರಾಗಿದ್ದು; ಅರೆ..... ಏನಾಶ್ಚರ್ಯ!

ಈ ಧೀರ ಕಾಂಗ್ರೆಸ್‌ನ ಒಳಜಗಳಗಳಿಂದ ಬೇಸತ್ತು ಅಧೀರರಾಗಿರಬಹುದು ಎಂದು ಕೆಲವರು ಭಾವಿಸಿದ್ದರು. ಆದರೆ ಅದರ ಒಳಮರ್ಮ ಬೇರೆಯೇ ಇದೆಯೆಂಬುದು ಇದೀಗ ಬಟಾಬಯಲಾಗುತ್ತಿದೆ. ಅಕ್ರಮ ಡಿನೋಟಿಫಿಕೇಶನ್ ವ್ಯವಹಾರದಲ್ಲಿ ಯಡ್ಡಿ ಮತ್ತು ಡಿಕೇಶಿಗಳ ಜಂಟಿ ಅವ್ಯವಹಾರವೇ ಅನುಮಾನಾಸ್ಪದ ಮೌನಕ್ಕೆ ಕಾರಣ ಎಂಬ ಸತ್ಯ ಹೊರಬಿದ್ದಿದೆ.

ಬೆಂಗಳೂರು ನಗರ ಶರವೇಗದಲ್ಲಿ ಬೆಳೆಯುತ್ತಿದೆ. ಅದರ ಕಿರೀಟಕ್ಕೆ ಮತ್ತೊಂದು ಗರಿಯೆಂಬಂತೆ ಮೆಟ್ರೋ ರೈಲು ಇತ್ತೀಚೆಗೆ ಉದ್ಘಾಟನೆಯಾಗಿದೆ. ಹಾಗೇ ಮೆಟ್ರೋ ನಿಲ್ದಾಣಗಳ ಸುತ್ತಮುತ್ತ ರಿಯಲ್ ಎಸ್ಟೇಟ್ ದರ ಯದ್ವಾತದ್ವಾ ಬೆಳೆಯುತ್ತಿದೆ. ಬೈಯಪ್ಪನಹಳ್ಳಿ ಮೆಟ್ರೋ ನಿಲ್ದಾಣದಿಂದ ಅನತಿ ದೂರದಲ್ಲೇ ಬೆನ್ನಿಗನಹಳ್ಳಿ ಸರ್ವೆ ನಂ. 50/2 ರಲ್ಲಿ ಮಾನ್ಯ ಡಿಕೇಶಿಯವರ ಹೆಸರಿನಲ್ಲಿ 4 ಎಕರೆ 20 ಗುಂಟೆ ಜಮೀನಿದೆ. ಆ ಜಮೀನನ್ನು ಮಾನ್ಯರು ತಾವು ಎಸ್.ಎಂ. ಕೃಷ್ಣ ಕ್ಯಾಬಿನೆಟ್‌ನಲ್ಲಿ ನಗರಾಭಿವೃದ್ಧಿ ಸಚಿವರಾಗಿದ್ದಾಗ 2003 ರಲ್ಲಿ ಖರೀದಿಸಿ ತಮ್ಮ ಹೆಸರಿನಲ್ಲೇ ಕ್ರಯಪತ್ರ ನೋಂದಾವಣೆ ಮಾಡಿಸಿದ್ದಾರೆ. ನಂತರ ಆರು ವರ್ಷಗಳ ಹಿಂದೆಯೇ ಸತ್ತು ಹೋಗಿರುವ ಮಾರಾಟಗಾರನ ಹೆಸರಿನಲ್ಲಿ ಡಿನೋಟಿಫಿಕೇಷನ್ ಮಾಡಿಸಿಕೊಂಡಿದ್ದಾರೆ. ಈ ಸ್ವತಿನ ಈಗಿನ ಮಾರುಕಟ್ಟೆ ದರ 40 ಕೋಟಿಗಳಿಗೂ ಅಧಿಕ. ಈ ಹಗರಣ ಕೋರ್ಟು ಮೆಟ್ಟಲೇರಿ ಸೂಕ್ತ ತನಿಖೆಯಾದರೆ ಡಿಕೇಶಿ ಮತ್ತು ಯಡ್ಡಿ ಜೋಡಿಯನ್ನು ಪರಪ್ಪನ ಅಗ್ರಹಾರದಲ್ಲಿ ನೋಡುವ ಸೌಭಾಗ್ಯ ನಾಡಿನ ಜನತೆಗೆ ಲಭಿಸಬಹುದು.

ಈ ಹಗರಣದ ತನಿಖೆಗೆ ಪೂರಕವಾದ ವಿವರಗಳ ಕಡೆ ಈಗ ಗಮನ ಹರಿಸೋಣ.

ಬೆನ್ನಿಗನಹಳ್ಳಿ ಗ್ರಾಮದ ಸರ್ವೆ ನಂ. 50/2 ರಲ್ಲಿರುವ 5 ಎಕರೆ 11 ಗುಂಟೆ ಜಮೀನು ಮೂಲತಃ ಮುನಿರೆಡ್ಡಿ ಎಂಬ ರೈತನಿಗೆ ಸೇರಿದ್ದಾಗಿತ್ತು. ಈ ಜಮೀನನ್ನು ತಾ. 18.12.1949 ರಂದು ಅಣ್ಣಪ್ಪ ಅಲಿಯಾಸ್ ಮುನಿಯಪ್ಪ ಎಂಬಾತನಿಗೆ ಈ ರೈತ ಮಾರಾಟ ಮಾಡಿದ. ತದನಂತರ ತಾ. 10.5.1962 ರಲ್ಲಿ ಈ ಅಣ್ಣಪ್ಪನು ಸದರಿ ಜಮೀನನ್ನು ಬಿ.ಕೆ. ಶ್ರೀನಿವಾಸನ್ ಎಂಬ ವ್ಯಕ್ತಿಗೆ ಕ್ರಯಮಾಡಿಕೊಟ್ಟ. ಈ ಶ್ರೀನಿವಾಸನ್ ಎಂಬ ವ್ಯಕ್ತಿ ಸ್ಥಿತಿವಂತನೂ, ಪ್ರಭಾವಿಯೂ ಆಗಿದ್ದರಿಂದ ಜಮೀನಿನ ಪೈಕಿ 4 ಎಕರೆ 20 ಗುಂಟೆ ಜಾಗಕ್ಕೆ 1962 ರಲ್ಲೇ ಕೈಗಾರಿಕಾ ಬಳಕೆಗೆಂದು ಕನ್ವರ್ಷನ್ ಸರ್ಟಿಫಿಕೆಟ್ ಪಡೆದುಕೊಂಡ. ಹೀಗೆ ಸದರಿ ಜಮೀನು ಶ್ರೀನಿವಾಸನ್‌ರವರ ಒಡೆತನದಲ್ಲಿರುವಾಗ 1984 ರಲ್ಲಿ 'ಎನ್‌ಜೀಎಫ್ ಪೂರ್ವಭಾಗದ ಬಡಾವಣೆ'ಯ ನಿರ್ಮಾಣಕ್ಕೆಂದು ಸದರಿ ಜಮೀನನ್ನು ರಾಜ್ಯ ಸರ್ಕಾರ ನೋಟಿಫೈ ಮಾಡಿತು. (BDA/SALAO/PR/T/557/84-85). ಆ ನಂತರದಲ್ಲಿ ತಾರೀಖು 18.12.1986 ರಂದು ಅಂತಿಮ ನೋಟಿಫಿಕೇಷನ್ ಹೊರಡಿಸಿದ ರಾಜ್ಯ ಸರ್ಕಾರ ಅದನ್ನು ತನ್ನ ಗೆಜೆಟ್‌ನಲ್ಲಿ ಪ್ರಕಟಿಸಿತು. (No. HUD 368 MNX 1986). ಆದರೆ 2000 ದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಅದರಲ್ಲೂ ಡಿಕೇಶಿಯವರು ಸಚಿವರಾದ ನಂತರ ಈ ಜಮೀನಿಗೆ ಸಂಬಂಧಿಸಿದ ಅಕ್ರಮಗಳ ಪರ್ವ ಶುರುವಾಯಿತು.

ಆಗಲೇ 82 ವರ್ಷ ತುಂಬಿದ್ದ ಬಿ.ಕೆ. ಶ್ರೀನಿವಾಸನ್‌ರಿಂದ ಒಂದು ಕೋಟಿ 62 ಲಕ್ಷಗಳಿಗೆ ಈ ಜಮೀನನ್ನು ಸಚಿವ ಡಿಕೇಶಿಯವರು ತಮ್ಮ ಅಭಿವೃದ್ಧಿ ಯೋಜನೆಯ ಉದ್ದೇಶಕ್ಕಾಗಿ ಖರೀದಿಸಿದರು.

ವಿಪರ್ಯಾಸವೆಂದರೆ ಮಾನ್ಯ ಡಿಕೆಶಿಯವರು ನಗರಾಭಿವೃದ್ಧಿ

ಕಾಯಲಿಕ್ಕೆ ಕಳ್ಳರನ್ನೇ ನೇಮಿಸಿದರೆ.....?

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷದ ಜವಾಬ್ದಾರಿ ಅತ್ಯಂತ ಗುರುತರವಾದುದು. ಆಡಳಿತ ಪಕ್ಷದ ತಪ್ಪುಗಳನ್ನು ಎತ್ತಿ ತೋರಿಸಿ ತಿದ್ದುವುದು ಅವುಗಳ ಕೆಲಸ. ಆದರೆ ಕರ್ನಾಟಕದ ದುಸ್ಥಿತಿಯೇನೆಂದರೆ ಆಡಳಿತ-ವಿರೋಧ ಪಕ್ಷಗಳ ಪ್ರಮುಖ ನಾಯಕರೇ ಒಂದಾಗಿ ಇಂಥ ದಂಧೆಗಳಿದರೆ ಅವರನ್ನು ಕೇಳುವವರಾದರೂ ಯಾರು? ಕಾಂಗ್ರೆಸ್‌ನ ಕೆಲ ಮುಖಂಡರೇ ಹೇಳುವಂತೆ "ಡಿಕೇಶಿ ಬಿಜೆಪಿ ಸರ್ಕಾರದ ಪ್ರಮುಖ ಫಲಾನುಭವಿ, ಈಗ ಹೊರಬಿದ್ದಿರುವುದು ಅದರ ಒಂದು ತುಣುಕು ಮಾತ್ರ. ಬಿಜೆಪಿಯೊಂದಿಗೆ ಕೈ ಜೋಡಿಸಿ ಡಿಕೇಶಿ ಅತ್ಯಂತ ಶ್ರೀಮಂತ ರಾಜಕಾರಣಿಯಾಗಿರುವುದು ಎಲ್ಲರಿಗೂ ಗೊತ್ತು." ಡಿಕೆಶಿಯ ಪೌರುಷ ಉಡುಗಿ ಹೋಗಿ ಅವರ ಬಾಯಿ ಕಟ್ಟದಂತಾಗಿರುವುದು ಅವರ ಬಾಯಿ ತುಂಬ ಬೆಣ್ಣೆ ತುಂಬಿರುವುದರಿಂದ ಎಂಬುದು ಈಗ ನಿಚ್ಚಳವಾಗಿದೆ.

ಇರುಳಲ್ಲಿ ಹೊಗಳಿ ಹಗಲಲ್ಲಿ ಬೈದರೆ.....?

ಬಿಜೆಪಿಯ ದುರಾಡಳಿತದ ಬಗ್ಗೆ ಕಾಂಗ್ರೆಸ್‌ನವರು ಒಮ್ಮೆ ಸದನದಲ್ಲಿ ಗದ್ದಲವೆಬ್ಬಿಸಿದ್ದರು. ಯಡ್ಡಿ ಕೆಟ್ಟ ಸಿಎಂ ಎಂದು ಜರೆದರು. ತಾನು ಈಗ ಬಾಯಿಮುಚ್ಚಿ ಕುಳಿತರೆ ಎಲ್ಲರೂ ಏನೆಂದುಕೊಂಡಾರು ಅಂದುಕೊಂಡ ಡಿಕೇಶಿ ತಮ್ಮ ಸರದಿಯಲ್ಲಿ ಯಡ್ಡಿ ವಿರುದ್ಧ ಚಾಟಿ ಬೀಸಿದರು. ಕೆರಳಿದ ಯಡ್ಡಿ ಸದನದಲ್ಲಿ ಹೇಳಿದ್ದೇನು ಗೊತ್ತೆ? "ನಿನ್ನೆ ರಾತ್ರಿಯಷ್ಟೇ ಡಿಕೇಶಿ ನನಗೆ ಕರೆಮಾಡಿ ಸುಮಾರು ಎರಡು ಗಂಟೆಗಳಿಗೂ ಹೆಚ್ಚು ಮಾತಾಡಿದರು. ಸಿಎಂ ಆಗಿ ತುಂಬಾ ಉತ್ತಮ ಕೆಲಸ ಮಾಡ್ತಿದೀರಿ ಅಂತ ಬಾಯ್ತುಂಬಾ ಹೊಗಳಿದರು. ಈಗ ಅವರು ತದ್ವಿರುದ್ಧವಾಗಿ ಮಾತಾಡುವುದನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತಿದೆ." ಈ ಮಾತನ್ನು ಕೇಳಿದ ಕೈ ಪಾಳೆಯದವರೇ ಪೆಚ್ಚಾದರು. ಈಗ ಹೇಳಿ ಬಿಜೆಪಿ ಪಾಪದಲ್ಲಿ ವಿರೋಧ ಪಕ್ಷಗಳ ಪಾಲು ಎಷ್ಟಿರಬಹುದು?

ರಾಮುಲು ಸುತ್ತ ತಂತ್ರ-ಕುತಂತ್ರ

ಬಳ್ಳಾರಿಯ ಉಪ ಚುನಾವಣಾ ಫಲಿತಾಂಶ ಶ್ರೀರಾಮುಲು ಪಾಲಿಗೆ 'ಮಾಡು ಇಲ್ಲವೇ ಮಡಿ' ಎಂಬುದು ನಿಜ. ಅದರ ಜೊತೆ ಜೊತೆಗೆ ಎಲ್ಲಾ ರಾಜಕೀಯ ಪಕ್ಷಗಳ ಧುರೀಣರಿಗೂ ಈ ಚುನಾವಣೆ ಒಂದು ಅಗ್ನಿಪರೀಕ್ಷೆಯಾಗಿದೆ. ಹೀಗಾಗಿ ಬಳ್ಳಾರಿ ಚುನಾವಣೆಯ ಫಲಿತಾಂಶ ಬರುವ ದಿನಗಳಲ್ಲಿ ರಾಜ್ಯ ರಾಜಕೀಯದಲ್ಲಿ ಬಿರುಗಾಳಿ ಎಬ್ಬಿಸಲಿದೆ.

ಇದೇ ಮೊದಲ ಬಾರಿಗೆ ಕಾಂಗ್ರೆಸ್ ಮತ್ತು ಜೆಡಿ (ಎಸ್) ತಮ್ಮ ಸಾಂಪ್ರದಾಯಿಕ ಪ್ರಚಾರ ಶೈಲಿ ಮತ್ತು ಮೌಲ್ಯಗಳನ್ನು ಬದಿಗಿಟ್ಟು ಅಧಿಕಾರದಲ್ಲಿರುವ ಬಿಜೆಪಿಯನ್ನು ಹೇಗಾದರೂ ಮಾಡಿ ಮುಗಿಸಲೇಬೇಕು ಎಂದು ತೆರೆಮರೆಯಲ್ಲಿ ತಂತ್ರ ಹೂಡಿರುವುದು ರಾಜಕೀಯ ವಲಯದಲ್ಲಿರುವ ಎಲ್ಲರಿಗೂ ಗೊತ್ತಿರುವ ವಿಷಯ. ಉದಾಹರಣೆಗೆ, ಶ್ರೀರಾಮುಲು ಬಿಜೆಪಿ ಪಕ್ಷದಿಂದ ಚುನಾವಣೆಗೆ ನಿಲ್ಲದಂತೆ ಮಾಡಿ ಅವರನ್ನು ಪಕ್ಷೇತರ ಅಭ್ಯರ್ಥಿಯಾಗಿ ನಿಲ್ಲಿಸಿದ್ದೇ ಕಾಂಗ್ರೆ ಧುರೀಣರು. ಆ ನಿಟ್ಟಿನಲ್ಲಿ ದೆಹಲಿಯಲ್ಲಿರುವ ಕಾಂಗ್ರೆ ನಾಯಕರು ಕೂಡ ಶ್ರೀರಾಮುಲು ಜೊತೆ ಮಾತುಕತೆಯಾಡಿದ್ದು ಗುಟ್ಟಾಗಿ ಉಳಿದಿಲ್ಲ. "ನೀವು ಪಕ್ಷೇತರ ಅಭ್ಯರ್ಥಿಯಾಗಿ ನಿಂತು ಗೆದ್ದಲ್ಲಿ, ಜೈಲಿನಲ್ಲಿರುವ ನಿಮ್ಮ ಫ್ರೆಂಡ್ ಜನಾರ್ದನ ರೆಡ್ಡಿಯನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲು ಸಹರಿಸುತ್ತೇವೆ" ಎಂದು ಕಾಂಗ್ರೆ ನಾಯಕರು ಶ್ರೀರಾಮುಲುಗೆ ಹೇಳಿದ್ದೇ ಶ್ರೀರಾಮುಲು ಕಮಲ ಪಕ್ಷದಿಂದ ದೂರ ಉಳಿಯಲು ಮುಖ್ಯ ಕಾರಣವಾಯಿತು.



ಪಕ್ಷೇತರ ಅಭ್ಯರ್ಥಿಯಾಗಿ ಶ್ರೀರಾಮುಲು ಚುನಾವಣೆಯಲ್ಲಿ ಗೆದ್ದರೆ, ಬಳ್ಳಾರಿಯ ರೆಡ್ಡಿ ಗ್ಯಾಂಗ್ ಬಿಜೆಪಿ ಸರ್ಕಾರದ ವಿರುದ್ಧ ಬಹಿರಂಗವಾಗಿ ತಿರುಗಿ ಬಿದ್ದು, ಈಗ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ತನ್ನಿಂದ ತಾನೇ ಕುಸಿಯುತ್ತದೆ ಎಂಬುದು ಕಾಂಗ್ರೆಸವರ ಲೆಕ್ಕಾಚಾರ. ಅಷ್ಟೇ ಅಲ್ಲ, ಹೀಗೆ ಮಾಡುವ ಮೂಲಕ ಅತ್ಯಂತ ಭ್ರಷ್ಟ ಬಿಜೆಪಿ ಸರ್ಕಾರವನ್ನು ಮಾಜಿ ಬಿಜೆಪಿ ನಾಯಕರಿಂದಲೇ ಸೋಲಿಸಿ ಮುಂದಿನ ಚುನಾವಣೆಗೆ ರೆಡಿಯಾಗುವುದು ಕಾಂಗ್ರೆಸ ರಾಜಕೀಯ ತಂತ್ರ.

ಕಾಂಗ್ರೆಸವರ ಇಂತಹ ಲೆಕ್ಕಾಚಾರ ಶ್ರೀರಾಮುಲುಗೆ ಇಷ್ಟವಾಗಲು ಕಾರಣಗಳಿದ್ದವು. ಮುಖ್ಯವಾಗಿ ರಾಮುಲು ಫ್ರೆಂಡ್ ಜನಾರ್ದನ ರೆಡ್ಡಿ ಸಧ್ಯದಲ್ಲೇ ಚಂಚಲಗುಡ ಜೈಲಿನಿಂದ ಬಿಡುಗಡೆಯಾಗುವ ಸಾಧ್ಯತೆ ಇತ್ತೀಚೆಗೆ ಕಮರಿತ್ತು. ಇದರ ಜೊತೆಜೊತೆಗೆ ತನಗೆ ಮಂತ್ರಿ ಸ್ಥಾನವನ್ನು ನಿರಾಕರಿಸಿದ ಬಿಜೆಪಿ ಪಕ್ಷಕ್ಕೆ ಪಾಠ ಕಲಿಸುವ ಇರಾದೆ ಶ್ರೀರಾಮುಲುಗೆ ಇತ್ತು. ಕಾಂಗ್ರೆ ಸೂತ್ರಕ್ಕೆ ಒಪ್ಪಿಕೊಂಡರೆ ಒಂದೇ ಏಟಿನಲ್ಲಿ ಎರಡನ್ನೂ ಸಾಧಿಸಬಹುದು ಎಂದೇ ಶ್ರೀರಾಮುಲು ಕಾಂಗ್ರೆ ಸೂತ್ರವನ್ನು ಒಪ್ಪಿಕೊಂಡಿದ್ದು.

ಆರಂಭದಲ್ಲಿ ಬಳ್ಳಾರಿ ಚುನಾವಣೆಯಿಂದ ಜೆಡಿ(ಎಸ್) ದೂರ ಉಳಿದಿತ್ತು. ಅದಕ್ಕೆ ಮುಖ್ಯ ಕಾರಣ ಆ ಕ್ಷೇತ್ರದಲ್ಲಿ ದಳಕ್ಕೆ ಹೇಳಿಕೊಳ್ಳುವಂತಹ ಶಕ್ತಿ, ಸಾಮರ್ಥ್ಯ ಮತ್ತು ನಾಯಕತ್ವ ಇಲ್ಲದಿರುವುದು. ಇನ್ನು ಜಾತಿ ಲೆಕ್ಕದಲ್ಲಿ ನೋಡುವುದಾದರೆ ಬಳ್ಳಾರಿಗೂ, ಮಂಡ್ಯ-ಹಾಸನ-ರಾಮನಗರದ ಒಕ್ಕಲಿಗರಿಗೂ ಎಳ್ಳಷ್ಟು ಸಂಬಂಧವಿಲ್ಲ. ಬಳ್ಳಾರಿಯಲ್ಲಿ ಒಕ್ಕಲಿಗ ಜನಾಂಗದ ಮತದಾರರು ಗಮನಾರ್ಹ ಸಂಖ್ಯೆಯಲ್ಲಿ ಇಲ್ಲವೇ ಇಲ್ಲ.

ಅದೆಲ್ಲಕ್ಕಿಂತ ಮುಖ್ಯವಾಗಿ ದಳದ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಇದೇ ಶ್ರೀರಾಮುಲುವಿನ ಮಿತ್ರ ಜನಾರ್ದನ ರೆಡ್ಡಿ "ಕುಮಾರಸ್ವಾಮಿ ಗಣಿ ಮಾಲೀಕರಿಂದ 150 ಕೋಟಿ ರೂಪಾಯಿಗಳ ಲಂಚವನ್ನು ಕೇಳಿದ್ದರು. ಅದಕ್ಕೆ ಸಾಕ್ಷಿಯಾದ



ಸೀಡಿ ನನ್ನ ಬಳಿ ಇದೆ" ಎಂದು ಆರೋಪಿಸಿದ್ದ. ಈ ಕಾರಣಕ್ಕಾದರೂ ಕುಮಾರಸ್ವಾಮಿ ಶ್ರೀರಾಮುಲು ಜೊತೆ ಕೈಜೋಡಿಸುವುದಿಲ್ಲ ಎಂಬ ನಂಬಿಕೆ ಕಾಂಗ್ರೆಸ್ಸಿನವರದ್ದಾಗಿತ್ತು.

ಅದಕ್ಕೆ ತಕ್ಕಂತೆ ಕುಮಾರಸ್ವಾಮಿ ಕೂಡ ಬಳ್ಳಾರಿಯಲ್ಲಿ ತಮ್ಮ ಪಕ್ಷದ ಕಡೆಯಿಂದ ಯಾರನ್ನೂ ಅಭ್ಯರ್ಥಿಯಾಗಿ ನಿಲ್ಲಿಸದೆ ತಟಸ್ಥರಾಗಿದ್ದರು. ಆದರೆ ಯಾವಾಗ ಕಾಂಗ್ರೆಸ್ಸಿಗರ ಲೆಕ್ಕಾಚಾರ ಅರ್ಥವಾಯಿತೋ ಕುಮಾರಸ್ವಾಮಿ ದಿಢೀರನೆ ಬಳ್ಳಾರಿ ರಾಜಕೀಯದ ಅಖಾಡಕ್ಕೆ ಧುಮುಕಿದರು. ಮತದಾನದ ದಿನ ಹತ್ತಿರವಾದಂತೆ

ಚಿವರಾಗಿದ್ದರು! ಈ ಜಮೀನಿಗೆ ಸಂಬಂಧಿಸಿದಂತೆ ಇದು ಮೊಟ್ಟಮೊದಲ ಅಕ್ರಮವಾಗಿತ್ತು. ಏಕೆಂದರೆ ಕರ್ನಾಟಕ ಭೂಮಿ ವರ್ಗಾವಣೆ ನಿಷೇಧ ಕಾಯಿದೆ-1991 ರ ಪ್ರಕಾರ ಭೂಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟ ಜಮೀನನ್ನು ಮಾರುವುದಾಗಲಿ, ಕೊಳ್ಳುವುದಾಗಲಿ ಕಾನೂನುಬಾಹಿರ. ಆ ಕಾಯಿದೆಯ 9 ನೇ ಸೆಕ್ಷನ್ ಪ್ರಕಾರ ಕಾಯಿದೆಯ ಉಲ್ಲಂಘನೆಗೆ ಮೂರು ವರ್ಷ ಜೈಲು ಮತ್ತು ದಂಡ ವಿಧಿಸಲು ಅವಕಾಶವಿದೆ.

ಜಮೀನನ್ನು ಖರೀದಿಸಿದ ಡಿಕೇಶಿ ಸುಮ್ಮನೆ ಕೈಕಟ್ಟಿ ಕೂರಲಿಲ್ಲ. ಏನೇ ಆಗಲಿ, ನಗರಾಭಿವೃದ್ಧಿ ಸಚಿವರು, ನಗರದ ಅಭಿವೃದ್ಧಿ ಮಾಡುವುದು ಬೇಡವೇ? ಆದ್ದರಿಂದ ಸನ್ಮಾನ್ಯರು ಒಂದೆರಡು ತಿಂಗಳಲ್ಲೇ ನಗರದ ಜಿಲ್ಲಾಧಿಕಾರಿಗೆ ಅರ್ಜಿ ಸಲ್ಲಿಸಿ ಸದರಿ ಜಮೀನನ್ನು ವಸತಿ ನಿವೇಶನಗಳನ್ನಾಗಿಸಲು ಕನ್ವರ್ಷನ್ ಮಾಡಿಕೊಡಲು ಕೋರಿದರು. ಆಗ ಆ ಜಮೀನು ಕೈಗಾರಿಕಾ ಭೂಮಿಯಾಗಿದ್ದರೂ ಅದನ್ನು ಕೃಷಿ ಭೂಮಿಯೆಂದು ತಪ್ಪಾಗಿ ನಮೂದಿಸಿದರು. ಖುದ್ದು ಸಚಿವರ ಅರ್ಜಿಯೆಂದ ಮೇಲೆ ನಾವು ಹೆಚ್ಚು ವಿವರಿಸುವ ಅಗತ್ಯವೇ ಇಲ್ಲ. ಆಗ ವಿಶೇಷ ಜಿಲ್ಲಾಧಿಕಾರಿಯಾಗಿದ್ದ ರಾಮೇಗೌಡರು ಕಡತಗಳನ್ನು ಶೀಘ್ರ ವಿಲೇವಾರಿ ಮಾಡಿ ಕನ್ವರ್ಷನ್‌ಗೆ ಸಂಪೂರ್ಣ ಅನುಮತಿ ಕೊಟ್ಟೇ ಬಿಡುವವರಿದ್ದರು. ಆದರೆ ಕಾನೂನಿನ ತೊಡಕು ಎದುರಾಯಿತು. ಆದ್ದರಿಂದ ನೋಟಿಫೈ ಮಾಡಿರುವ ಸದರಿ ಭೂಮಿಯನ್ನು ಬಿಡಿಎ ಡಿನೋಟಿಫೈ ಮಾಡುವುದಾದರೆ ಕನ್ವರ್ಷನ್‌ಗೆ ತಮ್ಮ ಅನುಮತಿ ಇದೆ ಎಂಬ ಷರತ್ತುಬದ್ಧ ಅನುಮತಿಯನ್ನಷ್ಟೇ ನೀಡಿದರು.

ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸುತ್ತಿರುವ ಡಿಕೇಶಿಗೆ ಉಳಿದದ್ದು ಒಂದೇ ದಾರಿ. ಬಿಡಿಎಯಿಂದ ಡಿನೋಟಿಫಿಕೇಷನ್ ಪಡೆದುಕೊಳ್ಳುವುದು. ಸಚಿವರಿಗೆ ಅದು ದೊಡ್ಡ ವಿಷಯವೇನಾಗಿರಲಿಲ್ಲ. ಆದರೆ ಅದೇನಾಯಿತೋ ಏನೋ ಎಸ್.ಎಂ. ಕೃಷ್ಣರಿಗೆ ತಮ್ಮ ಆಪ್ತರ ಈ ಕಡತಕ್ಕೆ ಸಹಿ ಮಾಡುವ ಭಾಗ್ಯ ಬರಲೇ ಇಲ್ಲ. ನಂತರ ಬಂದ ಧರಂಸಿಂಗ್ ಸರ್ಕಾರ ಡಿಕೇಶಿಯ ಬದ್ಧ ರಾಜಕೀಯ ವೈರಿ ದೇವೇಗೌಡ ಅಂಡ್ ಸನ್ಸ್‌ರ ಮರ್ಜಿಯಲ್ಲಿದ್ದುದರಿಂದ ಡಿಕೇಶಿ ಬೇಳೆ ಬೇಯಲಿಲ್ಲ. ಆನಂತರ ಖುದ್ದು ಕುಮಾರಸ್ವಾಮಿಯೇ ಮುಖ್ಯಮಂತ್ರಿಯಾಗಿದ್ದರಿಂದ ತಮ್ಮ ಹಿಕಮತ್ತು ನಡೆಯದೇ 'ಒಳ್ಳೇ ಕಾಲ ಬರುವ ತನಕ ಕಾಯಬೇಕು' ಎಂಬ ನಿರ್ಧಾರಕ್ಕೆ ಬಂದರು.

ಅಂಥ ಒಳ್ಳೇ ಕಾಲ ಬಂದೇಬಿಟ್ಟಿತು. ಯಡ್ಡಿ ಅಧಿಕಾರಕ್ಕೆ ಬಂದು ಡಿನೋಟಿಫಿಕೇಶನ್‌ಗಳ ಸರಮಾಲೆಯೇ ಶುರುವಾದಾಗ ಡಿಕೇಶಿ ವಿರೋಧ ಪಕ್ಷ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷರಾಗಿದ್ದರು. ಡಿಕೇಶಿಯ ವಿರೋಧಿಗಳು ಹೇಳುವಂತೆ ಯಡ್ಡಿ ಮನೆಗೆ ಫೈಲು ಹಿಡಿದುಕೊಂಡು ರಾತ್ರಿ ಹೊತ್ತಿನಲ್ಲಿ ಹೋದರೋ ಹಗಲು ಹೊತ್ತಿನಲ್ಲೇ ಹೋದರೋ ದೇವರೇ ಬಲ್ಲ. ಆದರೆ ನಡೆದಿದ್ದಂತೂ ಕಾಳ ರಾತ್ರಿಯ ಕಳ್ಳ ವ್ಯವಹಾರ. ಡಿಕೇಶಿ ಜಮೀನನ್ನು ಯಡ್ಡಿ ಕ್ಷಿಪ್ರವಾಗಿ ಡಿನೋಟಿಫೈ ಮಾಡಿ ಮುಗಿಸಿದ್ದರು. ಅದೂ ಡಿಕೇಶಿ ಹೆಸರಿನಲ್ಲಾದರೆ ಮಾಧ್ಯಮಗಳಲ್ಲಿ ಹಗರಣಗಳ ಧಾರವಾಹಿಯನ್ನೇ ಪ್ರದರ್ಶಿಸುತ್ತಿದ್ದ ದೇವೇಗೌಡ ಅಂಡ್ ಸನ್ಸ್ ಗಮನಕ್ಕೆ ಬಂದು ಫಜೀತಿಯಾಗುತ್ತಿತ್ತು. ಆ ಭೀತಿಯಿಂದಲೇ ಆರು ವರ್ಷಗಳ ಹಿಂದೆ ಈ ಲೋಕವನ್ನೇ ತ್ಯಜಿಸಿರುವ ಮಾಜಿ ಮಾಲೀಕ ಶ್ರೀನಿವಾಸನ್ ಎಂಬುವರ ಹೆಸರಿನಲ್ಲಿ ಈ ಆದೇಶ ಪ್ರಕಟವಾಯಿತು.

ಈಗ ಪೂರ್ವಾಂಕರ ಡೆವಲಪರ್ಸ್‌ನವರು ಪಾಲುದಾರಿಕೆ ಒಪ್ಪಂದ ಮಾಡಿಕೊಂಡು ಆ ಜಮೀನಲ್ಲಿ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಮುಂದಾಗಿದ್ದಾರೆ.

ಈಗ ನೋಡಿ. ಯಡ್ಡಿ ಮತ್ತು ಶೆಟ್ಟಿಗಳು ಜೈಲು ಸೇರಲು ಪ್ರಮುಖ ಕಾರಣವಾದದ್ದು ಇಂಥದ್ದೇ ರಾಚೇನಹಳ್ಳಿ ಭೂಮಿಯ ಡಿನೋಟಿಫಿಕೇಷನ್ ಪ್ರಕರಣ. ಈ ಕೇಸು ಕೂಡ ಲೋಕಾಯುಕ್ತ ಕೋರ್ಟು ಮುಂದೆ ಬರಲಿ. ಸೂಕ್ತ ತನಿಖೆ ನಡೆದು ಕಾನೂನನ್ನೇ ಕಾಲ ಕಸವಾಗಿಸಿಕೊಂಡು ಲೂಟಿ ಹೊಡೆಯುತ್ತಿರುವವರಿಗೆ ಸೂಕ್ತ ಶಿಕ್ಷೆಯಾಗಲಿ ಎಂದು ಆಶಿಸೋಣ. ❖


ಶ್ರೀರಾಮುಲು ಗೆಲುವಿಗೆ ಕುಮಾರಸ್ವಾಮಿ ತಮ್ಮೆಲ್ಲ ಶ್ರಮವನ್ನು ಹಾಕಿದರು. ಇದೆಲ್ಲದರ ಹಿಂದೆ ರಾಜಕೀಯ ಲಾಭ ನಷ್ಟ ಲೆಕ್ಕ ಅಡಗಿತ್ತು. ಅದೇನೆಂದರೆ ಈ ಚುನಾವಣೆಯಲ್ಲಿ ಶ್ರೀರಾಮುಲುನನ್ನು ಬೆಂಬಲಿಸಿದರೆ ಈಗ ಬಳ್ಳಾರಿ, ಕೊಪ್ಪಳ, ಹಾವೇರಿ, ಇತ್ಯಾದಿ ಪ್ರದೇಶಗಳಲ್ಲಿ ಹಬ್ಬಿರುವ ಶ್ರೀರಾಮುಲು ಮತ್ತು ಅವರ ಪಡೆಗಳು ದಳಕ್ಕೆ ಹತ್ತಿರವಾಗುತ್ತವೆ. ಆ ಮೂಲಕ ಮುಂದಿನ ಚುನಾವಣೆಯಲ್ಲಿ ಹಳೇ ಮೈಸೂರು ಪ್ರದೇಶದಲ್ಲಿ ಒಕ್ಕಲಿಗರ ಪ್ರಾಬಲ್ಯ ಮತ್ತು ಬಳ್ಳಾರಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಾಲ್ಮೀಕಿಗಳ ಬಲ, ಇವೆರಡೂ ಸೇರಿದರೆ ಮುಂದಿನ ಸರ್ಕಾರ ಸ್ಥಾಪನೆಯಲ್ಲಿ ತಮ್ಮದೇ ನಿರ್ಣಾಯಕ ಪಾತ್ರವಾಗಲಿದೆ ಎಂದು ಕುಮಾರಸ್ವಾಮಿಗೆ ಚೆನ್ನಾಗಿ ಗೊತ್ತು.

ರಾಜಕೀಯ ವಿಚಿತ್ರ ನೋಡಿ. ಶ್ರೀರಾಮುಲು ಪಕ್ಷೇತರ ಅಭ್ಯರ್ಥಿಯಾಗುವಂತೆ ಸ್ಕ್ರಿಪ್ಟ್ ನೋಡಿಕೊಂಡಿದ್ದರೆ, ಆತನನ್ನು ಗೆಲ್ಲಿಸಲು ಕುಮಾರಸ್ವಾಮಿ ವಿವಿಧ ಬಗೆಯ ಸರ್ಕಸ್ಸನ್ನು ಮಾಡಿದ್ದಾರೆ!

ಇದೆಲ್ಲದರ ಮಧ್ಯೆ ಬಿಜೆಪಿ ಪಕ್ಷದ ಯಾವ ನಾಯಕರ ಮುಖದಲ್ಲೂ ಕಳೆಯೇ ಇಲ್ಲದಂತಾಗಿದೆ. ಯಾಕೆಂದರೆ ಕಾಂಗ್ರೆಸ್ ಮತ್ತು ದಳಕ್ಕೆ ಹೋಲಿಸಿದರೆ ಈಗ ಬಿಜೆಪಿಯಲ್ಲೇ ಹೆಚ್ಚಿನ ಗುಂಪುಗಾರಿಕೆಯಿದೆ. ಆರಂಭದಲ್ಲಿ ಯಡಿಯೂರಪ್ಪ ಚುನಾವಣೆಯಲ್ಲಿ ಪ್ರಚಾರ ಮಾಡುವುದಿಲ್ಲ ಎಂದು ಘೋಷಿಸಿದಾಗ ಬಿಜೆಪಿ ಅಭ್ಯರ್ಥಿ ಚುನಾವಣೆಯ ಮೊದಲೇ ಇಡಗಂಟು ಕಳೆದುಕೊಂಡಂತಾಗಿದ್ದ. ತನ್ನನ್ನು ಈ ಚುನಾವಣೆಯ ಮೂಲಕ ತಾನು ಬಿಜೆಪಿಗೆ ಎಷ್ಟು ಅನಿವಾರ್ಯ ಎಂಬುದನ್ನು ಹೈಕಮಾಂಡ್‌ಗೆ ಯಡ್ಡಿ ತೋರಿಸಬೇಕಿದೆ. ಆ ಕಾರಣಕ್ಕೆ ಇಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಸೋಲಿಸಲೇ ಬೇಕು ಎಂಬುದು ಯಡ್ಡಿ ಗ್ಯಾಂಗಿನ ಹುನ್ನಾರ. ಒಂದು ವೇಳೆ ಬಿಜೆಪಿ ಅಭ್ಯರ್ಥಿ ಗೆದ್ದರೆ ಯಡ್ಡಿಗೆ ಜೈಲೋ ಅಥವಾ ಆಸ್ಪತ್ರೆಯೋ ಖಾಯಂ ಆಗುತ್ತದೆ. ಅದೇ ಹೊತ್ತಿಗೆ ಈಗ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿರುವ ಸದಾನಂದ ಗೌಡರಿಗೆ ಈ ಗೆಲುವು ನೂರು ಆನೆ ಬಲವನ್ನು ತಂದುಕೊಡುತ್ತದೆ. ಇದೆಲ್ಲ ಬಿಜೆಪಿ ಪಕ್ಷದೊಳಗೆ ಸದ್ಯಕ್ಕೆ ನಡೆಯುತ್ತಿರುವ ಕೆಸರೆರಚಾಟದ ಒಂದು ಪುಟ್ಟ ಅಧ್ಯಾಯ.

ಒಟ್ಟಾರೆಯಾಗಿ ಬಳ್ಳಾರಿಯ ಉಪ ಚುನಾವಣೆ ಬರುವ ದಿನಗಳಲ್ಲಿ ರಾಜ್ಯ ರಾಜಕೀಯದ ಚಿತ್ರಣವನ್ನೇ ಬದಲಿಸಬಹುದು.

– ಶ್ರೆಸ್ಗೆ



ಯಡ್ಡಿಗೆ ಗಂಟಲು ಕ್ಯಾನ್ಸರ್?

ಕೇಸರಿ ಪಾಳಯಕ್ಕಿದು ಆಘಾತಕರ ಸುದ್ದಿ ಹೌದೋ ಅಲ್ಲವೋ ಗೊತ್ತಿಲ್ಲ, ಆದರೆ ಯಡ್ಡಿ ಅನುಯಾಯಿಗಳಿಗಂತೂ ಖಂಡಿತ ದುರ್ವಾರ್ತೆಯೆ.

ಕೆಮ್ಮು ಜ್ವರದ ಕಾರಣಕ್ಕೆ ಮೊನ್ನೆಯಷ್ಟೇ ಮುಂಬಯಿ ಬ್ರೀಚ್‌ಕ್ಯಾಂಡಿ ಆಸ್ಪತ್ರೆಗೆ ಯಡ್ಡಿ ದಾಖಲಾದ ಘಟನೆಯ ಅಸಲಿಯತ್ತೇನು ಗೊತ್ತೇ?

ಯಡ್ಡಿಗೆ ಗಂಟಲು ಕ್ಯಾನ್ಸರ್?

ಬೆಂಗಳೂರಿನ ಬಿಬಿಎಂಪಿ ಕೇಂದ್ರ ಕಚೇರಿ ಹಿಂಭಾಗದ ಹೆಚ್‌ಸಿಜಿ ಗ್ಲೋಬಲ್ ಆಸ್ಪತ್ರೆಯ ದಾಖಲೆಗಳೇ ಹೇಳುವಂತೆ ಮಾಜಿ ಸಿಎಂ ಯಡ್ಡಿಗೆ ಗಂಟಲು ಕ್ಯಾನ್ಸರ್...!.

ಬಳ್ಳಾರಿಯ ಎಲೆಕ್ಷನ್, ಗಣಿ ಧೈತ್ಯರ ವಿರುದ್ಧದ ಆಕ್ರೋಶ, ಲೋಕಾಯುಕ್ತ ಸಂಕೋಲೆಯ ಧಾವಂತ..... ಹೀಗೆ ಎಲ್ಲವನ್ನೂ ಕೈಬಿಟ್ಟು ಏಕಾಏಕಿ ಮುಂಬಯಿಯ ಬ್ರೀಚ್‌ಕ್ಯಾಂಡಿ ಆಸ್ಪತ್ರೆಗೆ ಯಡ್ಡಿ ದಾಖಲಾಗುತ್ತಾರೆಂದರೆ ಅದು ಕೇವಲ ಕೆಮ್ಮಾಗಲಿ, ಜ್ವರವಾಗಲೀ, ಶೀತ-ನೆಗಡಿಯಾಗಲಿ ಆಗಿರಲಿಕ್ಕೆ ಸಾಧ್ಯವೇ ಇಲ್ಲ. ಸಾಧಾರಣದ ಜ್ವರಕ್ಕಾಗಲಿ, ಅದೆಂಥದೇ ಕೆಮ್ಮಿಗಾಗಲಿ ಯಾರೂ ದೂರದ ಮುಂಬಯಿಯ ಬ್ರೀಚ್‌ಕ್ಯಾಂಡಿಯಂಥ ಪ್ರತಿಷ್ಠಿತ ಆಸ್ಪತ್ರೆಗೆ ದಾಖಲಾಗುವುದಿಲ್ಲ. ಅದರಲ್ಲೂ ಬಿಜೆಪಿ ಸರ್ಕಾರದ ಅನಭಿಷಕ್ತ ಅಧಿಪತಿ ಯಡಿಯೂರಪ್ಪ ಬೆಂಗಳೂರಿನ ಎಂತೆಂಥದ್ದೋ ಆಸ್ಪತ್ರೆಗಳನ್ನೆಲ್ಲ ತೊರೆದು ರಾತ್ರೋರಾತ್ರಿ ಮುಂಬಯಿಗೆ ಹೋಗುತ್ತಾರೆಂದರೆ ಹಕೀಕತ್ತು ಬೇರೆಯದೇ ಇರಬೇಕು.

ಇಂಥದೊಂದು ಅನುಮಾನ, ಗುಮಾನಿಗೆ ಉತ್ತರ ಸಿಕ್ಕುವುದು ಬೆಂಗಳೂರಿನ ಬಿಬಿಎಂಪಿ ಕೇಂದ್ರ ಕಚೇರಿಯ ಹಿಂಭಾಗದ ಹೆಚ್‌ಸಿಜಿ ಗ್ಲೋಬಲ್ ಆಸ್ಪತ್ರೆಯಲ್ಲಿ. ಇದು ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿಯ ಅಂಗಸಂಸ್ಥೆ. ಡಾ. ಅಜಯ್‌ಕುಮಾರ್ ಒಡೆತನದ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿ ಸಂಸ್ಥೆ ಹೇಳಿಕೇಳಿ ಕ್ಯಾನ್ಸರ್ ಸಂಬಂಧಿ ಆಸ್ಪತ್ರೆ. ಇದರ ಅಂಗಸಂಸ್ಥೆ ಹೆಚ್‌ಸಿಜಿ ಗ್ಲೋಬಲ್ ಆಸ್ಪತ್ರೆ ಕೂಡ ಕ್ಯಾನ್ಸರ್ ತಪಾಸಣೆಗೆಂದೇ ಖ್ಯಾತಿವೆತ್ತ ಅತ್ಯಂತ ದುಬಾರಿ ಮತ್ತು ಉನ್ನತ ತಾಂತ್ರಿಕ ಸೌಲಭ್ಯಗಳುಳ್ಳ ಆಸ್ಪತ್ರೆ. ಮೊನ್ನೆ ಅಂದರೆ ನವೆಂಬರ್ 26ರ ಶನಿವಾರಕ್ಕೆ ಯಡ್ಡಿಗೆ ವಿಪರೀತ ಬಳಲಿಕೆ ಜೊತೆಗೆ ಜ್ವರ, ಕೆಮ್ಮು ಕಾಣಿಸಿಕೊಂಡಿದೆ.

ಇತ್ತೀಚೆಗಷ್ಟೇ ಜೈಲಿನಿಂದ ಬಂದಿದ್ದರಿಂದ ಜೈಲಲ್ಲಿ ಊಟ, ನೀರು, ಉಪಚಾರ ಸರಿಹೊಂದದ ಕಾರಣ ಆರೋಗ್ಯ ಹದಗೆಟ್ಟಿರಬೇಕೆಂದು ಭಾವಿಸಿದ್ದ ಯಡ್ಡಿಗೆ ಅದರ ಮರುದಿನ ಅಂದರೆ ನವೆಂಬರ್ 27ರ ಭಾನುವಾರದ ಹೊತ್ತಿಗೆ ಕೆಮ್ಮು ವಿಪರೀತಗೊಂಡಿದೆ. ಅದೇನೇ ಸಿರಪ್ಪು, ಕಷಾಯ ಅಂತ ಕುಡಿದರೂ ವಾಸಿಯಾಗದ ಕೆಮ್ಮು. ಜೊತೆಗೆ ಧ್ವನಿಯಲ್ಲೇ ಏನೋ ಬದಲಾವಣೆಯಾದಂತೆ ಇದ್ದಕ್ಕಿದ್ದಂತೆ ಗೊಗ್ಗರು ಧನಿ-ನಿಮಿಷಕ್ಕೊಂದು ಸ್ವರ ಹೊರಡಲಾರಂಭಿಸಿದೆ. ಬಿಟ್ಟುಬಿಟ್ಟು ಬರುತ್ತಿದ್ದ ಜ್ವರ, ಇದ್ದಕ್ಕಿದ್ದಂತೆ ಆವರಿಸಿದ ಬಳಲಿಕೆಯನ್ನು ಗಮನಿಸಿದ ವೈದ್ಯರುಗಳಿಗೆ ಅದೇನೆನ್ನಿಸಿತೊಡಗಿತೋ ಯಾವುದಕ್ಕೂ ಕ್ಯಾನ್ಸರ್ ತಪಾಸಣೆ ಮಾಡಿಸಿಕೊಳ್ಳಿ ಎಂದಿದ್ದಾರೆ.

ಇನ್ನು ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿಗೆ ಕಾಲಿಟ್ಟರೆ ಅದರ ಹೆಸರಲ್ಲೇ ರೋಗದ ಸೂಚನೆಯಿದೆ. ಪುಕಾರಾಗಿ ಬಿಡುತ್ತದೆ. ಎಲ್ಲಕ್ಕೂ ಅನುಕೂಲಕರವಾದದ್ದು ಸುಬ್ಬಯ್ಯ ಸರ್ಕಲ್ ಸಮೀಪದ ಎಚ್‌ಸಿಜಿಯೇ. ಸೋಮವಾರ ಅಂದರೆ ನವೆಂಬರ್ 28 ರ ಬೆಳಗ್ಗೆಯೇ ಯಡ್ಡಿ, ಮಗ ವಿಜಯೇಂದ್ರ, ಮಗಳು, ಸೊಸೆಯಂದಿರ ಜೊತೆಗೆ ಎಚ್‌ಸಿಜಿ ಆಸ್ಪತ್ರೆಗೆ ಬಂದಿದ್ದಾರೆ. ಅಲ್ಲಿನ ಕ್ಯಾನ್ಸರ್ ಶೋಧಕ ಸ್ಕ್ಯಾನರ್‌ನಲ್ಲಿ ಯಡ್ಡಿಯನ್ನು ಮಲಗಿಸಿ ಕೂಲಂಕಷವಾಗಿ ಪರೀಕ್ಷಿಸಿದ ತಜ್ಞರಿಗೆ ಒಂದಂತೂ ಸ್ಪಷ್ಟವಾಗಿದೆ.

ಅದು ಗಂಟಲು ಕ್ಯಾನ್ಸರ್!

ಯಡ್ಡಿಗೆ ಆಗಷ್ಟೇ ಗಂಟಲು ಕ್ಯಾನ್ಸರ್ ಶುರುವಾಗಿದ್ದನ್ನು ಸ್ಕ್ಯಾನರ್ ಸ್ಪಷ್ಟವಾಗಿ ಗುರುತಿಸಿತ್ತು. ಅದು ಇನಿಷಿಯಲ್ ಸ್ಟೇಜ್ ಮಾತ್ರ. ಅದರ ಮುಖ್ಯ ಲಕ್ಷಣವೇ ಅಸಾಧ್ಯ ಕೆಮ್ಮು ಮತ್ತು ಬಿಟ್ಟುಬಿಟ್ಟು ಬರುವ ಜ್ವರ. ಇದ್ದಕ್ಕಿದ್ದಂತೆ ಬಳಲಿಕೆ ಶುರುವಾಗುತ್ತದೆ. ಏಕಾಏಕಿ ದೇಹದ ತೂಕ ಕುಸಿಯುತ್ತದೆ. ನಿಮಿಷಕ್ಕೊಮ್ಮೆ ಧ್ವನಿ ಬದಲಾಗುತ್ತದೆ. ಕೆಲವೊಮ್ಮೆ ಗೊಗ್ಗರು ಧ್ವನಿ ಮತ್ತೆ ಕೆಲವೊಮ್ಮೆ ಕೀರಲು ಸ್ವರ. ಇದೆಲ್ಲವನ್ನೂ ಎಚ್‌ಸಿಜಿ ಆಸ್ಪತ್ರೆಯ ಸ್ಕ್ಯಾನರ್ ಸ್ಪಷ್ಟಪಡಿಸುತ್ತಿದ್ದಾಗ ಆಘಾತಕ್ಕೀಡಾದ ಯಡ್ಡಿ ಕುಸಿದು ಬಿದ್ದಿದ್ದಾರೆ. ಆಗ ಯಡ್ಡಿಯನ್ನು ಸಂತೈಸಿದ್ದು ಡಾ. ಅಜಯ್‌ಕುಮಾರ್ ಮತ್ತು ಸಚಿವ ವಿ. ಸೋಮಣ್ಣ.

ಇನ್ನೂ ಮೊಳಕೆಯಲ್ಲಿರುವುದರಿಂದ ಈಗಲೇ ಅದಕ್ಕೆ ಚಿಕಿತ್ಸೆ ಮಾಡಿಬಿಟ್ಟರೆ ನೂರು ವರ್ಷದ ಆಯಸ್ಸು ಕಟ್ಟಿಟ್ಟಬುತ್ತಿ ಎಂಬ ಸೋಮಣ್ಣನ ಧೈರ್ಯ ಯಡ್ಡಿಯನ್ನು ಉತ್ತೇಜಿಸಿರಬೇಕು. ಆದರೆ ಸುದ್ದಿ ಬಯಲಾದರೆ ಏನು ಗತಿ? ಎಂದು ಯಡ್ಡಿ ಮರುಗಿದ್ದಕ್ಕೆ ಸೋಮಣ್ಣ ತನ್ನ ಪರಿಚಿತ ವೈದ್ಯರೊಬ್ಬರನ್ನು ಸಂಪರ್ಕಿಸಿದ್ದಾನೆ. ಅವರೇನೆಂದರೋ ಅಥವಾ ಯಡ್ಡಿಯ ಖಾಸಾ ವೈದ್ಯರೇ ಹೇಳಿಕೊಟ್ಟರೋ ಗೊತ್ತಿಲ್ಲ. ಈಗಾಗಲೇ ಕಟ್ಟಾನಾಯ್ಡೂ ಕೂಡ ತನ್ನ ಕ್ಯಾನ್ಸರ್ ಖಾಯಿಲೆಗೆ ಮುಂಬಯಿ ಹಾದಿ ಹಿಡಿದಂತೆ ಯಡ್ಡಿಗೂ ಅನ್ನಿಸಿರಬೇಕು.

ದೂರದ ಮುಂಬಯಲ್ಲಿ ಯಾರಿಗೂ ಗೊತ್ತಾಗದ ಹಾಗೆ ಗಂಟಲ ಕ್ಯಾನ್ಸರಿನ ಚಿಕಿತ್ಸೆ ಪಡೆದು ಬಂದರೆ ಸಮಸ್ಯೆ ಪರಿಹಾರವಾದಂತೆಯೇ ಎಂದು ಯಡ್ಡಿ ಮರುದಿನವೇ ಕುಟುಂಬ ಸಮೇತ ಮುಂಬಯಿಗೆ ಹಾರಿದ್ದಾರೆ. ನವೆಂಬರ್ 30 ರ ಬುಧವಾರವೇ ಬ್ರೀಚ್‌ಕ್ಯಾಂಡಿಗೆ ದಾಖಲಾಗಿದ್ದಾರೆ. ಆದರೆ ಗಂಟಲು ಕ್ಯಾನ್ಸರನ್ನು ಮುಚ್ಚಿಟ್ಟು ಕೆಮ್ಮು-ಜ್ವರಕ್ಕೆ ದಾಖಲಾದಂತೆ ಸುದ್ದಿ ಹಬ್ಬಿಸಿದ್ದಾರೆ. ಯಾರಾದರೂ ಕೆಮ್ಮು-ಜ್ವರಕ್ಕೆ ಮುಂಬಯಿಗೆ ಹೋಗಿ ಬ್ರೀಚ್‌ಕ್ಯಾಂಡಿಯಂಥ ಪರಮ ದುಬಾರಿ ಆಸ್ಪತ್ರೆಗೆ ಏಕಾದರೂ ದಾಖಲಾಗುತ್ತಾರೆ? ಅದು ಯಡ್ಡಿಯ ಪ್ರಾಣಭೀತಿಯೇ? ಅಥವಾ ನಿಷ್ಣಾತ ಕ್ಯಾನ್ಸರ್ ತಜ್ಞರಿಂದ ಸೆಕೆಂಡ್ ಒಪಿನಿಯನ್ ಪಡೆಯುವ ಜೀವ ನಿರೀಕ್ಷೆಯೇ? ಹೇಗೊ ಮತ್ತೊಮ್ಮೆ ಜೈಲು ಶಿಕ್ಷೆಯಿಂದ ಪಾರಾಗಲು ಕಟ್ಟಾ ಹಿಡಿದ ದಾರಿಯಲ್ಲೇ ಯಡ್ಡಿ ಸಾಗುತ್ತಿರಬಹುದಾ? ಏಕಕಾಲಕ್ಕೆ ಜೈಲು ಮತ್ತು ಕ್ಯಾನ್ಸರ್ ಎರಡರಿಂದಲೂ ಬಚಾವಾಗಲು ಯಡ್ಡಿ ಹಾಕುತ್ತಿರುವ ರಾಜಕೀಯ ಪಗಡೆಯಾ?


ಒಂದಂತೂ ಸತ್ಯ. ಕೇವಲ ಕೆಮ್ಮು-ಜ್ವರಕ್ಕೆ ಯಾರೂ ಮುಂಬಯಿಗೆ ಹೋಗುವುದಿಲ್ಲ. ಮತ್ತು ಎಚ್‌ಜಿಸಿ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಬಿಟ್ಟರೆ ಯಕಶ್ಚಿತ್ ಕೆಮ್ಮು ಜ್ವರಕ್ಕೆ ಚಿಕಿತ್ಸೆಯನ್ನೂ ನೀಡುವುದಿಲ್ಲ.

ಯಡ್ಡಿ ಬೇಗ ಗುಣಮುಖರಾಗಲಿ. ಒಳಿತೋ ಕೆಡುಕೋ ಕ್ಯಾನ್ಸರ್ ಅವರನ್ನು ಕಬಳಿಸದಿರಲಿ.

–ರಾ.ಸೋ.

ಋಣಾನುಬಂಧ ರೂಪೇಣ; ಸೋಮಣ್ಣನೇ ಕಾರಣ...!





ಬಿಜೆಪಿಗೂ ಕ್ಯಾನ್ಸರಿಗೂ ಡಿನೋಟಿಫಿಕೇಷನ್ನಿಗೂ ಭ್ರಷ್ಟಾಚಾರಕ್ಕೂ ಮತ್ತು ಜೈಲಿಗೂ ಅದೇನು ಋಣಾನುಬಂಧವೋ ಗೊತ್ತಿಲ್ಲ. ಕಟ್ಟಾ ಜೈಲಿಂದ ಹೊರಬೀಳಲು ಹೇಗೆ ಕ್ಯಾನ್ಸರ್ ನೆರವಾಯಿತೋ ಹಾಗೇ ಸೋಮಣ್ಣ ಮತ್ತೆ ಮಂತ್ರಿಯಾಗುವುದಕ್ಕೂ, ಯಡ್ಡಿ ಪಾಲಿಗೆ ಆತ ಮಾನಸ ಪುತ್ರನಾಗುವುದಕ್ಕೂ ಮತ್ತು ಈಗ ಯಡ್ಡಿಯನ್ನು ಮುಂಬಯಿಯ ದಾರಿ ಹಿಡಿಸುವುದಕ್ಕೂ ಇದೇ ಕ್ಯಾನ್ಸರ್ ಕಾರಣವಾಯಿತು. ಏಕೆಂದರೆ ಕ್ಯಾನ್ಸರ್ ಎಂಬುದು ಸೋಮಣ್ಣನ ಪಾಲಿಗೆ ವಂಶವಾಹಿಯಂತೆ ಕಾಡುತ್ತಿತ್ತು. ಸೋಮಣ್ಣನ ತಂದೆ ಕನಕಪುರ ತಾಲ್ಲೂಕು ಮರಳವಾಡಿ ಹೋಬಳಿಯ ವೀರಣ್ಣನ ಇಬ್ಬರು ಹೆಣ್ಣು ಮತ್ತು ಮೂವರು ಗಂಡುಮಕ್ಕಳ ಪೈಕಿ ಕೊನೆಯವನೇ ಸೋಮಣ್ಣ. ಅದೇನು ದೌರ್ಭಾಗ್ಯವೋ ಸೋಮಣ್ಣನ ಇಬ್ಬರೂ ಅಣ್ಣಂದಿರು ಕ್ಯಾನ್ಸರ್‌ಗೆ ತುತ್ತಾಗಿ ಕೊನೆಯುಸಿರೆಳೆದರು. ಉಳಿದ ಒಬ್ಬನೇ ಗಂಡು ಮಗ ಸೋಮಣ್ಣನಿಗೂ ಅದೆಂಥದ್ದೋ ಕ್ಯಾನ್ಸರ್ ಭೀತಿ ಕಾಡುತ್ತಲೇ ಇದ್ದದ್ದು ಕಳೆದ ಉಪಚುನಾವಣೆಯ ಸೋಲಿನ ಜೊತೆಗೇ ನಿಜವಾಗಿತ್ತು. ಇದ್ದಕ್ಕಿದ್ದಂತೆ ಸುಸ್ತು, ಬಿಟ್ಟುಬಿಟ್ಟು ಜ್ವರ!

ಬಿಜಿಎಸ್ ಗ್ಲೋಬಲ್ ಆಸ್ಪತ್ರೆಗೆ ಹೋಗಿ ಮೈಯೊಡ್ಡಿದ ಸೋಮಣ್ಣನಿಗೆ ಶಾಕ್ ಕಾದಿತ್ತು. ಅದು ಕ್ಯಾನ್ಸರ್‌ನ ಮುನ್ಸೂಚನೆ! ಪ್ಯಾಂಕ್ರಿಯಾಸ್ ಅಂದರೆ ಮೇದೋಜೀರಕ ಗ್ರಂಥಿಗೆ ಕ್ಯಾನ್ಸರ್ ವಕ್ಕರಿಸಿತ್ತು. ಯಾವುದಕ್ಕೂ ಸೆಕೆಂಡ್ ಒಪಿನಿಯನ್ನಿಗೆಂದು ಮಣಿಪಾಲ್ ಆಸ್ಪತ್ರೆಗೆ ದಾಖಲಾದರೆ ಅಲ್ಲೂ ಅದೇ ನಿಚ್ಚಳಗೊಂಡಿತ್ತು. ಇನ್ನು ತಡಮಾಡಿದರೆ ಅಪಾಯ ಎನ್ನಿಸಿದ್ದೇ ಸೋಮಣ್ಣ ಹೈದರಾಬಾದಿಗೆ ಹೋಗಿ ಕ್ಯಾನ್ಸರ್ ಪೀಡಿತ ಪ್ಯಾಂಕ್ರಿಯಾಸ್ ಅನ್ನೇ ತೆಗೆಸಿಕೊಂಡರು. ಇದೇ ಮರುಕಕ್ಕೆ ಬಿದ್ದ ಯಡ್ಡಿ, ಗಣಿ ರೆಡ್ಡಿಗಳು, ಹೈಕಮಾಂಡನ್ನೂ ಧಿಕ್ಕರಿಸಿ ಸೋಮಣ್ಣನನ್ನು ಮಂತ್ರಿಯಾಗಿಸಿದ್ದು!

ಬಹುಶಃ ಅವತ್ತು ಹೈದ್ರಾಬಾದಿಗೆ ಹೋಗಿ ತನ್ನ ಮೇದೋಜೀರಕ ಗ್ರಂಥಿಯನ್ನು ಸೋಮಣ್ಣ ತೆಗೆಸಿಹಾಕದೇ ಹೋಗಿದ್ದರೆ ಏನಾಗುತ್ತಿತ್ತೋ. ಹಾಗೆ ಪ್ರಾರಂಭದಲ್ಲೇ ಹುಷಾರಾದ ತನ್ನ ಅನುಭವವನ್ನು ಗುರು ಯಡ್ಡಿ ಮುಂದಿಟ್ಟು ಸೋಮಣ್ಣ ಧೈರ್ಯ ತುಂಬದೇ ಹೋಗಿದ್ದರೆ ಇವತ್ತು ಯಡ್ಡಿ ಮುಂಬಯಿಗೆ ಹೋಗುತ್ತಲೇ ಇರಲಿಲ್ಲ ಮತ್ತು ಆಘಾತದಿಂದ ಹೊರಬರುವುದೂ ಸಾಧ್ಯವಿರಲಿಲ್ಲ.





ಹ್ಯಾಪಿ ಸೂಸೈಡ್

ವಿಚಿತ್ರ ಕತೆ

> ದಿನಗಳು ಉರುಳಿದಂತೆ ಕರಕುಶಲ ಕೆತ್ತನೆಯುಳ್ಳ ಕುರ್ಚಿಗಳು, ಐಷಾರಾಮಿ ಸೋಫಾ, ಮುಂತಾದ ಬೆಲೆ ಬಾಳುವ ವಸ್ತುಗಳನ್ನೆಲ್ಲ ಒಂದೊಂದಾಗಿ ಹೊರಗೆಸೆದರು. ಇದನ್ನು ಕಂಡ ಜನರಿಗೆ ಸೋಜಿಗವೆನಿಸಿದರೆ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದವರಿಗೆ ಸಂತೋಷವಾಗಿತ್ತು. ನಿಧಾನವಾಗಿ ಆನಂದ್-ದೀಪಾಳ ಮನೆ ಖಾಲಿಯಾಗುತ್ತಿದ್ದಂತೆ ಅಪಾರ್ಟ್ ಮೆಂಟ್‌ನ ಸೂಪರ್‌ವೈಸರ್‌ನ ಮನೆ ತುಂಬಲಾರಂಭಿಸಿತು. ಯಾಕೆಂದರೆ ಅವರಿಬ್ಬರು ಬಿಸಾಡಿದ್ದ ಬೆಲೆಬಾಳುವ ವಸ್ತು ಗಳನ್ನೇ ಆತ ಹೊತ್ತೊಯ್ಯುತ್ತಿದ್ದ. ಇದನ್ನು ಕಂಡು ಇತರೆ ಕೆಲಸಗಾರರು ದಿನಕ್ಕೆ ಎರಡು ಮೂರು ಬಾರಿ ನಾಲ್ಕನೇ ಮಹಡಿಗೆ ಬಂದು ಇವರಿಬ್ಬರು ಮತ್ತೇನನ್ನಾದರೂ ಎಸೆದಿ ದ್ದಾರೆಯೇ ಎಂದು ನೋಡಲಾರಂಭಿಸಿದರು.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಕಣ್ಣನ ತಣಿಸುವ ಪ್ರಕೃತಿ ಸೌಂದರ್ಯವಿರುವ ಗೋವಾ ಎಂದರೆ ಪ್ರವಾಸಿಗರ ಸ್ವರ್ಗ. ಗೋವಾದಲ್ಲಿ ವಿಶಾಲವಾದ ಬೀಚುಗಳಷ್ಟೇ ಅಲ್ಲ, ರಾತ್ರಿ ಕ್ಲಬ್ಬುಗಳು, ಪಬ್ಬುಗಳು, ಡಿಸ್ಕೋ ತೆಕ್‌ಗಳು, ಐಷಾರಾಮಿ ರೆಸಾರ್ಟ್‌ಗಳು ಈ ಪುಟ್ಟ ರಾಜ್ಯದ ಉದ್ದಗಲಕ್ಕೂ ಹರಡಿಕೊಂಡಿವೆ. ಗೋವಾದ ರಾಜಧಾನಿ ಪಣಜಿ ದೇಶ ವಿದೇಶಗಳ ಪ್ರವಾಸಿಗರಿಂದ ಸದಾ ಗಿಜಿಗುಡು ತ್ತಿರುತ್ತದೆ. ಅಂಥ ಜನಜಂಗುಳಿಯಿಂದ ದೂರ ಉಳಿದು ಆಹ್ಲಾದಕರ ಜೀವನ ಸಾಗಿಸಬೇಕೆಂದರೆ ನಗರದ ಹೊರ ವಲಯಗಳಲ್ಲಿ ಐಷಾರಾಮಿ ಅಪಾರ್ಟ್‌ಮೆಂಟುಗಳೂ ಲಭ್ಯ. ಪಣಜಿಯಿಂದ ಕೇವಲ ಹತ್ತು ಕಿಲೋಮೀಟರ್ ದೂರದಲ್ಲಿ ಮರ್ಸಿಸ್ ಎಂಬ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್ ಇದೆ. ಒಂದು ಈಜುಕೊಳ, ವ್ಯಾಯಾಮಶಾಲೆ, ಲೈಬ್ರರಿಯನ್ನು ಒಳ ಗೊಂಡಂತೆ ಎಲ್ಲಾ ಆಧುನಿಕ ಸೌಲಭ್ಯಗಳಿಂದ ಈ ಐಷಾರಾಮಿ ಮರ್ಸಿಸ್ ಕಟ್ಟಡ ಸುಸಜ್ಜಿತವಾಗಿದೆ.

ಆದರೆ ಇದೇ ಕಟ್ಟಡದಲ್ಲಿ ಒಂದು ನಿಗೂಢ ಘಟನೆ ಇತ್ತೀಚೆಗೆ ನಡೆಯಿತು. ಅಕ್ಟೋಬರ್ ತಿಂಗಳಿನ ಮೊದಲ ವಾರದಲ್ಲಿ ಈ ಕಟ್ಟಡದ ನಿವಾಸಿಗಳು ದಸರಾ ಹಬ್ಬದ ತಯಾರಿ ಯಲ್ಲಿ ತಲ್ಲೀನರಾಗಿದ್ದರು. ಆದರೆ ಇದ್ದಕ್ಕಿದ್ದಂತೆ ಅಸಹ್ಯವಾದ ದುರ್ನಾತ ಎಲ್ಲೆಡೆ ಹಬ್ಬಿತು. ಬಹುಶಃ ಇಲಿಯೋ ಹೆಗ್ಗಣವೋ ಸತ್ತಿರಬಹುದೆಂದು ಭಾವಿಸಿದ ಅಪಾರ್ಟ್‌ಮೆಂಟ್‌ನ ನಿವಾಸಿಗಳು ಆ ವಾಸನೆಯ ಜಾಡನ್ನು ಹಿಡಿದು ಹೋದಾಗ ನಾಲ್ಕನೇ ಮಹಡಿಯಲ್ಲಿರುವ ಟಿ-03ನೇ ನಂಬರಿನ ಫ್ಲಾಟ್‌ನಿಂದಲೇ ಆ ದುರ್ನಾತ ಹರಡುತ್ತಿರುವುದನ್ನು ಪತ್ತೆ ಹಚ್ಚಿದರು. ದುರ್ವಾಸನೆಯನ್ನು ನಿವಾರಿಸಲು ಹೊರಗಿ ನಿಂದಲೇ ಮನೆಯ ಮಾಲಿಕರನ್ನು ಫೋನ್ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದರು. ಪ್ರಯೋಜನವಾಗಲಿಲ್ಲ, ನಂತರ ಈ ಮೇಲ್ ಮೂಲಕ ಸಂಪರ್ಕಿಸಲು ಪ್ರಯತ್ನಿಸಿದರು. ಅದೂ ವ್ಯರ್ಥವಾಯಿತು. ಆಗ ವಿಧಿಯಿಲ್ಲದೆ ಪೊಲೀಸ್ ಠಾಣೆಗೆ ದೂರುಕೊಟ್ಟರು.

ಪೊಲೀಸರ ಮೂಗಿಗೆ ಆ ದುರ್ನಾತ ಬೀರಿದ್ದೇ ತಡ ಅವರು ಯಾವ ಅನುಮಾನವೂ ಇಲ್ಲದೆ ಇದು ಮನುಷ್ಯ ದೇಹ ಕೊಳೆತ ವಾಸನೆ ಎಂದರು. ಪಕ್ಕದ ಫ್ಲಾಟನಿಂದ ದುರ್ನಾತ ಬರುತ್ತಿದ್ದ ಫ್ಲಾಟಿನ ಬಾಲ್ಕನಿಯನ್ನು ಪೊಲೀಸ್ ಒಬ್ಬ ಹತ್ತಿದ. ಆತ ಒಂದು ಕಿಟಕಿಯಿಂದ ನೋಡಿದಾಗ ಆತನಿಗೆ ಒಳಗೆ ಏನೂ ಕಾಣಿಸಲಿಲ್ಲ, ಮತ್ತೊಂದು ಕಿಟಕಿಯಿಂದಲೂ ಅಷ್ಟೇ. ಆದರೆ ಮೂರನೆ ಕಿಟಕಿಯಿಂದ ನೋಡಿದಾಗ ಭಾರೀ ಗಾತ್ರದ ದಢೂತಿ ದೇಹವೊಂದು ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಕಂಡುಬಂತು.

ಆ ಫ್ಲಾಟಿನ ಬಾಗಿಲು ಒಡೆದು ನೋಡಿದಾಗ ಎಲ್ಲರಿಗೂ ಒಂದು ಆಘಾತ ಕಾದಿತ್ತು. ಅದು ಯಾವುದೇ ದಢೂತಿ ವ್ಯಕ್ತಿಯ ಶವವಾಗಿರಲಿಲ್ಲ, ಬದಲಾಗಿ ಆ ಫ್ಲಾಟ್‌ನಲ್ಲಿ ಕಳೆದ ಐದು ವರ್ಷಗಳಿಂದ ವಾಸಿಸುತ್ತಿದ್ದ 39ರ ಹರೆಯದ ಆನಂದ್ ಮತ್ತು 36 ರ ಹರೆಯದ ಆತನ ಪತ್ನಿ ದೀಪಾ ಎಂಬ ಯುವ ದಂಪತಿಗಳಿಬ್ಬರ ಶವಗಳಾಗಿದ್ದವು. ಅವರಿಬ್ಬರು ಒಂದೇ ಹಗ್ಗದಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿ ಕೊಂಡಿದ್ದರಿಂದ ಅವರ ಶವಗಳು ಕೊಳೆತು ಒಂದಕ್ಕೊಂದು ಬೆಸೆದುಕೊಂಡು ಒಂದೇ ಶವದಂತೆ ಕಿಟಕಿಯಿಂದ ಕಂಡಿತ್ತು.

ಇತ್ತೀಚೆಗೆ ಆತ್ಮಹತ್ಯೆಗಳು ಎಷ್ಟು ಮಾಮೂಲಿ ಆಗಿಬಿಟ್ಟಿವೆ ಎಂದರೆ ದಿನಪತ್ರಿಕೆಗಳ ಅಪರಾಧ ಸುದ್ದಿ ಪುಟಗಳಲ್ಲಿ ಆತ್ಮಹತ್ಯೆಯ ಸುದ್ದಿಗಳಿಲ್ಲದ ದಿನವೇ ಇಲ್ಲ ವಾಗಿದೆ. ಸಾಲಬಾಧೆಗೆ ಸಿಲುಕಿದ ರೈತರು, ವರದಕ್ಷಿಣೆಯ ಪಿಡುಗಿಗೆ ನವ ವಿವಾಹಿತೆಯರು, ಪ್ರೇಮದ ವೈಫಲ್ಯಕ್ಕೆ ಯುವಕ-ಯುವತಿಯರು, ಪರೀಕ್ಷೆ ಫೇಲಾಗಿದ್ದಕ್ಕೆ ವಿದ್ಯಾರ್ಥಿಗಳು, ನಿರುದ್ಯೋಗದಿಂದ ಬೇಸತ್ತ ಯುವಕರು, ಜೀವನದಿಂದ ಜಿಗುಪ್ಸೆಗೊಂಡವರು .....ಹೀಗೆ ಹತ್ತು ಹಲವು ಕಾರಣಗಳಿಗೆ ಜನ ಆತ್ಮಹತ್ಯೆಗೆ ಶರಣಾಗುತ್ತಾರೆ.

ಆದರೆ ಗೋವಾದ ಮರ್ಸಿಸ್ ಎಂಬ ಐಶಾರಾಮಿ ಕಟ್ಟಡದಲ್ಲಿ ಆನಂದ್ ಮತ್ತು ದೀಪಾ ತಮ್ಮ ಪ್ರಾಣಗಳನ್ನೇ ತ್ಯಜಿಸಿದ್ದು ಇಂತಹ ಯಾವ ಕಾರಣಗಳಿಗೂ ಅಲ್ಲ, ಬದಲಾಗಿ ಅವರಿಬ್ಬರು ನೇಣಿಗೆ ಶರಣಾಗಿದ್ದು ಅವರ ಬದುಕಿನಲ್ಲಿ ಸಂತೋಷ, ಸಂಪತ್ತು ಮತ್ತು ನೆಮ್ಮದಿಯನ್ನು ಕಂಡಿದ್ದರಿಂದ. ಸಾಯುವ ಮುನ್ನ ಅವರಿಬ್ಬರು ಬರೆದಿಟ್ಟಿದ್ದ ಆತ್ಮಹತ್ಯಾ ಪತ್ರವನ್ನೇ ನೋಡಿ:

"ನಾವಿಬ್ಬರೂ ಜೊತೆಯಾಗಿ ಉಲ್ಲಾಸಮಯವಾದ, ಅವಿಸ್ಮರಣೀಯವಾದ ಜೀವನವನ್ನು ನಡೆಸಿದ್ದೇವೆ. ನಾವು ಪ್ರಪಂಚವನ್ನು ಸುತ್ತಿದ್ದೇವೆ. ಬೇರೆ ಬೇರೆ ದೇಶಗಳಲ್ಲಿ ವಾಸಿಸಿದ್ದೇವೆ. ನಾವು ಊಹಿಸಿಕೊಳ್ಳಲೂ ಸಾಧ್ಯವಿಲ್ಲದಷ್ಟು ಹಣ ಗಳಿಸಿದ್ದೇವೆ. ನಮಗೆ ಸಂತೋಷ ಮತ್ತು ತೃಪ್ತಿಯನ್ನು ಪಡೆಯಲಿಕ್ಕಾಗಿ ಅದನ್ನು ವ್ಯಯಿಸಿದ್ದೇವೆ. ನಮ್ಮ ಜೀವ ನಮಗೆ ಮತ್ತು ನಮಗೆ ಮಾತ್ರ ಸೇರಿದ್ದು ಹಾಗೂ ನಮಗೆ ಜೀವಿಸಲು ಹಕ್ಕು ಇರುವಂತೆಯೇ ಸಾಯುವ ಹಕ್ಕೂ ನಮ್ಮದೇ ಎಂಬ ತತ್ವದಲ್ಲಿ ನಾವು ನಂಬಿಕೆಯಿಟ್ಟಿದ್ದೇವೆ. ಆದ್ದರಿಂದ ನಾವು ಸ್ವ ಇಚ್ಛೆಯಿಂದ ಸಾಯಲು ನಿರ್ಧರಿಸಿದ್ದೇವೆ."

ಇದೆಂತಹ ವಿಚಿತ್ರ?

ಈ ಆತ್ಮಹತ್ಯೆ ಪ್ರಕರಣ ಗಂಭೀರವಾದ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. "ಸುಖಮಯ"ವಾಗಿದ್ದ ದಂಪತಿಗಳು ತಮ್ಮನ್ನೇ ತಾವು ಕೊಂದುಕೊಂಡರೇಕೆ?

ಆನಂದ್ ಮತ್ತು ದೀಪಾ ಆತ್ಮಹತ್ಯೆ ಮಾಡಿಕೊಳ್ಳುವ ಮುನ್ನ ತಮ್ಮ ಆಸ್ತಿಪಾಸ್ತಿಗಳ ಬಗ್ಗೆಯೂ ನಿಖರವಾದ ಸೂಚನೆಗಳನ್ನು ಬರೆದಿಟ್ಟಿದ್ದರು. ಅವರು ವಾಸಿಸುತ್ತಿದ್ದ ಮನೆ ಬೆಂಗಳೂರಿನಲ್ಲಿರುವ ದೀಪಾಳ ತಾಯಿಗೆ ಸೇರಬೇಕೆಂದೂ, ಲ್ಯಾಪ್‌ಟಾಪ್ ಮತ್ತು ಐಪಾಡ್‌ಗಳನ್ನು ನೆರೆಮನೆಯಲ್ಲಿದ್ದ ಆರು ವರ್ಷದ ಹುಡುಗನಿಗೆ ಕೊಡಬೇಕೆಂದೂ, ಪ್ರಿಂಟರ್ ಇತ್ಯಾದಿಗಳು ಮರ್ಸಿಸ್ ಹೌಸಿಂಗ್ ಸೊಸೈಟಿಯ ಕಚೇರಿಗೆ ಕೊಡಬೇಕೆಂದೂ ಸೂಚಿಸಿದ್ದರು. ಜೊತೆಗೆ ಪೊಲೀಸರೇ ತಮ್ಮ ಪಾರ್ಥಿವ ಶರೀರಗಳ ಅಂತ್ಯಕ್ರಿಯೆಯನ್ನು ಮಾಡ ಬೇಕೆಂದು ಕೇಳಿಕೊಂಡಿದ್ದರಲ್ಲದೆ, ಅದರ ಖರ್ಚು- ವೆಚ್ಚಗಳಿ ಗೆಂದು 10,000 ರೂ.ಗಳನ್ನು ಒಂದು ಕವರ್‌ನಲ್ಲಿ ಇಟ್ಟಿದ್ದರು.

ಇನ್ನೂ ವಿಚಿತ್ರವೆಂದರೆ ಸುಶಿಕ್ಷಿತರಾಗಿದ್ದ, ಟೆಕ್ಕಿಗಳಾಗಿದ್ದ, ಸಿರಿವಂತರಾಗಿದ್ದ, ಲಕ್ಷಾಂತರ ರೂಪಾಯಿಗಳನ್ನು ಗಳಿಸಿದ್ದ ಇವರಿಬ್ಬರ ನಿರ್ಗಮನವನ್ನು ಕಂಡು ಮರುಗಲು ಅವರನ್ನು ಹೆತ್ತವರಾಗಲಿ, ಸಂಬಂಧಿಗಳಾಗಲಿ, ಸ್ನೇಹಿತರಾಗಲಿ, ಕೊನೆಗೆ ಪರಿಚಿತರಾಗಲಿ.... ಯಾರೂ ಇರಲಿಲ್ಲ, ಅಕ್ಟೋಬರ್ 3ರಂದು ಅವರಿಬ್ಬರು ಆತ್ಮಹತ್ಯೆ ಮಾಡಿಕೊಂಡ ದಿನದಿಂದ ನವೆಂಬರ್ 12ನೇ ತಾರೀಖಿನ ತನಕ - ಅಂದರೆ 40 ದಿನಗಳ ಕಾಲ -ಅವರ ಪಾರ್ಥೀವ ಶರೀರಗಳು ಶವಾಗಾರದಲ್ಲೇ ಬಿದ್ದಿದ್ದವು. ಅಷ್ಟು ದಿನಗಳ ಕಾಲ ಕಾದಿದ್ದ ಗೋವಾದ ಪೊಲೀಸರೇ ಕೊನೆಗೆ ಒಂದು ನಿಮಿಷದ ಮೌನವನ್ನು ಆಚರಿಸಿ ಅಂತ್ಯಕ್ರಿಯೆಗಳನ್ನು ಮಾಡಿಮುಗಿಸಿದರು. ಇದರರ್ಥ, ಯಾವುದೋ ನಿರ್ಗತಿಕ ಮತ್ತು ಅನಾಮಿಕ ಶವಕ್ಕೆ ಸಿಗುವ ಅಂತ್ಯಕ್ರಿಯೆಯೇ ಈ ಟೆಕ್ಕಿ ದಂಪತಿಗಳಿಗೂ ಸಿಕ್ಕಿತು.


ಯಾಕೆ ಹೀಗಾಯಿತು? ಇವರಿಬ್ಬರಿಗೂ ಅಪ್ಪ, ಅಮ್ಮ, ಅಕ್ಕ, ಅಣ್ಣ, ಸಹೋದ್ಯೋಗಿಗಳು, ಸ್ನೇಹಿತರು ಯಾರೂ ಇರಲಿಲ್ಲವೇ? ಹಾಗಾದರೆ ಇವರು ಎಂತಹ ವ್ಯಕ್ತಿಗಳಾಗಿದ್ದರು?

ಅವರಿಬ್ಬರು ಮರ್ಸಿಸ್ ಕಟ್ಟಡದಲ್ಲಿ ಹೇಗೆ ಜೀವಿಸು ತ್ತಿದ್ದರು ಎಂಬುದನ್ನು ನೋಡಿದರೆ ಮೇಲಿನ ಪ್ರಶ್ನೆಗಳಿಗೆ ಕೆಲವು ಉತ್ತರಗಳು ಸಿಗಬಹುದು. ಆನಂದ್ ಮತ್ತು ದೀಪಾ ಐದು ವರ್ಷಗಳ ಹಿಂದೆ ಅಮೆರಿಕದಿಂದ ಗೋವಾಗೆ ಬಂದು ಮರ್ಸಿಸ್ ಕಟ್ಟಡದಲ್ಲಿ ಒಂದು ಫ್ಲಾಟನ್ನು ಖರೀದಿಸಿದರು. ಅವರಿಬ್ಬರು ಎಲ್ಲಿ ಭೇಟಿಯಾದರು, ಯಾವಾಗ ಮದುವೆ ಯಾದರು ಎಂಬುದು ಯಾರಿಗೂ ಗೊತ್ತಿಲ್ಲ.

ಆರಂಭದಲ್ಲೇ ಇವರಿಬ್ಬರ ಬಗ್ಗೆ ಮರ್ಸಿಸ್ ಕಟ್ಟಡದಲ್ಲಿದ್ದ ಇತರೆ ನಿವಾಸಿಗಳಿಗೆ ಗುಮಾನಿಗಳು ಶುರುವಾಗಿದ್ದವು. ಮೊದಲನೆಯದಾಗಿ ಇವರಿಬ್ಬರು ಅಲ್ಲಿ ವಾಸ ಮಾಡಲಾರಂಭ ಸಿದ ಕೆಲವೇ ದಿನಗಳಲ್ಲಿ ಇಬ್ಬರೂ ತಮ್ಮ ತಲೆ ಬೋಳಿಸಿ ಕೊಂಡರು. ಅವರು ಸಾಯುವ ತನಕ ಹೀಗೆ ಬೊಕ್ಕತಲೆಯ ಲ್ಲಿದ್ದರು.

ಎರಡನೆಯದಾಗಿ ಅವರು ಯಾರೊಂದಿಗೂ ಮಾತ ನಾಡುತ್ತಿರಲಿಲ್ಲ, ಯಾರಾದರು ಎದುರು ಬಂದರೆ ಒಂದು ಸಣ್ಣ ನಗೆ ಬೀರುತ್ತಿದ್ದರಷ್ಟೆ. ಬಹಳ ದಿನಗಳ ಕಾಲ ಅವರು ತಮ್ಮ ಮನೆಯಿಂದ ಹೊರಗೆ ಕಾಲಿಡುತ್ತಿರಲಿಲ್ಲ, ಹಾಗೊಮ್ಮೆ ಹೊರಗೆ ಹೋದರೆ ಬಹಳ ದಿನಗಳ ಕಾಲ, ಕೆಲವೊಮ್ಮೆ ಹಲವು ತಿಂಗಳುಗಳ ಮಟ್ಟಿಗೆ, ಅವರಿಬ್ಬರು ಮನೆಗೆ ವಾಪಸ್ ಬರುತ್ತಿರಲಿಲ್ಲ, ಇಂತಹ ವಿಚಿತ್ರ ನಡವಳಿಕೆಯನ್ನು ಕಂಡು ಹಲವರು "ಇವರಿಬ್ಬರೂ ಯಾವುದೋ ಭಯೋತ್ಪಾದಕ ಸಂಘಟನೆಯ ಸದಸ್ಯರಿರಬಹುದಾ" ಎಂದು ಅನುಮಾನ ಪಟ್ಟಿದ್ದೂ ಉಂಟು.

ಗೋವಾದಲ್ಲಿ ವಾಸ ಮಾಡಲಾರಂಭಿಸಿದ ನಂತರ ಆನಂದ್ ಗೋವಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್‌ನಲ್ಲಿ ಪ್ರೊಫೆಸರ್ ಆಗಿ ಉದ್ಯೋಗ ಆರಂಭಿಸಿದ. ಅದೇ ಹೊತ್ತಿಗೆ ದೀಪಾ ಮನೆಯಿಂದಲೇ ಫ್ರೀಲ್ಯಾನ್ಸ್ ದುಡಿಮೆ ಪ್ರಾರಂಭಿಸಿದಳು.



ಆನಂದ್ ತನ್ನ ಪ್ರೊಫೆಸರ್ ಹುದ್ದೆಗೆ ಬೇಕಾದ ಅರ್ಹ ಗಳನ್ನು ಗಳಿಸಿದ್ದ, ಚೆನ್ನೈನಲ್ಲಿರುವ ಭಾರತಿದಾಸ್ ವಿಶ್ವವಿ ಲಯದಿಂದ ಕೆಮಿಕಲ್ ಇಂಜಿನಿಯರಿಂಗ್ ಪದವಿ ಯನ ಅಮೆರಿಕಾದ ವಿಶ್ವವಿದ್ಯಾಲಯದಲ್ಲಿ ಎಂ.ಬಿ.ಎ. ಪದ ಯನ್ನೂ ಗಳಿಸಿದ್ದ ಮಾತ್ರವಲ್ಲದೆ ಫ್ಲೋರಿಡಾದಲ್ಲಿರುವ ತಲ ಕಾರ್ಪೊರೇಷನ್ ಎಂಬ ಪ್ರಸಿದ್ಧ ಕಂಪನಿಯಲ್ಲಿ ಪ್ರಾಡ ಮ್ಯಾನೇಜರ್ ಆಗಿ ಕೆಲಸ ಮಾಡಿದ್ದ ಉತ್ತಮ ಅನುಭವ ಆತನಿಗಿತ್ತು, ಆನಂದ್‌ನ ಬೋಧನಾ ಕೌಶಲಕ್ಕೆ ವಿದ್ಯಾರ್ಥಿಗ ಮಾರುಹೋಗಿದ್ದರು. ಆತ ವಿದ್ಯಾರ್ಥಿಗಳ ಮೇಲೆ ಹೆಚ ಒತ್ತಡ ಹೇರುತ್ತಿದ್ದರೂ ಆತನ ಶಿಸ್ತುಬದ್ಧತೆಯನ್ನು, ಕೆಲಸದ ಏಕಾಗ್ರತೆಯನ್ನು ಎಲ್ಲರೂ ಮೆಚ್ಚಿದ್ದರು. ಆದರೆ ಆತ ಬೋಧ ಸಿಬ್ಬಂದಿಯ ಸಭೆಗಳಲ್ಲಾಗಲಿ ಅಥವಾ ಇನ್ನಾವುದೇ ಸ ಸಮಾರಂಭಗಳಲ್ಲಾಗಲಿ ಭಾಗವಹಿಸುತ್ತಿರಲಿಲ್ಲ, ತನ್ನ ಬ ಯಾರಿಗೂ ಹೇಳುತ್ತಿರಲಿಲ್ಲ, ಯಾರನ್ನೂ ತನ್ನ ಮ ಆಹ್ವಾನಿಸುತ್ತಿರಲಿಲ್ಲ, ಆದ್ದರಿಂದ ಆನಂದ್ ಇನ್‌ಸ್ಟಿಟ್ಯೂ ಹೊರಗೆ ಎಂತಹ ವ್ಯಕ್ತಿ, ಆತ ಎಲ್ಲಿ ವಾಸಿಸುತ್ತಾನೆ, ಆ ವೈಯಕ್ತಿಕ ಬದುಕು ಎಂತಹದ್ದು ಎಂಬುದರ ಬಗ್ಗೆ ಯಾರಿ ಒಂದು ಸಣ್ಣ ಸುಳಿವೂ ಸಿಕ್ಕಿರಲಿಲ್ಲ, ಒಂದು ದಿನ ಆನಂ ತನ್ನ ಪ್ರೊಫೆಸರ್ ಉದ್ಯೋಗಕ್ಕೆ ರಾಜೀನಾಮೆ ನೀಡಿದ. ಅ ಕಾರಣ ಏನೆಂದು ಯಾರಿಗೂ ಅರ್ಥವಾಗಲಿಲ್ಲ,

ಆನಂದ್ ಮತ್ತು ದೀಪಾ ಕೈತುಂಬ ದುಡಿಯುತ್ತಿದ್ದ ಅವರು ಮನೆಕೆಲಸದವರನ್ನು ಇಟ್ಟುಕೊಂಡಿರಲಿಲ್ಲ, ಅ ಬ್ಬರೂ ಮನೆಯಲ್ಲಿ ಅಡುಗೆಯನ್ನೂ ಮಾಡಿಕೊಳ್ಳುತ್ತಿರಲಿ ತಮ್ಮ ನಾಲ್ಕನೇ ಮಹಡಿಯಲ್ಲಿದ್ದ ಫ್ಲಾಟ್‌ಗೆ ಲಿಫ್ಟ್ ಅ ಬಳಸುತ್ತಿರಲಿಲ್ಲ, ಯಾಕೆಂದರೆ ಲಿಫ್ಟ್‌ನಲ್ಲಿ ಯಾರಾದರು ಸಿ ಅವರನ್ನು ಔಪಚಾರಿಕವಾಗಿ ಮಾತನಾಡಿಸಬೇಕಲ್ಲ ಎಂ ಕಾರಣದಿಂದ. ಅದಕ್ಕೆ ಅವರಿಬ್ಬರು ಯಾವಾಗಲೂ ಮೆಟ್ಟಿ ಗಳನ್ನು ಬಳಸುತ್ತಿದ್ದರು. ಹೀಗೆ ಜನರಿಂದ ವಿಮುಕ್ತರಾ ಈ ದಂಪತಿಗಳು ಪ್ರಾಣಿಗಳ ಬಗ್ಗೆ ವ್ಯಾಮೋಹ ಹೊಂದಿದ್ದ ಅದೆಷ್ಟೋ ದಿನ ಇವರಿಬ್ಬರು ಮರ್ಸಿಸ್ ಕಟ್ಟಡದ ಸ ಮುತ್ತಲಿನ ಬೀದಿ ನಾಯಿಗಳಿಗೆ ಅನ್ನ-ಆಹಾರಗಳ ಕೊಟ್ಟಿದ್ದರು. ಒಮ್ಮೆ ಇವರ ಫ್ಲಾಟಿನ ಬಾಲ್ಕನಿಯಲ್ಲಿ ಜೇ ಗಳು ಗೂಡೊಂದನ್ನು ಕಟ್ಟಿದವು. ಆ ಜೇನುಗಳಿಂದ ಅ ನಿವಾಸಿಗಳಿಗೆ ಅಪಾಯ ಎಂದು ಅದನ್ನು ಕೆಡವಲು ಕಟ ಮೇಲ್ವಿಚಾರಕರು ಮುಂದಾದಾಗ ಅವರಿಬ್ಬರು ಹ ಮಾಡಬೇಡಿ ಎಂದು ವಿನಂತಿಸಿಕೊಂಡಿದ್ದರು.

ಇಂತಹ ವಿಚಿತ್ರ ಸ್ವಭಾವದ ಆನಂದ್ ಮತು ದಿ ಇತ್ತೀಚಿನ ತಿಂಗಳುಗಳಲ್ಲಿ ಇನ್ನೂ ವಿಚಿತ್ರವಾಗಿ ವ ಲಾರಂಭಿಸಿದ್ದಕ್ಕೆ, ಅವರ ಮನೆಯ ಕಸದ ಬುಟ್ಟಿಯ ಸಾಕ್ಷಿಯಾಗಿತ್ತು, ಅವರಿಬ್ಬರು ಓದಿ ಮುಗಿಸಿದ್ದ ಪುಸ್ತಕ ಮತ್ತು ನೋಡಿ ಆಗಿದ್ದ ಸಿನಿಮಾದ ಸಿಡಿಗಳ ಬಿಸಾಡಲಾರಂಭಿಸಿದರು. ಅಂತಹ ಕೆಲವು ಪುಸ್ತಕ ಮ ಸಿಡಿಗಳನ್ನು ಮರ್ಸಿಸ್ ನಿವಾಸಿಗಳ ಸೊಸೈಟಿ ಲೈಬ್ರ ಯಾರೋ ತೆಗೆದುಕೊಂಡು ಹೋದರು. ಅದಾದ ನಂ ಇವರಿಬ್ಬರು ಪುಸ್ತಕಗಳನ್ನು ಮತ್ತು ಸಿಡಿಗಳನ್ನು ಚಿಂದಿ ಚ ಮಾಡಿದ ನಂತರವೇ ಬಿಸಾಡಲಾರಂಭಿಸಿದರು.


ಕೆಲ ದಿನಗಳ ನಂತರ ಇತರೆ ವಸ್ತುಗಳೂ ಕ ಬುಟ್ಟಿಯ ಹಾದಿ ಹಿಡಿದವು. ಹೊಚ್ಚ ಹೊಸದಾದ ಬ್ರಾಂ ಷರ್ಟುಗಳು, ಪ್ಯಾಂಟುಗಳು ಮತ್ತಿತರ ಉಡುಪುಗ ಬಿಸಾಡಲ್ಪಟ್ಟವು. ಇದರಿಂದ ಇತರರು ಅಚ್ಚರಿಗೊಂಡ ಅಮೆರಿಕದಿಂದ ಬಂದಿದ್ದ ಈ ದಂಪತಿಗಳು ಆ ದೇ ಉಪಯೋಗಿಸಿ ಎಸೆಯುವ ಸಂಸ್ಕೃತಿಯನ್ನೇ ಅನುಸ ತ್ತಿದ್ದಾರೆ ಎಂದು ಭಾವಿಸಿ ಸುಮ್ಮನಾದರು.

ಒಂದು ದಿನ ಇವರಿಬ್ಬರು ವ್ಯಾಯಾಮಕ್ಕೆ ಎಂ ಮನೆಯಲ್ಲಿ ಇಟ್ಟುಕೊಂಡಿದ್ದ ಟ್ರೆಡ್‌ಮಿಲ್ ಶಬ್ದ ತ ತೊಂದರೆ ಕೊಡುತ್ತಿದೆ ಎಂದು ಇವರ ಮನೆಯ ಕೆಳ ವಾಸಿಸುತ್ತಿದ್ದ ಮುದುಕಿ ಆಕ್ಷೇಪಿಸಿದಳು. ಅದರ ಮಾ ದಿನ ನೆರೆಹೊರೆಯವರಿಗೆಲ್ಲಾ ಆಶ್ಚರ್ಯಕಾದಿತ್ತು, ಟ್ರೆಡ್‌ಮಿಲ್ ಯಂತ್ರವೂ ಬಿಸಾಡಲ್ಪಟ್ಟಿತ್ತು.

ದಿನಗಳು ಉರುಳಿದಂತೆ ಕರಕುಶಲ ಕೆತ್ತನೆಯ ಕುರ್ಚಿಗಳು, ಐಷಾರಾಮಿ ಸೋಫಾ, ಮುಂತಾದ ಬಾಳುವ ವಸ್ತುಗಳನ್ನೆಲ್ಲ ಒಂದೊಂದಾಗಿ ಹೊರಗೆಸೆದ ಇದನ್ನು ಕಂಡ ಜನರಿಗೆ ಸೋಜಿಗವೆನಿಸಿದರೆ ಕಟ್ಟಡದಲ್ಲಿ ಕ ಮಾಡುತ್ತಿದ್ದವರಿಗೆ ಸಂತೋಷವಾಗಿತ್ತು, ನಿಧಾನವ ಆನಂದ್-ದೀಪಾಳ ಮನೆ ಖಾಲಿಯಾಗುತ್ತಿದ್ದಂತೆ ಅಪಾ ಮೆಂಟ್‌ನ ಸೂಪರ್‌ವೈಸರ್‌ನ ಮನೆ ತುಂಬಲಾರಂಭಿ ಯಾಕೆಂದರೆ ಅವರಿಬ್ಬರು ಬಿಸಾಡಿದ್ದ ಬೆಲೆಬಾಳುವ ವ ಗಳನ್ನೇ ಆತ ಹೊತ್ತೊಯ್ಯುತ್ತಿದ್ದ. ಇದನ್ನು ಕಂಡು ಇ ಕೆಲಸಗಾರರು ದಿನಕ್ಕೆ ಎರಡು ಮೂರು ಬಾರಿ ನಾಲ ಮಹಡಿಗೆ ಬಂದು ಇವರಿಬ್ಬರು ಮತ್ತೇನನ್ನಾದರೂ ಎ ದ್ದಾರೆಯೇ ಎಂದು ನೋಡಲಾರಂಭಿಸಿದರು.

ಹಲವು ದಿನಗಳ ನಂತರ ಇದು ನಿಂತಿತು. ಅದಕ್ಕೆ ಕಾ ಈ ದಂಪತಿಗಳ ಮನೆಯಲ್ಲಿ ಬಿಸಾಡಲು ಏನೂ ಉಳಿ ಲಿಲ್ಲ, ಅವರು ಆತ್ಮಹತ್ಯೆ ಮಾಡಿಕೊಂಡ ನಂತರ ಅ ಮನೆಯನ್ನು ಪ್ರವೇಶಿಸಿದ ಪೊಲೀಸರಿಗೆ ಕಂಡದ್ದು ನ ಮೇಲೆ ಹಾಸಿದ್ದ ಒಂದು ಜಮಖಾನ, ಖಾಲಿಯಾಗಿದ್ದ ಒ ಪುಸ್ತಕದ ಕಪಾಟು, ಆತ್ಮಹತ್ಯೆ ಮಾಡಿಕೊಳ್ಳಲು ಬಳಸಿದ್ದ ಟೇ ಲ್ಯಾಪ್‌ಟಾಪ್, ಐಪಾಡ್, ಪ್ರಿಂಟರ್ ಮಾತ್ರ. ಕುಳಿತುಕೊ ಅವರ ಮನೆಯಲ್ಲಿ ಒಂದು ಚೇರು ಸಹ ಇರಲಿಲ್ಲ,

ಆನಂದ್ ಮತ್ತು ದೀಪಾ ಆತ್ಮಹತ್ಯೆ ಮಾಡಿಕೊ ರೂಮಿನಲ್ಲಿ ಅರ್ಧ ಖಾಲಿಯಾಗಿದ ವಿಸ್ಕಿ ಬಾಟಲು, ಎ



ಫ್ಲಾಟಿನ ಬಾಲ್ಕನಿಯಲ್ಲಿ ಜೇನು ಗೂಡು

ಖಾಲಿ ಲೋಟಗಳು, ಸಿಗರೇಟ್‌ನ ತುಂಡುಗಳಿಂದ ತುಂಬಿದ್ದ ಒಂದು ಆಷ್ ಟ್ರೇ... ಇಷ್ಟು ಮಾತ್ರ.

ಅವರಿಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದ ಟೇಬಲ್‌ನ ಡ್ರಾಯರ್‌ನಲ್ಲಿ ಪೊಲೀಸರಿಗೆ ಸಿಕ್ಕ ಹೋಟೆಲೊಂದರ ಬಿಲ್ಲು ಮತ್ತೊಂದು ಕತೆಯನ್ನು ಹೇಳುತ್ತಿತ್ತು. ಅದು ಪಣಜಿ ಹೊರವಲಯದಲ್ಲಿರುವ ತಾಜ್ ವಿವಾಂತ ಎಂಬ ಫೈವ್‌ಸ್ಟಾರ್ ರೆಸಾರ್ಟ್‌ನ ಬಿಲ್ಲು. ಬಿಲ್ಲಿನ ಮೊತ್ತ ಬರೋಬ್ಬರಿ ಎಂಟು ಲಕ್ಷ ರೂಪಾಯಿಗಳು.

ಏನಾಗಿತ್ತೆಂದರೆ ಆನಂದ್ ಮತ್ತು ದೀಪಾ ಸಾಯುವ ಮುಂಚಿನ ಎರಡು ತಿಂಗಳ ಕಾಲ ಮರ್ಸಿಸ್ ಫ್ಲಾಟಿನಲ್ಲಿ ವಾಸ ಮಾಡಿರಲಿಲ್ಲ. ಅಕ್ಕಪಕ್ಕದವರು ಅವರಿಬ್ಬರು ಎಂದಿನಂತೆ ವಿದೇಶಕ್ಕೋ, ಇನ್ನೆಲ್ಲಿಗೋ ಹೋಗಿರಬೇಕೆಂದು ಭಾವಿಸಿದ್ದರು. ಆದರೆ ವಾಸ್ತವವಾಗಿ ಇವರಿಬ್ಬರು ಗೋವಾದಲ್ಲೇ ಇದ್ದರು. ತಮ್ಮ ಜೀವನದ ಕೊನೆಯ ದಿನಗಳನ್ನು ಲಕ್ಷುರಿಯಾಗಿ ಕಳೆಯಬೇಕೆಂದು ನಿರ್ಧರಿಸಿದ್ದ ಅವರು ಫೈವ್‌ಸ್ಟಾರ್ ರೆಸಾರ್ಟ್ ಆದ ತಾಜ್ ವಿವಾಂತ್‌ನಲ್ಲೇ ತಂಗಿದ್ದರು.

ತಾಜ್ ರೆಸಾರ್ಟ್‌ನಿಂದ ಅವರಿಬ್ಬರು ಅಕ್ಟೋಬರ್ 3ರಂದು ಹೋಟೆಲ್ ಟ್ಯಾಕ್ಸಿ ಒಂದರಲ್ಲಿ ಮರ್ಸಿಸ್‌ಗೆ ಹಿಂದಿರುಗಿದರು. ಆದರೆ ಅವರು ವಾಪಸ್ ಬಂದದ್ದನ್ನು ಯಾರೂ ಗಮನಿಸಲಿಲ್ಲ. ಅವರು ಯಾರ ಕಣ್ಣಿಗೂ ಬೀಳಲಿಲ್ಲ. ಅಲ್ಲಿನ ಜನ ಅವರನ್ನು ಮತ್ತೆ ಕಂಡಿದ್ದು ಕೊಳೆತ ಶವಗಳ ಸ್ಥಿತಿಯಲ್ಲಿ ಮಾತ್ರ.

ಹೋಗಲಿ, ಇವರಿಬ್ಬರ ಮರಣಕ್ಕೆ ಯಾವುದೋ ಗಂಭೀರ ಕಾಯಿಲೆಯೋ, ಮಾದಕ ದ್ರವ್ಯವೋ ಕಾರಣ ಇದ್ದಿರಬೇಕೆಂದು ಭಾವಿಸಿದ ಪೊಲೀಸರಿಗೆ ಮತ್ತೊಂದು ಅಚ್ಚರಿ ಕಾದಿತ್ತು. ಅದೇನೆಂದರೆ ಪೋಸ್ಟ್‌ಮಾರ್ಟಂ ವರದಿಯಲ್ಲಿ ಅವರಿಬ್ಬರಿಗೂ ಯಾವುದೇ ಗಂಭೀರವಾದ ಕಾಯಿಲೆಯೂ ಇರಲಿಲ್ಲ. ಅಥವಾ ಮಾದಕ ದ್ರವಗಳ ಚಟವೂ ಇರಲಿಲ್ಲ ಎಂದು ಸ್ಪಷ್ಟಪಡಿಸಿತು.

ಈ ನಿಗೂಢ ಸಾವುಗಳ ಬಗ್ಗೆ ಅವರ ಮನೆಯವರಿಂದಾದರೂ ಸುಳಿವು ಸಿಗಬಹುದೆಂದು ಗೋವಾ ಪೊಲೀಸರು ಯತ್ನಿಸಿದರು. ಮೊದಲು ಅವರು ಚೆನ್ನೈನಲ್ಲಿ ವಾಸವಾಗಿರುವ ಆನಂದ್‌ನ ತಂದೆ ಆರ್.ವಿ.ರಂತಿದೇವನ್‌ರನ್ನು ಸಂಪರ್ಕಿಸಿದರು. ಹಲವು ಉನ್ನತ ಹುದ್ದೆಗಳಲ್ಲಿದ್ದ ಆರ್.ವಿ. ರಂತಿದೇವನ್ ಈಗ ನಿವೃತ್ತಿ ಹೊಂದಿದ್ದಾರೆ. ಅವರಿಗೆ ವಯಸ್ಸಾಗಿದೆ. ಅದಕ್ಕಿಂತ ಮುಖ್ಯವಾಗಿ ಸುಮಾರು ಹನ್ನೆರಡು ವರ್ಷಗಳಿಂದ ಆನಂದ್ ತನ್ನ ತಂದೆಯನ್ನು ಸಂಪರ್ಕಿಸಲೇ ಇರಲಿಲ್ಲ! ದೀಪಾಳನ್ನು ಮದುವೆ ಮಾಡಿಕೊಳ್ಳುವುದನ್ನು ತಂದೆ ವಿರೋಧಿಸಿದ್ದರಿಂದ ಆನಂದ್ ತನ್ನ ಕುಟುಂಬದೊಂದಿಗಿನ ಸಂಬಂಧವನ್ನು ಸಂಪೂರ್ಣವಾಗಿ ಕಡಿದು ಹಾಕಿದ್ದ. ಪರಿಣಾಮವಾಗಿ ತನ್ನ ಸ್ವಂತ ಮಗನ ಶವವನ್ನು ಪಡೆದುಕೊಳ್ಳಲು ನಿರ್ದಾಕ್ಷಿಣ್ಯವಾಗಿ ನಿರಾಕರಿಸಿದ ತಂದೆ ರಂತಿದೇವನ್ ಪತ್ರವೊಂದನ್ನು ಕಳಿಸಿ ಗೋವಾದ ಪೊಲೀಸರೇ ಆತನ ಅಂತ್ಯಕ್ರಿಯೆಯನ್ನು ಮುಗಿಸುವಂತೆ ಸೂಚಿಸಿದರು.

ಇದಾದ ನಂತರ ಗೋವಾದ ಪೊಲೀಸರು ಬೆಂಗಳೂರಿನಲ್ಲಿ ವಾಸಿಸುತ್ತಿರುವ ದೀಪಾಳ ತಾಯಿ-ತಂದೆಗಳನ್ನು ಸಂಪರ್ಕಿಸಿದರು. ಅವರಿಬ್ಬರು ಈ ಹಿಂದೆ ಖಾಸಗಿ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದು ಈಗ ನಿವೃತ್ತಿ ಹೊಂದಿದ್ದಾರೆ. ಅವರಿಬ್ಬರ ಏಕೈಕ ಪುತ್ರಿಯೇ ದೀಪಾ. ಆನಂದ್ ತನ್ನ ತಂದೆ, ಅಕ್ಕ ಮತ್ತು ಇತರರೊಂದಿಗೆ ನಂಟನ್ನು ಕಡಿದುಕೊಂಡಿದ್ದರೂ ದೀಪಾ ತನ್ನ ತಾಯಿಯೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದಳು. ಕೆಲ ತಿಂಗಳ ಹಿಂದೆ ತಾಯಿಗೆ ಫೋನ್ ಮಾಡಿದ್ದ ದೀಪಾ ಬರುವ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿಗೆ ಬರುವುದಾಗಿ ಹೇಳಿದ್ದಳು.

ದೀಪಾಳ ತಂದೆ-ತಾಯಿ ಇಬ್ಬರಿಗೂ ಈಗ ತುಂಬಾ ವಯಸ್ಸಾಗಿದೆ. ಅವರಿಗೆ ಈಗ ನಡೆಯುವುದೂ ಕಷ್ಟ. ಇನ್ನು ದೂರದ ಗೋವಾಗೆ ಹೋಗುವ ಮಾತು ಎಲ್ಲಿಂದ ಬಂತು. ಅವರೂ ಕೂಡ ಗೋವಾದ ಪೊಲೀಸರಿಗೆ ಪತ್ರವೊಂದನ್ನು ಬರೆದು ವೃದ್ಧಾಪ್ಯ ಮತ್ತು ಅನಾರೋಗ್ಯದ ಕಾರಣಗಳಿಂದ ತಾವು ಗೋವಾಕ್ಕೆ ಬರಲಾಗುತ್ತಿಲ್ಲವೆಂದೂ, ತಮ್ಮ ಬದಲಿಗೆ ಔಪಚಾರಿಕ ಕ್ರಮಗಳನ್ನು ಮುಗಿಸಲು ಸಿ. ವಾಸುದೇವನ್ ಎಂಬ ವಕೀಲರನ್ನು ಕಳಿಸುತ್ತಿರುವುದಾಗಿಯೂ ತಿಳಿಸಿದರು.

ಅದರಂತೆ ಬೆಂಗಳೂರಿನ ವಕೀಲ ಸಿ.ವಾಸುದೇವನ್ ಎಂಬುವವರು ಗೋವಾಕ್ಕೆ ತೆರಳಿ ಔಪಚಾರಿಕ ಕ್ರಮಗಳನ್ನು ಮುಗಿಸಿದರು. ಆ ನಂತರವೇ ನಲವತ್ತು ದಿನಗಳ ಕಾಲ ಶವಾಗಾರದಲ್ಲಿ ಅನಾಥವಾಗಿ ಬಿದ್ದಿದ್ದ ಆನಂದ್ ಮತ್ತು ದೀಪಾಳ ಅಂತ್ಯಕ್ರಿಯೆಗಳು ನಡೆದದ್ದು. ಇದೆಲ್ಲಾ ಮುಗಿದ ನಂತರ ವಕೀಲ ವಾಸುದೇವ್ ದೀಪಾ ತನ್ನ ತಾಯಿಗೆ ಬಟ್ಟಿದ್ದ ಫ್ಲಾಟಿನ ಬೀಗದಕೈ ಪಡೆದು ಬೆಂಗಳೂರಿಗೆ ವಾಪಸ್ಸಾದರು.

ಇಷ್ಟೆಲ್ಲಾ ಗೊತ್ತಾದ ನಂತರವೂ ಒಂದು ಪ್ರಶ್ನೆ ಹಾಗೇ ಉಳಿಯುತ್ತದೆ. "ಸುಖವಾಗಿದ್ದ ದಂಪತಿ"ಗಳು ಆತ್ಮಹತ್ಯೆ ಮಾಡಿಕೊಂಡಿದ್ದು ಯಾಕೆ?

ಸರಣಿ ಹಂತಕ ಮೋಹನ್ ಹಾಗೂ ವಜ್ರದೇಹಿ ಮಠದ ಶ್ರೀಶ್ರೀಗಳು ಯಾರು ಹೆಚ್ಚು ವಿಕಾರ?




ತೀರಾ ಸಾಧಾರಣ ಎನ್ನಿಸುವ ಪತ್ರಿಕಾ ವರದಿ ಸಹ ಒಮ್ಮೊಮ್ಮೆ ಸಮಾಜದ ಕ್ರೌರ್ಯಕ್ಕೆ ಕನ್ನಡಿಯಾಗಬಹುದು. ಉದಾಹರಣೆಗೆ ಬಹುತೇಕ ಎಲ್ಲ ಪತ್ರಿಕೆಗಳಲ್ಲೂ ಇತ್ತೀಚೆಗೆ ಪ್ರಕಟವಾಗಿರುವ ಈ ವರದಿ ನೋಡಿ. ಹಾಸನದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಶೌಚಾಲಯದಲ್ಲಿ **2009** ರ ಜೂನ್ **18** ರಂದು ಓರ್ವ ಯುವತಿಯ ಶವ ಪತ್ತೆಯಾಗುತ್ತದೆ. ಯುವತಿ ಶೌಚಾಲಯದಲ್ಲಿ ಕೂತ ಸ್ಥಿತಿಯಲ್ಲೇ 'ಸಾವು ಅಪ್ಪಿದ್ದನ್ನು ಬಸ್‌ಸ್ಟ್ಯಾಂಡಿನ ಕಸ ಗುಡಿಸುವ ರಾಧಾ ಎಂಬ ಮಹಿಳೆ ನೋಡುತ್ತಾರೆ. ಶವದ ಬಾಯಲ್ಲಿ ನೊರೆ ಬರುತ್ತಿತ್ತು. ಮೃತರ ಕುತ್ತಿಗೆಯಲ್ಲಿ ರೋಲ್ಡ್‌ಗೋಲ್ಡ್ ಕರಿಮಣಿಸರ, ಕಿವಿಯಲ್ಲಿ ಪ್ಲಾಸ್ಟಿಕ್ ಓಲೆ, ಕೈಯಲ್ಲಿ ಗಾಜಿನ ಬಳೆ, ಮೂಗಿನಲ್ಲಿ ಬಿಳಿ ಕಲ್ಲಿನ ಮೂಗುತಿ ಇತ್ತು. ಶವ, ದಕ್ಷಿಣ ಕನ್ನಡ ಜಿಲ್ಲೆಯ ಬಂಟವಾಳ ಸಮೀಪದ ಬರಿಮಾರು ಎಂಬ ಗ್ರಾಮದಲ್ಲಿ ಕೆಲವು ದಿನಗಳಿಂದ ನಾಪತ್ತೆಯಾಗಿದ್ದ ಅನಿತಾ ಎಂಬ ಯುವತಿಯದ್ದು ಎಂದು ಪೊಲೀಸರು ಗುರುತಿಸಿದರು. ಸೈನೈಡ್ ಮೋಹನ ಎಂದೇ ಕುಖ್ಯಾತನಾಗಿರುವ ಸರಣಿ ಹಂತಕ ಮೋಹನಕುಮಾರ ಕೊಲೆ ಮಾಡಿದ ಯುವತಿಯರಲ್ಲಿ ಬರಿಮಾರಿನ ಅನಿತಾ ಕೂಡ ಒಬ್ಬರಾಗಿದ್ದರು.



ಮೋಹನನಿಗೆ ಬಲಿಯಾದ ಮಹಿಳೆಯರು

ಕೆಳಜಾತಿಯ ಬಡಕುಟುಂಬಕ್ಕೆ ಸೇರಿದ ಅನಿತಾರನ್ನು ಮೋಹನ ಮದುವೆಯಾಗುವುದಾಗಿ ನಂಬಿಸಿ, ಮನೆಯಿಂದ ಪಲಾಯನ ಮಾಡಲು ಪ್ರೇರೆಪಿಸಿ, ಹಾಸನಕ್ಕೆ ಕರೆದುಕೊಂಡು ಹೋಗಿ, ಅಲ್ಲಿನ ಲಾಡ್ಜ್ ಒಂದರಲ್ಲಿ ತನ್ನ ತೀಟೆ ತೀರಿಸಿಕೊಂಡ. ಆ ನಂತರ, ಆಕೆಯನ್ನು ಹಾಸನ ಬಸ್‌ಸ್ಟ್ಯಾಂಡಿಗೆ ಕರೆದುಕೊಂಡು ಹೋಗಿ, ತಮ್ಮ ಸಮಾಗಮದಿಂದ ಆಕೆ ಬಸುರಾಗಿದ್ದಾರೆ ಎಂದು ನಂಬಿಸಿ, ಅದರ ನಿವಾರಣೆಗೆ ಮದ್ದು ಎಂದು ಸೈನೈಡ್ ಕೊಟ್ಟು, ಅವರು ಟಾಯ್ಲೆಟ್‌ನಲ್ಲಿ ಅದನ್ನು ತೆಗೆದುಕೊಳ್ಳುವಂತೆ ಪುಸಲಾಯಿಸಿದ. ನಂತರದ್ದು ಪತ್ರಿಕಾ ವರದಿ. ಮೋಹನ ಕೊಲೆ ಮಾಡಿದ ಎಲ್ಲಾ **18** ಯುವತಿಯರೂ ಕೆಳಜಾತಿಯ ಬಡಕುಟುಂಬಗಳ ಅವಿವಾಹಿತ ಯುವತಿಯರು; ಮತ್ತು ಅವರೆಲ್ಲರನ್ನೂ ಮೋಹನ ಕೊಂದದ್ದು ಇದೇ ವಿಧಾನದಲ್ಲಿ.


ಶಾಲಾ ಶಿಕ್ಷಕನಾಗಿದ್ದು ನೀಟಾಗಿ ಬಟ್ಟೆ ಹಾಕಿಕೊಂಡು,



... ವಜ್ರದೇಹಿ ಶ್ರೀ ನೇತೃತ್ವದಲ್ಲಿ ಪ್ರತಿಭಟನೆ...

ಮೋಹನ ನೋಡಲು ಸಂಭಾವಿತನ ಹಾಗೆ ಇದ್ದ. ಮದುವೆ ಮತ್ತು ಸಂಸಾರದ ಕನಸು ಕಂಡ ಯುವತಿಯರು ತಮ್ಮ ಬಡತನದ, ಅಸಹಾಯಕತೆಯಲ್ಲಿ ಮೋಹನನ ಕೈಗೆ ಸಿಕ್ಕಿಕೊಂಡು ಸಾವು ಕಂಡರು-ಬಸ್‌ಸ್ಟ್ಯಾಂಡು ಟಾಯ್ಲೆಟ್‌ಗಳಲ್ಲಿ. ಆದರೆ ಇದನ್ನೇ ಭೀಭತ್ಸದ ಪರಮಾವಧಿ ಎಂದು ನಾವು ತಿಳಿಯಕೂಡದು. ಇದು ಹಾರರ್ ಪಿಕ್ಚರ್‌ನ ಒಂದು ಸೈಡು ರೀಲು ಮಾತ್ರ; ಸ್ಟೋರಿ ಇನ್ನೂ ಬರುವುದಿದೆ. 'ಪ್ರತಿಯೊಂದು ಸಾವು ತನ್ನದೇ ಆದ ಒಂದು ಕತೆಯನ್ನು ಸೃಷ್ಟಿಸಿಕೊಂಡೇ ಸಂಭವಿಸುತ್ತದೆ' ಎಂದು ವಾಲ್ಟರ್ ಬೆಂಜಮಿನ್ ಹೇಳುತ್ತಾನೆ. ಅನಿತಾ ಸಾವಿನ ಕತೆ ಎಷ್ಟು ಅಕರಾಳವಿಕರಾಳವಾಗಿದೆ!

ಅನಿತಾರ ಅಸಹ್ಯ, ಅಸಂಗತ ಸಾವು ಹಿಂದೂತ್ವ ರಾಜಕೀಯದ ನೀಚತನವನ್ನು ಜಗಜ್ಜಾಹೀರುಪಡಿಸಿದ್ದು ಕುತೂಹಲಕರವಾಗಿದೆ. ಅನಿತಾ ಕೊಲೆಯಾಗುವ ಕೆಲವು ದಿನಗಳ ಮೊದಲು, ತನ್ನ ಮನೆಯವರಿಗೆ ಹೇಳದೆ, ಮೋಹನನ ಜೊತೆಗೆ ಹಾಸನಕ್ಕೆ ಪ್ರಯಾಣ ಬೆಳೆಸಿದ್ದರು. ಸರಿಸುಮಾರು ಅದೇ ಕಾಲಾವಧಿಯಲ್ಲಿ ಕನ್ನಡದ ದಿನಪತ್ರಿಕೆಗಳು (ವಾರ್ತಾ ಭಾರತಿ ಹೊರತುಪಡಿಸಿ) 'ಲವ್ ಜಿಹಾದ್' ಎಂಬ ಪೆಡಂಭೂತವನ್ನು ತಾವೇ ಸೃಷ್ಟಿಸಿ, ಅದರ ಕುರಿತು ಹಸಿಹಸಿ ಸುಳ್ಳುಗಳನ್ನು ಸುದ್ದಿ ಎಂಬಂತೆ ಪ್ರಕಟಿಸುತ್ತಿದ್ದವು. ಮುಸ್ಲಿಮ್ ಸಮುದಾಯದ ಬಗ್ಗೆ ಸಾರಾಸಗಟಾಗಿ ದ್ವೇಷ ಪ್ರಚೋದಿಸುವುದೇ ಈ ವರದಿಗಳ ಉದ್ದೇಶವಾಗಿತ್ತು; ಆ ಬಗ್ಗೆ ಮುಚ್ಚುಮರೆ ಮಾಡುವಷ್ಟು ಕನಿಷ್ಠ ಮರ್ಯಾದೆಯನ್ನೂ ಪತ್ರಿಕೆಗಳು ಉಳಿಸಿಕೊಳ್ಳಲಿಲ್ಲ.



ಈ ಸನ್ನಿವೇಶದಲ್ಲಿ ಬಂಟವಾಳದ ಒಂದು ಹಿಂದೂತ್ವ ಸಂಘಟನೆಯವರು ಅನಿತಾ ಊರಿನಲ್ಲಿ ಕಾಣೆಯಾದದ್ದನ್ನು ಲವ್ ಜಿಹಾದ್‌ಗೆ ಜೋಡಿಸಿ ಸಾರ್ವಜನಿಕ ರಂಪ ಮಾಡಿದ್ದರು. ಮಂಗಳೂರು ಸಮೀಪದ ಗುರುಪುರ ವಜ್ರದೇಹೀ ಮಠದ ಸ್ವಾಮಿ ಅವರ ಜೊತೆ ಸೇರಿ, ಧರಣಿ ಕೂತರು. ಈ ಸ್ವಾಮಿ ಮತ್ತು ಇವರ ಜೊತೆಗಿದ್ದ ಭಜರಂಗಿಗಳ ಧರಣಿ ಲವ್ ಜಿಹಾದ್ ವಿರುದ್ಧ ಜನತೆಯ ಆಕ್ರೋಶ ಅಭಿವ್ಯಕ್ತಿ ಎಂಬಂತೆ ಪತ್ರಿಕೆಗಳು ವರದಿ ಮಾಡಿದ್ದೂ ಆಯಿತು. ಆದಾಗಿ ಕೆಲವು ತಿಂಗಳ ನಂತರ ಅನಿತಾ ನಾಪತ್ತೆಯಾದ್ದದರ ರಹಸ್ಯ ಬಯಲಾಯಿತು. ಆದರೆ ಜಿಲ್ಲೆಯ ಹಿಂದೂತ್ವವಾದಿಗಳಾಗಲಿ, ವಜ್ರದೇಹಿ ಮಠದ ಯತಿಯಾಗಲಿ ಇದುವರೆಗೆ ಅನಿತಾ ಕುರಿತು ತಾವು ಹೇಳಿದ ಸುಳ್ಳುಗಳ ಬಗ್ಗೆ ವಿಷಾದ ವ್ಯಕ್ತಪಡಿಸಿಲ್ಲ. ಈಗ ಮಂಗಳೂರಿನ ಜಿಲ್ಲಾ ತ್ವರಿತ ನ್ಯಾಯಾಲಯದಲ್ಲಿ ಮೋಹನನ ವಿಚಾರಣೆ ನಡೆಯುತ್ತಿದ್ದು ಅನಿತಾ ಕೊಲೆಗೆ ಸಂಬಂಧಿಸಿದ ಹಾಗೆ ಬಂಟವಾಳ ಮತ್ತು ಹಾಸನ ಪೊಲೀಸ್ ಠಾಣೆಗಳ ಸಿಬ್ಬಂದಿ ಮತ್ತು ಇತರರ ಸಾಕ್ಷಿಗಳನ್ನು ಆಲಿಸಲಾಗುತ್ತಿದೆ. ಮೋಹನ ವಕೀಲರ ನೆರವು ಪಡೆಯದೆ, ತನ್ನ ಕೇಸನ್ನು ತಾನೇ ವಾದಿಸುತ್ತಿದ್ದಾನೆ. ವಜ್ರದೇಹಿ ಮಠದ ಪರಮಪೂಜ್ಯ ಸ್ವಾಮೀಜಿಯವರು ಅನಿತಾಳ ನಾಪತ್ತೆ ಪ್ರಕರಣದ ಬಗ್ಗೆ ತಾವು ಆಡಿದ ಮಾತುಗಳನ್ನು ಇನ್ನೂ ಹಿಂದೆ ತೆಗೆದುಕೊಂಡಿಲ್ಲವಾದ್ದರಿಂದ ಮೋಹನ ಶ್ರೀಶ್ರೀಗಳನ್ನು ತನ್ನ ಪರ ಸಾಕ್ಷಿಯಾಗಿ ಕರೆಸಬಹುದಾಗಿದೆ. ಹಾಗೆ ನೋಡಿದರೆ ಈ ಕೇಸಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸು ವರಿಷ್ಠಾಧಿಕಾರಿಗಳನ್ನೂ ಸಹ ಮೋಹನ, ತನ್ನ ಪರ ಸಾಕ್ಷಿ ಎಂದು ಪರಿಗಣಿಸಬಹುದು. ಮೋಹನ ಕೊಲೆ ಮಾಡಿದ ಇನ್ನೋರ್ವ ಯುವತಿ ಬೆಳ್ತಂಗಡಿಯ ಲೀಲಾವತಿ. ಇವರು ವೃತ್ತಿಯಲ್ಲಿ ಬೀಡಿ ಕಟ್ಟುವವರಾಗಿದ್ದು, ಬೀಡಿ ಕಾರ್ಮಿಕ ಸಂಘಟನೆಯಲ್ಲಿಯೂ ಸಕ್ರಿಯವಾಗಿದ್ದರು; ದಸಂಸ ಮತ್ತು ಇತರ ಎಡಪಂಥೀಯ ಸಂಘಟನೆಗಳ ಕಾರ್ಯಕ್ರಮಗಳಲ್ಲೂ ಅವರು ಭಾಗವಹಿಸುತ್ತಿದ್ದರು. ಮೋಹನನ ಮಾತಿಗೆ ಮರುಳಾಗಿ, ಲೀಲಾವತಿ, ಆತನ ಜೊತೆ ಮನೆಯವರಿಗೆ ತಿಳಿಸದೆ ನಾಪತ್ತೆಯಾದರು: ಆ ನಂತರ ಪೊಲೀಸರು, ಆಕೆ ನಕ್ಸಲ್ ತಂಡದ ಸದಸ್ಯೆಯಾಗಿರುವುದರಿಂದ ತಲೆಮರೆಸಿಕೊಂಡಿದ್ದಾರೆ ಎಂದು ಆರೋಪಿಸಿ, ಅವರ ಮನೆಯವರಿಗೆ ಹಲವು ತಿಂಗಳ ಕಾಲ ಇನ್ನಿಲ್ಲದ ಕಿರುಕುಳ ಕೊಟ್ಟರು. ಜಿಲ್ಲೆಯ ಪೊಲೀಸು ಅಧಿಕಾರಿಗಳು ಈ ಬಗ್ಗೆ ನೊಂದವರ ಕ್ಷಮೆ ಕೇಳುವುದು ಹಾಗಿರಲಿ ಒಂದು ಸ್ಪಷ್ಟೀಕರಣವನ್ನೂ ಸಹ ಕೊಟ್ಟಿಲ್ಲ.




ಮೋಹನನಿಗೆ ಬಲಿಯಾದ ಮಹಿಳೆಯರು

ಮಂಗಳೂರಿನ ನ್ಯಾಯಾಲಯದಲ್ಲಿ ಮೋಹನನ ವಿಚಾರಣೆ ನಡೆಯುತ್ತಿದ್ದಾಗಲೇ, ವಜ್ರದೇಹಿ ಮಠದ ಸ್ವಾಮಿ ಮತ್ತೊಮ್ಮೆ ಸಾರ್ವಜನಿಕರ ಎದುರು ಪ್ರತ್ಯಕ್ಷರಾದರು. ಮೊನ್ನೆ **23.11.11** ಬುಧವಾರ ನಗರದ ನೆಹರೂ ಮೈದಾನದಲ್ಲಿ ಸಂಘ ಪರಿವಾರದ ಬೃಹತ್ ಸಮಾವೇಶವೊಂದು ನಡೆಯಿತು. ಸದ್ಯಕ್ಕೆ ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುವ ಕೋಮು ಹಿಂಸೆ ನಿಯಂತ್ರಣ ಮಸೂದೆಯ ವಿರುದ್ಧ ನಡೆಸಲಾದ ಈ ಸಮಾವೇಶದ ವೇದಿಕೆಯಲ್ಲಿ ಕಲ್ಲಡ್ಕ ಪ್ರಭಾಕರ ಭಟ್ಟ ಎಂಬ ಮಹಾತ್ಮರ ಜೊತೆ ವಜ್ರದೇಹಿ ಮಠದ ಸ್ವಾಮಿಯೂ ವಿರಾಜಮಾನರಾಗಿದ್ದರು.

ನಿರೀಕ್ಷೆಯಂತೆ ದೂರದೂರದ ಊರುಗಳಿಂದಲೂ ಜನರನ್ನು ಕರೆತಂದು ಮೈದಾನದಲ್ಲಿ ಜಮಾಯಿಸಲಾಗಿತ್ತು. ನಿರೀಕ್ಷೆಯಂತೆ ಪತ್ರಿಕೆಗಳು ಈ ಜನಸಂದಣಿಯನ್ನು ಜನಸಾಗರ ಎಂದು ವಿಜೃಂಭಣೆಯಂತಾಗಿ ವರ್ಣಿಸಿ ಪುಳಕಿತವಾದವು. ನಿರೀಕ್ಷೆಯಂತೆ ಸಮಾವೇಶದಲ್ಲಿ ಕಲ್ಲಡ್ಕ, ವಜ್ರದೇಹಿಮಠದ ಸ್ವಾಮಿ ಮತ್ತು ಉಳಿದವರೆಲ್ಲರೂ ಪ್ರಸ್ತಾಪಿತ ಮಸೂದೆಯ ಬಗ್ಗೆ ಹಸಿ ಸುಳ್ಳುಗಳನ್ನೇ ಹೇಳಿದರು. ಮತ್ತು ನಿರೀಕ್ಷೆಯಂತೆ ಎಲ್ಲ ಪತ್ರಿಕೆಗಳೂ (ದ ಹಿಂದು ಒಂದನ್ನು ಹೊರತುಪಡಿಸಿ) ಈ ಎಲ್ಲ ಸುಳ್ಳುಗಳನ್ನೂ ಪರಮ ಸತ್ಯವೆಂಬಂತೆ ಮಾರನೆ ದಿನ ವರದಿ ಮಾಡಿದವು.

ಹಿಂದೂಗಳು ಬಹುಸಂಖ್ಯಾತರಾಗಿರುವ ಯಾವ ಊರಿನಲ್ಲಿಯೂ ಹಿಂಸಾಚಾರ ನಡೆಯುವುದಿಲ್ಲ ಎಂದು ಕಲ್ಲಡ್ಕ ಆ ಸಭೆಯಲ್ಲಿ ಹೇಳಿದರಂತೆ. ದೆಹಲಿಯ **1984** ರಲ್ಲಿ ಸಿಖ್ ಹತ್ಯಾಕಾಂಡ, **1992-93** ರ ಮುಂಬಯಿ ಗಲಭೆ, ಗುಜರಾತ್ **2002**, ಕಂಧಮಾಲ್ **2008** ಮತ್ತಿತರ ಘೋರ ದುರಂತಗಳನ್ನು ಕಲ್ಲಡ್ಕರಂತಹವರು ನೆನಪಿಟ್ಟುಕೊಳ್ಳಬೇಕು ಎಂದು ನಾವು ನಿರೀಕ್ಷಿಸುವುದಿಲ್ಲ. ಆದರೆ ನಮ್ಮ ಪತ್ರಿಕೆಗಳಿಗೆ ಏನಾಗಿದೆ? ವಜ್ರದೇಹಿ ಮಠದ ಸ್ವಾಮಿ ಜನಮನಸ್ಸು ಮಾಡಿದರೆ ಕೇಂದ್ರ ಸಚಿವ ವೀರಪ್ಪ ಮೊಯ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಕಾಲಿಡದಂತೆ ಮಾಡಬಹುದು ಎಂದು ಹೇಳಿದರು. ಯತಿಯೊಬ್ಬರು ಹೀಗೆ ಹೇಳಬಹುದೆ? ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರ ನೇತೃತ್ವದ ರಾಷ್ಟ್ರೀಯ ಸಲಹಾ ಸಮಿತಿ ತಯಾರಿಸಿದ ಕೋಮು ಹಿಂಸೆ ನಿಯಂತ್ರಣ ಮಸೂದೆ ತನ್ನ ಕೆಲವು ನ್ಯೂನತೆಗಳನ್ನು ತಿದ್ದಿಕೊಂಡು ಜಾರಿಗೆ ಬರುವುದು ದೇಶದ ಅತ್ಯಂತ ತುರ್ತಿನ ಅಗತ್ಯಗಳಲ್ಲಿ ಒಂದಾಗಿದೆ. ಈ ಮಸೂದೆ ಬಗ್ಗೆ ಸಂಘಪರಿವಾರ ಎಲ್ಲೆಡೆ ಅಪಪ್ರಚಾರ ನಡೆಸುತ್ತಿದ್ದರೂ, ರಾಜ್ಯದ ಎರಡು ಪ್ರಮುಖ ಸೋಕಾಲ್ಡ್ ಸೆಕ್ಯುಲರ್ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಇದು ತಮಗೆ ಸಂಬಂಧಿಸಿದ ವಿಷಯವೇ ಅಲ್ಲವೆಂಬಂತೆ ಉದಾಸೀನ ವಹಿಸಿವೆ. ಮಂಗಳೂರಿನ ಆ ಸಮಾವೇಶದಲ್ಲಿ ಕಲ್ಲಡ್ಕ, ತಮ್ಮ ಜಾಯಮಾನಕ್ಕೆ ತಕ್ಕ ಹಾಗೆ ಸೋನಿಯಾ ಗಾಂಧಿಯವರ ಬಗ್ಗೆ ಸಹ ಸಲ್ಲದ ಮಾತುಗಳನ್ನು ಆಡಿದರು.



ಸಂಘ ಪರಿವಾರದ ಸಮಾವೇಶದಲ್ಲಿ ಕಲ್ಲಡ್ಕ ಮತ್ತು ವಜ್ರದೇಹಿ ಶ್ರೀ

ದಕ್ಷಿಣ ಕನ್ನಡ ಜಿಲ್ಲೆಯ ಮಹಾನ್ ನೇತಾರರಾದ ಜನಾರ್ದನ ಪೂಜಾರಿ, ವೀರಪ್ಪ ಮೊಯ್ಲಿ, ಆಸ್ಕರ್ ಫರ್ನಾಂಡಿಸ್ ವಗೈರೆಗಳನ್ನು ಕಲ್ಲಡ್ಕರ ಈ ಅಪಪ್ರಲಾಪ ಕೂಡ ಕೆರಳಿಸಲಿಲ್ಲ ಎಂದ ಮೇಲೆ ಇವರುಗಳು ಜೀವಂತವಾಗಿದ್ದಾರೆ ಎಂದು ನಂಬುವುದಾದರೂ ಹೇಗೆ? ಅನಿತಾ, ಲೀಲಾವತಿ ಮತ್ತಿತರರ ಸಾವು ವಿಕಾರ ನಿಜ. ಆದರೆ ನಮ್ಮ ರಾಜಕಾರಣಿಗಳು ಮತ್ತು ನಮ್ಮ ಊರುಗಳ ಬದುಕು ಅದಕ್ಕಿಂತ ವಿಕಾರವಲ್ಲವ?

• ಜಿ. ರಾಜಶೇಖರ

...2 ವಿದೇಶಿ ಮಖಮಲ್ ನೇಣು

ಭಾರತದಂಥ ದೊಡ್ಡದೇಶಗಳಲ್ಲಿ ವಿದೇಶಿ ಹೂಡಿಕೆದಾರರು ಇಡೀ ಕೃಷಿ ಜಮೀನನ್ನೇ ಆವರಿಸಿಕೊಳ್ಳುವ ಬದಲು ಕಾಂಟ್ರಾಕ್ಟ್ ಫಾರ್ಮಿಂಗ್ ಮೂಲಕ ಮತ್ತು ಕೃಷಿಗೆ ಬೇಕಾದ ತಂತ್ರಜ್ಞಾನವನ್ನೇ ಬದಲಿಸಿ ಪ್ರತಿಯೊಬ್ಬ ರೈತನನ್ನು ತನ್ನ ಗ್ರಾಹಕನನ್ನಾಗಿ ಮಾಡಿಕೊಂಡು ಲಾಭ ಮಾಡಿಕೊಳ್ಳುತ್ತವೆ.

ಹಾಗೆ ನೋಡಿದರೆ ಇತ್ತೀಚಿನವರೆಗೆ ಒಟ್ಟಾರೆ ವಿದೇಶಿ ಬಂಡವಾಳ ಹೂಡಿಕೆ ಜಾಗತಿಕ ಮಟ್ಟದಲ್ಲಿ ಎಂದಿಗೂ ಶೇ.2ನ್ನು ದಾಟಿಲ್ಲ. ಅದರಲ್ಲೂ ಹೂಡಿಕೆಯು ಕೃಷಿ ವ್ಯಾಪಾರದಲ್ಲಿ ಹೆಚ್ಚು ಆಗುತ್ತಿದೆಯೇ ವಿನಃ ಉತ್ಪಾದನೆಯಲ್ಲಲ್ಲ. 2005-07ರಲ್ಲಿ ಕೃಷಿಯಲ್ಲಿ ನೇರ ಬಂಡವಾಳ ಹೂಡಿಕೆ 3 ಬಿಲಿಯನ್ ಡಾಲರ್ ದಾಟಿರಲಿಲ್ಲ. ಆ ಹೂಡಿಕೆಯು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಆಗುತ್ತಿತ್ತೇ ವಿನಃ ಹಿಂದುಳಿದ ದೇಶಗಳಲ್ಲಲ್ಲ. ಆದರೆ ನಿಧಾನವಾಗಿ ಈ ಸ್ವರೂಪ ಬದಲಾಗುತ್ತಿದೆ. ಭೂಮಿಯ ನೇರ ನಿಯಂತ್ರಣ ಮತ್ತು ಉತ್ಪಾದನೆಯ ಮೇಲಿನ ಹೂಡಿಕೆಗಳಿಗಿಂತ ಕೃಷಿ ಸಂಬಂಧೀ ವ್ಯಾಪಾರ ಮತ್ತು ವಾಣಿಜ್ಯದ ಮೇಲೆ ಹೂಡಿಕೆ ಹೆಚ್ಚಾಗುತ್ತಿದೆ. 1987-2009ರ ನಡುವೆ ಒಟ್ಟಾರೆ ಜಾಗತಿಕ ಮಟ್ಟದಲ್ಲಿ ಕೃಷಿ ಸಂಬಂಧಿ ವ್ಯವಹಾರಗಳಲ್ಲಿ ಕೇವಲ 840 ಡೀಲುಗಳು ಪ್ರಾಥಮಿಕ ಉತ್ಪಾದನೆಯಲ್ಲೂ, 6900 ಡೀಲುಗಳು ಆಹಾರ ಸಂಸ್ಕರಣ ಘಟಕದಲ್ಲೂ, 2200 ಡೀಲುಗಳು ಆಹಾರ ಮತ್ತು ಕೃಷಿ ಸಂಬಂಧಿ ಸೇವಾ ಕ್ಷೇತ್ರದಲ್ಲೂ ನಡೆದಿದೆ.

ಹೀಗೆ ಕೃಷಿಯಲ್ಲಿ ವಿದೇಶೀ ಹೂಡಿಕೆಯು ನೇರ ಉತ್ಪಾದನೆಗಿಂತ ಹೆಚ್ಚಾಗಿ ಉತ್ಪಾದನಾ ಚಕ್ರದ ಮುಂಭಾಗದಲ್ಲಿ ಜೈವಿಕ ತಂತ್ರಜ್ಞಾನ, ಸುಧಾರಿತ ಬೀಜ ಇತ್ಯಾದಿ ಕ್ಷೇತ್ರಗಳಲ್ಲೂ ಹಾಗೂ ಉತ್ಪಾದನೆಯ ಹಿಂಭಾಗದ ಕ್ಷೇತ್ರವಾದ ಮಾರಾಟ, ಚಿಲ್ಲರೆ ಮಾರಾಟ ಕ್ಷೇತ್ರಗಳಲ್ಲೂ ಹೆಚ್ಚು ಕೇಂದ್ರೀಕೃತವಾಗಿದೆ.

ಯಾವುದು ಹೆಚ್ಚು ಲಾಭದಾಯಕ ಎನ್ನುವುದನ್ನು ಆಧರಿಸಿ ಬಹುರಾಷ್ಟ್ರೀಯ ಕಂಪನಿಗಳು ಮೂರು ಬಗೆಯ ಹೂಡಿಕೆಯನ್ನು ಮಾಡುತ್ತಿವೆ.

1. ಉತ್ಪಾದನೆಯ ಮೇಲೆ ಯಾವುದೇ ನಿಯಂತ್ರಣವನ್ನು ಹೊಂದದೆ ತಂತ್ರಜ್ಞಾನವನ್ನು ಮಾತ್ರ ಸರಬರಾಜು ಮಾಡಿಕೊಳ್ಳುವಾಗ ಗುಣಮಟ್ಟದ ಮೇಲೆ ತಮ್ಮ ಹಿಡಿತ ಇಟ್ಟುಕೊಂಡು ಹೂಡಿಕೆ ಮಾಡುವ ಬಗೆ.
2. ಉತ್ಪಾದಕತೆ ಗುಣಮಟ್ಟದ ಬಗ್ಗೆ ಖಾತ್ರಿಯಿಲ್ಲದಾಗ ಉತ್ಪಾದನೆಯ ಮೇಲೂ ನೇರ ನಿಯಂತ್ರಣ ಹೊಂದುವಂಥಾ ಕಾಂಟ್ರಾಕ್ಟ್ ಫಾರ್ಮಿಂಗ್.
3. ಉತ್ಪಾದನೆಯ ಮೇಲೆ ನೇರ ನಿಯಂತ್ರಣ ಇಟ್ಟುಕೊಳ್ಳುವ ಶೇ.100 ರಷ್ಟು ನೇರ ಹೂಡಿಕೆ. ಆ ಮೂಲಕ ಉತ್ಪಾದನೆ, ಒಡೆತನ ಮತ್ತು ಮಾರಾಟವನ್ನು ನಿಯಂತ್ರಿಸುವುದು.

ಇಂದು ಸರಕುಗಳ ಅಂತಿಮ ಮಾರಾಟದಲ್ಲಿ ಬ್ರಾಂಡ್ ಹೆಸರು ಮತ್ತು ತಂತ್ರಜ್ಞಾನಗಳೇ ಮುಖ್ಯ ಪಾತ್ರ ವಹಿಸುವುದರಿಂದ ಹಲವಾರು ಬಾರಿ ಮಾಹಿತಿ ಮತ್ತು ಜ್ಞಾನ ಗುತ್ತಿಗೆ ನೇರ ಹೂಡಿಕೆಗಿಂತ ಹೆಚ್ಚಿನ ಲಾಭ ತಂದುಕೊಡುತ್ತದೆ. ಆದ್ದರಿಂದ ವಿದೇಶಿ ಬಂಡವಾಳ ಹೂಡಿಕೆಯು ಈ ಕೃಷಿ ಜ್ಞಾನ ಮಾಹಿತೀಕರಣದ ಮೇಲೆ ಕೇಂದ್ರೀಕೃತವಾಗಿದೆ. ಇದು ನೇರ ಕೃಷಿ ಭೂಮಿ ಹಿಡಿತಕ್ಕಿಂತಲೂ ಹೆಚ್ಚು ಅಪಾಯಕಾರಿಯಾದದ್ದು ಎಂಬುದನ್ನು ಗ್ರಹಿಸದಿದ್ದರೆ ಶತ್ರುವಿನ ಬದಲಾದ ಚಹರೆಯೇ ಗೊತ್ತಿಲ್ಲದೆ ಗಾಳಿಯಲ್ಲಿ ಕತ್ತಿ ಬೀಸಿದಂತಾಗುತ್ತದೆ.

ಇದಲ್ಲದೆ ವಿಶ್ವದೆಲ್ಲೆಡೆ ಮಧ್ಯಮವರ್ಗದ ಆಹಾರ ಬಳಕೆಯ ಅಭ್ಯಾಸವೂ ಸಹ ಬದಲಾಗುತ್ತಿದ್ದು ಈ ಬೇಡಿಕೆಯನ್ನು ಪೂರೈಸಲು ಕೃಷಿ ಹೂಡಿಕೆದಾರರು ಸಂಬಂಧಪಟ್ಟ ಆಹಾರ ಧಾನ್ಯಗಳ ಅಥವಾ ಕೃಷಿ ಆಧಾರಿತ ಸರಕುಗಳ ಉತ್ಪಾದನೆಯಲ್ಲಿ ಹೂಡಿಕೆ ಮಾಡುತ್ತಿವೆ. ಕೆಲವು ದೇಶಗಳ ಕೃಷಿಯನ್ನೇ ಮಧ್ಯಮ ವರ್ಗದ ಜಾಗತಿಕ ಮಾರುಕಟ್ಟೆಯ ಅಗತ್ಯಗಳನ್ನು ಪೂರೈಸಲು ತಕ್ಕಂತೆ ಪುನರ್‌ರಚಿಸಿದೆ. ಪೆಪ್ಸಿ ಮತ್ತು ಚಿಪ್ಸ್ ಈ ತರಹದ್ದು.

2002-06ರ ನಡುವೆ ಜಗತ್ತಿನ ಶೇ.50ರಷ್ಟು ಟೀ ರಫ್ತು ಆದದ್ದು ಏಷಿಯಾ ದೇಶಗಳಿಂದ, ವಿಶ್ವದ ಶೇ.68ರಷ್ಟು ಕೋಕೋ ಉತ್ಪಾದನೆಯು ಕ್ಯಾಮರೂನ್, ಘಾನಾ ಮತ್ತು ನೈಜೀರಿಯಾದಂಥ ಆಫ್ರಿಕಾದ ಕೇವಲ ನಾಲ್ಕು ದೇಶಗಳಿಂದ ಆಗಿದೆ. ಅದೇರೀತಿ ವಿಶ್ವದ ಶೇ.50ರಷ್ಟು ಬಾಳೆಹಣ್ಣು ರಫ್ತು ಕೊಲಂಬಿಯಾ, ಕೋಸ್ಟಾರಿಕಾ, ಈಕ್ವಡಾರ್, ಗ್ವಾಟೆಮಾಲಾ ಮತ್ತು ಹೊಂಡುರಾಸ್ ದೇಶಗಳಿಂದ ಆಗಿದ್ದರೆ ಶೇ.60ರಷ್ಟು ಕಾಫಿ ಉತ್ಪಾದನೆ ಲ್ಯಾಟಿನ್ ಅಮೆರಿಕಾ ದೇಶಗಳಿಂದ ನಡೆಯುತ್ತಿದೆ. ಆದರೆ ಈ ದೇಶಗಳು ಮಾರುಕಟ್ಟೆಯಲ್ಲಿ ಇಂತಹ ದೊಡ್ಡ ಸ್ಥಾನವನ್ನು ಪಡೆದಿದ್ದರೂ ಅದರ ಲಾಭ ಆ ದೇಶಗಳಿಗೇನೂ ಸಿಕ್ಕಿಲ್ಲ. ಏಕೆಂದರೆ ಅಲ್ಲಿ ಬೆಳೆದ ಬೆಳೆಯ ಮೇಲೆ ಸಂಪೂರ್ಣ ನಿಯಂತ್ರಣವಿರುವುದು ಶ್ರೀಮಂತ ಅಥವಾ ನವವಸಾಹತು ದೇಶಗಳ ಬಹುರಾಷ್ಟ್ರೀಯ ಕಂಪನಿಗಳಿಗೆ.

ಉದಾಹರಣೆಗೆ ಸೋಯಾ ಉತ್ಪಾದನೆಯು ಪ್ರಧಾನವಾಗಿ ಅರ್ಜೆಂಟಿನಾ, ಬ್ರೆಜಿಲ್ ಮತ್ತು ಅಮೆರಿಕದಲ್ಲಿ ನಡೆಯುತ್ತಿದ್ದರೂ ಕೆಲವೇ ಕೆಲವು ಬಹುರಾಷ್ಟ್ರೀಯ ಕಂಪನಿಗಳು ಸೋಯಾ ಉತ್ಪಾದನೆಯ ಎಲ್ಲಾ ಹಂತಗಳನ್ನು ನಿಯಂತ್ರಿಸುತ್ತವೆ. ಉದಾಹರಣೆಗೆ ADM, Bunge, Cargill ಮತ್ತು Louis Dreyfus ಎಂಬ ನಾಲ್ಕು ಅಮೆರಿಕನ್ ಮೂಲದ ಕಂಪನಿಗಳು ಬ್ರೆಜಿಲ್‌ನ ಶೇ.40ರಷ್ಟು ಸೋಯಾ ವಹಿವಾಟನ್ನು ನಿಯಂತ್ರಿಸುತ್ತವೆ. ಹಾಗೆಯೇ ಜಿಎಂ ಸೋಯಾ ಕ್ಷೇತ್ರದಲ್ಲಿ ಮೊನ್ಸಾಂಟೋ ಕಂಪನಿಯೊಂದೇ ಶೇ.90ರಷ್ಟು ಉತ್ಪಾದನೆ ವಹಿವಾಟನ್ನು ನಿಯಂತ್ರಿಸುತ್ತದೆ.

ದಕ್ಷಿಣ ಅಮೆರಿಕದ ಕೋಸ್ಟಾರಿಕಾ, ಹೊಂಡುರಾಸ್, ಗ್ವಾಟೆಮಾಲಾ, ಪನಾಮಾ ದೇಶಗಳಲ್ಲಿನ ಒಟ್ಟಾರೆ ಬಾಳೆ ಉತ್ಪಾದನೆಯನ್ನು ಹಾಗೂ ಏಷಿಯಾ ಮತ್ತು ಆಫ್ರಿಕಾ ದೇಶಗಳಲ್ಲಿನ ಬಾಳೆ ಮಾರಾಟದ ಒಂದಷ್ಟು ಭಾಗವನ್ನು Chiquita, Dole, Del Monte ಮತ್ತು Fyffes ಎಂಬ ಕಂಪನಿಗಳು ನಿಯಂತ್ರಿಸುತ್ತವೆ.

ಇವೆಲ್ಲಕ್ಕಿಂತ ಹೆಚ್ಚಾಗಿ ಕೃಷಿ ವಿದೇಶಿ ಕಂಪನಿಗಳಿಗೆ ಲಾಭ ತರುತ್ತಿರುವುದು ಭಾರತ, ಚೀನಾ, ಬ್ರೆಜಿಲ್‌ನಂಥ ಬೃಹತ್ ರೈತಾಪಿ ಇರುವ ದೇಶಗಳ ಕೃಷಿ ಪದ್ಧತಿಯನ್ನೇ ಮಾಹಿತೀಕರಣ ಮಾಡಿ ಅಲ್ಲಿನ ಇಡೀ ರೈತಾಪಿಯನ್ನು ಗ್ರಾಹಕರನ್ನಾಗಿ ಮಾಡಿಕೊಂಡು ತಮ್ಮ ಸರಕುಗಳನ್ನು ಮಾರಿ ಲಾಭ ಮಾಡಿಕೊಂಡಿದ್ದರಿಂದ. ಇಂದು ಜಗತ್ತಿನ ಬೃಹತ್ ಕೃಷಿ ಕಂಪನಿಗಳು ಬಿಲಿಯನಾಧೀಶರಾಗಿರುವುದು ಈ ಮಾರ್ಗದಿಂದಲೇ. ಉದಾಹರಣೆಗೆ:

ಕೃಷಿ ಉಪಕರಣಗಳು, ಬೀಜ ಮತ್ತು ಗೊಬ್ಬರ ಕ್ಷೇತ್ರದಲ್ಲಿ ಕೇವಲ ಶ್ರೀಮಂತ ದೇಶದ ಕಂಪನಿಗಳೇ ಇವೆ. ಅದರಲ್ಲಿ 8 ಅಮೆರಿಕ ದೇಶದ್ದಾದರೆ, 3 ಜರ್ಮನಿಯದ್ದು, ಡೆನ್ಮಾರ್ಕ್, ಜಪಾನ್, ನಾರ್ವೆ, ಸ್ವಿಟ್ಜರ್ಲೆಂಡಿನ ತಲಾ ಎರಡು ಕಂಪನಿಗಳಿವೆ. ಅವುಗಳಲ್ಲಿ BASF, Bayer ಮತ್ತು Dow ಕಂಪನಿಗಳು ಮುಖ್ಯವಾದವು. ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿನ 50 ಬೃಹತ್ ಕಂಪನಿಗಳಲ್ಲಿ ಬಹುಪಾಲು ಎಲ್ಲವೂ ಶ್ರೀಮಂತ ದೇಶಗಳಲ್ಲಿ ನೆಲೆಹೊಂದಿವೆ. ಉದಾಹರಣೆಗೆ ನೆಸ್ಲೆ, ಕೋಕೋ, Inbev ಮತ್ತು Kraft Foods ಗಳು ತಲಾ 20 ಬಿಲಿಯನ್ ಡಾಲರ್‌ಗಿಂತಲೂ ಹೆಚ್ಚಿನ ವಿದೇಶಿ ಆಸ್ತಿಪಾಸ್ತಿಗಳನ್ನು ಹೊಂದಿವೆ. ಸೂಪರ್ ಮಾರ್ಕೆಟ್ ಕ್ಷೇತ್ರದಲ್ಲಿರುವ 25 ಬೃಹತ್ ಬಹುರಾಷ್ಟ್ರೀಯ ಕಂಪನಿಗಳಲ್ಲಿ ವಾಲ್ ಮಾರ್ಟ್, ನೆಸ್ಲೆ, ಮೆಟ್ರೋದಂಥ 22 ದೈತ್ಯ ಸಂಸ್ಥೆಗಳು ಶ್ರೀಮಂತ ದೇಶಗಳವೇ! ಅವುಗಳ ಒಂದೊಂದು ಕಂಪನಿಗಳ ವಿದೇಶಿ ಆಸ್ತಿಪಾಸ್ತಿ 60-70 ಬಿಲಿಯನ್ ಡಾಲರ್‌ಗಳಷ್ಟು.

ಇವಲ್ಲದೆ ಜೈವಿಕ ಇಂಧನ, ಬೆಳೆಯುತ್ತಿರುವ ಜನಸಂಖ್ಯೆ ಆಹಾರದ ಅಗತ್ಯ ಆಹಾರ ಅಭದ್ರತೆಯ ಕಾಳಜಿಗಳು ಮತ್ತು ಬದಲಾಗುತ್ತಿರುವ ಮಧ್ಯಮವರ್ಗದ ಬಳಕೆಯ ವಿನ್ಯಾಸಗಳಿಂದ ಈವರೆಗೆ ಈ ಕ್ಷೇತ್ರದಲ್ಲಿ ಇರದಿದ್ದ ಹೊಸ ಹೂಡಿಕೆದಾರರು ಕೃಷಿಯಲ್ಲಿ ಬಂಡವಾಳ ಹೂಡಿಕೆ ಮಾಡುತ್ತಿದ್ದಾರೆ. ಸೌದಿ ಅರೇಬಿಯಾದ ಪ್ರಭುತ್ವ, ಕೊರಿಯಾದ ಸರ್ಕಾರಿ ಕಂಪನಿಗಳು, ಎಕ್ಸಾನ್ ಮೊಬಿಲ್‌ನಂಥ ಇಂಧನ ಕಂಪನಿಗಳು ಜೈವಿಕ ಇಂಧನಕ್ಕಾಗಿ ಹೂಡಿಕೆ ಮಾಡುತ್ತಿದ್ದರೆ, ಗೋಲ್ಡ್‌ಮೆನ್ ಸ್ಯಾಕ್ಸ್‌ನಂಥ ಸಟ್ಟಾ ಬಜಾರಿನ ಕಂಪನಿಗಳು ಕೃಷಿ ಕ್ಷೇತ್ರಕ್ಕೆ ದಾಂಗುಡಿಯಿಡುತ್ತಿವೆ. ಇದರ ಜೊತೆಗೆ ಬರಲಿರುವ ದಿನಗಳಲ್ಲಿ ಈ ಕ್ಷೇತ್ರದಲ್ಲಿ ದಕ್ಕಬಹುದಾದ ಲಾಭದ ಅಂದಾಜಿನ ಮೇಲೆ ಕೆಲವು ಕಂಪನಿಗಳು ಹಿಂದುಳಿದ ದೇಶಗಳಲ್ಲಿ ಜಮೀನು ಖರೀದಿಯಲ್ಲಿ ದೊಡ್ಡ ಮಟ್ಟದಲ್ಲಿ ಹೂಡಿಕೆ ಮಾಡುತ್ತಿರುವ ಲಕ್ಷಣಗಳು ಕಂಡುಬರುತ್ತಿದೆ.

ಕರ್ನಾಟಕ ಸರ್ಕಾರ ಮಾಡುತ್ತಿರುವ ಕೃಷಿ ಹೂಡಿಕೆದಾರರ ಸಮಾವೇಶ ಕರ್ನಾಟಕವನ್ನು ಆಫ್ರಿಕಾದ ರೀತಿ ಕೃಷಿ ವಸಾಹತು ಮಾಡದಿದ್ದರೂ, ಕೃಷಿ ಪದ್ಧತಿಯನ್ನೇ ಇನ್ನಷ್ಟು ಮಾಹಿತೀಕರಿಸಲು ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಡುತ್ತಿದೆ. ಏಕೆಂದರೆ:

1. ಅಂತಾರಾಷ್ಟ್ರೀಯ ಕೃಷಿ ಮಾರುಕಟ್ಟೆಯ ಜೊತೆ ಹೆಣೆದುಕೊಂಡ ಮೇಲೆ ವಾಣಿಜ್ಯ ಉತ್ಪಾದನೆಗೆ ಬೇಕಾದ ಮೂಲಭೂತ ಅಗತ್ಯಗಳಾದ ನೀರಾವರಿ, ಸಂಗ್ರಹಾಗಾರ, ರಸ್ತೆ ಇವುಗಳ ಮೇಲೂ; ಅಂತರರಾಷ್ಟ್ರಿಯ ಮಟ್ಟದ ವಾಣಿಜ್ಯದಲ್ಲಿ ಭಾಗವಹಿಸಲು ಬೇಕಾದ ಹಣಕಾಸು ನಿರ್ವಹಣೆ, ಪ್ಯಾಕೇಜಿಂಗ್, ಬ್ರಾಂಡಿಂಗ್ ಇನ್ನಿತ್ಯಾದಿಗಳಲ್ಲೂ ನೈಪುಣ್ಯತೆ ಮತ್ತು ಸಾಮರ್ಥ್ಯವನ್ನು ಪಡೆದುಕೊಳ್ಳಬೇಕಾಗುತ್ತದೆ. ಈ ನೈಪುಣ್ಯತೆಗೆ ಬೇಕಾದ ಜ್ಞಾನದ ಸ್ವಾಮ್ಯವನ್ನು ಹೊಂದಿರುವ ಬಹುರಾಷ್ಟ್ರೀಯ ಕಂಪನಿಗಳನ್ನೇ ಆಶ್ರಯಿಸಬೇಕಾಗುತ್ತದೆ. ಹೀಗಾಗಿ ಅವರು ಹಾಕುವ ಲಾಭದ ಶರತ್ತಿಗೆ ಒಳಪಟ್ಟು ಜ್ಞಾನ ಹಸ್ತಾಂತರ ನಡೆಯುತ್ತದೆ. ಇದು ಅವರ ಹೂಡಿಕೆಗೆ ದುಪ್ಪಟ್ಟು ಲಾಭ ತಂದುಕೊಡುತ್ತದೆ. ಮತ್ತೊಂದೆಡೆ ನಮ್ಮ ರೈತಾಪಿಯನ್ನು ಹತಾಶ ಅವಲಂಬಿತನನ್ನಾಗಿ ಮಾಡಿ ಭಿಕಾರಿಯಾಗಿಸುತ್ತದೆ.
2. ತಂತ್ರಜ್ಞಾನ ಹಸ್ತಾಂತರದ ಹೆಸರಲ್ಲಿ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ತಂತ್ರಜ್ಞಾನ ಮತ್ತು ಉತ್ಪಾದನಾ ವಿಧಾನದ ಮೇಲೆ ನಾಡಿನ ರೈತರು ಸಂಪೂರ್ಣವಾಗಿ ಅವಲಂಬಿತರಾಗುವಂತೆ ಮಾಡುತ್ತದೆ. ಈ ತಂತ್ರಜ್ಞಾನವೂ ನಾಡಿಗೆ ಅಗತ್ಯವಿರುವ ಬೆಳೆಯ ಮೇಲೆ ಆಗಿರುವುದಿಲ್ಲ. ಬದಲಿಗೆ ಆ ಕಂಪನಿಗಳು ಜಾಗತಿಕ ಮಾರುಕಟ್ಟೆಯಲ್ಲಿ ತಾವು ಯಾವುದರ ಮೇಲೆ ಹೂಡಿದರೆ ಲಾಭ ಎಂದು ಭಾವಿಸುತ್ತಾರೋ ಆ ಬೆಳೆಗಳ ಉತ್ಪಾದಕತೆ ಹೆಚ್ಚಿಸುವುದನ್ನು ಮಾತ್ರ ಉದ್ದೇಶಿಸಿರುತ್ತದೆ. ಸಂಶೋಧನೆಯೂ ಕೇವಲ ಈ ಅಗತ್ಯವನ್ನು ಪೂರೈಸಲೆಂದೇ ರೂಪಿಸಲಾಗಿರುತ್ತದೆ. 2009ರಲ್ಲಿ ವಿಶ್ವಬ್ಯಾಂಕ್ ಮಾಡಿದ ಒಂದು ಅಧ್ಯಯನವು ಹೇಳುವಂತೆ ಈ ಎಲ್ಲಾ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಸಂಶೋಧನೆಯ ಮೇಲೆ ಮಾಡಿದ ಒಟ್ಟಾರೆ ಹೂಡಿಕೆಯಲ್ಲಿ ಶೇ.1ರಷ್ಟು ಸಹ ಬಡರಾಷ್ಟ್ರಗಳಿಗೆ ಬೇಕಾದ ಧಾನ್ಯಗಳ ಮೇಲೆ ಇರಲಿಲ್ಲ. ಇತ್ತೀಚಿನ ಹೊಸ ಸಂಶೋಧನೆಗಳೆಲ್ಲವನ್ನೂ ಭೌದ್ಧಿಕ ಸ್ವಾಮ್ಯ ಹಕ್ಕು ರಕ್ಷಣೆ ಪಡೆದಿರುವುದರಿಂದ ತಂತ್ರಜ್ಞಾನ ಹಸ್ತಾಂತರ ಆಗುವುದೇ ಕಡಿಮೆ.
3. ಇದಲ್ಲದೆ ಕುಲಾಂತರಿ ತಳಿಗಳನ್ನು ಆಧರಿಸಿ ಶ್ರೀಮಂತ ದೇಶಗಳಲ್ಲಿ 125 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಮಾಡಲಾಗುತ್ತಿದೆ. ಅದನ್ನು ಬಿಟ್ಟರೆ ಅರ್ಜೆಂಟೀನಾ, ಬ್ರೆಜಿಲ್, ಭಾರತ, ಚೀನಾ, ಪರುಗ್ವೆ ಮತ್ತು ದಕ್ಷಿಣ ಆಫ್ರಿಕಾಗಳಲ್ಲಿ ಮಾತ್ರ 1 ಮಿಲಿಯನ್ ಹೆಕ್ಟೇರುಗಳಲ್ಲಿ ಕುಲಾಂತರಿ ಕೃಷಿ ಮಾಡಲಾಗುತ್ತಿದೆ. ಇಂದು ಶ್ರೀಮಂತ ದೇಶಗಳಲ್ಲಿ ಪರಿಸರ ಹಾನಿ ಮತ್ತು ಪ್ರಜ್ಞಾವಂತ ಜನತೆಯ ಹೋರಾಟಗಳು, ಇನ್ನಿತ್ಯಾದಿ ಕಾರಣಗಳಿಂದ ಅಲ್ಲಿ ಜಿಎಂ ಧಾನ್ಯಗಳನ್ನು ಉತ್ಪಾದನೆ ಮಾಡಲಾಗುತ್ತಿಲ್ಲ. ಈಗ ಕರ್ನಾಟಕವನ್ನು ಜಿಎಂ ಧಾನ್ಯ ಉತ್ಪಾದನೆಯ ಪ್ರಮುಖ ಕೇಂದ್ರವನ್ನಾಗಿ ಮಾಡಿಕೊಳ್ಳುವುದೂ ಸಹ ಈ ಸಮಾವೇಶದ ಹಿಂದಿರುವ ಬಹುರಾಷ್ಟ್ರೀಯ ಕಂಪನಿಗಳ ಉದ್ದೇಶವಾಗಿದೆ.
4. ಕೃಷಿ ಕ್ಷೇತ್ರದಲ್ಲಿ ಸಂಶೋಧನೆಯ ಸ್ವಾಮ್ಯ ಹೊಂದಿರುವವರು ನಾಳೆ ಇಡೀ ಜಗತ್ತಿನ ಕೃಷಿಯ ಮೇಲೂ ಸ್ವಾಮ್ಯ ಹೊಂದುತ್ತಾರೆ. ಉದಾಹರಣೆಗೆ ಇಂದು ಕೃಷಿ ಸಂಶೋಧನೆಯಲ್ಲಿ BASF, Dupont, Monsanto, Novartis, Pioneer ಮತ್ತು Syngenta ಕಂಪನಿಗಳೇ ಜಾಗತಿಕ ನಾಯಕತ್ವ ಮತ್ತು ಪಾಲು ಹೊಂದಿದ್ದು ಇಡೀ ಕೃಷಿ ಜ್ಞಾನದ ಮಾಹಿತೀಕರಣ ಮಾಡಿವೆ. ನಾಳಿನ ಕೃಷಿ ಇವರ ಮರ್ಜಿಯ ಮೇರೆಗೆ ನಡೆಯಲಿದೆ.
5. ಮತ್ತೊಂದು ಅಪಾಯಕಾರಿ ಮುಖವೆಂದರೆ ಕೆಲವೊಮ್ಮೆ ಇದೇ ಸಂಸ್ಥೆಗಳೆ ಆತಿಥೇಯ ದೇಶಗಳಲ್ಲಿರುವ ಪ್ರಾಕೃತಿಕ ಸಂಪನ್ಮೂಲಗಳ, ಅಲ್ಲಿನ ಸಸ್ಯಜೀವಕೋಶಗಳ ಕಳ್ಳಸಾಗಾಣಿಕೆದಾರರೂ ಆಗಿಬಿಡುವುದು.
6. ಸಣ್ಣ ರೈತರಿಗೆ ಈ ತಂತ್ರಜ್ಞಾನ ಎಟುಕುವುದೇ ಇಲ್ಲದಂತಾಗಿ ಅವರು ಪ್ರಧಾನಧಾರೆಯಿಂದ ಹೊರಗುಳಿಯುವುದು.
7. ಕೃಷಿಯಲ್ಲಿ ವಿದೇಶಿ ಬಂಡವಾಳ ಹೂಡಿಕೆಯಿಂದ ದೇಶಿ ಹೂಡಿಕೆ ಮತ್ತು ಸಾರ್ವಜನಿಕ ಹೂಡಿಕೆ ಇಳಿಮುಖವಾಗುವುದು. ಖಾಸಗಿ ಹೂಡಿಕೆಗಳು ಪ್ರಧಾನವಾಗಿ ರಫ್ತು ಆಧಾರಿತ ವಾಣಿಜ್ಯ ಬೆಳೆಗಳ ಸುತ್ತವೇ ನಡೆಯುವುದರಿಂದ ಅದರ ಲಾಭ ಸ್ಥಳೀಯ ಸಣ್ಣ ಪುಟ್ಟ ರೈತರಿಗೆ ದಕ್ಕುವುದೇ ಇಲ್ಲ.
8. ಸಣ್ಣ ರೈತರನ್ನು ಒಕ್ಕಲೆಬ್ಬಿಸುವುದಲ್ಲದೆ ಇಡೀ ಕೃಷಿಯ ಮೇಲೆ ಮಾರುಕಟ್ಟೆ ಶಕ್ತಿಗಳ ಪಾರಮ್ಯವನ್ನು ಹಲವು ರೀತಿಗಳಲ್ಲಿ ಮತ್ತು ಹಲವು ಹಂತಗಳಲ್ಲಿ ಪ್ರತಿಷ್ಠಾಪಿಸುತ್ತದೆ. ಇದರಿಂದ ದುರ್ಬಲರು ಸಮಪ್ಪೋಟಿ ನೀಡಲಾಗದಂತಾಗಿ ಮೂಲೆಗುಂಪಾಗುತ್ತಾರೆ.
9. ಅಲ್ಲದೇ ಒಮ್ಮೆ ಬಹುರಾಷ್ಟ್ರೀಯ ಕಂಪನಿಗಳು ಪ್ರವೇಶ ಮಾಡಿದರೆ ಕೃಷಿ ಸಂಬಂಧೀ ನೀತಿಗಳೆಲ್ಲಾ ಅವುಗಳ ಹಿತಾಸಕ್ತಿಗೆ ತಕ್ಕಂತೆ ರೂಪುಗೊಳ್ಳುತ್ತವೆ.

ಹೀಗೆ ಈ ಕೃಷಿ ಹೂಡಿಕೆದಾರರ ಸಮಾವೇಶವು ಕರ್ನಾಟಕದ ರೈತಾಪಿಯ ಮೇಲೆ ಮಖಮಲ್ ನೇಣು ಕುಣಿಕೆ ಸುತ್ತಲು ನಡೆಸುತ್ತಿರುವ ತಯಾರಿ ಆಗಿದೆ. ಕರ್ನಾಟಕದ ರೈತಾಪಿಯನ್ನು ವಿದೇಶೀ ಮಾರುಕಟ್ಟೆಯ ಗುಲಾಮನನ್ನಾಗಿಸುವ ಹುನ್ನಾರವಾಗಿದೆ. ಆಧುನಿಕತೆ, ಮೂಲಭೂತ ಸೌಲಭ್ಯದ ಬಣ್ಣದ ಮಾತಿನಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಸಂಪೂರ್ಣವಾಗಿ ಕೃಷಿಯಿಂದ ಹೊರ ದಬ್ಬುವ ಮತ್ತು ಮೇಲು ಮಧ್ಯಮ ರೈತರನ್ನು ತಮ್ಮ ದಲ್ಲಾಳಿ ವರ್ಗವನ್ನಾಗಿಸಿಕೊಳ್ಳುವ ಕುತಂತ್ರವಾಗಿದೆ.


ಒಟ್ಟಿನಲ್ಲಿ ಈ ಸಮಾವೇಶ ಮತ್ತು ಇದರ ಉದ್ದೇಶ ರೈತ ವಿರೋಧಿ, ನಾಡ ವಿರೋಧಿಯಾಗಿದೆ. ಇದನ್ನು ನಾಡಿನ ರೈತಾಪಿ ಮತ್ತು ಜನತೆ ಒಗ್ಗಟ್ಟಿನಿಂದ ವಿರೋಧಿಸಿ ನಾಡಿನ ಸ್ವಾತಂತ್ರ್ಯವನ್ನು ಮತ್ತು ರೈತಾಪಿಯ ಬದುಕುವ ಹಕ್ಕನ್ನು

ಅರಿವಿನ ಪರಿಧಿ ವಿಸ್ತರಿಸುವ ಕೃತಿಗಳು

ಪುಸ್ತಕ ಪರಿಚಯ




• ಚಂದ್ರಶೇಖರ್ ಐಜೂರ್



ನಮ್ಮ ಕಾಲದ ದೊಡ್ಡ ಕತೆಗಾರರಾದ ಕೇಶವ ಮಳಗಿ ಆಗಾಗ ಜಗತ್ತಿನ ಕಣ್ಣಿಗೆ ಬೀಳದೆ ಭೂಗತರಾಗುವುದುಂಟು. ಹಾಗೆ ಭೂಗತರಾದ ದಿನಗಳಲ್ಲಿ ಮಳಗಿ ಒಂದೋ ಜಗತ್ತಿನ ಶ್ರೇಷ್ಠ ಸಾಹಿತ್ಯವನ್ನು ಓದುತ್ತಲೋ ಅದನ್ನು ಕನ್ನಡಕ್ಕೆ ಅನುವಾದಿಸುವ ಸುಖದಲ್ಲೋ ಕಳೆದು ಹೋಗಿರುತ್ತಾರೆಂಬ ಸತ್ಯ ಅವರ ಆಪ್ತ ಬಳಗದಲ್ಲಿರುವ ಕೆಲವರಿಗಾದರೂ ಗೊತ್ತಿರುವಂಥದ್ದೇ. ಸತ್ವಯುತ ಮತ್ತು ಸೃಜನಶೀಲ ಬರಹದಿಂದಲೇ ಎಲ್ಲರನ್ನೂ ಮುಟ್ಟಬೇಕು ಎಂದು ಬಲವಾಗಿ ನಂಬಿರುವ ಮಳಗಿಯವರು ಸಾಹಿತ್ಯಲೋಕದ ಹರಟೆಗಳಿಂದ, ತೌಡು ಕುಟ್ಟುವ ಘನ ಗಂಭೀರ ಸೆಮಿನಾರುಗಳಿಂದ ದೂರವೇ ಉಳಿದಿದ್ದಾರೆ. ಕಡಲ ತೆರೆಗೆ ದಂಡೆ, ಮಾಗಿ ಮೂವತ್ತೈದು, ವೆನ್ನೆಲ ದೊರಸಾನಿ, ಬೋರಿಸ್ ಪಾಸ್ತರ್‌ನಾಕ್: ವಾಚಿಕೆ, ನೇರಳೆ ಮರದಂತಹ ಅಪರೂಪದ ಕೃತಿಗಳನ್ನು ಕನ್ನಡಿಗರಿಗೆ ಕೊಟ್ಟ ಮಳಗಿಯವರು ಕಳೆದ ಎರಡು ವರ್ಷಗಳ ಅಧ್ಯಯನ ಮತ್ತು ಶ್ರಮದಿಂದಾಗಿ 'ಸಂಕಥನ (ಸಮಾಜ, ಸಂಸ್ಕೃತಿ, ಸಾಹಿತ್ಯ: ಫ್ರೆಂಚ್ ವಿಚಾರಧಾರೆ)' ಮತ್ತು 'ಕಡಲಾಚೆಯ ಚೆಲುವೆ (ಫ್ರೆಂಚ್ ಕಥಾ ಸಾಹಿತ್ಯ)' ಎಂಬ ಎರಡು ಅದ್ಭುತ ಕೃತಿಗಳನ್ನು ಅನುವಾದಿಸಿ ತಮ್ಮ 'ಕಥನ ಪ್ರಕಾಶನ'ದಿಂದಲೇ ಹೊರತಂದಿದ್ದಾರೆ. ಅವರು ಓರಿಯಂಟ್ ಲಾಂಗ್‌ಮನ್‌ನಲ್ಲಿ ಸಂಪಾದಕರಾಗಿದ್ದಾಗ ಹೊರತಂದ ಪುಸ್ತಕಗಳು ಕೂಡ ಬಹುಕಾಲ ನೆನಪಿನಲ್ಲುಳಿಯುವಂತಹವು.

ವಾಚಿಕೆ ಒಂದು-ಸಂಕಥನ: ಆಲ್ಬರ್ಟ್ ಕಮೂ, ಜಾನ್-ಪಾಲ್ ಸಾರ್ತ್ರ್, ಪಾಲ್ ವಲೇರಿ, ಮಿಶೇಲ್ ಫುಕೋ, ಜಾಕ್ ದೆರಿಡಾ, ಸಿಮೊನ್ ಬುವಾ, ಲೂಯಿ ಅಲ್ತೂಸರ್, ಪಿಯರೆ ಬೋರ್ದಿ, ಆಸ್ಸಿಯಾ ಜೇಬರ್, ಜೂಲಿಯಾ ಕ್ರಿಸ್ತೇವ, ಶೋಶನ ಫೆಲ್‌ಮನ್, ಜಾನ್-ಅಂಟೋನಿ ಅಬ್ಬೇ ದುಬ್ವಾಯಿ ಮುಂತಾದ ಇಪ್ಪತ್ತೊಂದು ಲೇಖಕರ, ಮೂವತ್ತು ಪ್ರಬಂಧಗಳ ಅನುವಾದ ಈ ಕೃತಿಯಲ್ಲಿದೆ.



ವಾಚಿಕೆ ಎರಡು- ಕಡಲಾಚೆಯ ಚೆಲುವೆ: ಈ ಕೃತಿಯಲ್ಲಿ ಮೊಪಾಸ, ಬಾಲ್ಜಾಕ್, ಕಮೂ, ಸಾರ್ತ್ರ್, ಸಿಮೊನ್ ಬುವಾ, ಅನೀಸ್ ನಿನ್ ಮೊದಲಾದ ಇಪ್ಪತ್ತೆರಡು ಲೇಖಕರ ಕಥೆ, ಕಾದಂಬರಿಯ ಆಯ್ದ ಭಾಗ, ಪ್ರಬಂಧ, ಆತ್ಮಕಥೆಯ ಭಾಗ ಹೀಗೆ ವಿವಿಧ ಪ್ರಕಾರಗಳಿಗೆ ಸೇರಿದ ಇಪ್ಪತ್ತೇಳು ಮಾದರಿಗಳನ್ನು ಒಳಗೊಂಡ ಬರಹಗಳಿವೆ. ಅಲ್ಜೀರಿಯಾ, ಸೆನೆಗಲ್, ಕೆನಡ, ಕಾಂಗೋ ದೇಶಗಳ ಅಪರೂಪದ ಕತೆಗಳು ಮೊದಲ ಬಾರಿ ಕನ್ನಡಕ್ಕೆ ಬರುತ್ತಿವೆ.

ವಿಶ್ವವಿದ್ಯಾಲಯಗಳ ಸಾಹಿತ್ಯ ಅಧ್ಯಯನ ಕೇಂದ್ರಗಳು ಮಾಡಬೇಕಾದ ಕೆಲಸವನ್ನು ಕೇಶವ ಮಳಗಿ ಯಾವುದೇ ಸದ್ದಿಲ್ಲದೆ ಮಾಡಿದ್ದಾರೆ. ಕಳೆದ ಎರಡು ವರ್ಷಗಳ ಅವರ ಏಕಾಂತ ಮತ್ತು ದಣಿವು ಕಾಣದ ಶ್ರಮ ಕನ್ನಡಕ್ಕೆ ದೊಡ್ಡ ಫಸಲನ್ನೇ ತಂದಿವೆ. ಫ್ರೆಂಚ್ ಸಾಹಿತ್ಯದ ಕಡುವ್ಯಾಮೋಹಿಯಂತೆ ಕಾಣುವ ಮಳಗಿಯವರ ಇಲ್ಲಿನ ಬರಹಗಳು ಜಗತ್ತಿನ ಶ್ರೇಷ್ಠ ಸಾಹಿತ್ಯವೊಂದರ ಪ್ರವೇಶಕ್ಕೆ ಸುಗಮ ಹಾದಿಯನ್ನು ನಿರ್ಮಿಸಿವೆ. ಮಳಗಿಯವರ ಅನುವಾದ, ಭಾಷೆಯ ಮೇಲಿನ ಹಿಡಿತ, ಮಹಾಕಾವ್ಯದಂತೆ ಕಾಣುವ ಇಲ್ಲಿನ ಕತೆಗಳು ಇಡೀ ಫ್ರೆಂಚ್ ಸಾಹಿತ್ಯದ ಮೇಲೆ ಹಠಾತ್ ಪ್ರೀತಿ ಮೂಡುವಂತೆ ಮಾಡುತ್ತವೆ. 'ಎಲ್ಲ ಅನುವಾದಗಳಂತೆ ಈ ಅನುವಾದವೂ ಕನ್ನಡ ಸಂವೇದನೆಗೆ ಹೊಸ ಸಂವೇದನೆಯನ್ನು ಸೇರಿಸುವುದರ ಜತೆಗೆ ಅರಿವಿರದ ಜನ ಮತ್ತು ಜಗತ್ತುಗಳನ್ನು ಪರಿಚಯಿಸುತ್ತದೆ ಎನ್ನುವುದು ನನ್ನ ನಂಬಿಕೆಯಾಗಿದೆ. ಎರಡೂ ಕೃತಿಗಳಲ್ಲಿ ಸುಮಾರು ನೂರೆಪ್ಪತ್ತು (1840-2010) ವರ್ಷಗಳಲ್ಲಿ ಬದುಕಿದ, ಬದುಕಿರುವ ಲೇಖಕರನ್ನು ಕನ್ನಡಿಸಿದ್ದೇನೆ. ಇಪ್ಪತ್ತೈದು ವರ್ಷಗಳಿಗೆ ಒಂದು ತಲೆಮಾರು ಎನ್ನುವುದಾದರೆ ಏಳು ತಲೆಮಾರುಗಳ ಲೇಖಕರ ಸಾಹಿತ್ಯ ಈ ಎರಡೂ ಸಂಪುಟಗಳಲ್ಲಿದೆ' ಎಂದು ಕೇಶವ ಮಳಗಿ ಕೃತಿಯ ಪ್ರವೇಶಕ್ಕೂ ಮುನ್ನ ಹೇಳುತ್ತಾರೆ. ಓದಿನ ಸುಖಬಲ್ಲ ಓದುಗರು, ಸಾಹಿತ್ಯವನ್ನು ಗಂಭೀರವಾಗಿ ತೆಗೆದುಕೊಂಡಿರುವ ಓದುಗರು, ತೌಲನಿಕ ಸಾಹಿತ್ಯದ ಸಂಶೋಧನೆಗಳ ಮೂಲಕ ಜಗತ್-ಸಾಹಿತ್ಯದ ಅನುಸಂಧಾನಗಳ ಅರಿವಿನ ಮೂಲಕ ಕನ್ನಡಕ್ಕೆ ಹೊಸದಿಕ್ಕು ತೋರಿಸಲು ಹೊರಟಿರುವ ಸಂಶೋಧನಾ ವಿದ್ಯಾರ್ಥಿಗಳು ತಪ್ಪದೆ ಓದಬೇಕಾದ ಕೃತಿಗಳಿವು.

ವಾಚಿಕೆ ಒಂದು: ಸಂಕಥನ (ಸಮಾಜ, ಸಂಸ್ಕೃತಿ, ಸಾಹಿತ್ಯ: ಫ್ರೆಂಚ್ ವಿಚಾರಧಾರೆ)
ಪುಟಗಳು: 206, ಬೆಲೆ: ರೂ.120, ಪ್ರಕಟಣೆ: 2011
ವಾಚಿಕೆ ಎರಡು: ಕಡಲಾಚೆಯ ಚೆಲುವೆ (ಫ್ರೆಂಚ್ ಕಥಾ ಸಾಹಿತ್ಯ)
ಪುಟಗಳು: 208, ಬೆಲೆ: ರೂ.120, ಪ್ರಕಟಣೆ: 2011
ಎರಡೂ ಕೃತಿಗಳ ಅನುವಾದಕರು: ಕೇಶವ ಮಳಗಿ
ಪ್ರಕಾಶಕರು, ಕಥನ ಪ್ರಕಾಶನ
ನಂ.15, 7ನೇ ಬಿ ಅಡ್ಡರಸ್ತೆ, ಗಾರ್ಡನ್ ವಿಲ್ಲಾಸ್, ನಾಗರಬಾವಿ, ಬೆಂಗಳೂರು-72

ಹಾವುಗಳು

ಹಾವು ಬರ್ತಾವ ಜೋಕೆ ಹಾವು ಬರ್ತಾವ
ನೋವು ತರ್ತಾವ ಅಣ್ಣಾ ಸಾವು ತರ್ತಾವ
ಖಾದಿ ಖಾಕಿ ಕಾವಿ ಧರಿಸಿ
ಭರ್ಜರಿ ಮುಖವಾಡ ಮೆರೆಸಿ
ನಿಮ್ಮ ಗದ್ದೆ ಹೊಲದಾಗ
ದವಸ ಧಾನ್ಯ ಬರುವಾಗ
ಸ್ವಾಭಿಮಾನದ ವನದಾಗ
ಕನ್ಯಾಕುಸುಮ ಬಿರಿದಾಗ
ನಿಮ್ಮೆಲ್ಲ ಮಾಹಿತಿ ಪಡೆದು
ಖುಳಿದಾಡಿ ಸುರಳಿ ಹೊಡೆದು
ಹಾವು ಬರ್ತಾವ ಜೋಕೆ ಹಾವು ಬರ್ತಾವ
ನೋವು ತರ್ತಾವ ಅಣ್ಣಾ ಸಾವು ತರ್ತಾವ

ಸ್ವಾರ್ಥಕ್ಕೊಮ್ಮೆ ಹರ್ಷಕ್ಕೊಮ್ಮೆ
ಐದೈದು ವರ್ಷಕ್ಕೊಮ್ಮೆ
ಹೊಸ ಬಲೆಯ ಹೂಡಿಕೊಂಡು
ಹೊಸ ಬಿಲವ ತೋಡಿಕೊಂಡು
ಕರಿಕಾಳಿಂಗ ಗೋದಿನಾಗರ
ತರಾವರಿ ತಳಕು ಹಾಕಿಕೊಂಡು
ಪ್ರನಾಳಿಕೆಗಳ ಪೊರೆ ಬಿಡಲಾಕ
ಹುತ್ತಗಳಿಂದ ಹೊರಕ
ಹಾವು ಬರ್ತಾವ ಜೋಕೆ ಹಾವು ಬರ್ತಾವ
ನೋವು ತರ್ತಾವ ಅಣ್ಣಾ ಸಾವು ತರ್ತಾವ

ಕಾರಿನೊಳಗೆ ಬಾರಿನೊಳಗೆ
ಭಾರಿಭಾರಿ ದರ್ಬಾರಿನೊಳಗೆ
ಚೆನ್ನಮೂಳೆ ಹಿಡಿದುಕೊಂಡು
ರಕ್ತಾನೆಲ್ಲ ಸರಿದುಕೊಂಡು
ಮೇಲೆ ಕೆಳಗೆ ಏರಿಹಾರಿ
ವಾಗ್ದಾನ ಗಾಳಿಗೆ ತೂರಿ
ಹಾಲನ್ನೆಲ್ಲ ಹೀರಿಕೊಂಡು
ಹಾಲಹಲವ ಕಾರಲಾಕ
ಹಾವು ಬರ್ತಾವ ಜೋಕೆ ಹಾವು ಬರ್ತಾವ
ನೋವು ತರ್ತಾವ ಅಣ್ಣಾ ಸಾವು ತರ್ತಾವ

ಬಾಯಾಗ ಬೆಣ್ಣೆ ಸುರಿಸಿ
ಬಗಲಾಗ ದೊಣ್ಣೆ ಮರೆಸಿ
ಮಸೀದಿ ಮಂದಿರದೊಳಗೆ
ಬಸದಿ ಇಗರ್ಜಿಯೊಳಗೆ
ತಂತಮ್ಮ ಮರ್ಜಿಯೊಳಗೆ
ತಾಂಡವನಾಟ್ಯ ಆಡಲಾಕ
ಕಾರ್ಕೋಟಕ ಕೊಳಕಮಂಡಲ
ಬಳೆವಡಕ ಉರಿಮಂಡಲ
ಭಾರಿಭಾರಿ ಕುರ್ಚಿಮ್ಯಾಲ
ಹಾವು ಕೂರ್ತಾವ ಜೋಕೆ
ಹಾವು ಬರ್ತಾವ ಜೋಕೆ ಹಾವು ಬರ್ತಾವ
ನೋವು ತರ್ತಾವ ಅಣ್ಣಾ ಸಾವು ತರ್ತಾವ

–ಅಬ್ಬಲಗೆರೆ ಅಬ್ಬಾಸ್



ಹಠಾತ್ತನೆ ಕಣ್ಮರೆಯಾದ ಅಬ್ಬಾಸಣ್ಣ!

ಅಬ್ಬಾಸಣ್ಣ ಹಾಡು ಬರೆಯುತ್ತಿದ್ದರು. ಅವರು ಬರೆದ ರೈತ ಗೀತೆಗಳು ರೈತಸಂಘದವರ ಬಾಯಲ್ಲಿ ಇನ್ನೂ ಗುನುಗುಡುತ್ತಿವೆ. ಸಾಹಿತ್ಯ ಪರಿಷತ್ತಿನ ಸಂಪರ್ಕದಲ್ಲಿದ್ದರೆ ತಾನು ಇನ್ನೂ ಪ್ರಖ್ಯಾತ ಕವಿಯಾಗಬಹುದೆಂದು ಅವರು ಭಾವಿಸಿದ್ದರು. ನಮ್ಮೆಲ್ಲಾ ಸಾಂಸ್ಕೃತಿಕ ಚಟುವಟಿಕೆ ತಾಣದಿಂದ ದೂರವುಳಿದಿರುವ ದೊಡ್ಡ ಸಮುದಾಯವೊಂದರ ಪ್ರತಿನಿಧಿಯಂತೆ ಕಾಣಿಸಿಕೊಳ್ಳುತ್ತಿದ್ದ ಅಬ್ಬಾಸಣ್ಣನ ನಡವಳಿಕೆ ಮಾತ್ರ ಮುಸ್ಲಿಮರನ್ನು ಪೊರೆಯಬಲ್ಲುದು.



ನಾನು ಶಿವಮೊಗ್ಗಕ್ಕೆ ಬಂದಾಗ ಪರಿಚಯವಾದ ಕೂಡಲೆ ಕವನ ಬರೆದು ಅದನ್ನು ಓದಿ ನನ್ನ ಅಭಿಪ್ರಾಯ ಕೇಳಿ ಅಚ್ಚರಿ ಮೂಡಿಸಿದ್ದವರು ಅಬ್ಬಲಗೆರೆ ಅಬ್ಬಾಸ್. ಇದೇ ತರದ ಇನ್ನೊಂದು ವ್ಯಕ್ತಿಯನ್ನು ನಾನು ಬೆಳ್ಳೂರಲ್ಲಿ ನೋಡಿದ್ದೆ. ಅವರ ಹೆಸರು ಸಯದ್ ಗೌಸಣ್ಣ. ಆದರೆ ಅವರು ಕವಿಯಲ್ಲ. ಎಲ್ಲರ ಕಷ್ಟಗಳಿಗೂ ಕಣ್ಣೀರು ಹರಿಸುವ ಭಾವುಕರಾಗಿದ್ದರು. ಈ ನಮ್ಮ ಅಬ್ಬಾಸಣ್ಣನೂ ಅಷ್ಟೇ. ಮಾತನಾಡುತ್ತಲೇ ಭಾವುಕತೆಗೆ ತುತ್ತಾಗಿ ಗೋಳೋ ಎಂದು ಅತ್ತು ಬಿಡುತ್ತಿದ್ದರು. ಐದಾರು ಜನರಿಗಾಗುವಷ್ಟು ಭಾವುಕತೆಯನ್ನು ಅಲ್ಲಾಹು ಇವರೊಬ್ಬರಲ್ಲೇ ತುಂಬಿ ಕಳಿಸಿದ್ದರಿಂದ ಅಬ್ಬಾಸಣ್ಣನನ್ನು ಸಂಭಾಳಿಸುವುದು ಕಷ್ಟದ ಕೆಲಸವಾಗಿತ್ತು. ಅವರ ಮಾತಿನಲ್ಲಿ ಮುಸ್ಲಿಂ ಕನ್ನಡದ ಒಂದಿಷ್ಟೂ ಛಾಯೆಯಿರದೆ, ಅಪ್ಪಟ ಕನ್ನಡ ತಾಯಿಯ ಅಂತಃಕರಣದ ಸೊಗಡಿದ್ದುದರಿಂದ ಅವರಾಗಿ ಹೆಸರು ಹೇಳದ ಹೊರತು ಅವರು ಮುಸ್ಲಿಂ ಎಂಬುದು ಗೊತ್ತಾಗುತ್ತಿರಲಿಲ್ಲ.

ಅಬ್ಬಾಸಣ್ಣ ಹಾಡು ಬರೆಯುತ್ತಿದ್ದರು. ಅವರು ಬರೆದ ರೈತ ಗೀತೆಗಳು ರೈತಸಂಘದವರ ಬಾಯಲ್ಲಿ ಇನ್ನೂ ಗುನುಗುಡುತ್ತಿವೆ. ಸಾಹಿತ್ಯ ಪರಿಷತ್ತಿನ ಸಂಪರ್ಕದಲ್ಲಿದ್ದರೆ ತಾನು ಇನ್ನೂ ಪ್ರಖ್ಯಾತ ಕವಿಯಾಗಬಹುದೆಂದು ಅವರು ಭಾವಿಸಿದ್ದರು. ಹಾಗಾಗಿ ಸಾಹಿತ್ಯ ಪರಿಷತ್ತಿಗೆ ಸದಸ್ಯರನ್ನು ಮಾಡುವುದರಲ್ಲಿ ಮತ್ತು ಆ ಪರಿಷತ್ತಿನ ಯಾವುದಾದರೂ ಪುಸ್ತಕ ಮಾರುವುದರಲ್ಲಿ ಎತ್ತಿದ ಕೈ ಆಗಿದ್ದರು. ಸಾಹಿತ್ಯ ಪರಿಷತ್ತು ಅವರನ್ನು ಕಡೆಗಣಿಸಿದರೆ ಅವರು ಸುಮ್ಮನಿರುತ್ತಿರಲಿಲ್ಲ.

ಅಬ್ಬಾಸಣ್ಣ ತೋರಿಸುವಷ್ಟೇ ಪ್ರೀತಿಯನ್ನು ಇತರರಿಂದ ನಿರೀಕ್ಷಿಸುತ್ತಿದ್ದರು. ಹೆತ್ತ ತಾಯಿಯನ್ನು ದೇವರೆಂದು ಭಾವಿಸಿದ್ದ ಅಬ್ಬಾಸಣ್ಣ ಬೆಳಗ್ಗೆ ಕೆಲಸಕ್ಕೆ ಹೊರಡುವ ಮುನ್ನ ಅಮ್ಮನಿಗೆ ನಮಸ್ಕಾರ ಮಾಡಿಯೇ ಹೊರಡುತ್ತಿದ್ದರು. ಆಕೆಯ ಮುಖ ನೋಡಿ ಹೋದರೆ ತನ್ನೆಲ್ಲಾ ಕೆಲಸಗಳು ಸುಸೂತ್ರವೆಂದು ಭಾವಿಸಿದ್ದರು. ಆದರೆ ತಾಯಿಗೆ ಅಬ್ಬಾಸಣ್ಣನ ತಮ್ಮನ ಮೇಲೆ ಹೆಚ್ಚು ಮಮತೆಯಿದೆ ಎಂದು ಗೊತ್ತಾದ ಕೂಡಲೇ ಸ್ಫೋಟಗೊಂಡ ಅಬ್ಬಾಸಣ್ಣ ರೌದ್ರಾವತಾರ ತಾಳಿ ತಾಯಿಯನ್ನು ತಮ್ಮನ ಮನೆಗೆ ಓಡಿಸಿದ್ದರು. ಆಗಾಗ್ಗೆ ತಂದೆಯನ್ನು ನೆನೆಸಿಕೊಂಡು ಅಳುತ್ತಿದ್ದರು.

ಒಮ್ಮೆ "ಲಂಕೇಶರಿಗೆ ಉಷಾರಿಲ್ಲವಂತೆ. ಅವರನ್ನು ನೋಡಬೇಕು" ಎಂದು ಹೇಳಿದರು. ನಾನು ಅವರನ್ನು ಲಂಕೇಶರ ಬಳಿ ಕರೆದುಕೊಂಡು ಹೋದೆ. ಲಂಕೇಶರು ಆರಾಮವಾಗಿಯೇ ಕುಳಿತಿದ್ದರು. ಆದರೆ ಅಬ್ಬಾಸಣ್ಣನ ಕಣ್ಣಲ್ಲಿ ನೀರು ಹರಿಯುತ್ತಿದ್ದವು. ಲಂಕೇಶರು ಅಚ್ಚರಿಯಿಂದ ನೋಡುತ್ತಾ ಕುಳಿತುಬಿಟ್ಟರು. ಲಂಕೇಶರೇನಾದರೂ ಅಬ್ಬಾಸಣ್ಣನನ್ನು ಸಮಾಧಾನಿಸಲು ಹೋಗಿದ್ದರೆ ಬೋರೆಂದು ಅಳುತ್ತಾ ಗಾಬರಿ ಹುಟ್ಟಿಸುತ್ತಿದ್ದರೇನೋ? ಇಂತಹ ಅನಾಹುತ ತನ್ನಿಂದ ಜರುಗಬಹುದೆಂದು ಊಹಿಸಿದ ಲಂಕೇಶರು ಅವರ ಮುಖವನ್ನೇ ನೋಡದೆ ಕುಳಿತಿದ್ದರು.

ಆ ದಿನ ರಾತ್ರಿ ಗಾಂಧಿಬಜಾರಿನ ಒಂದು ಲಾಡ್ಜಿನಲ್ಲಿ ರೂಂ ಮಾಡಿ ಉಳಿದುಕೊಂಡೆವು. "ಲಂಕೇಶರು ಮೊದಲಿದ್ದ ಹಾಗಿಲ್ಲ. ಕತ್ತಿನ ಬಳಿ ಸುಕ್ಕು ಬಂದಿದೆ. ಅಷ್ಟು ಸುಂದರವಾದ ಕಣ್ಣಿದ್ದ ಅವರಿಗೆ ಒಂದು ಕಣ್ಣಿಲ್ಲ. ಅಯ್ಯೋ" ಎಂದು ಅಬ್ಬಾಸಣ್ಣ ಅಳತೊಡಗಿದರು. ಅಕ್ಕಪಕ್ಕದ ರೂಮಿನವರು ಬಂದು ನೋಡತೊಡಗಿದರು. ರೂಂಬಾಯ್ ಕೂಡ ಬಂದು ನಾನು ಅಬ್ಬಾಸಣ್ಣನ ಮೇಲೆ ಹಲ್ಲೆ ಮಾಡಿರಬಹುದೆಂದು ನನ್ನನ್ನೇ ನೋಡತೊಡಗಿದನು. ನಾನು ಅವರನ್ನೆಲ್ಲ ವಾಪಸ್ಸು ಕಳಿಸಿ, ಅಬ್ಬಾಸಣ್ಣನ ದುಃಖ ಪೂರ್ತಿ ಈಚೆ ಬರಲು ಅವಕಾಶ ಕೊಟ್ಟು, ನಂತರ ಅವರ ಕವನದ ವಿಷಯ ತೆಗೆದು ವಿಷಯಾಂತರ ಮಾಡಿದೆ.

ಸದಾ ಒಂದಿಲ್ಲೊಂದು ಕವನ ಕೆರೆದು ಜೇಬಿನಲ್ಲಿಟ್ಟುಕೊಂಡಿರುತ್ತಿದ್ದ ಅಬ್ಬಾಸಣ್ಣ ಅವಕಾಶ ಸಿಕ್ಕ ಕೂಡಲೇ ಅದನ್ನು ಓದಿಬಿಡುತ್ತಿದ್ದರು. ಕಾವ್ಯ ಸೃಷ್ಟಿಯಾಗಬೇಕಾದರೆ ತಮ್ಮ ಕೊಠಡಿ ಅಸ್ತವ್ಯಸ್ತವಾಗಿ ಬಿದ್ದಿರುವ ಪುಸ್ತಕಗಳಿಂದ ಮತ್ತು ದೂಳಿನಿಂದ ತುಂಬಿರಬೇಕೆಂದು ಭಾವಿಸಿದ್ದರು ಅಬ್ಬಾಸಣ್ಣ. ಮತ್ತದು ಪ್ರವೇಶ ನಿಷಿದ್ಧ ರೂಮಾಗಿತ್ತು. ಒಮ್ಮೆ ಅವರ ಮಕ್ಕಳು ಕೊಠಡಿಯನ್ನು ಒಪ್ಪ ಓರಣ ಮಾಡಿಬಿಟ್ಟರು. ಬಂದು ನೋಡಿದ ಅಬ್ಬಾಸಣ್ಣ ತನ್ನ ಸೃಜನಶೀಲತೆ ಬತ್ತಿಹೋದಂತೆ ಸಿಟ್ಟುಮಾಡಿಕೊಂಡು, ಐದೇ ನಿಮಿಷದಲ್ಲಿ ಪುಸ್ತಕಗಳನ್ನು ಹರಡಿ ಮೊದಲಿನಂತೆ ಮಾಡಿಕೊಂಡರು. ಅಂದಿನಿಂದ ಅಪ್ಪನ ವಿಷಯದಲ್ಲಿ ಮಕ್ಕಳು ಅಳುಕುತ್ತಿದ್ದರು.

ಇಂಥ ಜಾಗದಲ್ಲಿ ಬರೆದ ಕವನಗಳನ್ನೆಲ್ಲಾ ಯಾರೋ ಸಾಬಿಗೆ ಓದಲು ಕೊಟ್ಟು, ಮುನ್ನುಡಿ ಕೇಳಿ ಏಳೆಂಟು ತಿಂಗಳೇ ಕಳೆದುಹೋಗಿತ್ತು. ನಾನು ಪ್ರಕಾಶಕರನ್ನು ಹುಡುಕಿಕೊಂಡು ಕಾಯುತ್ತಿದ್ದೆ. ಅಬ್ಬಾಸಣ್ಣ ಕವನ ಕೊಡಲಿಲ್ಲ. ಕಡೆಗೆ ಸರಿಯಾಗಿ ಜೋರು ಮಾಡಿದೆ. ಇದರಿಂದ ಶಾಕ್ ಆದ ಅವರು "ಅಣ್ಣ ಈ ಹಾಳು ಕವನ ಪ್ರಕಟವಾಗದಿದ್ರೆ ಅಷ್ಟೇ ಹೋಯ್ತು. ನೀನು ಮಾತ್ರ ಸಿಟ್ಟು ಮಾಡಿಕೋಬೇಡ" ಎಂದಿದ್ದರು. ಅಲ್ಲಿಗೆ ಅವರ ಕವನ ಸಂಕಲನ ಹೊರಬರಲೇ ಇಲ್ಲ.

ಈ ಅಬ್ಬಾಸಣ್ಣನಿಗೆ ಯಾರಾದರೂ ಸಿನಿಮಾದಲ್ಲಿ ಒಂದು ಅವಕಾಶ ಕೊಟ್ಟಿದ್ದರೆ ಒಳ್ಳೆಯ ನಟರಾಗುತ್ತಿದ್ದರು. ಅವರೊಳಗಿನ ನಟನೆ ಗುರುತಿಸಿದ ನಾನು 'ರಾಜಸೂಯ ಯಾಗ' ನಾಟಕವಾಡುವಾಗ "ಅಣ್ಣಾ ಆಂಜನೇಯ ಪಾತ್ರ ಇದೆ. ಮಾಡ್ತಿಯಾ?" ಎಂದೆ. ಕೂಡಲೇ ಬಂದು ಪಾತ್ರ ಒಪ್ಪಿಕೊಂಡು ಅದ್ಭುತವಾಗಿ ಆಂಜನೇಯನ ಪಾತ್ರ ಮಾಡಿದರು.

ಅಷ್ಟೇ ಅಲ್ಲ, ಅದಕ್ಕೂ ಮೊದಲು ಯಾಗದ ಪುರೋಹಿತನ ಪಾತ್ರವನ್ನು ಎಷ್ಟು ಚೆನ್ನಾಗಿ ಮಾಡಿದರೆಂದರೆ, ನನ್ನ ಊರಿನಿಂದ ನಾಟಕ ನೋಡಲು ಬಂದವರು "ಇವರನ್ನು ನಮ್ಮೂರಿಗೊಂದು ಸತಿ ಕರಕೊಂಡು ಬಾ" ಅಂದು ಹೋದರು. ಅದರಂತೆ ಊರ ಹಬ್ಬಕ್ಕೆ ಕರೆದುಕೊಂಡು ಹೋದೆ. ಆ ದಿನದ ರಂಗವೆಲ್ಲಾ ಅಬ್ಬಾಸಣ್ಣನದೆ. ತಮಗೆ ಬರುವ ಹಾಡು, ಕವನ, ಹಾಸ್ಯವನ್ನೆಲ್ಲಾ ಮುಗಿಸಿ ತಮಟೆ ಬಡಿತಕ್ಕೆ ಮೈಮರೆತು ಕುಣಿದಿದ್ದರಿಂದ ಬೆಳಗ್ಗೆ ಏಳಲಾರದಷ್ಟು ಸುಸ್ತಾಗಿದ್ದರು. ಆ ನಂತರದ ಹಬ್ಬಗಳಲ್ಲಿ ಊರವರು "ಈ ಸತಿ ಅಬ್ಬಾಸ್ ಕರಕಂಡು ಬಾ" ಎಂದು ಕೇಳುತ್ತಿದ್ದರು.

ಒಂದೇ ರಾತ್ರಿಯಲ್ಲಿ ನಮ್ಮೂರವರ ಮನಸು ಗೆದ್ದಿದ್ದ ಅಬ್ಬಾಸಣ್ಣನಲ್ಲಿದ್ದ ಹಲವು ಪ್ರತಿಭೆಗೆ ಮುಸ್ಲಿಂ ಧರ್ಮದಲ್ಲಿ ಅವಕಾಶವೇ ಇಲ್ಲದ ಕಾರಣಕ್ಕೆ ಅವರು ನಮ್ಮವರೊಡನೆ ಬೆರೆತು ಹೋಗಿದ್ದರು. ಸುಮಾರು ಜನ ಮುಗ್ಧರು "ಈ ಸಾಬರು ಅಬ್ಬಾಸಣ್ಣನಂಗಿದ್ರೆ ಸಮಸ್ಯೆನೇ ಇಲ್ಲಪ್ಪ" ಎಂದಿದ್ದರು.

ಅಬ್ಬಾಸ್ ವಿಲೇಜ್ ಅಕೌಂಟೆಂಟ್ ಆಗಿದ್ದರು. ಒಂಬತ್ತು ಬಾರಿ ರೆವಿನ್ಯೂ ಕಲೆಕ್ಷನನ್ನು ಎಲ್ಲರನ್ನು ಮೀರಿಸಿ ಸಂಗ್ರಹಿಸಿದ್ದರಿಂದ ಪ್ರಶಸ್ತಿ ಪಡೆದಿದ್ದರು. ಉಳ್ಳವರ ಬಳಿ ಕಾಸು ಗೆಬರುತ್ತಿದ್ದ ಅವರು ರಂಜಾನ್ ಸಮಯದಲ್ಲಿ ಬಡಬಗ್ಗರಿಗೆ ದಾನ ಮಾಡಿ ಪಾಪ ಪರಿಹಾರ ಮಾಡಿಕೊಳ್ಳುತ್ತಿದ್ದರು. ಬಡಹೆಂಗಸರಿಗೆ ಸೀರೆ ಕೊಡಿಸಿ ಲಂಚದ ಪಾಪದಿಂದ ಮುಕ್ತಿ ಪಡೆದಂತೆ ಧನ್ಯರಾಗುತ್ತಿದ್ದರು. ರಂಜಾನ್ ಹಬ್ಬದಲ್ಲಿ ತಮ್ಮ ಮಿತ್ರರ ಮನೆಗೆ ಬಿರಿಯಾನಿ ಕಳುಹಿಸಿದ ನಂತರವೇ ತಾವು ಊಟ ಮಾಡುತ್ತಿದ್ದರು. ಹೀಗಾಗಿ ಎರಡು ದಶಕದಿಂದ ರಂಜಾನ್ ಹಬ್ಬದಲ್ಲಿ ಅಬ್ಬಾಸಣ್ಣನ ಮನೆ ಬಿರಿಯಾನಿ ನಮ್ಮ ಮನೆಗೆ ಬರುತ್ತಿತ್ತು. ಆ ಬಿರಿಯಾನಿ ತಿಂದ ಗೆಳೆಯನೊಬ್ಬ "ಛೆ ಇಷ್ಟು ಚೆನ್ನಾಗಿ ಬಿರಿಯಾನಿ ಮಾಡೋ ಜನಗಳನ್ನ ಈ ಪುರೋಹಿತಶಾಹಿಗಳು ದ್ವೇಷ ಮಾಡ್ತಾರಲ್ಲಾ. ಅವರಿಗೂ ಒಂದು ಸಾರಿ ಇದರ ರುಚಿ ತೋರಿಸಬೇಕು" ಎಂದಿದ್ದ.

ಅಬ್ಬಾಸಣ್ಣ ಸರಕಾರಿ ಆಶಯವನ್ನು ಮೀರಿ ಹೆಚ್ಚು ಮಕ್ಕಳನ್ನು ಮಾಡಿಕೊಂಡಿದ್ದರು. ಆ ಕಾರಣಕ್ಕೆ ಕುಟುಂಬ ನಿಯಂತ್ರಣ ಕುರಿತ ಸಭೆಯೊಂದರಲ್ಲಿ ಅವರಿಗೆ ಮಾತನಾಡಲು ಅವಕಾಶ ಕೊಡಲಿಲ್ಲ. ಆಗ ಸಿಟ್ಟಿಗೆದ್ದ ಅಬ್ಬಾಸಣ್ಣ "ಹೆಚ್ಚು ಮಕ್ಕಳಾದ್ರೆ ಎಷ್ಟು ಕಷ್ಟ ಅನ್ನದನ್ನು ನಾನು ಹೇಳೋದಕ್ಕೆ ಅವಕಾಶ ಮಾಡಿಕೊಡಿ" ಎಂದು ವಾದಿಸಿದ್ದರು.

ನಮ್ಮ ಮನೆಯ ಹಬ್ಬಗಳಲ್ಲೂ ನನ್ನಿಂದ ಫೋನಿಗಾಗಿ ಕಾಯುತ್ತಿದ್ದರು. ಅವರ ಮನಸ್ಸನ್ನರಿತಿದ್ದ ನಾನು ಫೋನ್ ಮಾಡಿದ ಕೂಡಲೇ ಕವನಗಳ ಕಂತೆಯೊಂದಿಗೆ ಹಾಜರಾಗಿ, ನಮ್ಮ ಮನೆಗೆ ಬಂದ ನೆಂಟರಿಷ್ಟರೆದುರಿಗೆ ಓದಿ ಹೋಗುತ್ತಿದ್ದರು. ಆ ಗಂಟಲ ದೆಸೆಯಿಂದ ಅಕ್ಕಪಕ್ಕದ ಮನೆಯವರು ಯಾರೋ ಹರಿಕತೆ ದಾಸರು ಬಂದಿದ್ದಾರೆಂದು ಭಕ್ತಿಯಿಂದಲೇ ಕವನ ಕೇಳಿಸಿಕೊಳ್ಳುತ್ತಿದ್ದರು.

ನನ್ನ ತಂಗಿಯಂತೂ ಅಬ್ಬಾಸಣ್ಣ ಎಂದರೆ ನಮ್ಮಣ್ಣನೆಂದೇ ಭಾವಿಸುತ್ತಿದ್ದಳು. ಈ ಅಣ್ಣ ಹಬ್ಬಕ್ಕೆಂದು ಊರಿಗೆ ಬಂದಾಗ, ಅವರಿಗೆ ನನ್ನ ತಂಗಿ ನೀರು ಕಾಯಿಸಿ ಹೂದದ್ದನ್ನು ನೆನೆಸಿಕೊಂಡು "ಯಾವ ಜನ್ಮದ ತಂಗಿನವ್ವಾ ನೀನು?" ಎಂದು ಅತ್ತೇ ಬಿಡುತ್ತಿದ್ದರು. ಈ ಅಬ್ಬಾಸಣ್ಣನಷ್ಟು ಗಾಢವಾಗಿ ನಮ್ಮ ಯಾವ ಕಳ್ಳುಬಳ್ಳಿಯೂ ಅಂಟಿಕೊಂಡಿರಲಿಲ್ಲ. ಇಂತ ಅಣ್ಣ ಮೊನ್ನೆ ನವೆಂಬರ್ 29ರಂದು ಹೃದಯಾಘಾತದಿಂದ ಹಠಾತ್ತನೆ ನಿಧನ ಹೊಂದಿದರು. ಅವರಿಗೆ ಯಾವ ದುಶ್ಚಟಗಳೂ ಇರಲಿಲ್ಲ. ಸಿಹಿಯನ್ನು ಬಹಳ ಇಷ್ಟಪಡುತ್ತಿದ್ದ ಅವರು ಸಕ್ಕರೆ ಕಾಯಿಲೆಯಿದ್ದರೂ ಸಿಹಿಯನ್ನು ತಿನ್ನದೆ ಬಿಡುತ್ತಿರಲಿಲ್ಲ.

ಎರಡು ವಾರದ ಹಿಂದೆ ನಮ್ಮ ಮನೆಗೆ ಬಂದ ಅಬ್ಬಾಸಣ್ಣ ನಾನು ಬೇಡವೆಂದರೂ ಕಾಯಿಹೋಳಿಗೆ ತಿಂದು, ಕವನ ಓದಿ, ಗರ್ಭಿಣಿಯಾದ ನನ್ನ ಮಗಳ ಹೊಟ್ಟೆ ಮುಟ್ಟಿ ನಮಸ್ಕಾರ ಮಾಡಿ ಆ ದಿನ ಶುಕ್ರವಾರವಾದ್ದರಿಂದ ನಮ್ಮ ಮನೆಯಲ್ಲೇ ನಮಾಜು ಮಾಡಿ ಹೋದರು.

ಶಿವಮೊಗ್ಗದ ಮುಸ್ಲಿಮರಲ್ಲಿ ಈತರ ಇದ್ದವರು ಅಬ್ಬಾಸಣ್ಣ ಒಬ್ಬರೆ. ನಮ್ಮೆಲ್ಲಾ ಸಾಂಸ್ಕೃತಿಕ ಚಟುವಟಿಕೆ ತಾಣದಿಂದ ದೂರವುಳಿದಿರುವ ದೊಡ್ಡ ಸಮುದಾಯ ವೊಂದರ ಪ್ರತಿನಿಧಿಯಂತೆ ಕಾಣಿಸಿಕೊಳ್ಳುತ್ತಿದ್ದ ಅಬ್ಬಾಸಣ್ಣನ ನಡವಳಿಕೆ ಮಾತ್ರ ಮುಸ್ಲಿಮರನ್ನು ಪೊರೆಯಬಲ್ಲುದು. ಅಬ್ಬಾಸಣ್ಣನಿಗೆ ತೊಂದರೆಯಾದರೆ ನಾವ್ಯಾರೂ ಸಹಿಸುತ್ತಿರಲಿಲ್ಲ. ಅದಕ್ಕೆ ಅವರ ಸಾವಿನ ಸುದ್ದಿ ಕೇಳಿದ ಕೂಡಲೇ ಅವರ ಮನೆಯ ಹತ್ತಿರ ಮೊದಲು ಜಮಾಯಿಸಿದವರು ರೈತರು, ರೈತಸಂಘದ ಲೀಡರುಗಳು, ಸಾಹಿತ್ಯೋಪ ಜೀವಿಗಳು ಹಾಗೂ ಈ ಸಮಾಜ ಸಹಬಾಳ್ವೆಯಿಂದಿರಬೇಕೆಂದು ಆಶಿಸಿದವರು ಮತ್ತು ಎಲ್ಲಾ ಸಮುದಾಯದವರಿಂದ ಪ್ರೀತಿಯನ್ನರಸು ವಂತಹ ಜನಗಳು.

ಅಬ್ಬಾಸಣ್ಣ ಬಹುದೊಡ್ಡ ಸಂದೇಶವೊಂದನ್ನು ಬಿಟ್ಟು ಹೋಗಿದ್ದಾರೆ. ಅವರ ಮಕ್ಕಳೂ ಕೂಡ ಅಪ್ಪನನ್ನು ಮೀರಿಸುವ ಸ್ನೇಹಜೀವಿಗಳು.

• ಬಿ.ಚಂದ್ರೇಗೌಡ

ನನ್ನ ಸೀರೆ ವ್ಯಾಪಾರ ಶುರು



ಮಾವ ಕೊಟ್ಟ ತೀಕಿಯಿಂದ ಮಾಡಿಸಿಕೊಂಡ ನೆಕ್ಲೇಸ್

ಎರಡನೇ ಸಿನಿಮಾದ ಕನಸು ಕಾಣುತ್ತಿದ್ದ ಲಂಕೇಶರು ಮತ್ತೆ ಎಂದಿನಂತೆ ಕಾಲೇಜಿಗೆ ಹೋಗಿ ಪಾಠ ಮಾಡಿ ಬರುತ್ತಿದ್ದರು. ಆದರೆ ಬರೀ ಲೆಕ್ಚರ್ ಮಾಡಿಕೊಂಡಿರುವುದು ಅವರಿಗೆ ಸಮಾಧಾನ ಕೊಡುತ್ತಿರಲಿಲ್ಲ. ಏನಾದರು ಹೊಸದು ಮಾಡಬೇಕೆಂಬ ಆಶೆ ಅವರಲ್ಲಿ ಇದ್ದೇ ಇತ್ತು. ಆದರೆ ಯಾರಿಗೇ ಆಗಲಿ ಸಲಾಮ್ ಹೊಡೆಯುವುದು ಲಂಕೇಶರಿಗೆ ಬರುತ್ತಿರಲಿಲ್ಲ, ರಾಜಕಾರಣಿಗಳೆಂದರೆ ಆಗುತ್ತಿರಲಿಲ್ಲ. ಅವರು ಆಗಲೂ ಯಾರಿಗೂ ಕೇರ್ ಮಾಡುತ್ತಿರಲಿಲ್ಲ. ಇತರೆ ಕೆಲವು ಬರಹಗಾರರಂತೆ ಯಾರ ಮುಂದೆಯೂ ಕೈ ಚಾಚುವುದು ಅವರಿಗೆ ಸಾಧ್ಯವೇ ಇರಲಿಲ್ಲ. ಲಂಕೇಶರ ಈ ಗುಣದ ಬಗ್ಗೆ ನನಗೆ ಈಗಲೂ ಅಪಾರ ಹೆಮ್ಮೆ ಇದೆ.

ದೆಹಲಿಯಿಂದ ಲಂಕೇಶರು ಬೆಂಗಳೂರಿಗೆ ವಾಪಸ್ ಬಂದರು. ಆದರೆ ನಾವೆಲ್ಲ ಸ್ವಲ್ಪ ದಿನ ಅಲ್ಲೇ ಇದ್ದು ದೆಹಲಿ, ಆಗ್ರಾ, ಸುತ್ತ ಮುತ್ತಲಿನ ಮುಖ್ಯ ಊರುಗಳಲ್ಲಿ ಸುತ್ತಾಡಿ ಬಂದೆವು.

ಬೆಂಗಳೂರಿಗೆ ವಾಪಸ್ ಆದ ನಂತರ ಹೋಮ್ ಸ್ಕೂಲಿನಿಂದ ನಮಗೆ ನೋಟಿಸ್ ಬಂತು. ನಾನು ಮತ್ತು ಲಂಕೇಶರು ಸ್ಕೂಲಿಗೆ ಹೋದೆವು. ಮಿಸ್ ಮಾದಪ್ಪನವರು "ನಿಮ್ಮ ಮಗನಿಗೆ ರಜೆ ಕೊಡುವುದಿಲ್ಲ ಎಂದಿದ್ದರೂ ಅದು ಹೇಗೆ ಕರೆದುಕೊಂಡು ಹೋದಿರಿ?" ಎಂದು ಪ್ರಶ್ನಿಸಿದರು. ಲಂಕೇಶರಿಗೂ ಕೋಪ ಬಂತು. ಅವರಿಬ್ಬರ ನಡುವೆ ದೊಡ್ಡ ಜಗಳವೇ ನಡೆಯಿತು. ಕೊನೆಗೆ ಲಂಕೇಶರು "ನಿಮ್ಮ ಶಾಲೆ ನಮಗೆ ಬೇಡವೇ ಬೇಡ. ನಮ್ಮ ಮಗನ ಟಿಸಿ (ಟ್ರಾನ್ಸ್‌ಫರ್ ಸರ್ಟಿಫಿಕೇಟ್) ಕೊಡಿ" ಎಂದುಬಿಟ್ಟರು. ಮಿಸ್ ಮಾದಪ್ಪ ಅದನ್ನು ಕೊಟ್ಟು ನಮ್ಮಿಬ್ಬರನ್ನು ಕಳುಹಿಸಿದರು. ನಂತರ ಅಜಿತುನನ್ನು ಸುದರ್ಶನ್ ವಿದ್ಯಾ ಮಂದಿರಕ್ಕೆ ಸೇರಿಸಿದೆವು. ಆದರೆ ಒಂದು ವರ್ಷದ ನಂತರ ಅವನನ್ನು ಕುಮಾರನ್ಸ್ ಸ್ಕೂಲಿಗೆ ವರ್ಗ ಮಾಡಿದೆವು.

ಅವಾರ್ಡ್ ಬಂದದ್ದಕ್ಕೆ ಲಂಕೇಶರು ತಮ್ಮ ಗೆಳೆಯರಿಗೆಲ್ಲ ಹೋಟೆಲ್ ಶ್ರೀರಾಮ್‌ನಲ್ಲಿ ಒಂದು ಪಾರ್ಟಿ ಇಟ್ಟರು. ನಾನು ಮತ್ತು ನಮ್ಮ ಮಕ್ಕಳೂ ಆ ಪಾರ್ಟಿಗೆ ಹೋದೆವು. ಅವತ್ತು ಲಂಕೇಶರು ತುಂಬಾ ಖುಷಿಯಲ್ಲಿದ್ದರು. ಎರಡನೇ ಸಿನಿಮಾಗೆ ತಳಪಾಯ ಹಾಕುತ್ತಿದ್ದರು. ನಾನು ನಮ್ಮ ಬದುಕಿನ ಬಗ್ಗೆ, ಭವಿಷ್ಯದ ಬಗ್ಗೆ, ಆರ್ಥಿಕ ಬಿಕ್ಕಟ್ಟುಗಳ ಬಗ್ಗೆ ಯೋಚಿಸುತ್ತಿದ್ದೆ...

ನಾನು ಮತ್ತು ಮಕ್ಕಳು ಒಂದು ಮರದ ಅಡಿ ಕೂತಿದ್ದೆವು. ಪಾರ್ಟಿ ಜೋರಾಗಿ ಮುಂದುವರೆದಿತ್ತು. ರಾತ್ರಿ ಹತ್ತು ಗಂಟೆ ಆಯಿತು... ಹನ್ನೊಂದು ದಾಟಿತು. ನನ್ನತ್ತ, ನಮ್ಮ ಮಕ್ಕಳತ್ತ ಲಂಕೇಶರಿಗೆ ಗಮನವೇ ಇರಲಿಲ್ಲ. ಪಾರ್ಟಿಗೆ ಬಂದಿದ್ದ ಒಂದಿಬ್ಬರು ಕುಡಿದು ಚಿತ್ತಾಗಿ ನೆಲಕ್ಕೆ ಉರುಳಿದರು. ನನಗೆ ಸಾಕಾಗಿಹೋಯಿತು. ಮಕ್ಕಳನ್ನು ಕರೆದುಕೊಂಡು ಮನೆಗೆ ಹೋದೆ. ಅದೆಷ್ಟೋ ಹೊತ್ತಿನ ನಂತರ ಲಂಕೇಶರು ಮನೆಗೆ ವಾಪಸ್ ಬಂದರು.

ಇದೆಲ್ಲಾ ಆದ ಬಹಳ ದಿನಗಳ ನಂತರ ವಿಮಲಾ ನಾಯ್ಡು ಮದುವೆ ಆಯಿತು. ಅವತ್ತು ಲಂಕೇಶರು ಬೆಂಗಳೂರಿನಲ್ಲಿರಲಿಲ್ಲ, ಆದ್ದರಿಂದ ಆಕೆಯ ಮದುವೆಗೆ ಹೋಗಲು ನನಗೆ ಹೇಳಿದರು. ನಾನು ನಮ್ಮ ಮಕ್ಕಳೊಂದಿಗೆ ಹೋಗಿ, ಗಿಫ್ಟ್ ಕೊಟ್ಟು ಬಂದೆ...

****

'ಪಲ್ಲವಿ' ಚಿತ್ರಕ್ಕೆ ಬಂದ ಪ್ರಶಸ್ತಿ ಪತ್ರಗಳು, 25,000 ರೂಪಾಯಿಯ ಬಾಂಡ್ ಮತ್ತು ಬೆಳ್ಳಿ ಪದಕಗಳನ್ನು ನಾನು ಜೋಪಾನವಾಗಿ ಇಟ್ಟುಕೊಂಡೆ. ಯಾಕೆಂದರೆ ಹತ್ತು ವರ್ಷಗಳ ನಂತರವೇ ಆ ಬಾಂಡ್‌ಅನ್ನು ನಾವು ನಗದಾಗಿಸಿಕೊಳ್ಳಬಹುದಿತ್ತು.


'ಪಲ್ಲವಿ' ಚಿತ್ರದ ಯಶಸ್ಸಿನಿಂದಾಗಿ ಲಂಕೇಶರಲ್ಲಿ ಇನ್ನೊಂದು ಸಿನಿಮಾ ಮಾಡಬೇಕೆನ್ನುವ ಆಶೆ ಶುರುವಾಯಿತು. ಅದೇ ಹೊತ್ತಿನಲ್ಲಿ ನಾನೂ ಎಲ್ಲಾದರು ಕೆಲಸ ಮಾಡಬೇಕೆನ್ನುವ, ಒಂದಿಷ್ಟು ಹಣ ದುಡಿದು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕೆನ್ನುವ ಯೋಚನೆ ನನ್ನಲ್ಲಿ ದೃಢವಾಗುತ್ತಾ ಹೋಯಿತು.

ನಮ್ಮ ಎದುರು ಮನೆಯಲ್ಲಿ ವಾಸಿಸುತ್ತಿದ್ದ ದಿನಕರನಿಗೂ ಕೆಲಸ ಇರಲಿಲ್ಲ, ಆ ಆತನ ತಂಗಿಯರು ಮನೆಯಲ್ಲೇ ಬಟ್ಟೆ ಹೊಲೆಯುವ ಆರ್ಡರ್‌ಗಳನ್ನು ತೆಗೆದುಕೊಂಡು ಒಂದಿಷ್ಟು ಹಣ ದುಡಿಯುತ್ತಿದ್ದರು. ಅವರ ಮನೆಯವರೆಲ್ಲ ತುಂಬಾ ಕಷ್ಟ ಜೀವಿಗಳು.

ದಿನಕರನಿಗೆ ತನ್ನ ಗೆಳೆಯರೊಬ್ಬರ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಿದ ಅನುಭವವಿತ್ತು, ಅವನೊಂದಿಗೆ ಸೀರೆ ವ್ಯಾಪಾರ ಶುರು ಮಾಡಿದರೆ ಹೇಗೆ ಅಂತ ಯೋಚಿಸಿದೆ. ಅದಕ್ಕೆ ಆತನೂ ಒಪ್ಪಿಕೊಂಡ. ಲಂಕೇಶರು ಮನೆ ಖರ್ಚಿಗೆಂದು ಕೊಡುತ್ತಿದ್ದ ಹಣದಲ್ಲೇ ನಾನು ಕಷ್ಟಪಟ್ಟು ಎರಡು ಸಾವಿರ ರೂಪಾಯಿಗಳನ್ನು ಉಳಿಸಿದ್ದೆ. ನನ್ನ ಸ್ನೇಹಿತರಿಂದ ಬಡ್ಡಿ ಮೇಲೆ ಐದು ಸಾವಿರ ರೂಪಾಯಿಗಳನ್ನು ಸಾಲವಾಗಿ ಪಡೆದೆ.

ಆ ಹಣದಲ್ಲಿ ದಿನಕರ ಮತ್ತು ನಾನು ಸೀರೆ ವ್ಯಾಪಾರ ಶುರುಮಾಡಲು ನಿರ್ಧರಿಸಿದೆವು. ಬಂಡವಾಳ ನನ್ನದು, ಶ್ರಮ ದಿನಕರನದಾದ್ದರಿಂದ ವ್ಯಾಪಾರದಲ್ಲಿ ಇಬ್ಬರಿಗೂ ಸಮಪಾಲು. ಮೊದಲ ಒಂದು ವರ್ಷ ವ್ಯಾಪಾರಕ್ಕೆ ಅಗತ್ಯವಾದ ಖರ್ಚನ್ನು ಹೊರತುಪಡಿಸಿದರೆ ನಾವಿಬ್ಬರೂ ಲಾಭದಲ್ಲಿ ಹಣ ತೆಗೆಯುವಂತಿಲ್ಲ ಎಂಬ ಶರತ್ತಿನ ಮೇಲೆ ನಮ್ಮ ಚಿಕ್ಕ ಸೀರೆ ವ್ಯಾಪಾರ ಶುರುವಾಯಿತು.

ಮೊದಮೊದಲು ಸಗಟು ವ್ಯಾಪಾರಿಗಳಿಂದ ಸೀರೆಗಳನ್ನು ಖರೀದಿಸಲು ದಿನಕರನೇ ಹೋಗುತ್ತಿದ್ದ. ಸ್ವಲ್ಪದಿನಗಳ ನಂತರ ನಾನೂ ಆತನೊಂದಿಗೆ ಹೋಗಲಾರಂಭಿಸಿದೆ. ನಾವು ಮಾರಲು ತರುತ್ತಿದ್ದ ಸೀರೆಗಳನ್ನು ದಿನಕರನ ಮನೆಯಲ್ಲಿಟ್ಟು ಅಲ್ಲಿಂದಲೇ ವ್ಯಾಪಾರ ನಡೆಸುತ್ತಿದ್ದೆವು. ನಾನು ಆಗಾಗ ಹೋಗಿ ಸೀರೆ ಮತ್ತು ಹಣದ ಲೆಕ್ಕ ನೋಡಿ ಬರುತ್ತಿದ್ದೆ.




• ಇಂದಿರಾ ಲಂಕೇಶ್

ಆಗ ರಾಜ್‌ಕೋಟ್ ವಾಯಿಲ್ ಸೀರೆ ಅಂತ ಬರುತ್ತಿತ್ತು. ಒಂದು ಕಾಟನ್ ಸೀರೆಯ ಬೆಲೆ ಕೇವಲ 35 ರೂಪಾಯಿ. ಅದರ ಮೇಲಿರುತ್ತಿದ್ದ ಪ್ರಿಂಟ್ಸ್ ತುಂಬಾ ಚೆನ್ನಾಗಿರುತ್ತಿದ್ದವು. ಅಂತಹ ಬಹಳಷ್ಟು ಸೀರೆಗಳನ್ನು ನಾವು ಮಾರಾಟ ಮಾಡಿದೆವು.

ಎರಡನೇ ಸಿನಿಮಾದ ಕನಸು ಕಾಣುತ್ತಿದ್ದ ಲಂಕೇಶರು ಮತ್ತೆ ಎಂದಿನಂತೆ ಕಾಲೇಜಿಗೆ ಹೋಗಿ ಪಾಠ ಮಾಡಿ ಬರುತ್ತಿದ್ದರು. ಆದರೆ ಬರೀ ಲೆಕ್ಚರ್ ಮಾಡಿಕೊಂಡಿರುವುದು ಅವರಿಗೆ ಸಮಾಧಾನ ಕೊಡುತ್ತಿರಲಿಲ್ಲ, ಏನಾದರು ಹೊಸದು ಮಾಡಬೇಕೆಂಬ ಆಶೆ ಅವರಲ್ಲಿ ಇದ್ದೇ ಇತ್ತು, ಆದರೆ ಯಾರಿಗೇ ಆಗಲಿ ಸಲಾಮ್ ಹೊಡೆಯುವುದು ಲಂಕೇಶರಿಗೆ ಬರುತ್ತಿರಲಿಲ್ಲ, ರಾಜಕಾರಣಿಗಳೆಂದರೆ ಆಗುತ್ತಿರಲಿಲ್ಲ, ಅವರು ಆಗಲೂ ಯಾರಿಗೂ ಕೇರ್ ಮಾಡುತ್ತಿರಲಿಲ್ಲ, ಇತರೆ ಕೆಲವು ಬರಹಗಾರರಂತೆ ಯಾರ ಮುಂದೆಯೂ ಕೈ ಚಾಚುವುದು ಅವರಿಗೆ ಸಾಧ್ಯವೇ ಇರಲಿಲ್ಲ, ಲಂಕೇಶರ ಈ ಗುಣದ ಬಗ್ಗೆ ನನಗೆ ಈಗಲೂ ಅಪಾರ ಹೆಮ್ಮೆ ಇದೆ.

ಒಮ್ಮೆ ಲಂಕೇಶರು ಎಲ್ಲೋ ಭಾಷಣ ಮಾಡುತ್ತಿದ್ದಾಗ ನರಸಿಂಹಸ್ವಾಮಿಯವರ 'ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೆ ಕೋಟಿ ರೂಪಾಯಿ' ಎಂಬ ಕವನದ



ಸಾಲುಗಳನ್ನು ನೆನೆಯುತ್ತಾ "ಜಿಎಸ್‌ಎಸ್ ಅವರಿಗೆ ಎರಡು ಕೋಟಿ ರೂಪಾಯಿ" ಎಂದು ಹೇಳಿದ್ದರಿಂದ ಶಿವರುದ್ರಪ್ಪನವರ ಕೋಪಕ್ಕೆ ಗುರಿಯಾದರು.

ಲಂಕೇಶರು ಯಾವಾಗಲೂ ಅಷ್ಟೆ, ತಮಗೆ ಅನ್ನಿಸಿದ್ದನ್ನು ಹೇಳಿ ಬಿಡುತ್ತಿದ್ದರು. ತಮ್ಮ ಹತ್ತಿರದ ಸ್ನೇಹಿತರ ಬಗ್ಗೆಯೂ ಅವರು ಕಡ್ಡಿ ಮುರಿದಂತೆ ಹೇಳುತ್ತಿದ್ದರು. ಹಾಗೆಯೇ ತಮ್ಮ ಬಗ್ಗೆ ಹೇಳಿಕೊಳ್ಳುವಾಗಲೂ ಲಂಕೇಶರು ಯಾವ ಮುಚ್ಚುಮರೆಯನ್ನು ಮಾಡುತ್ತಿರಲಿಲ್ಲ.

****

ನನ್ನ ಅಪ್ಪಯ್ಯನ ಸ್ನೇಹಿತ್ತರಾದ ಬಿ.ಟಿ.ಸೋಮಣ್ಣ ಎಂಬುವವರು ಆಗ ಬಿಡಿಎಗೆ ಚೇರ್ಮನ್ ಆಗಿದ್ದರು. ಅವರಿಗೆ ಲಂಕೇಶರ ಬಗ್ಗೆ ಕಾಳಜಿ. ಒಮ್ಮೆ ಸೋಮಣ್ಣನವರು "ಏನಪ್ಪಾ ಬೆಂಗಳೂರಿನಲ್ಲಿ ಇಷ್ಟು ವರ್ಷಗಳಿಂದ ವಾಸ ಮಾಡುತ್ತಿದ್ದೀಯ. ನೀನು ಇಲ್ಲೊಂದು ಸೈಟನ್ನಾದರೂ ಖರೀದಿಸಿದ್ದೀಯಾ?" ಎಂದು ಲಂಕೇಶರನ್ನು ಕೇಳಿದರು. ಅದಕ್ಕೆ ಲಂಕೇಶರು "ಸೈಟ್ ಗೀಟ್ ಏನೂ ಮಾಡಿಲ್ಲ" ಎಂದರು. ಆಗ ಸೋಮಣ್ಣನವರು ಲಂಕೇಶರಿಂದ ಒಂದು ಅರ್ಜಿಯನ್ನು ಭರ್ತಿ ಮಾಡಿಸಿಕೊಂಡು ಕಳುಹಿಸಿದ್ದರು.

ಕೆಲ ದಿನಗಳ ನಂತರ ಲಂಕೇಶರ ಹೆಸರಿಗೆ ಬನಶಂಕರಿ ಮೂರನೇ ಹಂತದಲ್ಲಿ ಒಂದು ಸೈಟ್ ಅಲಾಟ್ ಆಗಿದ್ದ ವಿಷಯ ನನಗೆ ತಿಳಿಯಿತು. ಆಗ ಬನಶಂಕರಿ ಏರಿಯಾ ಬೆಂಗಳೂರಿನ ಅಂಚಿನಲ್ಲಿತ್ತು. ಆ ಸೈಟಿಗಾಗಿ ಲಂಕೇಶರು 8,200 ರೂಪಾಯಿಗಳನ್ನು ಬಿಡಿಎಗೆ ಕಂತಿನಲ್ಲಿ ಕಟ್ಟಬೇಕಿತ್ತು. ನಮ್ಮ ಅದೃಷ್ಟಕ್ಕೆ ನಮಗೆ ಅಷ್ಟು ಕಡಿಮೆ ಬೆಲೆಯಲ್ಲಿ ಸೈಟ್ ಅಲಾಟ್ ಆಗಿದ್ದರೂ ಲಂಕೇಶರು ಅದರ ಬಗ್ಗೆ ಒಂದಿಷ್ಟೂ ತಲೆಕೆಡಿಸಿಕೊಳ್ಳಲಿಲ್ಲ, ಅವರು ಬಿಡಿಎಗೆ ದುಡ್ಡು ಕಟ್ಟಲಿಲ್ಲವೆಂದರೆ ಆ ಸೈಟ್ ನಮ್ಮ ಕೈ ಬಿಟ್ಟು ಹೋಗುತ್ತಿತ್ತು. ಆಗ ನಾನೇ ಬಿಡಿಎಗೆ ಹೋಗಿ ಕ್ಯೂನಲ್ಲಿ ನಿಂತು ಸೈಟಿಗೆ ಕಟ್ಟಬೇಕಿದ್ದ ಹಣವನ್ನು ಕಟ್ಟಿ ಬಂದೆ. ನಾನು ಹಾಗೆ ಮಾಡಿದ್ದರಿಂದ ಬನಶಂಕರಿ ಮೂರನೇ ಹಂತದಲ್ಲಿದ್ದ 60x40 ಸೈಟು ನಮ್ಮದಾಯಿತು.

ಒಮ್ಮೆ ನನ್ನ ಮಾವ ನಂದೀಬಸಪ್ಪನವರು ನನ್ನ ಅತ್ತೆ ದೇವೀರಮ್ಮನವರದ್ದಾಗಿದ್ದ ಒಂದು ಚಿನ್ನದ ತೀಕಿ(ಅಡ್ಡಿಕೆ)ಯನ್ನು ನನಗೆ ತಂದುಕೊಟ್ಟರು. ಅದು ತುಂಬಾ ತೂಕವಾಗಿತ್ತು. ಅದನ್ನು ಕರಗಿಸಿ ಕೆಂಪು ಹರಳಿರುವ ನೆಕ್‌ಲೇಸ್ ಮಾಡಿಸಿಕೊಂಡೆ. ಅಂದಿನಿಂದ ಇವತ್ತಿನವರೆಗೂ ನಾನು ಹಲವು ಬಾರಿ ನನ್ನ ಒಡವೆಗಳನ್ನು ಮಾರಿದ್ದರೂ, ಹಳೆಯದನ್ನು ಕರಗಿಸಿ ಹೊಸದನ್ನು ಮಾಡಿಸಿಕೊಂಡಿದ್ದರೂ ಆ ನೆಕ್‌ಲೇಸ್ ಮಾತ್ರ ಇವತ್ತಿಗೂ ನನ್ನಲ್ಲಿದೆ. ಯಾಕೆಂದರೆ ಕೊನಗವಳ್ಳಿಯಿಂದ ನಾನು ಪಡೆದದ್ದು ಒಂದು ಲಂಕೇಶರನ್ನು, ಇನ್ನೊಂದು ಆ ನೆಕ್‌ಲೇಸ್‌ನಲ್ಲಿರುವ ಚಿನ್ನವನ್ನು ಮಾತ್ರ...

****

ನಮ್ಮ ದಾಂಪತ್ಯ ಜೀವನದಲ್ಲಿನ ಬಿರುಕಿನಿಂದಾಗಿ ನಾನು ಮಾನಸಿಕವಾಗಿ ಕುಸಿದುಹೋಗಿದ್ದೆ. ಆಗ ಜಿ.ಎಸ್.ಶಿವರುದ್ರಪ್ಪನವರ ಪತ್ನಿ ರುದ್ರಾಣಿ ಅವರು ನನ್ನನ್ನು ತಮ್ಮೊಂದಿಗೆ ರಾಮಕೃಷ್ಣ ಆಶ್ರಮಕ್ಕೆ ಕರೆದುಕೊಂಡು ಹೋದರು. ಅಲ್ಲಿಯಾದರೂ ನನಗೆ ನೆಮ್ಮದಿ ಸಿಕ್ಕೀತೆಂಬ ಆಶೆ ರುದ್ರಾಣಿ ಅವರದ್ದು. ನಾನು ಮೂರ್ನಾಲ್ಕು ಬಾರಿ ಅವರೊಂದಿಗೆ ಆ ಆಶ್ರಮಕ್ಕೆ ಹೋದೆ. ಆದರೆ ನನಗೇನು ಬೇಕು ಎಂಬುದು ನನ್ನಲ್ಲೇ ಸ್ಪಷ್ಟವಾಗಿರಲಿಲ್ಲ, ನನ್ನ ತಳಮಳ ನನಗೇ ಅರ್ಥವಾಗಿರಲಿಲ್ಲ, ಆಶ್ರಮದಲ್ಲಿ ನನಗೆ ನೆಮ್ಮದಿ ಸಿಗಲಿಲ್ಲ, ಅಲ್ಲಿ ಕೂತು ಧ್ಯಾನ ಮಾಡುತ್ತಾ ನನ್ನ ಸಮಸ್ಯೆಗಳನ್ನು ಮರೆಯಲು ನನ್ನಿಂದ ಆಗುತ್ತಿರಲಿಲ್ಲ, ಆಶ್ರಮಕ್ಕೆ ಬರುತ್ತಿದ್ದ ಕೆಲವು ಹೆಂಗಸರಂತೆ ಇತರರ ಮುಂದೆ ನನ್ನ ನೋವನ್ನು ತೋಡಿಕೊಂಡು 'ನನ್ನ ಜೀವನ ಇಷ್ಟೇ' ಎಂದು ಸುಮ್ಮನಾಗುವ ಮಹಿಳೆ ನಾನಾಗಿರಲಿಲ್ಲ.

ನನಗೆ ನನ್ನದೇ ಆದ ಜವಾಬ್ದಾರಿಗಳಿದ್ದವು. ಅವುಗಳನ್ನು ಬೇರೆಯವರ ಮೇಲೆ ಹೊರಿಸುವಂತಿರಲಿಲ್ಲ, ಒಂದು ಶಾಲೆ ಪ್ರಾರಂಭಿಸಿದರೆ ಹೇಗೆ ಎಂದು ಯೋಚಿಸಿದೆ. ಆದರೆ ಶಾಲೆ ತೆರೆಯುವುದಕ್ಕೆ ಬೇಕಾದ ಹಣ ಮತ್ತು ವಿದ್ಯೆ ಎರಡೂ ನನ್ನಲ್ಲಿರಲಿಲ್ಲ, ಒಂದು ವರ್ಕಿಂಗ್ ವುಮೆನ್ಸ್ ಹಾಸ್ಟೆಲ್ ತೆರೆದರೆ ಹೇಗೆ ಎಂದೂ ಯೋಚಿಸಿದೆ. ಹೀಗೆ ಅದು ಮಾಡಿದರೆ ಹೇಗೆ, ಇದು ಮಾಡಿದರೆ ಹೇಗೆ ಎಂದೆಲ್ಲ ಬರೀ ಯೋಚಿಸುವುದ[ರಲ್ಲೇ] ಎಲ್ಲವೂ ಅಂತ್ಯಗೊಳ್ಳುತ್ತಿತ್ತು.

ಈ ಮಧ್ಯೆ ನಿಧಾನವಾಗಿ ದಿನಕರ ಮತ್ತು ನನ್ನ ವ್ಯಾಪಾರ ಚೆನ್ನಾಗಿ ನಡೆಯಲು ಶುರುವಾಗಿತ್ತು, ಆದರೆ ಒ[ಂದು] ದಿನ ಇದ್ದಕ್ಕಿದ್ದಂತೆ ದಿನಕರನ ತಂದೆ ಜಗಳವಾಡಿದರು. ತ[ಮ್ಮ] ಮನೆಯಲ್ಲಿ ಸೀರೆ ವ್ಯಾಪಾರ ಮಾಡಿದರೆ ಮನೆಗೆ ಬ[ಾಡಿಗೆ] ಕೊಡಬೇಕು ಅಂತ ತಕರಾರೆತ್ತಿದರು. ಆದರೆ ಆ ವ್ಯಾಪ[ಾರದಲ್ಲಿ] ನಾವು ಹೂಡಿದ್ದ ಬಂಡವಾಳ ಎಷ್ಟು ಕಡಿಮೆ ಇತ್ತೆಂದರೆ [ಅದ]ರಲ್ಲಿ ಬಾಡಿಗೆ ಕೊಡುವ ತಾಕತ್ತು ಇರಲಿಲ್ಲ, ಬಾಡಿಗೆ ಕೊ[ಡಲು] ಸಾಧ್ಯವಿಲ್ಲ ಎಂದು ನಾನು ಹೇಳಿದಾಗ ದಿನಕರನ [...] ನಾವು ವ್ಯಾಪಾರಕ್ಕೆ ಇಟ್ಟಿದ್ದ ಸೀರೆಗಳನ್ನು, ಅವುಗ[ಳನ್ನು] ತರಲು ಇಟ್ಟುಕೊಂಡಿದ್ದ ಸೂಟ್‌ಕೇಸ್‌ಅನ್ನು ತೆ[...] ಮನೆಯ ಹೊರಗೆ ಬಿಸಾಡಿದರು. ಅವರು ಹ[...] ಬಿಸಾಡಿದ ಸಾಮಾನುಗಳಲ್ಲಿ ಕನ್ಯಾಕುಮಾರಿ ದೇವ[...] ಒಂದು ಫೋಟೋ ಕೂಡಾ ಇತ್ತು. ನಾನು ಅವರು ಬಿಸ[ಾಡಿದ್ದ] ಎಲ್ಲವನ್ನು ತಂದು ನಮ್ಮ ಮನೆಯಲ್ಲಿ ಇಟ್ಟುಕೊ[ಂಡೆ].

ಅವತ್ತಿನಿಂದ ನಮ್ಮ ಮನೆಯಲ್ಲೇ ವ್ಯಾ[ಪಾರ] ನಡೆಯಲಾರಂಭಿಸಿತು. ಸೀರೆಗಳನ್ನು ಖರೀದಿ[ಸಲು] ತುಂಬಾ ಜನ ಮಹಿಳೆಯರು ನಮ್ಮ ಮನೆಗೆ ಬ[ರಲಾ]ರಂಭಿಸಿದರು. ಅವರಲ್ಲಿ ಹೆಚ್ಚಿನವರು ವಿವಿಧ ಕಾಲೇಜು[ಗಳು,] ಬ್ಯಾಂಕುಗಳಲ್ಲಿ ಕೆಲಸ ಮಾಡುತ್ತಿದ್ದವರೇ ಇದ್ದರು.

ನನ್ನ ಸೀರೆ ವ್ಯಾಪಾರವನ್ನು ನಡೆಸಲು ನಾನು ತುಂಬಾ [ಶ್ರಮ] ಪಡುತ್ತಿದ್ದೆ. ಕೆಲವೊಮ್ಮೆ ಬೆಂಗಳೂರಿನ ಬೇರೆಬೇರೆ [ಕಡೆ] ಇರುತ್ತಿದ್ದ ವಿವಿಧ ಮಹಿಳಾ ಸಮಾಜಗಳಿಗೆ ಸೀರೆಗ[ಳನ್ನು]



ಅಜಿ[...]

ತೆಗೆದುಕೊಂಡು ಹೋಗುತ್ತಿದ್ದೆ. ಅಲ್ಲಿ ಟೇಬಲ್ ಮೇಲೆ [...] ಸೀರೆಗಳನ್ನು ಹರಡುತ್ತಿದ್ದೆ. ಮಹಿಳೆಯರು ತಮಗೆ ಚ[...]ಕಂಡ ಸೀರೆಗಳನ್ನು ಆರಿಸಿಕೊಳ್ಳುತ್ತಿದ್ದರು. ಸೀರೆ ಮಾರಲ[ು] ನಾನು ತುಮಕೂರಿನ ಮಹಿಳಾ ಸಮಾಜಗಳಿಗೂ ಹೋ[...]

ನನ್ನ ಮಕ್ಕಳು ಸ್ಕೂಲಿಗೆ ಹೋದಾಗ ಚಿಕ್ಕಪೇಟೆಯ[...] ಸಗಟು ವ್ಯಾಪಾರಿಗಳಿಂದ ಸೀರೆ ಖರೀದಿಸಲು ನಾನು [...] ದಿನಕರ ಹೋಗುತ್ತಿದ್ದೆವು. ಆಗ ನಿಧಾನವಾಗಿ ವಿ[...] ಮಿಲ್‌ಗಳ ಬಗ್ಗೆ, ಅವರು ತಯಾರಿಸುವ ಸೀರೆಗಳ ಕ್ವಾ[...] ಬಗ್ಗೆ, ಡೀಲರ್‌ಗಳ ಬಗ್ಗೆ ಒಂದೊಂದಾಗಿ ತಿಳಿದುಕೊ[...] ಹೋದೆ.


ಕೆಲವು ಸಾರಿ ನಾನೊಬ್ಬಳೇ ಹೋಗಿ ಸೀರೆಗ[ಳನ್ನು] ಖರೀದಿಸಲು ಶುರು ಮಾಡಿದೆ. ಆಗ ಧೀರೂಬಾ[ಯಿ] ಅಂಬಾನಿ ಅವರ ರಿಲಯನ್ಸ್ ಕಂಪನಿ ವಿಮಲ್ ಸೀರೆಗ[ಳನ್ನು] ಮಾರುಕಟ್ಟೆಗೆ ಪರಿಚಯಿಸಿ ಅವು ತುಂಬಾ ಜನಪ್ರಿಯ[ವಾಗಿ]ದ್ದವು. ನಾನು ವಿಮಲ್ ಸೀರೆಗಳ ಡೀಲರ್‌ನಿಂದ 20 [...] ಕೊಂಡರೆ ಅವುಗಳನ್ನೆಲ್ಲ 15 ದಿನಗಳಲ್ಲೇ ಮಾರಿ ಮತ್ತೆ ಇ[...] ಸೀರೆಗಳನ್ನು ತರುತ್ತಿದ್ದೆ. ವ್ಯಾಪಾರ ಜಾಸ್ತಿ ಆಗುತ್ತಾ ಹೋ[...] ದಿನಕರ ಮತ್ತು ನಾನು, ಇಬ್ಬರೂ ತಿಂಗಳಿಗೆ 300 ರೂಪಾ[ಯಿ]ಗಳನ್ನು ನಮ್ಮ ಸಂಬಳ ಎಂದು ತೆಗೆದುಕೊಳ್ಳಲು ಶುರು[ಮಾಡಿ]ದೆವು.

ಲಂಕೇಶರು ತಮ್ಮ ಎರಡನೇ ಸಿನಿಮಾ 'ಅನುರೂಪ[...] ಪ್ರಾರಂಭಿಸಿದರು. ಯಥಾಪ್ರಕಾರ ನಾನೇ ಸಿನಿಮಾ ಯೂ[ನಿಟ್] ಎಲ್ಲರಿಗೂ ಮನೆಯಿಂದ ಊಟ ಕಳಿಸುತ್ತಿದ್ದೆ. ಆದರೆ ಈ [...] ಲಂಕೇಶರು 'ಇಂದಿರಾ ಲಂಕೇಶ್ ಪ್ರೊಡಕ್ಷನ್ಸ್' ಎ[ಂದು] ಹೆಸರಿಡಲಿಲ್ಲ, ಬದಲಾಗಿ 'ಲಂಕೇಶ್ ಚಿತ್ರ' ಎಂದು [...]ಡುವ ಮೂಲಕ ನನ್ನ ಹೆಸರನ್ನು ಕೈಬಿಟ್ಟರು.

(ಮುಂದುವರೆಯುವ[ುದು])

ಎಡೂರಪ್ಪನ ಮ್ಯಾಲೆ ಒಂದು ಕತೆ ಹೇಳ್ತಿನಿ ಕೇಳ್ತಿರಾ!

ಈಗ ಬಂದು ಮುಖ ಮುಸುಡಿ ನೋಡದೆ ಚಚ್ಚ ಹೋದ ಮಳೆ ಯಾರಿಗೂ ಬೇಕಿರಲಿಲ್ಲ. ಹಾಗೇ ಕರ್ನಾಟಕದ ಸದ್ಯದ ವಿದ್ಯಮಾನಗಳೂ ಯಾರಿಗೂ ಬೇಕಿರಲಿಲ್ಲ. ಆದರೂ ಅನುಭವಿಸುವಂತಹ ಅನಿವಾರ್ಯತೆ ಎದುರಾದ ಬಗ್ಗೆ ಯೋಚಿಸುತ್ತಿದ್ದ



ಕಾಳಮಾವ,

"ಈ ಮಳೆ ಮಾಡಿದ ಕ್ಯಲಸ ನೋಡಿದ್ರೆ ಕೈಗೆ ಬಂದಿದ್ದು ಬಾಯಿಗೆ ಬರಲಿಲ್ಲ ಅನ್ನಂಗಾಯ್ತು ಕಂಡೈ ಜುಮ್ಮಿ" ಎಂದ.

"ಊ ಕಣ ಮಾವ. ಆ ನಿಂಗೇಗೌಡನ ಗದ್ದೆಲಿ ಬತ್ತ ಮುಂಗೆ ಬಂದಿತ್ತೂ ಅಂತೀ. ಈ ಹಾಳು ಮಳಿಗೆ ಬತ್ತೆಲ್ಲ ಉದುರಿ ಗದ್ದೆ ತುಂಬಾ ಬತ್ತವೆಯ"

"ನಿಂಗೆಗೌಡ ನ್ಯಾಣಾಯ್ಕಳಕ್ಕೋಗಿದ್ನಂತೆ ಕಂಡೈ" ಎಂದ ಸೀರ.

"ಸಾಲ ಸೂಲ ಮಾಡಿ ಬತ್ತ ಬ್ಯಳದಿದ್ದ ಪಾಪ. ಇನ್ನೇನು ಮಾಡ್ಯನೂ" ಎಂದ ಕಾಳಮಾವ.

"ಇಲ್ಲಿ ಹಿಂಗ್ವಡದ ಮಳೆ ಆ ಬಿಜಾಪುರದ ಕಡಿಕಾರ ಬಿಡದಿದ್ರೆ ಜನ ಗುಳೆ ಹೋಗದಾರು ನಿಲ್ತಿತ್ತು ಕಾಳಮಾವ" ಎಂದ ಉಗ್ರಿ.

"ಯಾಕಲ್ಲಿ ಮಳಿಲ್ಲವೇನ್ಲ?"

"ಇಲವಂತೆ ಕಣಮಾವ. ನಮ್ಮ ಕ್ಲಪ್ಪದ ಜಗದೀಶ ಬಂದಿದ್ದ. ಅವುನೇಳದ ನೋಡಿದ್ರೆ ಹೆದ್ರಿಕಾಯ್ತಪ್ಪ."

"ಹೆದ್ರಿಕಳೊ ಅಂತದೇನೇಳಿದಾ?"

"ಇಡೀ ಬಿಜಾಪುರದ ಕಡಿಕೆ ಈ ವರ್ಸ ಒಂದೋಬರಿ ಅರ್ಧ ಗಂಟೆ ಮಳಿ ಬಂದದಂತೆ ಬತ್ತೆ?"

"ದಿನಾ ಅರ್ಧ ಗಂಟೆ ಬತ್ತೆ?"

"ದಿನಾ ಅಲ್ಲ ಕಣಮಾವ. ಈ ವರ್ಸದ ಮಳಿಗಾಲ್ದಲ್ಲಿ ಆಗಾಗ್ಗೆ ಬತ್ತಲ್ಲ ಮಳೆ, ಅಂದ್ರೆ ಯರಡು ಮೂರು ನಿಮುಸ ಬಂದಿರತದ, ಆ ಮಳೆನ್ನೆಲ್ಲ ಲ್ಯಕ್ಕ ಹಾಕಿ ಟೋಟ್ಳು ಮಾಡಿದಾಗ ಅರ್ಧ ಗಂಟೆ ಮಳೆ ಬಂದ್ವದೆ ಅಂತ ಗೊತ್ತಾಯ್ತಂತೆ."

"ಜನ ಬದುಕಿರದೇಳೂ."

"ಜನ್ಯಂಗೋ ಊರುಬುಟ್ಹೊಗಿ ಬದಿಕತ್ತರೆ. ದನಿನ ಹೇಳು."

"ಅದ್ನೆ ಕಣಮಾವ ಜಗದೀಶೇಳಿದ್ದೂ. ದನ ಕರಿಗೆ ಮೇವು ಕುಡಸಕ್ಕಾಗದೆ ತಗಂಡೋಗಿ ಮಾರ್ತ ಇದ್ದರಂತೆ. ಮಾರಕ್ಕೆ ಅಂತ ವಡಕಂಡೋಗುವಾಗ ಭಜರಂಗಿ ಮುಂಡೆಮಕ್ಕಳು ಹಿಡಿತರೆ ಅಂತ ರಾತ್ರವೊತ್ತು ಸಾಗುಸ್ತರಂತೆ. ಅಂಗೆ ಸಾಗುಸುವಾಗ ಒಬ್ಬ ರೈತ 'ಮಗಾ ಈ ದನ ಹಿಡಕಂಡೋಗಿ ಎಲ್ಲಾರ ಬುಟ್ಬು ಬುಡಪ್ಪ, ಇವುಕೆ ನಾನು ನೀರೊದಗಸಕ್ಕಾಗದಿಲ್ಲ' ಅಂತ ಹಗ್ಗ ಕೊಟ್ಟನಂತೆ ಕಣಮಾವ" ಎಂದು ಉಗ್ರಿ ಹೇಳುವಾಗ ಲೊಚಗರಿದ ಕಾಳಮಾವ,

"ಇನ್ಯಂಥಾ ಪರಿಸ್ಥಿತಿ ಬಂದಿರಬೌದು ಲ್ಯಕ್ಕಹಾಕು" ಎಂದ.

"ಪರಿಸ್ಥಿತಿಯೇನು. ಜನಗಳ್ಯಲ್ಲ ಆ ಕಡೆ ರೈಲಿಗೆ ತುಂಬಿಕಂಡು ಮಾರಾಷ್ಟ್ರ, ಹೈದರಾಬಾದು, ಬೆಂಗಳೂರು ಕಡಿಕೆ ವಂಟೋಯ್ತಾಯಿದ್ದರಂತೆ ಕಣಮಾವ. ವಸಿ ಜನ ನಮ್ಮ ಮಂಡೇವುದ ಕಡಿಕೂ ಬಂದು ಕಬ್ಬು ಕಡಿತಯಿದ್ದರಂತೆ."

"ಸರ್ಕಾರದೋರು ಏನು ಮಾಡ್ತ ಅವುರೇ?"

"ಸರ್ಕಾರಕ್ಕೂ ನಿನ್ನ ಪ್ರಾಬ್ಲಮ್ಮಿಗೂ ಸಮಂದಿಲ್ಲ ದೊಡಪ್ಪ, ಅವುರೆಲ್ಲ ಬಳ್ಳಾರಿಲಿ ಬೀಡು ಬುಟ್ಟವರೆ" ಎಂದುಕೊಂಡು ವಾಟಿಸ್ಸೆ ಬಂದ.

"ವಾರದಿಂದ ಕಾಣ್ತಿರಲಿಲ್ಲ, ಬಳ್ಳಾರಿಗೋಗಿದ್ದೇನ್ಲ?" ಎಂದಳು ಜುಮ್ಮಿ.

"ಬಳ್ಳಾರಿಗೋಗಕೆ ನಾನೇನು ಕುಮಾರಸ್ವಾಮಿನೇನಕ್ಕ. ಅಥವಾ ಜಮೀರನೊ?"

"ಜಮೀರ ಅಂದ್ರ್ಯಾರೂ?"

"ನೀನು ಇಲ್ಲಿ ಬಸ್ಸತ್ತಿ ಬೆಂಗಳೂರು ಶ್ರೀನಗರದಲ್ಲಿ ಬಸ್ಸಿಳಿತಿ ನೋಡು, ಆ ಬಸ್ಸಿನ ಓನರ್ರು ಜಮೀರ ಅಂತ ಕಣಕ್ಕ."

"ಅವುನ್ಯಾಕೆ ಬಳ್ಳಾರಿಗೋಗಿದ್ದ?"

"ಓ ನಿನಿಗೆ ಡೀಟೈಲಾಗಿ ಹೇಳಬೇಕಲ್ಲವ್ವ ಈಗ, ಈ ಜಮೀರ ನೂರಾರು ಬಸ್ಸಿನ ಓನರ್ರು. ಅವುನು ರಾಜಕಾರಣಿನೋ, ಧರ್ಮಕಾರಣಿನೋ, ಸ್ಮಗಲರ್ರೋ ಅಥವಾ ಭೂಗತ ಲೋಕದೋನೋ ಅಂತು ಯಾರಿಗೂ ಇನ್ನೂ ಗೊತ್ತಾಗಿಲ್ಲ. ಆದ್ರು ಕುಮಾರಣ್ಣನ ಕ್ಲೋಸ್ ಫ್ರೆಂಡ್."


"ಅಂಥೋನು ಕುಮಾರಣ್ಣನಿಗೆ ಯಂಗೆ ಫ್ರೆಂಡಾದ?"

"ಅಯ್ಯೋ, ಫ್ರೆಂಡಲ್ಲ ಕಣಕ್ಕ. ಅವುನ ಮನೆನೆ ಕುಮಾರಣ್ಣನ ಕಾರಾಸ್ತಾನ. ಕುಮಾರಣ್ಣ ಮುಖ್ಯಮಂತ್ರಿಯಾಗುದುಕೂ ಮೊದ್ಲೂ ಅವುನ ಮನೆಲಿ ಅಂತೆ ಯಲ್ಲಾ ಏರ್ಪಾಟು ನ್ಯಡದುದ್ದು. ಅಷ್ಟೇ ಅಲ್ಲ, ಬಿಕರಿಯಾದ ಎಮ್ಮೆಲ್ಲೆಗಳನ್ನೆಲ್ಲ ತುಂಬಿಕಂಡು ರೆಸಾರ್ಟಿಗೆ ಕರಕಂಡೋದದ್ದೂ ಇದೇ ಜಮೀರನ ಬಸ್ಸುಗಳಂತೆ."

"ಆಗಿನ ಕಾಲ್ದಲ್ಲಿ ಸಿಪಿಸಿ ಬಸ್ಸಿನ ಸಾವುಕಾರ ಕಾಂಗ್ರೆಸ್ಸಿನೋರ ಜ್ವತೆಲಿ ಅಂಗೆ ಇದ್ದ ಕಂಡ್ಯ. ಇಲ್ಲಿಗೂ ಯರಡು ಬಸ್ಸು ಬರವು."

"ಮ್ಯಾಟ್ರ ಡೈವರ್ಟ್ ಮಾಡಬ್ಯಾಡ ದ್ವಡಪ್ಪ, ಬಳ್ಳಾರಿ ಚುನಾವಣೆಲಿ ಸಾಬರೋಟ ಸ್ಯಳಿಬೇಕಾದ್ರೆ ಜಮೀರನೇ ಸರಿ ಅಂತ ಕುಮಾರಣ್ಣ ಅಂಡ್ ಪಾದರ್ ಯೋಚನೆ ಮಾಡಿ ಅವುನನ್ನ ಅಲ್ಲಿಗೆ ಕಳಿಸಿದ್ರು. ಈಗ ಜಮೀರ ಸಾಬರೋಟ ಯಳದಿದ್ರೆ ರಾಮುಲು ಗೆಲ್ತನೆ, ಇಲ್ಲ ಅಂದ್ರೆ ಕಷ್ಟ."

"ಅಂಗರೆ ಬಿಜೆಪಿ ಗೆದ್ದತೆ?"



ಎಂದ ಉಗ್ರಿ.

"ಗೆಲ್ಲದಲ್ಲ, ಆ ಪಾರ್ಟಿ ಕತೆನೆ ಮುಗಿತು ಕಣೊ ಉಗ್ರಿ. ನಿನಿಗೆ ಎಗ್‌ಜಾಂಪಲ್ ಕೊಡದಾದ್ರೆ ಎಡೂರಪ್ಪ ಮತ್ತು ಈಶ್ವರಪ್ಪನ ಮುಖ ನೋಡು ಗೊತ್ತಾಯ್ತದೆ."

"ಆದ್ರು ಯಲಕ್ಷನ್ ಹಿಂದಿನ ದಿನ ಬಿಜೆಪಿಗಳು ಬಾರಿ ಹಣ ಹಂಚಿದರಂತಲ್ಲೊ."

"ಹಂಚವುರೆ ಒಪ್ಪಿಗತ್ತಿನಿ. ಇದೇ ಕುಮಾರಣ್ಣ ಚಾಮುಂಡೇಶ್ವರಿಲಿ ಯಪ್ಪತ್ತು ಕೋಟಿ ಸುರದನಂತೆ. ಆದ್ರು ಸಿದರಾಮಯ್ಯ ಗೆದ್ದ."

"ಸಿದ್ದರಾಮಯ್ಯನ್ನ ಗೆಲ್ಸಿಸಿದೋನು ಪೀಟರ್‌ನಂತೆ ಕಣೊ. ಪೀಟರ್ ಇಲ್ದೆಯಿದ್ರೆ ಸಿದ್ದರಾಮಯ್ಯ ಬಸ್ನೂರು ಕುರಿ ಸಾಕಂಗಾಗದು."

"ಅಂಗರೆ ರಾಮುಲು ಗೆಲ್ತನೇನ್ಲ?" ಎಂದಳು ಜುಮ್ಮಿ.

"ಗೆಲ್ಲಬೇಕು ಕಣಕ್ಕ, ಗೆದ್ರೆ ಸರಕಾರ ತಗಿತನೆ. ರಾಷ್ಟ್ರಪತಿ ಆಡಳತ ಬತ್ತದೆ. ತಿರಗ ಅಸೆಂಬ್ಲಿ ಯಲಕ್ಷನ್ ಬತ್ತದೆ. ನ್ಯನಿಸಿಗಂಡ್ರೆ ಸಾಕು, ಏನೊ ಉತ್ಸಾಹ ಕಣಕ್ಕ."

"ಆಗದಿಲವೆ! ನಿನಿಗೇನು ಹೊಲವೊ, ಮನಿಯೋ, ದನವೊ, ಕರವೊ ಹೇಳು. ಯಲಕ್ಷನ್ನೆ ಅಲವೆ ಮಾರಿಹಬ್ಬ ನಿನಿಗೆ" ಎಂದಳು ಜುಮ್ಮಿ.

"ನೋಡಕ್ಕ, ನನ್ನಂಗೆ ಭಾಳಾ ಜನ ಅವುರೆ. ಆ ಮ್ಯಾಟ್ರು ಬ್ಯಾಡ. ಈ ವರ್ಷ ಮುಗಿಯದ್ರಲ್ಲಿ ಈ ಸರಕಾರದ ಕತೆ ಮುಗಿಬೇಕು. ಅದು ನನ್ನಿಚ್ಚೆ ಅಲ್ಲ, ಆ ಎಡೂರಪ್ಪನ ಇಚ್ಚೆ ಕೂಡ ಅದೇ ಕಣಕ್ಕ."

"ಯಾಕವುನಿಗಿನ್ನೂ ಸಾಕಾಗಿಲವಂತಾ?"

"ಸಾಕಾಗದಿಲ್ಲ ಕಣಕ್ಕ. ಎಡೂರಪ್ಪನ್ನ ಏನನ್ನಕಂಡಿದ್ದಿ ನೀನು. ನಮ್ಮ ದ್ವಡಪ್ಪ ಬಾಳ ಹಿಂದೆ ಒಂದು ಕತೆ ಹೇಳಿದ್ದ, ಅದನ್ನ ಎಡೂರಪ್ಪನಿಗೆ ಅಪ್ಲೈ ಮಾಡಿ ಹೇಳದಾದ್ರೆ, ಪರೆಗ್‌ಜಾಂಪಲ್ಲಾಗಿ ಇಂಗ್ಲಿಸ್ ದೊರೆ ಅಂತ ಇಟಗಳನ. ಅವುನು ಬಂದು ಇಲ್ಲಿ ನಿಂತಗಂಡು ನೀವು ಈ ಜಾಗದಿಂದ ಓಡಿ ಎಷ್ಟು ದೂರ ಬಳಿಸಿಗಂಡು ಬತ್ತಿರೊ, ಅಷ್ಟು ಭೂಮಿ ನಿಮ್ಮದು ಅಂದನಂತೆ. ಸುಮಾರು ಜನ ಓಡಿ ಬಳಸಿಕೊಂಡು ಬಂದರಂತೆ. ಈ ನಿಮ್ಮ ಕಾಳ ದೊಡಪ್ಪ ಕೆರೆ ಏರಿಮ್ಯಾಲಾಸಿ ಹೋದೊನು ಹಳ್ಳದ ಕಡಿಂದ ಇತ್ತಗೆ ಬಂದ. ಅಂಗಾಗಿ ಅವುನಿಗರದು ಅಷ್ಟೇ ಜಮೀನು. ಆದ್ರೆ ಎಡೂರಪ್ಪ ಮಾತ್ರ ವತ್ತಾರೆ ಹೋದೋನು ಸಂಧ್ಯಾದ್ರು ಬರಲಿಲ್ಲವಂತೆ. ಆಗ ಯಲ್ಲ ಹುಡಿಕ್ಯಂಡೋದರಂತೆ. ಎಡೂರಪ್ಪ ಎಲ್ಲೂ ಸಿಗಲಿಲವಂತೆ. ಕಡಿಗೆ ಪರಪ್ಪನ ಅಗ್ರಾರದ ಜೈಲಲ್ಲಿ ಮನಿಗಿದ್ನಂತೆ!"

"ಅದ್ಯಾಕಲ್ಲಿಗೋಗಿ ಮನಿಗಿದ್ದಾ?"


"ಬೆಳಿಗ್ಗೆ ಎದ್ದು ತಿರಗ ಓಡನಾ ಅಂತ ಮನಿಗಿ ರೆಸ್ಟು ತಗಂಡನಂತೆ. ಅದಂಗಲ್ಲ ಕಣಕ್ಕ, ನಿಜವಾದ ಕತೆಲಿ ಎಡೂರಪ್ಪನಂಥೋನು ಓಡಿ ಓಡಿ ಸತ್ತೇ ಹೋಯ್ತನೆ. ಅವನು ಸತ್ತ ಜಾಗ ಆರಡಿ ಮೂರಡಿಲಿತ್ತಂತೆ. ಕಡಿಗೆ ಮನುಸುನಿಗೆ ಬೇಕಿರೊ ಭೂಮಿ ಅಷ್ಟೆ ಅಲವೆ. ಆದ್ರೆ ಎಡೂರಪ್ಪ ಇನ್ನೂ ಅದ ತಿಳಕಂಡಿಲ್ಲ, ಇನ್ನು ಓಡ್ತನೆ ಬೇಕಾದ್ರೆ. ಅದ್ಕೆ ಮುಂದೆ ಈಶ್ವರಪ್ಪನ ಕುದುರೆನೆ ಕೇಳಬವುದು ಕಣಕ್ಕ."

"!!"

ಸ್ವಂತದ ಮೂರು

ಈ ಅಂಕಣವನ್ನು 'ಮರೆಯುವ ಮುನ್ನ' ಎಂದು ನಾವು ಕರೆಯುತ್ತೇವೆ. ಅದಕ್ಕೆ ಸರಿಯಾಗಿ ನಾನು ಒಬ್ಬನೇ ಇದ್ದಾಗ, ವಾಕ್ ಮಾಡುವಾಗ, ಹರಟೆ ಕೊಚ್ಚುವಾಗ ಅನ್ನಿಸಿದ್ದು ಆಮೇಲೆ ಬರೆಯಲು ಕೂತಾಗ ಮರೆತುಹೋಗಿರುತ್ತ, ನೆನೆಸಿಕೊಂಡಷ್ಟೂ ಅಲ್ಲವಾಗುತ್ತ, ನೋಟ್ಸ್ ಮಾಡಿ ಇಟ್ಟುಕೊಳ್ಳುವಷ್ಟು ಮುಖ್ಯವಾಗಿರುವುದಿಲ್ಲ. ಒಂದು ವೇಳೆ 'ಊಟ' ಎಂದು ಬರೆದುಕೊಂಡಿದ್ದರೆ ಏನೂ ಹೊಳೆಯುವುದಿಲ್ಲ. ಈ 'ಊಟ' ಎಂಬ ಟಿಪ್ಪಣಿ ಇದ್ದಕ್ಕಿದ್ದಂತೆ ಅರಳುತ್ತಿರುವುದರಿಂದ ಇದನ್ನೇ ಬರೆಯುತ್ತೇನೆ.


ಬೆಂಗಳೂರಿನ ಡಯಾಬಿಟಿಸ್ ಆಸ್ಪತ್ರೆಯೊಂದರಲ್ಲಿ ಮೊನ್ನೆ ನನ್ನನ್ನು ಪರೀಕ್ಷಿಸಿದರು. 'ತುಂಬ ಆರೋಗ್ಯವಾಗಿದ್ದೀರಿ' ಎಂದು ಹೇಳಿದ ಡಾಕ್ಟರು ತಮ್ಮ ಸಹಾಯಕಿಯೊಬ್ಬಳಿಗೆ 'ಇವರಿಗೆ diet ಬಗ್ಗೆ ತಿಳಿಸು' ಅಂತ ಹೇಳಿದರು. ಆಕೆ ತೆಳ್ಳಗೆ ಬೆಳ್ಳಗಿದ್ದ ಹುಡುಗಿ. ಈಗ ತಾನೆ ವೈದ್ಯಳಾದವಳು. ನನ್ನನ್ನು ದೊಡ್ಡ ಹಾಲ್‌ಗೆ ಕರೆದೊಯ್ದು ತನ್ನ ಕಾಗದಗಳನ್ನೆಲ್ಲ ತೆಗೆದು ಪ್ರಶ್ನಿಸತೊಡಗಿದಳು. ಅಲ್ಲಿ ಸುತ್ತ ಇದ್ದ ನೂರಾರು ಜನರಿಗೆ ಕೇಳಿಸುವಂತೆ, 'ದಿವಸಕ್ಕೆ ಎಷ್ಟು ಸಲ ಊಟ ಮಾಡ್ತೀರಿ?' ಎಂದಳು. ಊಟ ಮಾಡುವುದು ಸಹಜ ಕ್ರಿಯೆಯಾದರೂ ಅವಳು ಗಟ್ಟಿಯಾಗಿ ಕೇಳಿದ್ದಕ್ಕೆ ಕುತೂಹಲಗೊಂಡ ಜನ ನನ್ನತ್ತ ನೋಡತೊಡಗಿದರು; ನನ್ನ ಹೊಟ್ಟೆಯಲ್ಲಿ ಏನೋ ಆಗಿದೆ ಎನ್ನುವಂತೆ ನೋಡತೊಡಗಿದರು. ನನಗೆ ಮೂರು ಸಲ ಊಟ ಮಾಡುತ್ತೇನೋ, ಎರಡು ಸಲ ಉಂಡು ಮೂರನೆಯ ಸಲ ತಿಂಡಿ ಮಾತ್ರ ತಿನ್ನುತ್ತೇನೋ, ಮೂರು ಸಲವೂ ಸ್ವಲ್ಪ ಮಾತ್ರ ತಿನ್ನುತ್ತೇನೋ ಎಂಬುದು ಸ್ಪಷ್ಟವಾಗಿರಲಿಲ್ಲವಾದ್ದರಿಂದ ನಾನು ಹಾಗೇ ಅಸ್ಪಷ್ಟವಾಗಿ ಉತ್ತರಿಸಿದೆ. ಆಕೆ ಮತ್ತೆ ಗಟ್ಟಿಯಾಗಿ, ಕಿರಿಕಿರಿ ಗಂಟಲಲ್ಲಿ, "ಸರಿಯಾಗಿ ಹೇಳಿ, ಎಷ್ಟು ಸಲ ಊಟ ಮಾಡ್ತೀರಿ?" ಅಂದಳು. ನಾನು ಸುಮ್ಮನಿದ್ದೆ. ಅವಳು ನಾಟಕದಲ್ಲಿ ನಟ ಪ್ರೇಕ್ಷಕರೆದುರು ಕೇಳುವಂತೆ, 'ಏನು ತಗೋತೀರಿ?' ಅಂದಳು. ನಾನು ಸಂಕೋಚದಿಂದ ಯಾರಿಗೂ ಕೇಳಿಸದಂತೆ, 'ಚಪಾತಿ, ಮುದ್ದೆ' ಎಂದೊಡನೇ ಎಷ್ಟು ಚಪಾತಿ, ಎಷ್ಟು ಮುದ್ದೆ–ರಾಗಿ ಮುದ್ದೆಯೋ ಜೋಳದ ಮುದ್ದೆಯೋ?' ಅಂದಳು. ಅಷ್ಟರಲ್ಲಿ ನಾನು ಬೆವತುಹೋಗಿದ್ದೆ. ಇದನ್ನು ನೋಡಿ ಅಲ್ಲಿ ನೆರೆದಿದ್ದವರ ಆಸಕ್ತಿ ಹೆಚ್ಚು ಹೆಚ್ಚಾಗಿತ್ತು. ನಾನು ಇದೆಲ್ಲ ತೀರಾ ಅಸಗತ್ಯ ರಗಳೆ ಎಂದು, "ನೀವು ಡಾಕ್ಟರೇನ್ರಿ... ನಿಮಗೆ ಮನುಷ್ಯರ ಬಗ್ಗೆ ಸರಳ ವಿಷಯಗಳೂ ಗೊತ್ತಿಲ್ಲ. ನೀವು ಹೋಗಿ ಯಾವುದಾದರೂ ಟಿವಿ ಸೀರಿಯಲ್‌ನಲ್ಲಿ ನಟಿಸಿ. ಅಲ್ಲಿ ಕೂಡ ಹುಷಾರಾಗಿರಿ. ಯಾಕೆಂದರೆ ನೀವು ಸ್ವಲ್ಪ ಆತ್ಮಗೌರವದ, ವೈಯಕ್ತಿಕ ವಿಷಯ ಅರಿತಿದ್ದರೆ ತಿಳಿದಿರುತ್ತಿತ್ತು, ಊಟ, ನಿದ್ರೆ, ಮೈಥುನ–ಇವು ಮೂರು ನನಗಂತೂ ತುಂಬ ಖಾಸಗಿಯಾದವು. ನಮ್ಮ ದೇಹ ಮತ್ತು ಅದರ ಸದ್ಯದ ಸ್ಥಿತಿಗೆ ಒಪ್ಪುವಂಥ, ತಿನ್ನಲು ತೀರಾ ಕೆಟ್ಟದಾಗಿರದಂತಹ ಊಟ ಮಾಡಬೇಕಾಗುತ್ತದೆ. ನಾನು ಚಿಕ್ಕಂದಿನಲ್ಲಿ ಇಷ್ಟಪಡುತ್ತಿದ್ದ ಹುಳಿಕಟ್ಟು ದೇಹಕ್ಕೆ ಸರಿಹೋಗುತ್ತೆ. ನೀವು ತಿಳಿಸುವ ಅಪ್ಪಟ ತರಕಾರಿಯ ರಸವನ್ನು ನನ್ನ ದೇಹ ಇಷ್ಟಪಡುವುದಿಲ್ಲ. ಇಷ್ಟಪಡದಿದ್ದರೆ ನಮ್ಮ ಜೀರ್ಣರಸಗಳು ಒಸರುವುದಿಲ್ಲ. ನಿಮ್ಮ ನಿಯಮದ ಪ್ರಕಾರ ತಿಂದದ್ದು ನಿಮ್ಮ ಪಾಠದ ಮಟ್ಟಿಗೆ ಸರಿ, ನನ್ನ ದೇಹಕ್ಕಲ್ಲ. ಈ ಡಯಾಬಿಟಿಸ್ ಬಂದ ಮೇಲೆ ನಾನು ದೇಹವನ್ನು ನೋಡಿಕೊಂಡಿದ್ದೇನೆ, ಅದನ್ನು ಗಮನಿಸುವುದನ್ನು ಕಲಿತಿದ್ದೇನೆ; ಕಣ್ಣಿನ ತೊಂದರೆಯಾದ ಮೇಲಂತೂ ನನಗೆ ಹೊಸ ತಿಳಿವುಗಳೇ ಬಂದವು. ಆದ್ದರಿಂದ ಹೇಳ್ತೀನೆ ಕೇಳಿ–ಸಿಗರೇಟ್ ಸೇದುವುದು ಕೆಟ್ಟದು ಅಂತ ನಿಮ್ಮ ವೈದ್ಯಕೀಯ ಪುಸ್ತಕ ಹೇಳುತ್ತೆ. ಆದರೆ ಸಿಗರೇಟ್‌ನಿಂದಲೇ ಖುಷಿಯಿಂದ ಬದುಕಿರುವಾತನ ದೇಹ ಸಿಗರೇಟ್ ಇಲ್ಲದಿದ್ದರೆ ಜೀವವನ್ನು ಪೋಷಿಸುವ ರಸವನ್ನು ಒಸರುವುದಿಲ್ಲ. ಆ ರಸಗಳ ಸ್ವರೂಪ ಕೂಡ ಆಧುನಿಕ ವೈದ್ಯಕೀಯಕ್ಕೆ ಗೊತ್ತಿಲ್ಲ. ಉದಾಹರಣೆಗೆ ಆಡ್ರೆನಲಿನ್....." ಎಂದೊಡನೆ ಆಕೆ ಕಣ್ಣಗಲಿಸಿ ಗೊಂದಲಗೊಂಡು ಓಡಿಹೋದಳು. ಜನ ಕೂಡ ಅದೇನೋ ವಿಶೇಷದ ವಿಷಯವನ್ನು ಚರ್ಚಿಸುತ್ತಿರುವುದಾಗಿ ತಿಳಿದು ಬೇರೆ ಕಡೆ ಗಮನ ಹರಿಸಿದ್ದರು.



ನಿದ್ರೆ, ಊಟ, ಮೈಥುನ–ನಮ್ಮನ್ನು ಕಾಪಾಡುವ ಮೂರು; ಅವುಗಳಲ್ಲಿ ನಿದ್ರೆ ಎಷ್ಟು ಖಾಸಗಿಯೆಂದು ಬೇರೆ ಹೇಳಬೇಕಾಗಿಲ್ಲ. ಕನಸು, ಕನವರಿಕೆ, ಗೊರಕೆ, ನಿದ್ರಾಹೀನತೆ ಎಲ್ಲವೂ ನಮ್ಮನ್ನು ಅಸ್ತವ್ಯಸ್ತಗೊಳಿಸಬಲ್ಲವು. ಹಾಗೆಯೇ ಊಟ, ಕೆಲವರು ಊಟ ಮಾಡುವಾಗ ಬೆವರುತ್ತಾರೆ. ಇನ್ನು ಕೆಲವರು ಅಸಹ್ಯವಾಗಿ ಶಬ್ದ ಮಾಡುತ್ತಾರೆ. ಇನ್ನು ಕೆಲವರು ಸಿಂಬಳ ಸೀಟುತ್ತಾರೆ. ಮೈಥುನ ಮೇಲಿನ ಎರಡರಷ್ಟು ಮುಖ್ಯವಲ್ಲ ಎಂದು ಮೇಲುನೋಟಕ್ಕೆ ಅನ್ನಿಸಿದರೂ ಜಗತ್ತಿನ ಅತ್ಯಂತ ಮುಖ್ಯ ಕ್ರಿಯೆ ಅದು. ಪ್ರೇಮ, ಕಾಮ, ಭ್ರಮೆ, ವಿರಹ, ಕಾತರ, ತೀಟೆ, ಕನಸು ಎಲ್ಲದರೊಂದಿಗೆ ತಳಕುಹಾಕಿಕೊಂಡ ಮೈಥುನ ಹುಟ್ಟು, ಸಾವುಗಳೊಂದಿಗೆ ಬಾಳುವ ಎಲ್ಲ ಅರ್ಥಗಳೊಂದಿಗೆ ಸಾಗುತ್ತದೆ. ಈ ಮೂರರ ವಿಷಯ ನನಗೆ ಖಾಸಗಿಯಾಗಿ ಗೊತ್ತಾಗುತ್ತದೆ; ಹಾಗೆ ತಿಳಿದದ್ದಕ್ಕೆ ಓದಿದ್ದು, ಕೇಳಿದ್ದು ಸೇರಿಸುತ್ತಾ ಹೋಗುತ್ತೇನೆ.

–ಮಾರ್ಚ್ 6, 1996

ತಲೆ ಒಳಗೆ 'M' ಹುಳ ಸೇರ್ಕಂಡದೆ



ಎಚ್.ಎಲ್. ಕೇಶವಮೂರ್ತಿ

ಅಣಕ

ಸಂಖ್ಯಾಶಾಸ್ತ್ರಜ್ಞರಲ್ಲಿ ವಿಚಾರಿಸಬೇಕು. 'M' ಅಕ್ಷರದಲ್ಲಿ ಏನಾದರೂ ದೋಷ ಇದೆಯಾ? ಇದು ಚಳಿಗಾಲದಲ್ಲಿ ತಾರಕಕ್ಕೇರುತ್ತಾ ಅಂತ. ಯಾಕೆ ಅಂದರೆ ಬಾಲಠಾಕ್ರೆ, ಚಂದ್ರಶೇಖರ ಕಂಬಾರರ ಸೊಂಟ ಮುರಿರಿ ಅಂದ್ರು. ಅವರಿಗೆ ಬರುವುದೇ ಆ ತರಹದ ಭಾಷೆ. ಹುಚ್ಚುನಾಯಿ ರೀತೀಲಿ ಏನೇನೋ ಬೊಗಳ್ತಾನೇ ಇರುತ್ತೆ. ಇದು ತಿಳಿದಿದ್ದವರು ತೆಪ್ಪಗಿದ್ದರೂ ಆಗುತ್ತಿತ್ತು. ಆದರೆ ಗ್ರಹಚಾರ ನೋಡಿ. ಅವರ ವಿರುದ್ಧ ಸರದಿ ಉಪವಾಸ, ಪ್ರತಿಭಟನೆಗಳು ನಡೀತಾ ಅವೆ.

ಪ್ರತಿಭಟನೆ ಮಾಡ್ತೀವಿ ಅಂತ ದಿನಾಲೂ ಮಾಡೋಕೆ ಆಗುತ್ತಾ? ಇನ್ನೇನು ಮುಗೀತಾ ಬಂದದೆ ಅಂತಿದ್ದಂಗೆ ಶರದ್ ಪವಾರ್ ಕಪಾಳಕ್ಕೆ ಯಾವುದೋ ಸಿಂಗ್‌ಜೀ ಬಾರಿಸಿದೆ. ಮೊದಲೇ ಮಂತ್ರಿವರ್ಯರ ದವಡೆ ಊನ ಆಗಿತ್ತು, ಅದ್ನೇ ಗುರಿ ಮಾಡ್ಕಂಡು ಹೊಡೆದವ್ನೆ. ಅದ್ಯಾಕಪ್ಪ ಹಂಗೆ ಮಾಡವ್ನೆ ಅಂದ್ರೆ ಅವರು ಭ್ರಷ್ಟ ಅಂತಾನಂತೆ. ಅಯ್ಯೋ ರಾಮನೇ ಭ್ರಷ್ಟ ಆಗಿರೋದು ಅವರೊಬ್ಬರೇನಾ? ಇಡೀ ವ್ಯವಸ್ಥೆಯೇ ಹಂಗಾಗಿ ಕುಂತದೆ ಅಂದರೆ ಆಹಾರ ಬೆಲೆಗಳು ಯದ್ವಾತದ್ವಾ ಏರದಲ್ಲ ಅದ್ಕೆ ಅವರೇ ಕಾರಣ ಅಂತ ಕೂಗಾಡ್ತಾನಂತೆ. ಇದು ತರವಲ್ಲ ಕಣಯ್ಯ. ದೇಶದ ಜನವೆಲ್ಲ ನಿನ್ನಂಗೇ ಮಾಡಿದ್ರೆ ಮಂತ್ರಿವರ್ಯರ ದೇಹ ಅನ್ನೋದು ದೇಹವಾಗಿ ಉಳಿಯುತ್ತದೇನಯ್ಯ? ಅವರ ಕಷ್ಟಾನೂ ಅರ್ಥಮಾಡಿಕೋ ಮಾರಾಯ. ಅವರ ವ್ಯವಹಾರ ದೊಡ್ಡದು. ಐಸಿಸಿ ಗಿಯಿಸಿಸಿ ಅಂತ ಎಲ್ಲಾ ಕಡೇನೂ ಇರಬೇಕಾಯ್ತದೆ. ಅವೆಲ್ಲ ದುಡ್ಡು ಓಡಾಡೋ ಜಾಗಗಳಲ್ವ? ಅದರ ಮೇಲೆ ಹದ್ದಿನ ಕಣ್ಣು ಇಡಬೇಕಾಯ್ತದೆ. ಅದರ ಮೇಲೆ ನಿಗಾ ಇಡುವ ಭರದಲ್ಲಿ ಆಹಾರ ಪರಿಸ್ಥಿತಿ ಬಗ್ಗೆ ಗಮನ ಕೊಡೋಕೆ ಆಗಿಲ್ಲ, ಅಲ್ಲಲ್ಲಿ ಹಣ ಪೋಲಾಗದಂತೆ ನೋಡೋ ಭರದಲ್ಲಿ ಇಲ್ಲಿ ಮಸಿ ಹೆಚ್ಚುಕಡಿಮೆ ಆಗಿರಬಹುದು. ಅಷ್ಟಕ್ಕೆ ಹಿಂಗೆ ದನಿಗೆ ಬಾರಿಸಿದಂಗೆ ಬಾರಿಸಿಬಿಡೋದ? ಅಂತೋರು ಮಂತ್ರಿ ಪದವಿ ಬಿಟ್ಟು ಅದ್ನೇ ನೋಡ್ಕಂಡಿರ್ಲಿ ಅನ್ನುವವರೂ ಇರಬಹುದು. ಅದಕ್ಕೂ ರೆಡಿಯಾಗೇ ಅವ್ರೆ. ಆದ್ರೆ ಕಾಂಗ್ರೆಸ್‌ನೋರು ಬುಡ್ತಿಲ್ಲ, ಬುಟ್ಟುಬುಟ್ಟರೆ ಬಾಲ ಠಾಕ್ರೆ ಜೊತೆ ವ್ಯವಹಾರ ಕುದುರಿಸಾನು ಅನ್ನೋ ಭಯ ಅವಕ್ಕೆ!

ಮಂತ್ರಿ ಮಹಾಶಯರ ಕೆನ್ನೆಗೆ ತಪರಾಕಿ ಬಿತ್ತು ಅಂತಿದ್ದ ಹಾಗೆ ಗಾಂಧಿವಾದಿ ಅನ್ನಿಸಿಕೊಳ್ತಿದ್ದ ಅಣ್ಣಾ ಹಜಾರೆ ಅವರಿಗೇನಾಗದೆ... ಅವರೂ 'M' ರಾಜ್ಯದವರೆ ಅಲ್ಲವಾ. ಅವರ ತಲೆಗೆ ಹುಳ ಬುಟ್ಟಂಗೆ ಆಗೋಗದೆ. ಆ ಹುಳ ಏನು ಮಾಡದೆ ಮಂತ್ರಿ ಮಹೋದಯರಿಗೆ ಎಂತಹ ಹೊಡೆತ ಬಿದ್ದದೆ ಅನ್ನೋ ಕುತೂಹಲ ಕೆರಳಿಸಿದೆ. ಅವರಿಗೆ ಹೊಡೆಯಲಾಯಿತೇ? ಒಂದೇ ಒಂದು ಹೊಡೆತ ಹೊಡೆದನೇ? ಅಂತ ಕೇಳುವಂಗೆ ಮಾಡಿಬುಟ್ಟದೆ!

ಏನೋ ಮನುಷ್ಯನಿಗೆ ಟೈಂ ಸರಿ ಇರಲಿಲ್ಲವೇನೋ ಅದ್ಕೇ ಹಂಗಂದವರೆ ಅಂತ ತೆಪ್ಪಗೆ ಬಿದ್ದಿರಬಾರದಾ? ಕೆಲವು ಗಾಂಧಿವಾದಿಯಾದ ಗಾಂಧಿವಾದಿನೇ ಅವನು ಗಾಂಧಿವಾದಿ ಅಲ್ಲ ಅಂತಾ ಕುಂತವೆ! ಇಷ್ಟಕ್ಕೇ ನಿಲ್ಲಿಸಿಲ್ಲ, ಒಂದೇ ಒಂದು ಹೊಡೆತ ಹೊಡೆದನೆ ಅನ್ನಬೇಕಾದರೆ ಅದರೊಳಗೆ ಏನೋ ಮರ್ಮ ಅದೆ. ಇವರೇಯ ಇಷ್ಟು ಬಾರಿಸಲೇಬೇಕು ಅಂತ ಹೇಳಿಕಳಿಸವ್ರೆ. ಇಲ್ಲದಿದ್ದರೆ ಇಂತ ಪ್ರಶ್ನೆ ಹಾಕುತ್ತಿರಲಿಲ್ಲ ಅಂತೆಲ್ಲ ಬೊಗಳುತ್ತಾ ಅವೆ.

ಇಷ್ಟಕ್ಕೆ ನಿಂತಿಲ್ಲ, ಕುರಿ ಹಳ್ಳಕ್ಕೆ ಬಿದ್ದರೆ ಆಳಿಗೊಂದು ಕಲ್ಲು ಅಂತಾರಲ್ಲ ಹಂಗಾಗದೆ ಹಜಾರೆ ಅವರ ಕತೆ. ಕುಡಿತದ ಅಪಾಯದ ಬಗ್ಗೆ ಎಲ್ಲರಿಗೂ ತಿಳಿದಿರೋದೇಯ. ಕುಡಿದು ಮನೆಹಾಳು ಮಾಡಿಕೊಳ್ಳಬೇಡಿ ಮುಂಡೆ ಮಕ್ಕಳ ಅಂದ್ರೆ ಕುಡುಕರು ಕುಡ್ಯೋದ ಬುಟ್ಟುಬುಟ್ಟಾರ. ಅವರನ್ನ ಸಾರ್ವಜನಿಕವಾಗಿ ಥಳಿಸಿದರೇ ಬುದ್ಧಿ ಬರೋದು ಅನ್ನೋದು ಹಜಾರೆ ಅವರಿಗೆ ಗೊತ್ತದೆ. ಹಂಗೆ ಮಾಡಿ ಅಂತ ಕರೆ ಕೊಟ್ಟದ್ನೆ ತಪ್ಪು ಅಂತ ಕುಂತವ್ರೆ ರಾಜಕಾರಣಿಗಳು. ಅನ್ನಲಿ. ಅದಕ್ಕಲ್ಲ ಅನ್ನೋಕು ಒಂದು ಇದು ಬ್ಯಾಡವಾ. ಗಾಂಧಿ ಮನುಷ್ಯನನ್ನೇ 'ಹುಚ್ಚ' ಅಂತ ಕುಂತವಲ್ಲಾ ಇದ್ಕೇನು ಹೇಳಾನ?

ಇದ್ನೆಲ್ಲ ನೋಡ್ತ ಇದ್ರೆ ಯಾಕೋ ಮಹಾರಾಷ್ಟ್ರಕ್ಕೆ ಟೈಂ ಸರಿ ಇದ್ದಂಗೆ ಕಾಣ್ತಾ ಇಲ್ಲ.

ಸತ್ತ ಸುದ್ದಿಗೆ ತಯಾರಿ!

ಸತ್ತಮೇಲೆ ಏನಾಗಬಹುದು?

ಯಾರಿಗೂ ತಿಳಿಯದು.

ಈಗ ಅದಲ್ಲ ಪ್ರಶ್ನೆ.

ಮರಣಹೊಂದಿದ ಗಣ್ಯರ ಸುದ್ದಿ ಬಿತ್ತರಿಸುವುದು ಹೇಗೆ? ಇದು ಬಿಬಿಸಿಯನ್ನು ಕಾಡುತ್ತಿರುವ ಜ್ವಲಂತ ಸಮಸ್ಯೆ. ಈಗ ಸತ್ತ ಗಣ್ಯರು ಯಾರು? ಇನ್ನೂ ಅಂತಹವರು ಯಾರೂ ಸತ್ತಿಲ್ಲ! ಮತ್ತೆ ಈಗಲೇ ಏನು ಅವಸರ? ಎರಡನೇ ಎಲಿಜಬೆತ್ ರಾಣಿಗೆ ಈಗ 85 ವರ್ಷ. ಸಾಯಬಹುದಾದ ವಯಸ್ಸು. ನಮ್ಮ ಸುದ್ದಿ ವಾಚಕರಿಗೆ ಸಾವು, ಸಂಭ್ರಮ ಎಲ್ಲಾ ಒಂದೆ. ಇಂತಹದ್ದು ಅವರಿಗೆ ಸಮಸ್ಯೆಯೇ ಅಲ್ಲ, ಆದರೆ ಬ್ರಿಟಿಷರು ಸಂಪ್ರದಾಯವಾದಿಗಳು. ಅಂತಹ ದಿನ ಸುದ್ದಿ ವಾಚಕರ ವೇಷಭೂಷಣ, ಮಾತಿನ ವೈಖರಿ ಎಲ್ಲವೂ ಶೋಕ ಸೂಚಕ ಆಗಿರಬೇಕು. ನಿಖರತೆಗೆ ಅವರ ಒತ್ತು.

2002ರಲ್ಲಿ ಈಗಿನ ರಾಣಿಯ ತಾಯಿ ಮರಣ ಹೊಂದಿದ್ದರು. ವಾರ್ತಾ ವಾಚಕ ಮಹಾಶಯನ ಮಾತೇನೋ ಸನ್ನಿವೇಶಕ್ಕೆ ಒಪ್ಪುವಂತಿತ್ತು, ಆದರೆ ವೇಷ ಮಾತ್ರ ಅದ್ದೂರಿ ಸಮಾರಂಭದ ಉಡಿಗೆಯಂತಿತ್ತು!

ಸಂಪ್ರದಾಯ ಪ್ರಿಯರು ಬಿಬಿಸಿಗೆ ಛೀಮಾರಿ ಹಾಕಿದ್ದರು!

ಇದರ ಪುನರಾವರ್ತನೆ ಆಗಬಾರದು.

ಹೌದು, ಸಾವು ಯಾವ ವೇಳೆಯಲ್ಲಾದರ ಬರಬಹುದಲ್ಲ? ವಾರ್ತಾ ವಾಚಕರಿಗೆ ಸಂದರ್ಭೋಚ ಉಡುಪು ಸಿಗಬೇಕಲ್ಲ?

ಚಿಂತೆ ಇಲ್ಲ, ಅದನ್ನು ವಾರ್ತೆ ಓದುವ ಕೊಠಡಿಯ ಕಬೋರ್ಡಿನಲ್ಲಿಯೇ ಇಡಲಾಗುತ್ತದೆ. ಸುದ್ದಿ ಬಿತ್ತರಿಸು ಮುನ್ನ ಸುಲಭವಾಗಿ ಉಡುಪು ಬದಲಾಯಿಸಬಹುದು

ವಾರ್ತೆ ಬಿತ್ತರಿಸಿದ ನಂತರ ಟಿವಿ ಪರದೆಯ ಮೇ ಗತಿಸಿದ ಸಾಮ್ರಾಜ್ಞಿಯ ಚಿತ್ರ ಪ್ರದರ್ಶನವಾಗುವಾಗ ರಾಷ್ಟ್ರಗೀ ಬರುತ್ತಿರುತ್ತದೆ.

ಇವುಗಳೆಲ್ಲದರ ಅಣಕುಪ್ರದರ್ಶನ, ಇದೆಲ್ಲದ ವಿಡಿಯೋ ಚಿತ್ರೀಕರಣ ಮಾಡಿ ತರಬೇ ನೀಡಲಾಗಿದೆಯಂತೆ!

ನಿಖರತೆಯ ಪ್ರಾಮುಖ್ಯತೆಯನ್ನು ಬ್ರಿಟಿಷರಿಂ ಕಲಿಯಬೇಕು.

ಶೋಕಗೀತೆ

ಪಾರು ಮಾಡಯ್ಯ ಸಿಂಗ
ಪಾರು ಮಾಡಯ್ಯ
ತೊಂದರೆಗಳ ಸುಳಿಯಿಂದ
ಪಾರು ಮಾಡಯ್ಯ

ಎಂಬುದಾಗಿ ವಿಜಯಮಲ್ಯ ಸಾಹೇಬರು ಪ್ರಧಾ ಯವರನ್ನು ಕಾವ್ಯಮಯವಾಗಿ ಪ್ರಾರ್ಥಿಸಲಾಗಿ, ಅ ರೋಧಾನಾಲಾಪನೆ ಸಿಂಗಜೀ ಅವರ ಹೃದಯದ ತಲ್ಲಣವನ್ನುಂಟು ಮಾಡಿತು. ಕಾರ್ಪೋರೇಟ್ ಪ್ರಚಂಡ ಅಳಲನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಿಂಗ್‌ಫಿಷ ವಿಮಾನ ಹಾರಿಸಿದ್ದರಿಂದ ಆ ದೈತ್ಯ ಕೋಟ್ಯಂತರ ರೂಪಾಂ ನಷ್ಟ ಅನುಭವಿಸಿರುವ ವಿಷಯ ಮನವರಿಕೆ ಆಯಿತ ವಿಮಾನಯಾನವನ್ನು ಸ್ಥಗಿತಗೊಳಿಸುವುದರಿಂ ಆಗಬಹುದಾದ ಅನಾಹುತಗಳನ್ನು ಊಹಿಸಿದರ ವಿವಿಧೋದ್ದೇಶಗಳಿಗಾಗಿ ಪ್ರಯಾಣಿಸಬೇಕಾದ ಹಲವರ ತೊಂದರೆಯಾಗುತ್ತದೆ. ಭಾರತೀಯ ಉದ್ಯಮಶೀಲ ವಿದೇಶೀಯರ ಅಪಹಾಸ್ಯಕ್ಕೆ ಗುರಿಯಾಗುತ್ತದೆ. ದೇಶ ಮರ್ಯಾದೆ ಪ್ರಶ್ನೆ ಇರುವುದರಿಂದ ಸರ್ಕಾರದ ಸಹಾಯ

ಯಾಕೋ ಪಿ.ಲಂಕೇಶರು ಕಾಡುತ್ತಿದ್ದಾರೆ...

ನವೆಂಬರ್ 30, 2011ರ ಸಂಚಿಕೆ ಚೆನ್ನಾಗಿತ್ತು, ಆದರಲ್ಲೂ ಕಿಂಗ್‌ಫಿಷರ್ ಏರ್‌ಲೈನ್ಸ್ ಕುರಿತು ಗೌರಿ ಲಂಕೇಶ್ ಮತ್ತು ಮಧುಕರ್ ಶೆಟ್ಟಿ ಸುತ್ತಲಿನ ವಿವಾದದ ಬಗ್ಗೆ ಶಿವಸುಂದರ್ ಅವರ ಬರಹಗಳು ಮೆಚ್ಚುವಂತಹದ್ದಾಗಿದ್ದವು. ನಮ್ಮ ಮುಖ್ಯವಾಹಿನಿಗಳು ಈ ಎರಡು ವಿಷಯಗಳನ್ನು ನಿರ್ಲಕ್ಷಿಸಿದ್ದವು ಅಥವಾ ಕಿಂಗ್ ಫಿಷರ್ ಮಾಲೀಕ ವಿಜಯ್ ಮಲ್ಯನ ಪರವಾಗಿ ವರದಿ ಮಾಡಿದ್ದವು.

ಮಲ್ಯ ಮತ್ತು ಅಂಬಾನಿ ತರಹದ ವ್ಯಕ್ತಿಗಳು ಕಷ್ಟಗಳನ್ನು ಎದುರಿಸಿದಾಗ ನಮ್ಮ ಪ್ರಧಾನ ಮಂತ್ರಿಗಳಿಗೂ ಚಿಂತೆ ಆಗುವುದು ನಮ್ಮ ದುರಾದೃಷ್ಟ. ನಮ್ಮ ದೇಶದ ಶೇ. 80ಕ್ಕಿಂತಲೂ ಹೆಚ್ಚು ಜನ ಬೆಲೆ ಏರಿಕೆಯಿಂದಾಗಿ, ಗಗನಕ್ಕೇರುತ್ತಿರುವ ಪೆಟ್ರೋಲ್ ಬೆಲೆಯಿಂದಾಗಿ, ಭ್ರಷ್ಟಾಚಾರದಿಂದಾಗಿ ಪ್ರತಿನಿತ್ಯ ನರಳುತ್ತಿದ್ದಾರೆ; ಸಾವಿರಾರು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ; ಎಸ್‌ಇಝೆಡ್‌ಗೆಂದೋ, ಎಂಎನ್‌ಸಿಗೆಂದೂ ಲಕ್ಷಾಂತರ ಆದಿವಾಸಿಗಳು, ಬಡವರು, ಗ್ರಾಮೀಣ ಪ್ರದೇಶದಲ್ಲಿರುವವರು ಎತ್ತಂಗಡಿ ಆಗುತ್ತಿದ್ದಾರೆ... ಆದರೆ ನಮ್ಮ ಸರ್ಕಾರಗಳಾಗಲಿ, ಮಾಧ್ಯಮಗಳಾಗಲಿ ಇದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳುವುದಿಲ್ಲ, ಅವರೆಲ್ಲರ ಈ ನಿಷ್ಕ್ರಿಯತೆ ನಮ್ಮಂತಹವರಲ್ಲಿ ಅಸಹ್ಯ ಹುಟ್ಟಿಸುತ್ತದೆ.

ಒಂದೇ ಒಂದು ನೆಮ್ಮದಿಯ ಸಂಗತಿ ಯಾವುದೆಂದರೆ ಕಳೆದ ಮೂರು ವರ್ಷಗಳಲ್ಲಿ ಲೋಕಾಯುಕ್ತ ಸಂಸ್ಥೆಯಿಂದಾಗಿ ಹಲವು ಭ್ರಷ್ಟರ ವಿರುದ್ಧ ದೂರುಗಳು ದಾಖಲಾಗಿದ್ದು, ಆದರೆ ಇವತ್ತು ಆ ಲೋಕಾಯುಕ್ತ ಸಂಸ್ಥೆಗೆ ಮಸಿ ಬಳಿಯಲು ವಿಶ್ವೇಶ್ವರ ಭಟ್ಟರಂತಹವರು ಮಧುಕರ ಶೆಟ್ಟಿ ಅವರನ್ನು ಬಳಸಿಕೊಳ್ಳುತ್ತಿದ್ದಾರೆ.

- ಡಾ. ಅವಿನಾಶ್ ಶೆಟ್ಟಿ, ಮಣಿಪಾಲ್

ಮೊನ್ನೆ ಹಿರಿಯರೊಬ್ಬರ ಜೊತೆ ಮಾತನಾಡುತ್ತಾ "ಕರ್ನಾಟಕ ಲಾಲೂ ಪ್ರಸಾದನ ಬಿಹಾರವಾಗುತ್ತಿದೆ" ಎಂದೆ. ಅದಕ್ಕವರು ಕೋಪಗೊಂಡು "ಇಲ್ಲ, ಬಿಹಾರದೊಂದಿಗೆ ಹೋಲಿಸಬೇಡ. ನಮ್ಮಲ್ಲಿ ಮಾಧ್ಯಮಗಳು ಸಾರಾಸಗಟಾಗಿ ಮಾರಾಟವಾಗಿರುವಂತೆ ಅಲ್ಲಿನ ಮಾಧ್ಯಮಗಳು ಮಾರಾಟವಾಗಿಲ್ಲ" ಎಂದರು. ಇತ್ತೀಚೆಗೆ ಸುವರ್ಣ ಚಾನೆಲ್ ನಲ್ಲಿ ಯಡಿಯೂರಪ್ಪನ ಸಂದರ್ಶನ ನೋಡಿದಾಗ ಹಿರಿಯರ ಮಾತು ನಿಜವೆನ್ನಿಸಿತು.

ಮಾಧ್ಯಮದಲ್ಲೂ ಇವತ್ತು "ಆಪರೇಷನ್ 'ಕ'ಮಲ" ನಡೆದಿದೆ. ಇಂತಹ ವಾತಾವರಣದಲ್ಲಿ ಆದರ್ಶ ಮತ್ತು ಆಶಯಗಳನ್ನು ಹೊಂದಿರುವುದೇ ಕಷ್ಟಕರವಾಗಿದೆ. ಇವತ್ತು ಈ ವ್ಯವಸ್ಥೆಗೊಂದು ಪರ್ಯಾಯ ಸಾಧ್ಯ ಮತ್ತು ಜನ ಕೂಡ ಅದನ್ನು ಸ್ವೀಕರಿಸುತ್ತಾರೆ ಎಂಬುದನ್ನು ತೋರಿಸಬೇಕಿದೆ.

ಯಾಕೋ ಪಿ.ಲಂಕೇಶರು ಕಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಿಜಕ್ಕೂ ನಾವೆಲ್ಲ ಏನನ್ನು ಮಾಡಬೇಕು? ಆದರ್ಶಗಳನ್ನು ಬಿಡಲಾರೆ ಮತ್ತು ಈ ಸಂದರ್ಭದಲ್ಲಿ ಏನನ್ನೂ ಮಾಡಲಾರೆ ಎಂಬ ಫ್ರಸ್ಟ್ರೇಷನ್ ಮತ್ತು ಹತಾಶೆ ನನ್ನೊಳಗೆ ಬೆಳೆಯುತ್ತಾ ಹೋಗುತ್ತಿದೆ.

- ಯುವ ಪತ್ರಕರ್ತ, ಬೆಂಗಳೂರು

ರಾಜ್ಯದಲ್ಲಿ ನಡೆದ ಅಕ್ರಮ ಗಣಿಗಾರಿಕೆ ಮತ್ತು ರಾಜಕೀಯ ಭ್ರಷ್ಟಾಚಾರವನ್ನು ಬಯಲಿಗೆಳೆದು ರಾಜಕಾರಣಿಗಳನ್ನು ಮತ್ತು ಅಧಿಕಾರಿಗಳನ್ನು ಹೆಡೆಮುರಿ ಕಟ್ಟುವಲ್ಲಿ ಲೋಕಾಯುಕ್ತರು ಪ್ರಾಮಾಣಿಕವಾಗಿ ದುಡಿದರು. ಆದರೆ ಲೋಕಾಯುಕ್ತದ ಇಂತಹ ಶ್ರಮಕ್ಕೆ ಮಸಿ ಬಳಿಯುವಂತಹ ಕೆಲಸವನ್ನು 'ವಿಜಯ ಕರ್ನಾಟಕ'ದಿಂದ ಗೇಟ್ ಪಾಸ್ ಪಡೆದು ಈಗ 'ಕನ್ನಡ ಪ್ರಭ'ಕ್ಕೆ ಗೋರಿ ತೋಡುತ್ತಿರುವ ಚೆಡ್ಡಿ ಪ್ರವರ್ತಕ ವಿಶ್ವೇಶ್ವರ ಭಟ್ಟ ಮಾಡುತ್ತಿದ್ದಾನೆ.

ಪ್ರಾಮಾಣಿಕರನ್ನು ಗುರುತಿಸುವ, ಸಮಾಜದಲ್ಲಿ ನಡೆಯುವ ತಪ್ಪುಗಳನ್ನು ತಿದ್ದುವಂತಹ ಗುರುತರ ಜವಾಬ್ದಾರಿಯನ್ನು ಹೊಂದಿರುವ ಪತ್ರಕರ್ತರೇ ಇಂತಹ ಕೆಲಸ ಮಾಡುತ್ತಾರೆ ಎಂದರೆ ಇನ್ನು ಅಧಿಕಾರಿಗಳನ್ನಾಗಲೀ, ರಾಜಕಾರಣಿಗಳನ್ನಾಗಲಿ 'ನೀವು ಶುದ್ಧಹಸ್ತರಾಗಿರಿ' ಎಂದು ಹೇಳುವುದು ತುಸು ಕಷ್ಟವೇ ಸರಿ.

ಒಂದೆಡೆ ಎಲ್. ಕೆ. ಅಡ್ವಾಣಿಯ ಜನಚೇತನಾ ಯಾತ್ರೆಯನ್ನು ಬೆಂಬಲಿಸುತ್ತಾ ಇನ್ನೊಂದೆಡೆ ರೆಡ್ಡಿಗಳು ಕೊಟ್ಟ ಕಪ್ಪ ಕಾಣಿಕೆಯನ್ನು ಪಡೆದು ತಮ್ಮ ಆರ್ಥಿಕ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡಿರುವ ಇಂತಹ ಪತ್ರಕರ್ತರು ಅದು ಯಾವ ನೈತಿಕತೆಯಿಂದ ಸಂಪಾದಕೀಯಗಳನ್ನು ಬರೆಯುತ್ತಾರೋ, ದೇವರೇ ಬಲ್ಲ.

ಇತ್ತೀಚಿನತನಕ ಯಡಿಯೂರಪ್ಪನನ್ನು ಅಧಿಕಾರದಿಂದ ಕೆಳಗಿಳಿಸಲು ಮಸಲತ್ತು ಮಾಡಿದ ಮಾಣಿಗಳೇ ಇಂದು ಯಡ್ಡಿಯ ಪರವಾಗಿ ವರದಿ ಬರೆಯುವುದನ್ನು ನೋಡಿದರೆ ಕಳ್ಳರ ಜೊತೆ ಕಳ್ಳರು ಸಂತೆಗೆ ಹೊರಟಂತೆ ಕಾಣುತ್ತದೆ. ಆದಷ್ಟು ಬೇಗ ಇವರೆಲ್ಲರನ್ನು ಪರಪ್ಪನ ಅಗ್ರಹಾರಕ್ಕೋ, ಚಂಚಲಗೂಡದ ಗೂಡಿಗೋ ಕಳುಹಿಸಬೇಕಿದೆ.

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ಏನೇ ಆಗಲಿ, ನಿಜ ನಿಜವೇ ಸುಳ್ಳು ಸುಳ್ಳೆ. ನೀವಾದರೂ ಸಂತೋಷ್ ಹೆಗಡೆಯ ಬೆಂಬಲಕ್ಕೆ ನಿಂತಿದ್ದು ಸಮಾಧಾನ ತಂದಿತು. ಧನ್ಯವಾದಗಳು.

- ದಿ. ಮಂಜಣ್ಣ, ಸೊರಬ

ಇತಿಹಾಸದ ಭೂತ ಆ ಕಾಲದಲ್ಲಿ ದೌರ್ಜನ್ಯವೆಸಗಿದವರಿಗೆ, ನಕಲಿ ಶೂರರಂತೆ ಮೆರೆದವರಿಗೆ ಈಗ ವರ್ತಮಾನದಲ್ಲಿ ಮೈಯಲ್ಲಿ ನಡುಕ ಹುಟ್ಟಿಸುತ್ತಿದೆ. ಈ ನೆಲದ ನ್ಯಾಯ ಎಂದಿಗೂ ನ್ಯಾಯದ, ಸತ್ಯದ ಪರವೇ. ಇನ್ನು ಮೂರು ತಿಂಗಳಿಗೆ ಸರಿಯಾಗಿ ಗುಜರಾತ್ ನರಮೇಧಕ್ಕೆ, ಗೋಧ್ರಾ ದುರಂತಕ್ಕೆ 10 ವರ್ಷ ತುಂಬುತ್ತದೆ. ನ್ಯಾಯ ದೇವತೆ ಪದೇ ಪದೇ ಅನೇಕ ಒತ್ತಡಗಳ ಮಧ್ಯೆಯೂ ಆ ಹತ್ಯಾಕಾಂಡದ ರೂವಾರಿ ನರೇಂದ್ರ ಮೋದಿಯ ಪರ ನಿಲ್ಲಲು ನಿರಾಕರಿಸಿದ್ದಾಳೆ.

ಇತ್ತೀಚೆಗೆ ನ್ಯಾಯಾಲಯ ಗುಜರಾತ್‌ನ ಸರ್ದಾರ್‌ಪುರದಲ್ಲಿ ನಡೆದ ಮುಸ್ಲಿಂರ ಹತ್ಯೆಯಲ್ಲಿ 31 ಜನರನ್ನು ದೋಷಿಗಳನ್ನಾಗಿಸಿ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಇದೇ ಸಮಯಕ್ಕೆ ಅಲ್ಲಿನ ಹೈಕೋರ್ಟ್ ಕೂಡ ಇಶ್ರಾತ್ ಜಹಾನ್ ಹಾಗೂ ಅವಳ ಇಬ್ಬರು ಸಹಚರರ ಎನ್‌ಕೌಂಟರನ್ನು ನಕಲಿಯೆಂದೂ, ಬದಲಿಗೆ ಅದು ನರೇಂದ್ರ ಮೋದಿಯ ಪೋಲೀಸರ ಪೂರ್ವ ನಿಯೋಜಿತ ಹತ್ಯೆ ಎಂದೂ ತೀರ್ಪಿತ್ತಿದೆ. ಆ ಮೂಲಕ ದುರಹಂಕಾರದ, ಒಣ ಪ್ರತಿಷ್ಠೆಯ, ಅಲ್ಪಸಂಖ್ಯಾತ ದ್ವೇಷಿ ನರೇಂದ್ರ ಮೋದಿಯನ್ನು ನ್ಯಾಯಾಲಯ ಛಾಸಿಗೊಳಿಸಿದೆ.

ಒಂದು ಕಾಲಕ್ಕೆ ತನ್ನ ಆಕರ್ಷಕ ಮಾತಿನ ಶೈಲಿಯನ್ನೇ ಬಂಡವಾಳ ಮಾಡಿಕೊಂಡು "ಮಿಯ್ಯಾ ಮುಶ್ರಫ್, ಮೆಡಮ್ ಮೇರಿಅಮ್, ಜೇಮ್ಸ್ ಮೈಕೆಲ್ ಲಿಂಗ್ಡೋ" ಎಂದು ಈ ಭಾಷಣ ಬಿಗಿಯುತ್ತಾ, ಜನಾಂಗೀಯ ದ್ವೇಷ ಹುಟ್ಟುಹಾಕುತ್ತಿದ್ದ ಸಾವಿರಾರು ಮುಗ್ಧರ ಸಾವಿಗೆ ಕಾರಣನಾದವನು ಈ ಮೋದಿ ಮತ್ತು ಆತನನ್ನು ರೂಪಿಸಿರುವ ಆರೆಸ್ಸೆಸ್ ಎಂಬ ಸಂಘ ಪರಿವಾರ.

ಈಗ ಗುಲ್ಬರ್ಗಾ ಸೊಸೈಟಿಯಲ್ಲಿ ನಡೆದ ಎಶಾನ್ ಜಾಫ್ರಿ ಹಾಗೂ 6 ಮುಸ್ಲಿಂಮರ ಹತ್ಯಾಕಾಂಡದ ವಿಚಾರಣೆ ಕೂಡ ಅತ್ಯಂತ ಕುತೂಹಲರ ಘಟ್ಟದಲ್ಲಿದೆ. ಕಳೆದ ಹತ್ತು ವರ್ಷಗಳಲ್ಲಿ ಮೋದಿಯ ಸರ್ವಾಧಿಕಾರ ಆಡಳಿತದಲ್ಲಿ ಬೆನ್ನು ಮೂಳೆ ಮುರಿದುಕೊಂಡಿದ್ದ, ಧ್ವನಿ ಕಳೆದುಕೊಂಡಿದ



ನೀಡುವುದು ಸಂಗತವಾಗಿದೆ ಎಂಬ ಅಭಿಪ್ರಾಯಕ್ಕೆ ಬಂದರು.

ಹಲವರು ಮನಮೋಹನ ಸಿಂಗ್ ಅವರ ನಿಲುವಿನ ವಿರುದ್ಧ ದನಿ ಎತ್ತುತ್ತಿದ್ದಾರೆ. ಜಾಗತೀಕರಣ ಯುಗದಲ್ಲಿ ಶಕ್ತಿ ಇದ್ದವನದ್ದೇ ಸಾಮ್ರಾಜ್ಯ. ನಷ್ಟ ಆದಾಗ ಸರ್ಕಾರದ ಸಹಾಯ ಹಸ್ತ ಬೇಡುವವರು ಲಾಭ ಬಂದಾಗ ಹಂಚಿಕೊಳ್ಳಲು ಸಿದ್ಧರಿದ್ದಾರಾ? ಎಂದು ಪ್ರಶ್ನಿಸುತ್ತಿದ್ದಾರೆ. ಕಷ್ಟ ಹಂಚಿಕೊಳ್ಳಿ ಸುಖ ನನಗೊಬ್ಬನಿಗೇ ಇರಲಿ ಅನ್ನುವ ಅರಣ್ಯ ನ್ಯಾಯವಾ ಇವರದ್ದು ಎಂದೂ ಕೇಳುತ್ತಿದ್ದಾರೆ.

ಸ್ವಲ್ಪ ಸಮಾಧಾನವಾಗಿ ಯೋಚಿಸಿ ಎಂದು ನನ್ನ ನಮ್ರವಾದ ವಿನಂತಿ. ಈ ಸಾಲದ ದೊರೆಗೆ ಇದು ಒಂದೇ ವ್ಯವಹಾರವಲ್ಲ, ಹೆಂಡದ ಸಾಮ್ರಾಜ್ಯವೇ ಅವರ ಕೈಲಿದೆ. ಒಂದು ವೇಳೆ ಹೆಂಡ ತಯಾರು ಮಾಡುವುದಿಲ್ಲ ಅಂದರೆ ಅಥವಾ ಆ ಬಾಬತ್ತಿನಲ್ಲೂ ನಷ್ಟ ಅಂತ ಆದರೆ... ಆಗುವ ಅನಾನುಕೂಲ ಊಹಿಸಿಕೊಳ್ಳಿ. ಮದ್ಯದ ಅಂಗಡಿಗಳಿಲ್ಲ; ಬಾರ್‌ಗಳು ಬಂದ್; ಕ್ಲಬ್‌ಗಳು ಕದಮುಚ್ಚುತ್ತವೆ. ಅಲ್ಲೆಲ್ಲ ಕುಡೀತಿರೋ ಲಕ್ಷಾಂತರ ಮಂದಿ ಹೊಟ್ಟೆ ಮೇಲೆ ಹೊಡೆದಂತೆ ಆಗೋಲ್ಲವೇ? ಕೋಟ್ಯಂತರ ಮದ್ಯ ವ್ಯಸನಿಗಳಿಗೆ ಮಾನಸಿಕ ಹಿಂಸೆ ಆಗುವುದಿಲ್ಲವೇ? ಇವೆಲ್ಲ ಆಗಬೇಕು ಅಂತೀರಾ?

ಇನ್ನು ಕ್ರಿಕೆಟ್ಟು ಅಂದರೆ ಭಾರತೀಯರ ಧರ್ಮ ಎಂದು ಇಡೀ ಲೋಕಕ್ಕೆ ತಿಳಿದಿದೆ. 20-20 ಆಟ ಅಂದ್ರೆ ದೀಪಾವಳಿ ಇದ್ದ ಹಾಗೆ. ರಾಯಲ್ ಚಾಲೆಂಜ್ ಟೀಮೇ ಇರಲ್ಲ ಅಂದ್ರೆ ಆದನ್ನೇ ನಿಲ್ಲಿಸಬೇಕಾಗುತ್ತೆ. ಹೀಗೆ ಮಾಡಿ ಕೋಟ್ಯಂತರ ಕ್ರಿಕೆಟ್ ಪ್ರೇಮಿಗಳಿಗೆ ನಿರಾಸೆ ಮಾಡಬಾರದು. ಐಪಿಎಲ್ ಇರಲೇಬೇಕು, ರಾಯಲ್ ಚಾಲೆಂಜರ್ಸ್ ಆಡಬೇಕು. ಕೋಟ್ಯಂತರ ಜನರಿಗೆ ನೆಮ್ಮದಿ ನೀಡಲೇಬೇಕು! ಒಂದು ವೇಳೆ ವಿಮಾನಯಾನ ಪ್ರಾರಂಭಿಸಿ ನಷ್ಟ ಆಗಿದೆ, ಐಪಿಎಲ್‌ನಲ್ಲಿ ಭಾಗವಹಿಸಲು ಸಾಧ್ಯ ಇಲ್ಲ ಅಂದು ಬಿಟ್ಟರೆ ಏನು ಗತಿ!

ಅದೆಲ್ಲ ಆಯಿತಲ್ಲಾ, ಕಿಂಗ್‌ಫಿಷರ್ ವಿಮಾನಕ್ಕೆ ಬರೋಣ. ಅದು ನಿಲ್ಲುವುದರಿಂದ ಅಲ್ಲಿನ ಸಿಬ್ಬಂದಿಗೆ ಆಗಬಹುದಾದ ಸಂಕಟ ಊಹಿಸಿಯೇ ಸಿಂಗ್ ಅವರ ಕರುಳು ಚುರುಕ್ ಅಂದಿದೆ. ಕೋಟ್ಯಂತರ ಬಡ ನಿರುದ್ಯೋಗಿಗಳ ಕುರಿತೂ ಹೀಗೆ ಯೋಚಿಸುತ್ತಾರಾ ಎನ್ನುವವರಿದ್ದಾರೆ. ಇವರಂತಹವರು ಕೋಟ್ಯಂತರ ಮಂದಿ ಇದ್ದಾರೆ ನಿಜ. ವ್ಯತ್ಯಾಸ ಗಮನಿಸಿ. ಇವರಾದರೆ ಕಷ್ಟಾನೇ ಹಾಸಿ ಹೊದೆಯೋರು. ಅದಕ್ಕೆ ಹೊಂದಿಕೊಂಡಿರುತ್ತಾರೆ. ಕಿಂಗ್‌ಫಿಷರ್ ಉದ್ಯೋಗಿಗಳು ಹಾಗಲ್ಲವಲ್ಲ, ಕಷ್ಟಾನೆ ಕಾಣದ ಮಂದಿ ಅವರು. ಏಕ್‌ಧಂ ಕಷ್ಟ ಬಂದರೆ ಏನೇನು ಅನಾಹುತ ಆಗುತ್ತದೆಯೋ ಏನೋ. ಇದನ್ನೆಲ್ಲಾ ಅಳೆದು ಸುರಿದೇ ಆರ್ಥಿಕ ತಜ್ಞ ಪ್ರಧಾನಿ ಇಂತಹ ನಿರ್ಧಾರಕ್ಕೆ ಬಂದಿರೋದು ಸರಿಯಾಗೇ ಇದೆ ಅಲ್ಲವಾ....! ಹ್ಞಿಂ

ನಟ ದರ್ಶನ್ ಮತ್ತು ವಿಜಯಲಕ್ಷ್ಮಿ ದಂಪತಿಗಳ ಬೀದಿ ಜಗಳದ ಸಂದರ್ಭದಲ್ಲಿ ನಟಿ ನಿಖಿತಾಳ ಹೆಸರು ಕೇಳಿಬಂದದ್ದು ಎಲ್ಲರಿಗೂ ಗೊತ್ತೇ ಇದೆ. ಆ ಸಂದರ್ಭದಲ್ಲಿ ಆಕೆ ಇನ್ನು ಮುಂದೆ ಕನ್ನಡ ಸಿನಿಮಾಗಳಲ್ಲಿ ನಟಿಸಬಾರದೆಂದು ನಿರ್ಬಂಧ ಹೇರಿ ಅಪಹಾಸ್ಯಕ್ಕೀಡಾಗಿದ್ದ ನಿರ್ಮಾಪಕರ ಸಂಘದ ಅಧ್ಯಕ್ಷ ಮುನಿರತ್ನಂ ನಾಯ್ಡು ಅವರ ಬಾಲಿಷ ವರ್ತನೆಯನ್ನೂ ಯಾರೂ ಮರೆತಿಲ್ಲ. ಈಗ ಅದೆಲ್ಲಕ್ಕಿಂತ ಮಿಗಿಲಾದ ಇನ್ನೊಂದು ತಮಾಷೆ ಗಾಂಧಿನಗರ ಎಂಬ ಮಾಯಾಜಗತ್ತಿನಲ್ಲಿ ನಡೆಯುತ್ತಿದೆ.

ನಟಿ ನಿಖಿತಾಳಿಗೆ ಈಗ ಗಾಂಧಿನಗರದಲ್ಲಿ ಎಲ್ಲಿಲ್ಲದ ಡಿಮಾಂಡ್ ಬಂದುಬಿಟ್ಟಿದೆ. ಒಂದೆಡೆ ನಾಯಕಿ ಪಾತ್ರ, ಮತ್ತೊಂದೆಡೆ ಐಟಂ ಗರ್ಲ್, ಇನ್ನೊಂದೆಡೆ ಸತಿ ಸಾವಿತ್ರಿಯಂತಹ ಗೌರಮ್ಮನ ಪಾತ್ರ... ಹೀಗೆ ನಿಖಿತಾಳ ಮೇಲೆ ವಿವಿಧ ರೀತಿಯ ಸಿನಿಮಾಗಳಲ್ಲಿ ನಟಿಸುವ ಆಫರ್‌ಗಳ ಸುರಿಮಳೆಯಾಗುತ್ತಿದೆ. ಅಂದು ವಿವಿಧ ರೀತಿಯ ಆರೋಪಗಳ ಸುರಿಮಳೆಯನ್ನೂ ಈ ಹುಡುಗಿಯ ಮೇಲೆ ಮಾಡಿದ್ದವರೇ ಇಂದು ಆಕೆಗೆ ತಮ್ಮ ಚಿತ್ರದಲ್ಲಿ ನಟಿಸಲು ಆಹ್ವಾನ ನೀಡುತ್ತಿದ್ದಾರೆ.


ಅಂದು ಮುನಿರತ್ನಂ ನಾಯ್ಡು ಅವರು ನಿಖಿತಾಳಿಗೆ ಬರೆದ ಕ್ಷಮಾಪಣಾ ಪತ್ರದ ಮೊದಲ ಪ್ಯಾರಾವನ್ನು ಇಲ್ಲಿ ನೀಡಿದ್ದೇವೆ:

"ಕನ್ನಡದ ಉತ್ತಮ ಸಂಪ್ರದಾಯಸ್ಥ ಸುಸಂಸ್ಕೃತ, ಗೌರವಸ್ಥ ಸಾದು, ಸದ್ಗುಣ ಸಂಪನ್ನೆ, ಕಳಂಕರಹಿತೆ, ಹಾಲಿನಂತ ಮನಸ್ಸುಳ್ಳವರ ಸಮಾನರಾದ ಭಾರತದ ಬಹುಭಾಷಾ ನಟಿ ನಿಖಿತಾರವರು ಕನ್ನಡ ಚಿತ್ರಗಳಲ್ಲಿ ಮೂರು ವರ್ಷ ನಟಿಸಬಾರದು ಎಂದು ಅಂದದ್ದು ನಮ್ಮ ಮೂರ್ಖತನ. ಇಷ್ಟು ಒಳ್ಳೆ ಹೆಣ್ಣು ಮಗಳಿಗೆ ನಿಷೇಧ ಹೇರಿರುವುದು ತಪ್ಪು ಎಂಬುದು ನಮಗೆ ಅರಿವಾಗಿದೆ."

ಇಂತಹ 'ಸಾಂಪ್ರದಾಯಿಕ' 'ಸುಸಂಸ್ಕೃತ' ಪತ್ರ ಬರೆದ ಮುನಿಯವರು ಇವತ್ತು ಆಕೆಗೆ ತಮ್ಮ ಚಿತ್ರದಲ್ಲಿ ಐಟಂ ಸಾಂಗ್ ಪಾತ್ರ ನೀಡಿರುವುದು ವಿಚಿತ್ರವಾಗಿ ಕಂಡರೂ ಸತ್ಯ. ಮುನಿಯ ಈ ವರ್ತನೆಯನ್ನು ನೋಡಿ ಗಾಂಧಿನಗರದ ಇತರೆ ನಿರ್ಮಾಪಕರೆಲ್ಲ ಬೆಚ್ಚಿಬಿದ್ದಿದ್ದಾರೆ.

ನಾಯಕನಟ ಉಪೇಂದ್ರ ಮತ್ತು ನಾಯಕಿ ರಮ್ಯಾ ನಟಿಸುತ್ತಿರುವ ಈ ಚಿತ್ರದಲ್ಲಿ ಐಟಂ ಸಾಂಗ್‌ನಲ್ಲಿ ಕುಣಿಯಲು ಮುನಿಯವರ ಪ್ರೊಡಕ್ಷನ್ ಮ್ಯಾನೇಜರ್ ನಿಖಿತಾಳಿಗೆ ಫೋನ್ ಮಾಡಿ ಕೇಳಿದ್ದಾರೆ. ಆದರೆ ಈ ಪಾತ್ರವನ್ನು ಮಾಡಬೇಕೇ, ಬೇಡವೇ ಎಂಬ ಬಗ್ಗೆ ಇನ್ನೂ ನಿಖಿತಾ ಅಂತಿಮ ನಿರ್ಣಯ ಕೈಗೊಂಡಿಲ್ಲ.

ಈ ಮಧ್ಯೆ ನವರಸನಾಯಕ ಜಗ್ಗೇಶ್ ಈ ಹುಡುಗಿಯ ಜೊತೆ ನೇರ ಸಂಪರ್ಕವನ್ನು ಸಾಧಿಸಿ ತಮ್ಮ ಚಿತ್ರದಲ್ಲಿ ನಾಯಕಿಯಾಗಿ ನಟಿಸುವಂತೆ ಆಹ್ವಾನ ನೀಡಿದ್ದಾರೆ. ಒಂದು ಮೂಲದ ಪ್ರಕಾರ ನಿರ್ಮಾಪಕರ ಸಂಘ ಆಕೆಯ ವಿರುದ್ಧ



ನಿಖಿತಾಗೆ ಫುಲ್ ಡಿಮ್ಯಾಂಡು!

ನಿರ್ಬಂಧ ಹೇರಿದಾಗ "ಅದನ್ನು ಪ್ರಬಲವಾಗಿ ವಿರೋಧಿಸಿದವನು ನಾನೇ" ಎಂದು ಜಗ್ಗೇಶ್ ನಿಖಿತಾಳಿಗೆ ಹೇಳಿದ್ದಾರಂತೆ. ಇದು ಜಗ್ಗೇಶ್ ವಿರೋಧಿಗಳು ಹಬ್ಬಿಸಿರುವ ಗಾಳಿ ಸುದ್ದಿಯೋ, ಅಥವಾ ನಿಜವಾದ ವಿಷಯವೋ ಎಂಬುದು ಗೊತ್ತಿಲ್ಲ. ಆದರೆ ಜಗ್ಗೇಶ್ ತಮಗೆ ನಾಯಕಿ ಪಾತ್ರದಲ್ಲಿ ನಟಿಸಲು ಆಹ್ವಾನ ನೀಡಿರುವುದು ನಿಜ ಎಂದು ನಿಖಿತಾ ಹೇಳಿದ್ದಾಳೆ.

ಅಷ್ಟೇ ಅಲ್ಲದೆ ಆವತ್ತಿನಿಂದ ಸದಾ ನಿಖಿತಾಳ ಪರವಾಗಿ ತನ್ನ ವಾದ ಮತ್ತು ಒಲವನ್ನು ವ್ಯಕ್ತಪಡಿಸುತ್ತ ಬಂದಿರುವ ಕ್ರೇಜಿ ಸ್ಟಾರ್ ರವಿಚಂದ್ರನ್ ಕೂಡ ತಮ್ಮ ಮುಂದಿನ ಚಿತ್ರದಲ್ಲಿ ನಿಖಿತಾಳಿಗಾಗಿ ಒಂದು ಒಳ್ಳೆಯ ಪಾತ್ರವನ್ನು ಕಾದಿರಿಸಿಟ್ಟಿದ್ದಾರಂತೆ.

ನಿರ್ಬಂಧದ ಭೀತಿಯಲ್ಲಿದ್ದ ನಿಖಿತಾ ಈಗ ಗಾಂಧಿನಗರದಿಂದ ಸಾಲುಸಾಲಾಗಿ ಬರುತ್ತಿರುವ ಈ ಆಫರ್‌ಗಳಿಂದ ರೋಮಾಂಚನಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ನಿಖಿತಾಳೊಂದಿಗೆ ನಡೆಸಿದ ಮಾತುಕತೆ ಹೀಗಿತ್ತು:

ಪ್ರಶ್ನೆ: ಈ ಹೊಸ ಸಿನಿಮಾ ಆಫರ್‌ಗಳಿಂದ ಹಳೆ ಸಿನಿಮಾದ ಕಮಿಟ್‌ಮೆಂಟನ್ನು ಮುಗಿಸುವುದು ದೊಡ್ಡ ಸವಾಲಿನ ಮತ್ತು ಮುಜುಗರದ ಕೆಲಸವಲ್ಲವೇ?

ನಿಖಿತಾ: 'ಸಂಗೊಳ್ಳಿ ರಾಯಣ್ಣ' ಚಿತ್ರಕ್ಕಾಗಿ ನಾನು ಹದಿನೈದು ದಿನಗಳ ಕಾಲ ಡಿಸೆಂಬರ್‌ನಲ್ಲಿ ಶೂಟಿಂಗ್‌ಗೆ ಕರ್ನಾಟಕಕ್ಕೆ ಬರಬೇಕಾಗಿದೆ ನಿಜ. ಆದರೆ ಅದಕ್ಕಾಗಿ ನಾನು ಮುಜುಗರ ಯಾಕೆ ಪಡಬೇಕು? ನಾನು 'ಸಂಗೊಳ್ಳಿ ರಾಯಣ್ಣ' ಚಿತ್ರದ ಕಥೆಯನ್ನು ತುಂಬಾ ಇಷ್ಟ ಪಟ್ಟಿದ್ದೆ, ಅದರ ಮೇಕಿಂಗ್ ಕೂಡ ಭಾರಿ ಜೋರಾಗಿಯೇ ನಡೆಯುತ್ತಿದೆ. ಇಷ್ಟಕ್ಕೂ ಆ ಚಿತ್ರವನ್ನು ಸಂಪೂರ್ಣ ಮಾಡಬೇಕಾಗಿರುವುದು ನನ್ನ ಕರ್ತವ್ಯ. ನಿರ್ದೇಶಕರು ಡೇಟ್ಸ್ ಕೇಳಿದ್ದಾರೆ. ಸೆಟ್ಟಿನಲ್ಲಿ ಅವರು ಏನು ಹೇಳುತ್ತಾರೋ ಅದನ್ನು ಮಾಡುತ್ತೇನೆ. ಹಿಂದೆಯೂ ಅದನ್ನೇ ಮಾಡಿದ್ದೆ.

* ದರ್ಶನ್ ಸಂಸಾರದಲ್ಲಿ ನೀವು ಹುಳಿ ಹಿಂಡಿದ್ದೀರಿ ಎಂಬ ಆರೋಪ ಆತನ ಅಭಿಮಾನಿಗಳನ್ನು ಕೆರಳಿಸಿದೆ. ಅದರಿಂದ ನಿಮಗೆ ತೊಂದರೆಯಾಗುವುದಿಲ್ಲವೇ?

– ಮೊನ್ನೆ ಒಂದು ದಿನ 'ಗೌರಿಪುತ್ರ' ಎಂಬ ಚಿತ್ರಕ್ಕಾಗಿ ತುಮಕೂರಿನಲ್ಲಿ ನಾನು ಶೂಟಿಂಗ್‌ನಲ್ಲಿದ್ದಾಗ ಐದು ಸಾವಿರಕ್ಕೂ ಹೆಚ್ಚು ಜನ ನನ್ನನ್ನು ನೋಡಲು ಬಂದರು. ಆ ಗುಂಪಿನಲ್ಲಿ 70 ವರ್ಷದ ಮುದುಕಿಯರಿಂದ ಹಿಡಿದು ಆರು ವರ್ಷದ ಮಗುವಿನ ತನಕ ಎಲ್ಲರೂ ಇದ್ದರು. ಒಬ್ಬಾಕೆ ಬಂದು ನನ್ನ ಮಗುವಿಗೆ ನಿಖಿತಾ ಎಂದು ಹೆಸರಿಟ್ಟಿದ್ದೇನೆ ಎಂದು ಹೇಳಿದಾಗ ತುಂಬಾ ಸಂತೋಷವಾಯಿತು. ಅಂದರೆ ಕರ್ನಾಟಕದಲ್ಲಿ ನನಗೂ ಸಾಕಷ್ಟು ಸಂಖ್ಯೆಯಲ್ಲಿ ಅಭಿಮಾನಿಗಳು ಇದ್ದಾರೆಂಬುದು ಸಾಬೀತಾಯಿತಲ್ಲವೆ? ನಾನು ಯಾವುದೇ ತಪ್ಪು ಮಾಡಿಲ್ಲದ ಕಾರಣ ಯಾರಿಗೂ ಹೆದರುವ ಪ್ರಶ್ನೆಯೇ ಇಲ್ಲ.

* ದರ್ಶನ್ ಜೈಲಿನಿಂದ ಹೊರಬಂದ ಬಳಿಕ ಅವರ ಚಿತ್ರ 'ಸಾರಥಿ'ಯ ಪ್ರಚಾರಕ್ಕಾಗಿ ರಾಜ್ಯಾದ್ಯಂತ ಪ್ರವಾಸ ಮಾಡಿದಾಗ ಅವರನ್ನು ಅಭಿಮಾನಿಗಳು ತುಂಬು ಹೃದಯದಿಂದ ಸ್ವಾಗತಿಸಿದ್ದರ ಬಗ್ಗೆ ನಿಮಗೇನನಿಸುತ್ತದೆ?

– ಈ ಬಗ್ಗೆ ನಾನೇನೂ ಹೇಳುವುದಿಲ್ಲ. ಆದರೆ 'ಸಂಗೊಳ್ಳಿ ರಾಯಣ್ಣ' ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ ನಾನು ಮತ್ತು ದರ್ಶನ್ ನಟಿಸುವ ಸಂದರ್ಭದಲ್ಲಿ ಸಾವಿರಾರು ಜನರು ನಮ್ಮಿಬ್ಬರನ್ನು ನೋಡಲು ಬರುವುದು ಗ್ಯಾರಂಟಿ ಎಂದು ಆ ಚಿತ್ರದ ನಿರ್ಮಾಪಕರು ಹೇಳಿದ್ದಾರೆ. ಈ ಅಭಿಮಾನಿಗಳನ್ನು ಹದ್ದುಬಸ್ತಿನಲ್ಲಿಡುವುದೇ ಈಗ ನಿರ್ಮಾಪಕರಿಗೆ ದೊಡ್ಡ ತೊಂದರೆಯಾಗಲಿದೆಯಂತೆ (ನಗು).

ಇವತ್ತು ನಿಖಿತಾಳಿಗೆ ಕನ್ನಡ ಚಿತ್ರರಂಗದಿಂದ ಬರುತ್ತಿರುವ ಅವಕಾಶಗಳನ್ನು ನೋಡಿದರೆ ಒಂದಂತೂ ಸ್ಪಷ್ಟವಾಗುತ್ತದೆ. ಅದೇನೆಂದರೆ ಕನಸನ್ನು ಮಾರಾಟ ಮಾಡುವ ಗಾಂಧಿನಗರದ ಜನರು ನಟನಟಿಯರ ವೈಯಕ್ತಿಕ ಬದುಕಿನ ಏರಿಳಿತಗಳನ್ನೂ ತಮ್ಮ ಚಿತ್ರದ ಬಂಡವಾಳವನ್ನಾಗಿ ಮಾಡಿಕೊಳ್ಳಲು ಹಿಂಜರಿಯುತ್ತಿಲ್ಲ ಎಂಬುದು.

ಇದು ನಿಜಕ್ಕೂ ಒಂದು ದುರಂತ.

• ಶೆಣೈ

ಗುಜರಾತ್‌ನ ಪೊಲೀಸರಿಗೆ ಈಗ ಎಲ್ಲಿಲ್ಲದ ಪಾಪಪ್ರಜ್ಞೆ ಕಾಡತೊಡಗಿದಂತಿದೆ. ಮೊದಲು ಶ್ರೀಕುಮಾರ್ ಮತ್ತು ಹರ್ಷ ಮಂದರ್ ಥರದವರು ಮಾತ್ರ ತಮ್ಮ ನೈತಿಕತೆಯನ್ನು, ಆತ್ಮದ ಸೊಲ್ಲನ್ನು ನೆಚ್ಚಿ ಮೋದಿಯ ಕ್ರೌರ್ಯದ ವಿರುದ್ಧ ಬಂಡಾಯವೆದ್ದಿದ್ದರು. ಈಗ ಅನೇಕ ಪೊಲೀಸ್ ಅಧಿಕಾರಿಗಳು ಈ ಸಾಲಿನಲ್ಲಿ ನಿಂತಿರುವುದು ಮೋದಿಯ ನಿದ್ದೆಯನ್ನು ಕೆಡಿಸಿದೆ.

ಅಷ್ಟೇಕೆ, ಬೌದ್ಧಿಕ ದಾರಿದ್ರ್ಯ ಹೊಂದಿರುವ ಮಾಧ್ಯಮಗಳು ಅತಿಯಾಗಿ ಮೆಚ್ಚಿದ್ದ ಮೋದಿಯ ಹುಸಿ ಮಾಂತ್ರಿಕತೆ ಕೂಡ ಈಗ ನೆಲಕಚ್ಚಿದಂತಿದೆ. ಈ ಮೋದಿಯ ಅಸ್ಪಷ್ಟ, ಶಂಕಿತ, ನಿಗೂಢ ಅಭಿವೃದ್ಧಿ ಸಾಧನೆಗಳನ್ನು ಹೊಗಳಿದ್ದ ಉದ್ಯಮಿಗಳ ಜೀವ ವಿರೋಧಿ ನೀತಿಯೂ ಈಗ ಬಟಾಬಯಲಾಗಿದೆ.

ಕರ್ನಾಟಕವನ್ನು ಗುಜರಾತ್ ಮಾಡುತ್ತೇವೆ ಎನ್ನುತ್ತಿರುವ ಬಿಜೆಪಿಗಳ ಬಗ್ಗೆ ನಾವೆಲ್ಲ ಎಚ್ಚರದಿಂದಿರಬೇಕೆಂದು ಈ ಎಲ್ಲಾ ಬೆಳವಣಿಗೆಗಳು ಸ್ಪಷ್ಟವಾಗಿ ತೋರುತ್ತಿವೆ. ನಮ್ಮ ರಾಜ್ಯದಲ್ಲಿ ಬಳ್ಳಾರಿಯ ಗಣಿಚೋರರ ಭ್ರಷ್ಟ ಹಣವನ್ನು ಬಳಸಿಯೇ ಚುನಾವಣೆಗಳನ್ನು ನಡೆಸಿದ, ಆಪರೇಷನ್ ಕಮಲವೆನ್ನುವ ಭ್ರಷ್ಟ ಪರಂಪರೆಗೆ ನಾಂದಿ ಹಾಡಿದ ಯಡಿಯೂರಪ್ಪ ಹಾಗೂ ಸಂಘ ಪರಿವಾರ ಈಗ ತಮ್ಮೆಲ್ಲ ಭ್ರಷ್ಟ ನೀತಿಗಳು ತಮ್ಮ ಕುತ್ತಿಗೆಗೇ ಬಂದಿರುವಾಗ ಉಂಡ ಮೇಲೆ ಬಾಳೆ ಎಲೆ ಬಿಸಾಡಿದಂತೆ ರೆಡ್ಡಿ ಪಡೆಯನ್ನು ಕೆಳಕ್ಕೆಸೆದು "ಆದದ್ದಾಯಿತು, ಇನ್ನು ನಮ್ಮನ್ನು ಕ್ಷಮಿಸಿಬಿಡಿ" ಎನ್ನುತ್ತಿದ್ದಾರೆ.

ಕಳೆದ ಮೂರು ವರ್ಷಗಳಿಂದ ಬಿಜೆಪಿ ಆಡಳಿತದಲ್ಲಿ ನಮ್ಮ ರಾಜ್ಯವನ್ನು ಅಂಧಕಾರಕ್ಕೆ ದೂಡಿದ, ಭ್ರಷ್ಟಾಚಾರಕ್ಕೆ ಹೊಸ ಭಾಷ್ಯೆಯನ್ನೇ ಸೃಷ್ಟಿಸಿದ, ಮಠಗಳಿಗೆ ಜನತೆಯ ಹಣವನ್ನು ಬೇಕಾಬಿಟ್ಟಿಯಾಗಿ ಹಂಚಿದ, 'ಛಲ ಬೇಕು ಶರಣಂಗೆ ಪರಧನ ಒಲ್ಲೆನೆಂಬ" ಶರಣರ ಮೂಲ ತತ್ವವನ್ನೇ ಮರೆತು ಈ ಭ್ರಷ್ಟ ಹಣವನ್ನು ಸ್ವೀಕರಿಸಿದ್ದ ಮಠಾಧಿಪತಿಗಳಿಗೆ, ಯಡಿಯೂರಪ್ಪನಿಗೆ ಮತ್ತು ಸಂಘ ಪರಿವಾರಕ್ಕೆ ರಾಜ್ಯವೆಂದರೇನು, ಪ್ರಜಾಪ್ರಭುತ್ವವೆಂದರೇನು, ಜನತೆಯೆಂದರೇನು, ನೀತಿ ಹಾಗೂ ಅನೀತಿಯ ಮಧ್ಯದ ಲಕ್ಷ್ಮಣರೇಖೆ ಏನು ಎಂದು ಪಾಠ ಕಲಿಸುವ ಕಾಲ ಇದಾಗಿದೆ.

- ಬಿ.ಶ್ರೀಪಾದ ಭಟ್, ಬೆಂಗಳೂರು

ಒಂದು ತಿಂಗಳಿಂದ ನಿಮ್ಮ ಪತ್ರಿಕೆಯಲ್ಲಿ ಅಡಿಗರನ್ನು ಕುರಿತು ನಡೆಯುತ್ತಿರುವ ಸಂವಾದಕ್ಕೆ ಈ ಪ್ರತಿಕ್ರಿಯೆ: ಒಕ್ಕುಂದ ಎಂಬ sensible, logical, ವಿನಯವಂತ ಮನುಷ್ಯ ಇದ್ದಾರೆಂದು ನನಗೆ ತಿಳಿದದ್ದು ನಿಮ್ಮ ಪತ್ರಿಕೆಯಿಂದ. ನನ್ನ ದಡ್ಡತನಕ್ಕೆ ಕ್ಷಮೆಯಿರಲಿ.

ಪ್ರಾಯಶಃ ಲಂಕೇಶ್ ಪತ್ರಿಕೆ ಹುಟ್ಟಿದ ದಿನದಿಂದ ಇಂದಿನವರೆಗೂ – ಮಧ್ಯೆ ಹೆಚ್ಚೆಂದರೆ 30, 40 ಪ್ರತಿಗಳನ್ನು ಮಿಸ್ ಮಾಡಿಕೊಂಡಿರಬಹುದು – ಓದಿದ್ದೇನೆ. ಈ ಮಾತು ಏಕೆ ಹೇಳಿದೆನೆಂದರೆ ಜಿ. ರಾಜಶೇಖರ ಅವರು 'ಪತ್ರಿಕೆ'ಯಲ್ಲಿ ಬರೆದ ಯಾವ ಲೇಖನವನ್ನೂ ನಾನು ಮಿಸ್ ಮಾಡಿಕೊಂಡಿಲ್ಲ, ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ.

ಇನ್ನು ನವೆಂಬರ್ 23 ರ ಸಂಚಿಕೆಯಲ್ಲಿ ಓದುಗರೊಬ್ಬರು ಫಣಿರಾಜ್ ಅವರ ಬಗ್ಗೆ ಲಘುವಾಗಿ ಪ್ರತಿಕ್ರಿಯಿಸಿದ್ದಕ್ಕೆ ನನಗೆ ಬೇಸರವಾಗಿದೆ. ಫಣಿರಾಜ್ ಅವರು ಪ್ರವೃತ್ತಿಯಿಂದ ಮಾತ್ರ ವೈಜ್ಞಾನಿಕವಾಗಿ ಯೋಚಿಸುವವರಲ್ಲದೆ ಹೊಟ್ಟೆಪಾಡಿಗೂ ವಿಜ್ಞಾನವನ್ನೇ ನಂಬಿಕೊಂಡಿದ್ದಾರೆ. ವಿದ್ಯಾರ್ಥಿಯಾಗಿ ಫಣಿರಾಜ್ ಅವರು ಇಂಜಿನಿಯರಿಂಗ್‌ನ ವಾಸ್ತುಶಿಲ್ಪ ವಿಷಯದಲ್ಲಿ ಪಡೆದುಕೊಂಡಿದ್ದ ಅಂಕಗಳನ್ನು ಸುಮಾರು ವರ್ಷಗಳವರೆಗೆ ಯಾರಿಂದಲೂ ದಾಟಲಾಗಿರಲಿಲ್ಲ. ಯಾವುದೇ ವಿಷಯವನ್ನು ಅವರು easy chair ಗೆ ಒಯ್ಯುವ ಬದಲು ಸೀದಾ laboratory ಗೆ ಒಯ್ದುಬಿಡುತ್ತಾರೆ. ಅವರಿಗೆ burett, pippet, c.c.by c.c. Mg by Mg, micro weighing machine ಎಲ್ಲವೂ ಗಂಭೀರವಾಗಿ ಮುಖ್ಯವಾಗುತ್ತವೆ. ಅದರ ಬಗ್ಗೆ ನನಗೆ ಗೌರವವಿದೆ.

ಒಕ್ಕುಂದ, ಜಿ.ರಾಜಶೇಖರ ಮತ್ತು ಫಣಿರಾಜ್ – ಈ ಮೂವರು ಅತ್ಯಂತ ತರ್ಕಬದ್ಧವಾಗಿ, ವಿನಯವಂತವಾಗಿ, ಪ್ರಬುದ್ಧ ವಿಮರ್ಶೆಯ ಪಾರಿಭಾಷೆಯಲ್ಲಿ ಚರ್ಚಿಸಿರುವ ವಿಷಯಕ್ಕೆ ನನ್ನ ಪ್ರತಿಕ್ರಿಯೆ ಇದು:

ಶಾಲಾದಿನಗಳಲ್ಲಿ ರಸವತ್ತಾಗಿ 'ಬಣ್ಣದ ತಗಡಿನ ತುತ್ತೂರಿ', 'ಪುಣ್ಯಕೋಟಿ' ತರಹದ ಪದ್ಯಗಳನ್ನು ಓದಿದ್ದ ನನಗೆ ರನ್ನ, ಪಂಪ, ಹರಿಹರ, ಕುಮಾರವ್ಯಾಸ ಯಾವಾಗ ಗಂಟುಬಿದ್ದರೋ ಅವತ್ತಿನಿಂದ ನಾನು ಕಾವ್ಯದಿಂದ ಶಾಶ್ವತವಾಗಿ ದೂರವಾಗಿಬಿಟ್ಟೆ. ಬಾಲ್ಯದಿಂದಲೂ ಸಾಹಿತಿಗಳ, ಸಮಾಜವಾದಿಗಳ, ಎಡಪಂಥೀಯ ವಿಚಾರಧಾರೆಯವರ ಮಧ್ಯೆಯೇ ಬೆಳೆದ ನಾನು 25 ವರ್ಷಗಳ ಹಿಂದೆ ಕೆಲದಿನಗಳ ಮಟ್ಟಿಗೆ ಮಾತ್ರ ಅಡಿಗರ 'ಸಮಗ್ರ ಕಾವ್ಯ'ವನ್ನು ತಂದು ಓದಿದ ನೆನಪಿನಲ್ಲೇ ಅವರ ಬಗ್ಗೆ ಬರೆಯಬೇಕಾಗಿದೆ.

ನನ್ನನ್ನು ನಾನು ಓದುಗ ಮಾತ್ರ ಎಂದು ಭಾವಿಸಿರುವುದರಿಂದ ಯಾರ್‍ಯಾರು, ಯಾವಯಾವ ಪೇಜಿನಲ್ಲಿ ಯಾರ್‍ಯಾರ ಬಗ್ಗೆ, ಏನೇನು ಹೇಳಿದ್ದಾರೆ ಎಂದು ಕೋಟ್ ಮಾಡಿ ಬರೆಯಲು ಅಸಹಾಯಕನಾಗಿದ್ದೇನೆ. 50 ತುಂಬಿರುವ ನಾನು ಜನಾಂಗೀಯ ದೃಷ್ಟಿಕೋನದಿಂದ ಅಡಿಗರನ್ನು ಮುಂದಿನ ಪೀಳಿಗೆಗೆ ಗೌರವದಿಂದ, ಹೆಮ್ಮೆಯಿಂದ ಪರಿಚಯಿಸಬೇಕೆಂದು ನಿರೀಕ್ಷಿಸುತ್ತೇನೆ. ಅಡಿಗರ ಆಯ್ದ ಕಾವ್ಯವನ್ನು – ಅವರು ಮತ್ತು ಅವರ ಮಿಕ್ಕೆಲ್ಲಾ ವಿಚಾರಗಳಿಂದ ದೂರವಾಗಿಟ್ಟು – ಸಂರಕ್ಷಿಸಬೇಕಾಗಿದೆ.

ಅಡಿಗರ ಜನಸಂಘದ ಒಡನಾಟವನ್ನು ಈ ಹೊತ್ತಿನಲ್ಲಿ ನೆನೆದು ಆಕ್ಷೇಪಿಸುವುದರಲ್ಲಿ ಏನರ್ಥವಿದೆ? ಅಷ್ಟಕ್ಕೂ ಜನಸಂಘವೇನೂ ಆ ಕಾಲಕ್ಕೆ ಕೇರಾಫ್ ಪರಪ್ಪನ ಅಗ್ರಹಾರವಾಗಿರಲಿಲ್ಲವಲ್ಲ? ನವೋದಯದ ಕವಿಗಳು volumeಗಳಲ್ಲಿ ಹೇಳಲಾಗದ್ದನ್ನು, ಒಂದೊಂದೇ ಸಾಲುಗಳಲ್ಲಿ ಮನಮುಟ್ಟುವಂತೆ ಹೇಳುವ ಪ್ರತಿಭೆಯಿದ್ದ ಅಡಿಗರು–"ಕುವೆಂಪೂನ ಕವಿ ಎನ್ನೋದಾದ್ರೆ ನಾನು ಕವಿಯೇ ಅಲ್ಲ" ಎಂದದ್ದನ್ನು ಏಕೆ ಗಂಭೀರವಾಗಿ ಚರ್ಚಿಸಬೇಕು.

ಕಾವ್ಯವನ್ನು ಜೀವನ್ಮರಣದ ಪ್ರಶ್ನೆ ಎಂದು ಭಾವಿಸುವ ಅವರು ಅವರ ಮಟ್ಟಿಗೆ ಪ್ರಾಮಾಣಿಕವಾಗಿಯೇ ಹೇಳಿದ್ದಾರಲ್ಲವೆ?

ಆಗಸ್ಟ್ 15 ಕ್ಕೆ ಪೆಪ್ಪರಮೆಂಟ್ ತಿಂದುಬರುವ ಮಗು ಬ್ರಿಟಿಷರನ್ನು ಊಹಿಸಲಿಕ್ಕೆ ಅವರ ಒಂದು ಕವನದ ಈ ನಾಲ್ಕು ಸಾಲುಗಳನ್ನು ಗಮನಿಸಿ:

'ಅರಸುತನದ ನೂರಾರು ಕೈಗಜೋಡಿದವು ಮಿಂಚಿನಂತೆ.
ಘೋರ ಶಾಸನದ ಜಾಲ ಮುಸುಕಿತೋ ಇಂದ್ರ ಜಾಲದಂತೆ
ನೆಲವೆ ಬಾಯಿಬಿಟ್ಟಂತೆ ತೆರೆದ ಸೆರೆಮನೆಯ ನರಕಲೋಕ
ನುಂಗಿತೊಂದೆ ತುತ್ತಾಗಿ ನಮ್ಮ ಕಣ್ಣಾಗಿ ನಿಂತ ಜನವ"

ಇದು ಸಾಕಲ್ಲವೆ ನಾಲ್ಕು ಹನಿ ಕಣ್ಣೀರು ಉದುರಿಸಲಿಕ್ಕೆ

ನಾನು ಯಾರಲ್ಲಾದರೂ ಅಹಂಕಾರವನ್ನು ಗುರುತಿಸಿದರೆ ನನಗೆ ಥಟ್ಟನೆ ಅಡಿಗರ 'ಪ್ರಾರ್ಥನೆ' ನೆನಪಾಗುತ್ತದೆ:

"ವೃಥಾ ಮುಷ್ಕಿಮೈಥುನದಹಂಕಾರ ಕೆರಳಿಸಬೇಡಿ"
"ಮಾತು, ದೂರದಾ ಮಿಂಚುತಂತಿಯ ಹಾಗೆ
ಓದಿಸಿಕೊಳ್ಳದೆ ಒಳಗೂ
ತಿಳಿಯದದರಾ ಅಲಗು."

-ಎಸ್.ಪಿ. ಶೈಲೇಂದ್ರ, ಹೊಸಪೇಟೆ

ಪತ್ರಿಕೆಯ ಜಾತ್ಯತೀತ ಧೋರಣೆ ಮತ್ತು ಬಂಡವಾಳಶಾಹಿ ವಿರುದ್ಧ ನಡೆಸುತ್ತಿರುವ ಅಕ್ಷರ ಹೋರಾಟದ ಕಾರಣಕ್ಕಾಗಿ ನಾನು ಪತ್ರಿಕೆಯನ್ನು ಪ್ರೀತಿಸುತ್ತೇನೆ.

ಆದರೆ ಬೇಸರದ ಸಂಗತಿ ಯಾವುದೆಂದರೆ,

ಕಳೆದ ಕೆಲವು ವಾರಗಳಿಂದ ಅಡಿಗರ ಕೋಮುವಾದಿ ಕವನದ ಬಗ್ಗೆ ಸತತವಾಗಿ ಸರ್ವೆ ನಡೆಸುತ್ತಿದ್ದೀರಿ. ಇದು ಅಗತ್ಯವಿತ್ತೆ? ನೋಡಿ, ಈಗಾಗಲೇ ಅಡಿಗರ ಹಣೆಬರಹ ಎಲ್ಲರಿಗೂ ಗೊತ್ತಾಗಿದೆ. ಮತ್ತದೇ ಹಳಸಲು ವಿಚಾರಗಳನ್ನು ಕೆದಕಿ ಓದುಗರ ತಾಳ್ಮೆ ಪರೀಕ್ಷಿಸುತ್ತಿದ್ದೀರಿ. ಇವತ್ತು ಅತ್ಯಂತ ತುರ್ತಾಗಿ ಚರ್ಚಿಸಲೇಬೇಕಾದ ಅನೇಕ ಗಂಭೀರ ವಿಷಯಗಳಿವೆ. ಅವನ್ನೆಲ್ಲ ಬಿಟ್ಟು ಅಡಿಗರ ಕಾವ್ಯದ ತನಿಖೆ ಅಗತ್ಯವಿರಲಿಲ್ಲ. ಸುಮ್ಮನೇ ಎರಡು ಪುಟಗಳನ್ನು ವ್ಯರ್ಥವಾಗಿ ನಮ್ಮ ಹಣವನ್ನು ಪೋಲು ಮಾಡಬೇಡಿ.

Please stop this.

ನಮ್ಮನ್ನು ಕಾಡುತ್ತಿರುವ ವರ್ತಮಾನದ ಸಮಸ್ಯೆಗಳನ್ನು ಪತ್ರಿಕೆ ಬರೆಯಲಿ. ಇದನ್ನು ಪತ್ರಿಕೆ ಮೇಲಿನ ಪ್ರೀತಿಯಿಂದ ಹೇಳುತ್ತಿರುವೆ.

-ಬಿ.ಸಿ. ಮಧುಸೂದನ, ಚಿಕ್ಕಮಗಳೂರು

Regd.No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 14-12-2011 RNI No. KARKAN2005

ಇವರು ತರ್ಲೆನನ್‌ಮಕ್ಳು







'ಸಂಜು ವೆಡ್ಸ್ ಗೀತಾ' ಸಿನಿಮಾ ಹಿಟ್ ಆದಮೇಲೆ ನಟ, ನಿರ್ದೇಶಕ ನಾಗಶೇಖರ್‌ಗೆ ಸಿಕ್ಕಾಪಟ್ಟೆ ಡಿಮ್ಯಾಂಡ್ ಬಂದಿದೆ. ಪುನೀತ್ ನಟಿಸಲಿರುವ 'ಹನುಮ' ಎಂಬ ಚಿತ್ರವನ್ನು ನಿರ್ದೇಶಿಸಲು ನಾಗಶೇಖರ್ ಸಿದ್ಧವಾಗುತ್ತಿದ್ದಾರೆ. ಇದರೊಟ್ಟಿಗೆ ನಾಗಶೇಖರ್‌ರನ್ನೇ ಹೀರೋ ಮಾಡಲು ಅನೇಕರು ಪ್ರಯತ್ನಿಸುತ್ತಿದ್ದಾರೆ. ಇನ್ನೇನು ಇವರ ನಟನೆಯ 'ಮೈನಾ' ಚಿತ್ರ ಆರಂಭವಾಗಬೇಕಿದೆ. ಅಷ್ಟರಲ್ಲಿ ಇನ್ನೊಂದು ಚಿತ್ರ ಅನೌನ್ಸ್ ಆಗಿದೆ. ಹಿಂದೆ ಎ.ಆರ್.ಬಾಬು, ಕಿರಣ್ ಗೋವಿಯಂಥ ನಿರ್ದೇಶಕರಿಗೆ ಸಹಾಯಕರಾಗಿದ್ದ ಹರೀಶ್ ಎಂಬಾತ 'ತರ್ಲೆ ನನ್ಮಕ್ಳು' ಎಂಬ ಚಿತ್ರದಲ್ಲಿ ನಾಗಶೇಖರ್‌ರನ್ನು ಹಾಕಿಕೊಂಡು ಸಿನಿಮಾ ಮಾಡಲು ಮುಂದಾಗಿದ್ದಾರೆ.

ಮೊದಲು ಈ ಸಿನಿಮಾಗೆ ಕಾಶಿನಾಥ್‌ರನ್ನು ಹೀರೋ ಮಾಡಬೇಕು ಅನ್ನೋದು ನಿರ್ದೇಶಕ ಹರೀಶ್ ಪ್ಲಾನಾಗಿತ್ತು. ಸದ್ಯ ಕಾಶಿನಾಥ್ ಔಟ್‌ಡೇಟೆಡ್ ನಟರಾಗಿರುವುದರಿಂದ ಅವರ ಜಾಗಕ್ಕೆ ನಾಗಶೇಖರ್‌ರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಹಲವು ವರ್ಷಗಳ ಹಿಂದೆ ಉಪೇಂದ್ರ ನಿರ್ದೇಶನದಲ್ಲಿ ಜಗ್ಗೇಶ್ ನಟಿಸಿದ್ದ 'ತರ್ಲೆ ನನ್‌ಮಗ' ಎಂಬ ಚಿತ್ರವೊಂದು ತೆರೆಕಂಡು ಸೂಪರ್ ಹಿಟ್ ಆಗಿತ್ತು. ಈಗ 'ತರ್ಲೆ ನನ್‌ಮಕ್ಳು' ರೆಡಿಯಾಗುತ್ತಿದ್ದಾರೆ.



ಒಂದಾದ ವಿಜಿ ವಾತ್ಸಲ್ಯ!


ವಿಜಿ ಅಕ್ಕ ಅಂಬುಜಾ

ಕಳೆದ ಮೂರು ವರ್ಷಗಳಿಂದ ಮುನಿಸಿಕೊಂಡಿದ್ದ ಅಕ್ಕ-ತಮ್ಮ ಕಡೆಗೂ ಒಂದಾಗಿದ್ದಾರೆ. ಹೌದು ದುನಿಯಾ ವಿಜಿ ತನ್ನಕ್ಕ ಅಂಬುಜಾ-ಜೊತೆ ಈಗ ರಾಜಿಯಾಗಿದ್ದಾರೆ.

ಮೊದಮೊದಲು ಎಲ್ಲವೂ ಸರಿಯಾಗೇ ಇತ್ತು. ತನ್ನ ಭಾವಮೈದುನನಿಗಾಗಿ ಅಂಬುಜಾ ಅವರ ಪತಿ ಸಿದ್ದರಾಜು ಸಾಲ ಮಾಡಿ ಸಿನಿಮಾವನ್ನು ನಿರ್ಮಿಸಿದ್ದರು. 'ದುನಿಯಾ' ಹಿಟ್ ಆಗಿ ಭರ್ಜರಿ ದುಡ್ಡು ಬಂದಿದ್ದೇ ಈ ಕುಟುಂಬದಲ್ಲಿ ಒಡಕು ಮೂಡಿತ್ತು.

"ಯಾವನ್ರೀ ಸಿದ್ದರಾಜು, ನಾನಿಲ್ಲ ಅಂದಿದ್ರೆ 'ದುನಿಯಾ' ಗೆಲ್ತಿರಲಿಲ್ಲ" ಅಂತಾ ವಿಜಯ್ ಹೇಳಿಕೆ ನೀಡಿದರು. ಇದು ಸಿದ್ದರಾಜುರನ್ನು ಸಿಕ್ಕಾಪಟ್ಟೆ ಉರಿಸಿತ್ತು. ನಂತರ ಒಂದು ದಿನ ತನ್ನ ಮುಂದೆಯೇ ಬಿಲ್ಡಪ್ ಕೊಟ್ಟ ಎಂಬ ಕಾರಣಕ್ಕೆ ಲೂಸ್ ಮಾದನ ಕಪಾಳಕ್ಕೆ ವಿಜಿ ಬಾರಿಸಿ ಕಳಿಸಿದ್ದರು. ಇದಾದ ನಂತರವಂತೂ ಭಾವ-ಭಾವಮೈದುನರ ಕಲಹ ಮತ್ತಷ್ಟು ಬಿಸಿಯಾಗಿತ್ತು.

ಈಗ ಎಲ್ಲವೂ ಸರಿಹೋಗಿದೆ. ಸಹೋದರಿಯ ಬಾಂಧವ್ಯ ಎಂದರೇನು ಎಂಬುದು ಇಷ್ಟು ದಿನಗಳ ನಂತರ ವಿಜಿಗೆ ಅರ್ಥವಾಗಿದೆ.

"ನಾನು ಬೆಳೆದದ್ದೇ ಅಕ್ಕ-ಭಾವನ ಜತೆ. ಅವರು ಇಲ್ಲದಿದ್ದರೆ ನಾನು ಇಂದು ಇಲ್ಲಿ ಇರುತ್ತಿರಲಿಲ್ಲ. ನನ್ನ ಬಾಲ್ಯದಲ್ಲಿ ಭಾವ ಸಿದ್ದರಾಜು ಜನತಾ ಬಜಾರ್‌ನಲ್ಲಿ ಕೆಲಸ ಮಾಡುತ್ತಿದ್ದರು. ಆಗ ಅಕ್ಕ ಮತ್ತು ಭಾವ ಸಿನಿಮಾಕ್ಕೆಂದು ಹೋದಾಗ ನಾನು ಅವರ ಹಿಂದೆಯೇ ಹೋಗುತ್ತಿದ್ದೆ. ಕೊನೆಗೆ ಅಕ್ಕನೇ ಟಿಕೆಟ್ ಕೊಡಿಸುತ್ತಿದ್ದಳು. ನಾನು ಏನೂ ಅಲ್ಲದೇ ಇದ್ದಾಗ ನನ್ನನ್ನೇ ನಾಯಕನನ್ನಾಗಿ ಮಾಡಿದರು. ಆದರೂ ನಮ್ಮ ನಡುವೆ ಏನೋ ಆಗಬಾರದ್ದು ಆಗಿ ಹೋಯಿತು. ನನ್ನಿಂದ ತಪ್ಪಾಗಿದೆ. ಇನ್ನು ನಾನು ಅಕ್ಕನ ಆಳು. ಆಕೆ ಹೇಳಿದಂತೆ ಕೇಳುತ್ತೇನೆ. ಬಾ ಎಂದರೆ ಬರುತ್ತೇನೆ. ಅವರ ಮನೆ ನನ್ನ ಮನೆಯಿದ್ದಂತೆ. ಯೋಗೀಶ್‌ಗೆ ಯಾವ ಅನ್ಯಾಯವೂ ಆಗಬಾರದು" ಎಂದೆಲ್ಲಾ ಮೊನ್ನೆ 'ಸಿದ್ಲಿಂಗು' ಚಿತ್ರದ ಕ್ಯಾಸೆಟ್ ಬಿಡುಗಡೆ ಸಮಾರಂಭದಲ್ಲಿ ವಿಜಿ ಮಾತಾಡಿದ್ದಾರೆ, ಕಣ್ಣೀರಿಟ್ಟು ತಮ್ಮ ತಪ್ಪನ್ನು ತಾವೇ ಒಪ್ಪಿಕೊಂಡಿದ್ದಾರೆ.

ಬಾಂಧವ್ಯ ಎಂದೆಂದಿಗೂ ಹೀಗೇ ಮುಂದುವರೆಯಲಿ...





ಪುನೀತ್ ಸಿನಿಮಾದಲಿ ಗಣೇಶನಿಗೆ ಅವಮಾನ!



ಹೌದು ಇದು ನಿಜ. 'ಪುನೀತ್' ಚಿತ್ರದಲ್ಲಿ ಗೋಲ್ಡನ್ ಸ್ಟಾರ್ ಗಣೇಶ್‌ರನ್ನು ಅವಮಾನಿಸುವ ಡೈಲಾಗ್‌ಗಳನ್ನು ಬಳಸಲಾಗಿದೆ.

ಇದೇನಿದು ಪವರ್ ಸ್ಟಾರ್ ಸಿನಿಮಾದಲ್ಲಿ ಹೀಗಾಗಲು ಸಾಧ್ಯವಾ ಎಂದು ಪ್ರಶ್ನಿಸಬೇಡಿ.

ಪುನೀತ್ ರಾಜ್‌ಕುಮಾರ್‌ಗೂ 'ಪುನೀತ್' ಚಿತ್ರಕ್ಕೂ ಯಾವ ಸಂಬಂಧವೂ ಇಲ್ಲ. ಹಿಂದೆ 'ರೋಡ್ ರೋಮಿಯೋ' ಎಂಬ ಚಿತ್ರದಲ್ಲಿ ನಾಯಕನಾಗಿದ್ದ ದಿಲೀಪ್ ಪೈ ನಟಿಸಿರುವ ಚಿತ್ರ 'ಪುನೀತ್'. ಪುನೀತ್ ರಾಜ್‌ಕುಮಾರ್‌ರ ಪಾಪ್ಯುಲಾರಿಟಿಯನ್ನು ಎನ್‌ಕ್ಯಾಷ್ ಮಾಡಿಕೊಳ್ಳಲು ಆ ಚಿತ್ರದ ನಿರ್ದೇಶಕ ನೀಲ್‌ಕಮಲ್ ಮಾಡಿರುವ ಗಿಮಿಕ್ ಅಷ್ಟೇ ಇದು.

ನೀಲ್‌ಕಮಲ್ ತಮ್ಮ ಚಿತ್ರಕ್ಕೆ ಪುನೀತ್ ಹೆಸರನ್ನು ಬಳಸಿಕೊಂಡಿದ್ದಲ್ಲದೆ, ಈಗ ಚಿತ್ರದಲ್ಲಿ ಗಣೇಶನನ್ನು ಬೈಯುವ ಮೂಲಕ ಪುಕ್ಕಟೆ ಪ್ರಚಾರ ಪಡೆದಿದ್ದಾರೆ. ಸದ್ಯ ಗಣೇಶ್‌ಗೆ ಅಂಥ ಅಭಿಮಾನಿಗಳು, ಸಂಘಗಳು ಇಲ್ಲದಿರುವುದರಿಂದ ನೀಲ್‌ಕಮಲ್ ಪಾರಾಗಿದ್ದಾರೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427 Fax : 26604536, E-mail :lankesh70@rediffmail.com